ಬುಧವಾರ, ಜನವರಿ 14, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 14 | ಪುಟ 22
prajavani.net prajavani www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

**ಹೀಲಿ ವಿದಾಯ**

ಆಸ್ಟ್ರೇಲಿಯಾದ ವಿಕೆಟ್ ಕೀಪರ್– ಬ್ಯಾಟರ್ ಅಲಿಸಾ ಹೀಲಿ ಅವರು ತವರಿನಲ್ಲಿ ಭಾರತ ವಿರುದ್ಧ ಮಾರ್ಚ್‌ನಲ್ಲಿ ನಡೆಯುವ ಸರಣಿ ಬಳಿಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಲಿದ್ದಾರೆ

ಸೆನ್ಸೆಕ್ಸ್ 83,627 | ನಿಫ್ಟಿ 25,732 | $/₹ 90.23 | ಚಿನ್ನ (Std. 10g) ₹1,46,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,79,000 (ಬೆಂಗಳೂರು)

# ನಾಯಿ ಕಡಿತಕ್ಕೆ ಭಾರಿ ಪರಿಹಾರ

## ಸರ್ಕಾರಗಳಿಗೆ ‘ಸುಪ್ರೀಂ’ ತಾಕೀತು
## ನಾಯಿ ಪ್ರೇಮಿಗಳೂ ಹೊಣೆಗಾರರು

**ನವದೆಹಲಿ (ಪಿಟಿಐ):** ನಾಯಿ ಕಡಿತ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಭಾರಿ ಪ್ರಮಾಣದ ಪರಿಹಾರ ನೀಡಲು ರಾಜ್ಯಗಳಿಗೆ ಸೂಚಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಕಟುವಾಗಿ ಹೇಳಿತು.

ಬೀದಿನಾಯಿ ಹಾವಳಿಗೆ ಸಂಬಂಧಿಸಿದಂತೆ ವಿಚಾರಣೆ ಮುಂದುವರಿಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್.ವಿ.ಅಂಜಾರಿಯಾ ಅವರ ನೇತೃತ್ವದ ನ್ಯಾಯಪೀಠವು, ಕಳೆದ ಐದು ವರ್ಷಗಳಿಂದ ಬೀದಿನಾಯಿ ಹಾವಳಿ ತಡೆಗಾಗಿ ನಿಯಮಗಳು ಸರಿಯಾಗಿ ಅನುಷ್ಠಾನಗೊಳ್ಳುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿತು.

ನ್ಯಾಯಮೂರ್ತಿ ವಿಕ್ರಮ್ ನಾಥ್ ಅವರು, ‘ನಾಯಿ ಕಡಿತದಿಂದ ಜನರಿಗೆ ಗಾಯವಾದಲ್ಲಿ ಅಥವಾ ಸಾವು ಸಂಭವಿಸಿದಲ್ಲಿ ರಾಜ್ಯ ಸರ್ಕಾರಗಳಿಂದ ಭಾರಿ ಪರಿಹಾರ ಕೇಳಬೇಕಾಗುತ್ತದೆ. ಅಂಥ ಪ್ರಕರಣಗಳಲ್ಲಿ ನಾಯಿಗಳಿಗೆ ಆಹಾರ ನೀಡುವವರು ಮತ್ತು ನಾಯಿ ಪ್ರೇಮಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು. ಬೀದಿನಾಯಿಗಳನ್ನು ಅಷ್ಟೊಂದು ಪ್ರೀತಿಸುವವರು, ಅವುಗಳನ್ನು ಮನೆಗೆ ಏಕೆ ಕೊಂಡೊಯ್ಯುವುದಿಲ್ಲ? ಆ ನಾಯಿಗಳೇಕೆ ಅಲೆದಾಡುತ್ತಾ ಜನರನ್ನು ಬೆದರಿಸುತ್ತವೆ ಮತ್ತು ಕಚ್ಚುತ್ತವೆ’ ಎಂದು ಪ್ರಶ್ನಿಸಿದರು.

### ಮುಖ್ಯಾಂಶಗಳು

- ಬೀದಿನಾಯಿ ಪ್ರೀತಿಸುವವರು ಮನೆಗೆ ಏಕೆ ಕೊಂಡೊಯ್ಯುವುದಿಲ್ಲ: ನ್ಯಾಯಪೀಠ
- ನಾವು ಕಣ್ಣುಮುಚ್ಚಿ ಕೂರಬೇಕೆಂದು ನೀವು ಬಯಸುತ್ತೀರಿ: ನ್ಯಾ. ಮೆಹ್ತಾ

ನ್ಯಾ. ವಿಕ್ರಮ್ ನಾಥ್ ಅವರ ಮಾತಿಗೆ ದನಿಗೂಡಿಸಿದ ನ್ಯಾಯಮೂರ್ತಿ ಮೆಹ್ತಾ ಅವರು, ‘ನಾಯಿಯೊಂದು ಒಂಬತ್ತು ವರ್ಷದ ಮಗುವಿನ ಮೇಲೆ ದಾಳಿ ನಡೆಸಿದಾಗ ಯಾರನ್ನು ಹೊಣೆಗಾರರನ್ನಾಗಿಸುವುದು? ನಾಯಿಗೆ ಅನ್ನ ಹಾಕಿದ ಸಂಸ್ಥೆಯನ್ನೇ? ಸಮಸ್ಯೆ ಹೀಗಿದ್ದರೂ ನಾವು ಕಣ್ಣುಮುಚ್ಚಿ ಕೂರಬೇಕೆಂದು ನೀವು ಬಯಸುತ್ತೀರಿ’ ಎಂದು ತರಾಟೆಗೆ ತೆಗೆದುಕೊಂಡರು.

‘ಗುಜರಾತ್‌ನ ವಕೀಲರೊಬ್ಬರಿಗೆ ಉದ್ಯಾನವನದಲ್ಲಿ ನಾಯಿ ಕಚ್ಚಿತ್ತು. ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಆ ನಾಯಿಯನ್ನು ಸೆರೆಹಿಡಿಯಲು ಯತ್ನಿಸಿದ್ದರು. ನಾಯಿ ಪ್ರೇಮಿಯಾಗಿದ್ದ ಆ ವಕೀಲ, ಅಧಿಕಾರಿಗಳ ಮೇಲೆಯೇ ದಾಳಿ ನಡೆಸಿದರು. ಇದು ನಮ್ಮ ದುರ್ದೈವ’ ಎಂದು ನ್ಯಾಯಪೀಠ ಘಟನೆಯನ್ನು ಮೆಲುಕುಹಾಕಿತು.

‘ಬೀದಿಗಳನ್ನು ನಾಯಿಗಳಿಂದ ಮುಕ್ತಗೊಳಿಸಿ’ ಎಂದು ನವೆಂಬರ್ 7ರಂದು ನೀಡಿದ್ದ ಆದೇಶವನ್ನು ಪರಿಷ್ಕರಿಸುವಂತೆ ಕೋರಿರುವ ಹಲವು ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

**ನಾಯಿ ಪ್ರೇಮಿಗಳ ವಾದ ಏನು?:** ಹಿರಿಯ ವಕೀಲ ವಿಕಾಸ್ ಸಿಂಗ್ ಅವರು, ‘2005ರಲ್ಲಿ ಹಾವು ಕಡಿತದಿಂದ 50,000ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ನಾಯಿ ಕಡಿತವನ್ನು ಪ್ರಾಣಿ ಮತ್ತು ಮಾನವ ಸಂಘರ್ಷವಾಗಿ ಮಾತ್ರ ಕಾಣಬೇಡಿ. ಇಲಿ, ಹೆಗ್ಗಣಗಳ ನಿಯಂತ್ರಣಕ್ಕೆ ನಾಯಿಗಳು ಅವಶ್ಯಕ. ಸುಪ್ರೀಂ ಕೋರ್ಟ್ ಆದೇಶವು ಪರಿಸರ ಸಮತೋಲನವನ್ನು ಕಾಯುವಂತಿರಲಿ. ಪರಿಸರ ವ್ಯವಸ್ಥೆಯಲ್ಲಿ ನಾಯಿಗಳಿಗೆ ಪ್ರಾಮುಖ್ಯವಿದೆ’ ಎಂದು ನ್ಯಾಯಾಲಯಕ್ಕೆ ತಿಳಿಸಿದರು.

ಹಿರಿಯ ವಕೀಲೆ ಪಿಂಕಿ ಆನಂದ್ ಅವರು, ‘ಟಿ.ಬಿ ಕಾಯಿಲೆಯನ್ನು ನೀತಿಗಳ ಮೂಲಕ ನಿರ್ಮೂಲನೆ ಮಾಡುತ್ತೇವೆಯೇ ವಿನಾ ಟಿ.ಬಿ ಕಾಯಿಲೆಗೆ ತುತ್ತಾಗಿರುವ ಜನರನ್ನೇ ನಿರ್ಮೂಲನೆ ಮಾಡುವುದಿಲ್ಲ. ನಮ್ಮಲ್ಲಿ ಕೇವಲ 77 ಪ್ರಾಣಿಗಳ ಜನನ ನಿಯಂತ್ರಣ ಕೇಂದ್ರಗಳಿವೆ. ಬೀದಿ ನಾಯಿಗಳನ್ನು ಅವುಗಳಿದ್ದ ಜಾಗಗಳಿಗೇ ಮರಳಿಸದಿದ್ದರೆ ಮತ್ತಷ್ಟು ಆಕ್ರಮಣಕಾರಿ ನಾಯಿಗಳು ಆ ಜಾಗಕ್ಕೆ ಬರುತ್ತವೆ’ ಎಂದು ಹೇಳಿದರು.

### ‘ಕೇಂದ್ರ, ರಾಜ್ಯಗಳ ಅಭಿಪ್ರಾಯ ಕೇಳಲು ಅವಕಾಶ ಕೊಡಿ’

‘ಬೀದಿನಾಯಿ ಹಾವಳಿಗೆ ಸಂಬಂಧಿಸಿದಂತೆ ನಾಲ್ಕು ದಿನಗಳಿಂದ ವಿಚಾರಣೆ ನಡೆಸುತ್ತಿದ್ದೇವೆ. ಸಾಮಾಜಿಕ ಕಾರ್ಯಕರ್ತರು ಮತ್ತು ಸರ್ಕಾರೇತರ ಸಂಘಟನೆಗಳು (ಎನ್‌ಜಿಒ) ಈ ವಿಚಾರದಲ್ಲಿ ಮುಂದುವರಿಯಲು ಅವಕಾಶವನ್ನೇ ನೀಡುತ್ತಿಲ್ಲ. ಇದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಭಿಪ್ರಾಯ ಕೇಳಲೂ ಸಾಧ್ಯವಾಗುತ್ತಿಲ್ಲ’ ಎಂದು ನ್ಯಾಯಪೀಠ ಬೇಸರ ವ್ಯಕ್ತಪಡಿಸಿತು.

‘ಕೇಂದ್ರ, ರಾಜ್ಯ ಸರ್ಕಾರಗಳು ಮತ್ತು ಇತರ ಸಂಸ್ಥೆಗಳ ಅಭಿಪ್ರಾಯ ಕೇಳಲು, ಆದೇಶ ನೀಡಲು ಅವಕಾಶ ಮಾಡಿಕೊಡಿ. ಕೇಂದ್ರ ಮತ್ತು ರಾಜ್ಯಗಳೊಂದಿಗೆ ಸಮಾಲೋಚನೆ ನಡೆಸಬೇಕಿದೆ. ಬೀದಿನಾಯಿ ಹಾವಳಿ ತಡೆಗೆ ಅವುಗಳ ಬಳಿ ಕ್ರಿಯಾ ಯೋಜನೆಗಳಿವೆಯೇ ಎಂದು ತಿಳಿಯಬೇಕಿದೆ. ಶಾಸನಬದ್ಧ ನಿಬಂಧನೆಗಳನ್ನು ಅನುಷ್ಠಾನಗೊಳಿಸಬೇಕಿದೆ. ಇದಕ್ಕೆ ಅವಕಾಶ ಮಾಡಿಕೊಡಿ’ ಎಂದು ವಕೀಲರಿಗೆ ಹೇಳಿತು.

### ರಸ್ತೆಯಲ್ಲಿ 200 ಅಡಿಗೆ ಎರಡು ಜಾಹೀರಾತು

ಬೆಂಗಳೂರು: ರಸ್ತೆಗಳಲ್ಲಿ ಪ್ರತಿ 200 ಅಡಿಗೆ ಎರಡು ಜಾಹೀರಾತಿಗೆ ಅವಕಾಶ ನೀಡುವ ‘ಗ್ರೇಟರ್ ಬೆಂಗಳೂರು ಪ್ರದೇಶ ಜಾಹೀರಾತು ನಿಯಮಗಳು– 2025’ ಅನ್ನು ಅಂತಿಮಗೊಳಿಸಿ ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ. ▶2

# ಶೇ 25ರಷ್ಟು ಸುಂಕ: ಟ್ರಂಪ್ ಎಚ್ಚರಿಕೆ

**ವಾಷಿಂಗ್ಟನ್ (ಎಪಿ/ರಾಯಿಟರ್ಸ್/ಎಎಫ್‌ಪಿ):** ಇರಾನ್ ಜೊತೆ ವಾಣಿಜ್ಯ ಸಂಬಂಧ ಹೊಂದಿರುವ ದೇಶಗಳು ಅಮೆರಿಕ ಜೊತೆ ನಡೆಸುವ ಎಲ್ಲ ವ್ಯಾಪಾರಗಳ ಮೇಲೆ ಶೇಕಡ 25ರಷ್ಟು ಸುಂಕ ವಿಧಿಸುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ.

ಈ ಕುರಿತು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ ‘ಟ್ರೂಥ್ ಸೋಷಿಯಲ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಈ ಸುಂಕ ತಕ್ಷಣದಿಂದಲೇ ಜಾರಿಗೆ ಬರಲಿದೆ’ ಎಂದು ಘೋಷಿಸಿದ್ದಾರೆ.

‘ಈ ಆದೇಶ ಅಂತಿಮ ಹಾಗೂ ನಿರ್ಣಾಯಕ’ ಎಂದೂ ಹೇಳಿರುವ ಅವರು, ಹೆಚ್ಚಿನ ವಿವರಗಳನ್ನು ನೀಡಿಲ್ಲ.



ಟ್ರಂಪ್ ಅವರ ಈ ಹೊಸ ಘೋಷಣೆಯಂತೆ, ಇರಾನ್‌ನೊಂದಿಗೆ ವ್ಯಾಪಾರ ನಡೆಸುವ ದೇಶಗಳಿಂದ ಅಮೆರಿಕವು ಆಮದು ಮಾಡಿಕೊಳ್ಳುವ ಸರಕುಗಳಿಗೆ ಈ ಸುಂಕ ವಿಧಿಸಲಾಗುತ್ತದೆ.

ಸರ್ಕಾರದ ವಿರುದ್ಧ ನಡೆಯುತ್ತಿರುವ ಪ್ರತಿಭಟನೆ ಹತ್ತಿಕ್ಕುತ್ತಿರುವ ಇರಾನ್ ಮೇಲೆ ಮತ್ತಷ್ಟು ಒತ್ತಡ ಹೇರುವ ಕ್ರಮದ ಭಾಗವಾಗಿ ಟ್ರಂಪ್ ಈ ಎಚ್ಚರಿಕೆ ನೀಡಿದ್ದಾರೆ.

ಆಡಳಿತದ ವಿರುದ್ಧ ಪ್ರತಿಭಟನೆ ನಡೆಸು-ತ್ತಿರುವವರ ದನಿ ಅಡಗಿಸಲು ಭದ್ರತಾ ಪಡೆಗಳನ್ನು ಬಳಸುವುದು ಕಂಡುಬಂದಲ್ಲಿ, ಇರಾನ್ ಸರ್ಕಾರಕ್ಕೆ ತನ್ನ ಸೇನೆ ಮೂಲಕವೇ ಉತ್ತರ ನೀಡುವುದಾಗಿ ಟ್ರಂಪ್ ಬೆದರಿಕೆ ಒಡ್ಡುತ್ತಲೇ ಇದ್ದಾರೆ. ಈಗ, ಹೊಸದಾಗಿ ಶೇ 25ರಷ್ಟು ಸುಂಕ ವಿಧಿಸುವ ಅಸ್ತ್ರವನ್ನು ಝಳಪಿಸಿದ್ದಾರೆ. ▶10

> **ತನ್ನ ವ್ಯಾಪ್ತಿ ಮೀರಿ ಸುಂಕ ವಿಧಿಸುವುದಕ್ಕೆ ಹಾಗೂ ಅಕ್ರಮವಾಗಿ ಕೈಗೊಳ್ಳುವ ಏಕಪಕ್ಷೀಯ ನಿರ್ಧಾರವನ್ನು ಚೀನಾ ವಿರೋಧಿಸುತ್ತದೆ. ದೇಶದ ಹಿತಾಸಕ್ತಿ ಕಾಪಾಡಿಕೊಳ್ಳುವುದಕ್ಕೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು**
> **ಅಮೆರಿಕದಲ್ಲಿನ ಚೀನಾ ರಾಯಭಾರ ಕಚೇರಿ**

### ಭಾರತದ ಮೇಲೆ ಏನು ಪರಿಣಾಮ?

**ನವದೆಹಲಿ (ಪಿಟಿಐ):** ‘ಇರಾನ್ ಜೊತೆ ವ್ಯಾಪಾರ ನಡೆಸುವ ದೇಶಗಳಿಂದ ತಾನು ಆಮದು ಮಾಡಿಕೊಳ್ಳುವ ಸರಕುಗಳಿಗೆ ಸಂಬಂಧಿಸಿ ಶೇ 25ರಷ್ಟು ಸುಂಕ ವಿಧಿಸಲಾಗುವುದು’ ಎಂಬ ಟ್ರಂಪ್ ಅವರ ಘೋಷಣೆಯು ಇರಾನ್ ಜೊತೆ ವ್ಯಾಪಾರ ನಡೆಸುವ ಪ್ರಮುಖ ದೇಶಗಳಾದ ಭಾರತ, ಯುಎಇ ಹಾಗೂ ಚೀನಾ ಮೇಲೆ ಯಾವ ಪರಿಣಾಮ ಬೀರಲಿದೆ ಎಂಬ ಚರ್ಚೆ ಶುರುವಾಗಿದೆ. ‘ಟ್ರಂಪ್ ಘೋಷಣೆ ಕಳವಳಕಾರಿಯಾಗಿದೆ. ಈ ಕುರಿತ ಅಧಿಸೂಚನೆ ಹೊರಬಿದ್ದ ಬಳಿಕವೇ ಸ್ಪಷ್ಟತೆ ಸಿಗಲಿದೆ’ ಎಂದು ಭಾರತೀಯ ರಫ್ತು ಸಂಘಟನೆಗಳ ಒಕ್ಕೂಟದ ಮಹಾ ನಿರ್ದೇಶಕ ಅಜಯ್ ಸಹಾಯ್ ಹೇಳಿದ್ದಾರೆ. ▶10

### ‘ಮಾರ್ಚ್ ಮೊದಲ ವಾರ ರಾಜ್ಯ ಬಜೆಟ್’

ಮೈಸೂರು: ‘ಬಹುತೇಕ, ಮಾರ್ಚ್ ಮೊದಲ ವಾರದಲ್ಲಿ ರಾಜ್ಯ ಬಜೆಟ್ ಮಂಡಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಪತ್ರಕರ್ತರೊಂದಿಗೆ ಮಾತನಾಡಿ ಅವರು, ‘ಬಜೆಟ್ ಸಿದ್ಧತೆಗಳು ಆರಂಭವಾಗಿವೆ’ ಎಂದು ಹೇಳಿದರು.

# 26 ‘ಅಕ್ರಮ’ ವಲಸಿಗರ ವಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ವಿವಿಧೆಡೆ ನೆಲಸಿರುವ ಬಾಂಗ್ಲಾದೇಶದ ಅಕ್ರಮ ವಲಸಿಗರ ವಿರುದ್ಧ ಕಾರ್ಯಾಚರಣೆ ನಡೆಸುತ್ತಿರುವ ಪೊಲೀಸರು, ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಎರಡು ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನೆಲಸಿದ್ದ 26 ಮಂದಿ ಅಕ್ರಮ ವಲಸಿಗರನ್ನು ವಶಕ್ಕೆ ಪಡೆದು ಕೊಂಡಿದ್ದಾರೆ.

ಬೇಗೂರು ಠಾಣೆಯ ಪೊಲೀಸರು 10, ಹೆಬ್ಬಗೋಡಿ ಠಾಣೆಯ ಪೊಲೀಸರು 16 ಮಂದಿ ಅಕ್ರಮ ವಲಸಿಗರನ್ನು ವಶಕ್ಕೆ ಪಡೆದುಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಶಂಕಿತ ಅಕ್ರಮ ವಲಸಿಗರನ್ನು ನೆಲಮಂಗಲ ಸಮೀಪದ ಸೊಂಡೇಕೊಪ್ಪದ ವಲಸಿಗರ ಬಂಧನ ಕೇಂದ್ರಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು. ನಕಲಿ ಪಾಸ್‌ಪೋರ್ಟ್, ಆಧಾರ್ ಕಾರ್ಡ್ ಸೇರಿದಂತೆ ವಿವಿಧ ದಾಖಲೆಗಳನ್ನು ಸೃಷ್ಟಿಸಿಕೊಂಡು ನಗರಕ್ಕೆ ಬಂದಿದ್ದರು. ಹೆಚ್ಚಿನವರು ಶೆಡ್‌ಗಳಲ್ಲಿ ವಾಸವಿದ್ದರು. ಇನ್ನು ಕೆಲವರು ಅಪಾರ್ಟ್‌ ಮೆಂಟ್‌ಗಳಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದರು.

### ಬೆಳ್ಳಿ ಬೆಲೆ ₹2.71 ಲಕ್ಷ

**ನವದೆಹಲಿ (ಪಿಟಿಐ):** ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ ಬೆಳ್ಳಿಯ ಬೆಲೆಯು ಹೊಸ ದಾಖಲೆ ಬರೆದಿದೆ. ಕೆ.ಜಿ. ಬೆಳ್ಳಿಯ ಬೆಲೆಯು ₹6,000 ಹೆಚ್ಚಾಗಿ ₹2.71 ಲಕ್ಷಕ್ಕೆ ತಲುಪಿದೆ.

ಸೋಮವಾರದ ವಹಿವಾಟಿನಲ್ಲಿ ಬೆಳ್ಳಿಯ ಬೆಲೆಯು ₹15 ಸಾವಿರದಷ್ಟು ಹೆಚ್ಚಾಗಿತ್ತು. ಎರಡು ದಿನಗಳಲ್ಲಿ ಬೆಲೆಯು ₹21 ಸಾವಿರದಷ್ಟು ಏರಿಕೆ ಆಗಿದೆ.

2026ರಲ್ಲಿ ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹32 ಸಾವಿರದಷ್ಟು, ಅಂದರೆ ಶೇ 13.4ರಷ್ಟು ಹೆಚ್ಚಾಗಿದೆ.

ಶೇಕಡ 99.9ರಷ್ಟು ಪರಿಶುದ್ಧತೆಯ ಚಿನ್ನದ ಬೆಲೆಯು 10 ಗ್ರಾಂ.ಗೆ ₹400ರಷ್ಟು ಹೆಚ್ಚಾಗಿದ್ದು ದಾಖಲೆಯ ₹1,45,000ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

### ಚಿನಕುರುಳಿ — ಪ್ರಕಾಶ್ ಶೆಟ್ಟಿ

ಸೂರ್ಯೋದಯ: 6:45 ಸೂರ್ಯಾಸ್ತ : 6:11 ಚಂದ್ರೋದಯ: ರಾ. 2:00 ಚಂದ್ರಾಸ್ತ: ಮ. 2:00 | ಮಂಗಳವಾರದ ಉಷ್ಣಾಂಶ : ಗರಿಷ್ಠ 28° ಕನಿಷ್ಠ 17°

ಬುಧವಾರದ ಉಷ್ಣಾಂಶ 28° ಗರಿಷ್ಠ 17° ಕನಿಷ್ಠ | ಗುರುವಾರ 28° : 16° | ಶುಕ್ರವಾರ 28° : 16° | ಶನಿವಾರ 28° : 16°

ಬುಧವಾರ ● ಜನವರಿ 14, 2026

ಪ್ರಜಾವಾಣಿ

**ಹವಾಮಾನ ಮುನ್ಸೂಚನೆ:** ನಗರದಲ್ಲಿ ಬೆಳಿಗ್ಗೆ ಮಂಜು ಕವಿದ ವಾತಾವರಣ ನಂತರ ಶುಭ್ರ ಆಕಾಶ ಇರಲಿದೆ

# ರಸ್ತೆಯಲ್ಲಿ 200 ಅಡಿಗೆ ಎರಡು ಜಾಹೀರಾತು

## ‘ಗ್ರೇಟರ್ ಬೆಂಗಳೂರು ಪ್ರದೇಶ ಜಾಹೀರಾತು ನಿಯಮಗಳು– 2025’ ಅಂತಿಮ ಅಧಿಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಸ್ತೆಗಳಲ್ಲಿ ಪ್ರತಿ 200 ಅಡಿಗೆ ಎರಡು ಜಾಹೀರಾತು ಪ್ರದರ್ಶಿಸಲು ಅವಕಾಶ ಮಾಡಿಕೊಡುವ ‘ಗ್ರೇಟರ್ ಬೆಂಗಳೂರು ಪ್ರದೇಶ ಜಾಹೀರಾತು ನಿಯಮಗಳು– 2025’ ಅನ್ನು ಅಂತಿಮಗೊಳಿಸಿ ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ.

2025ರ ನವೆಂಬರ್ 13ರಂದು ಕರಡು ಅಧಿಸೂಚನೆ ಹೊರಡಿಸಲಾಗಿತ್ತು. 30 ದಿನದಲ್ಲಿ ಬಂದ ಸಾರ್ವಜನಿಕ ಸಲಹೆ, ಆಕ್ಷೇಪಗಳನ್ನು ಪರಿಗಣಿಸಿ, ಜ.13ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ ಎಂದು ತಿಳಿಸಲಾಗಿದೆ.

ಆಯಾ ಪ್ರದೇಶದ ಸ್ಥಿರಾಸ್ತಿ ಮಾರ್ಗಸೂಚಿ ದರದ ಆಧಾರದಲ್ಲಿ ಜಾಹೀರಾತು ಶುಲ್ಕವನ್ನು ನಿಗದಿಪಡಿಸಿ, ರಸ್ತೆಯ ಅಗಲಕ್ಕೆ ಅನುಗುಣವಾಗಿ ಪ್ರತಿ 100 ಮೀಟರ್‌ಗೆ ಜಾಹೀರಾತು ಪ್ರದರ್ಶಿಸಬಹುದು ಎಂದು 2025ರ ಜುಲೈ 15ರಂದು ‘ಬಿಬಿಎಂಪಿ (ಜಾಹೀರಾತು) ಬೈ-ಲಾ 2024’ ಅನ್ನು ಅಧಿಸೂಚಿಸಲಾಗಿತ್ತು. ಜಿಬಿಎ, ಐದು ನಗರ ಪಾಲಿಕೆಗಳು ರಚನೆಯಾದ ಮೇಲೆ, ಬಹುತೇಕ ಅದೇ ನಿಯಮಗಳು ನಗರ ಪಾಲಿಕೆಗಳಿಗೆ ಅನ್ವಯವಾಗುವಂತೆ ಬದಲಾವಣೆ ಮಾಡಿ ‘ಗ್ರೇಟರ್ ಬೆಂಗಳೂರು ಪ್ರದೇಶ ಜಾಹೀರಾತು ನಿಯಮಗಳನ್ನು ಜಾರಿ ಮಾಡಲಾಗಿದೆ. ಕಳೆದ ಬಾರಿಗಿಂತ ಜಾಹೀರಾತು ಶುಲ್ಕ ಕಡಿಮೆ ಮಾಡುವ ಜೊತೆಗೆ, ರಸ್ತೆಯ ಅಕ್ಕಪಕ್ಕ 100 ಅಡಿಗೆ ಎರಡು ಜಾಹೀರಾತು ಪ್ರದರ್ಶಿಸಲು ನೀಡಲಾಗಿದ್ದ ಅವಕಾಶವನ್ನು 200 ಅಡಿಗೆ ಹೆಚ್ಚಿಸಲಾಗಿದೆ.

ರಸ್ತೆಗಳು, ವೃತ್ತಗಳು ಹಾಗೂ ಪ್ರದೇಶಗಳ ಮುಕ್ತ ಹರಾಜು ಅಥವಾ ಟೆಂಡರ್ ಅನ್ನು ಪ್ರತ್ಯೇಕ ಅಥವಾ ಲಾಟ್‌ಗಳಲ್ಲಿ ಒಟ್ಟುಗೂಡಿಸಿ ಏಜೆನ್ಸಿಗಳಿಗೆ ಪರವಾನಗಿ ನೀಡುವ ನಿರ್ಧಾರವನ್ನು ಜಿಬಿಎ ಮುಖ್ಯ ಆಯುಕ್ತರ ನೇತೃತ್ವದ ಜಾಹೀರಾತು ನಿಯಂತ್ರಣ ಸಮಿತಿಗೆ ನೀಡಲಾಗಿದೆ. ಅಲ್ಲದೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಜಾಹೀರಾತು ಸಲಹಾ ಸಮಿತಿ ರಚಿಸಲಾಗಿದೆ. ಹೊಸ ಜಾಹೀರಾತು ನೀತಿಯಿಂದ ಒಟ್ಟಾರೆ ವಾರ್ಷಿಕ ₹800 ಕೋಟಿ ಸಂಗ್ರಹಿಸುವ ನಿರೀಕ್ಷೆ ಇದೆ.

**ಪಿಲ್ಲರ್ ಶುಲ್ಕ ಹಂಚಿಕೆ:** ಬಿಎಂಆರ್‌ಸಿಎಲ್, ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್‌ಗಳು, ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ವಲಯದ ಕಟ್ಟಡ, ಆವರಣದಲ್ಲಿ ಪ್ರದರ್ಶಿಸುವ ಜಾಹೀರಾತುಗಳಿಗೆ ಆಯಾ ಸಂಸ್ಥೆಗಳು ಅವರ ನಿಯಮಗಳಂತೆ ಕ್ರಮ ಕೈಗೊಳ್ಳಬಹುದು. ಆದರೆ, ಸಾರ್ವಜನಿಕ ಸ್ಥಳ, ರಸ್ತೆಯಲ್ಲಿ ಜಾಹೀರಾತು ಪ್ರದರ್ಶಿಸಿದರೆ ಅದರ ಸಂಪೂರ್ಣ ಶುಲ್ಕವನ್ನು ನಗರ ಪಾಲಿಕೆಗೆ ಪಾವತಿಸಬೇಕು. ಇನ್ನು, ನಮ್ಮ ಮೆಟ್ರೊ ಪಿಲ್ಲರ್, ನಿಲ್ದಾಣ, ಮೂಲಸೌಕರ್ಯಗಳಲ್ಲಿ ಬಿಎಂಆರ್‌ಸಿಎಲ್, ‘ಗ್ರೇಟರ್ ಬೆಂಗಳೂರು ಪ್ರದೇಶ ಜಾಹೀರಾತು ನಿಯಮ-2025’ರಂತೆಯೇ ಟೆಂಡರ್ ಕರೆದು ಅವಕಾಶ ನೀಡಬಹುದು. ಮೆಟ್ರೊ ಪಿಲ್ಲರ್‌ಗಳ ಜಾಹೀರಾತಿನಿಂದ ಬರುವ ಶುಲ್ಕ ಬಿಎಂಆರ್‌ಸಿಎಲ್ ಹಾಗೂ ಆಯಾ ನಗರ ಪಾಲಿಕೆಗಳ ಜಂಟಿ ಖಾತೆಯಲ್ಲಿ ಜಮೆಯಾಗಬೇಕು. ಇದನ್ನು ಎರಡೂ ಸಂಸ್ಥೆಗಳು ಸಮನಾಗಿ ಉಪಯೋಗಿಸಿಕೊಳ್ಳಬೇಕು.

‘ಸಂಚಾರಿ ಜಾಹೀರಾತು’ಗಳನ್ನು ಪ್ರದರ್ಶಿಸಲು ಆಯಾ ನಗರ ಪಾಲಿಕೆಗಳಿಂದ ಆನ್‌ಲೈನ್‌ನಲ್ಲಿ ಪೂರ್ವಾನುಮತಿ ಪಡೆದುಕೊಳ್ಳಬೇಕು. ಪ್ರದರ್ಶನದ ಅವಧಿ, ಉದ್ದೇಶ, ವಾಹನ ಸಂಖ್ಯೆ, ವಾಹನಗಳ ಪಟ್ಟಿಯನ್ನು ನೀಡಿ, ಜಾಹೀರಾತು ಪ್ರದರ್ಶನಕ್ಕೆ ನಗರ ಪಾಲಿಕೆಯಿಂದ ನಿರಾಕ್ಷೇಪಣಾ ಪತ್ರ ಪಡೆದುಕೊಳ್ಳಬೇಕು. ಬಿಎಂಟಿಸಿ ಸೇರಿದಂತೆ ಎಲ್ಲ ವಾಹನಗಳಲ್ಲಿ ಪ್ರದರ್ಶಿಸುವ ವಾಹನಗಳಿಗೆ ಅನುಗುಣವಾದ ಶುಲ್ಕ ಪಾವತಿಸಬೇಕು.

### ಮುಖ್ಯಾಂಶಗಳು

- ಮನೆಗಳಲ್ಲಿ ಮಿನುಗುವ ಫಲಕ ಅಳವಡಿಕೆ ನಿರ್ಬಂಧ
- ವಸತಿ ಪ್ರದೇಶಗಳಲ್ಲಿ ರಾತ್ರಿ 11ರ ನಂತರ ಪ್ರಕಾಶಮಾನ ಜಾಹೀರಾತು ಪ್ರದರ್ಶನ ಇಲ್ಲ

### ‘ಬಿ’ ಖಾತಾ ಆಸ್ತಿಯಲ್ಲಿ ಅವಕಾಶ ಇಲ್ಲ

ಐದೂ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಸತಿ ಪ್ರದೇಶ ಅಥವಾ ವಾಣಿಜ್ಯ ಪ್ರದೇಶದಲ್ಲಿರುವ ನಿವೇಶನಗಳು ‘ಬಿ’ ಖಾತಾ ಹೊಂದಿದ್ದರೆ ಅಥವಾ ಯಾವುದೇ ರೀತಿಯ ಖಾತಾ ಹೊಂದಿರದಿದ್ದರೆ ಜಾಹೀರಾತು ಪ್ರದರ್ಶನವನ್ನು ನಿರ್ಬಂಧಿಸಲಾಗಿದೆ. ಖಾತಾ ಇಲ್ಲದ ಹಾಗೂ ತೆರಿಗೆ ಪಾವತಿಸದ ಆಸ್ತಿಯಲ್ಲಿರುವ ಜಾಹೀರಾತನ್ನು ನಗರ ಪಾಲಿಕೆ ತೆರವುಗೊಳಿಸುತ್ತದೆ. ಅಲ್ಲದೆ, ಜಾಹೀರಾತು ಪ್ರದರ್ಶಿಸಿದ ಅವಧಿಗೆ ನಿಯಮದಲ್ಲಿ ತಿಳಿಸಲಾಗಿರುವ ಶುಲ್ಕದ ದುಪ್ಪಟ್ಟು ದಂಡವನ್ನೂ ವಿಧಿಸಲಾಗುತ್ತದೆ.

### ಜಾಹೀರಾತು ಎಲ್ಲೆಲ್ಲಿ ನಿಷೇಧ?

ದೇವಾಲಯ, ಮಸೀದಿ, ಗುರುದ್ವಾರ, ಚರ್ಚ್ ಮತ್ತು ಇತರ ಧಾರ್ಮಿಕ ಸ್ಥಳಗಳಿಂದ ನೂರು ಮೀಟರ್ ಒಳಗೆ, ಮೇಲ್ಸೇತುವೆ, ಎಲಿವೇಟೆಡ್ ಕಾರಿಡಾರ್, ಸಂವಹನ ಗೋಪುರ, ವಿಶ್ವ ಪಾರಂಪರಿಕ ತಾಣ, ರಾಷ್ಟ್ರೀಯ ಉದ್ಯಾನಗಳು, ಅರಣ್ಯ, ಜಲಮೂಲ, ಜಲಮಂಡಳಿಯ ನೀರು ಸಂಗ್ರಹಾಗಾರ, ಸ್ಮಾರಕಗಳಿರುವ 50 ಮೀಟರ್ ಒಳಗೆ ಜಾಹೀರಾತು ಪ್ರದರ್ಶನವನ್ನು ನಿಷೇಧಿಸಲಾಗಿದೆ.

ವಾಹನ ಚಾಲಕರ ಏಕಾಗ್ರತೆಗೆ ಭಂಗವನ್ನು ಉಂಟು ಮಾಡುವ ಜಾಹೀರಾತು, ಸಂಚಾರ ಸಿಗ್ನಲ್ ದೀಪಗಳ ಬಣ್ಣ, ನಗರದ ವಿರೂಪಕ್ಕೆ ಕಾರಣವಾಗಬಹುದಾದ ಭಿತ್ತಿಪತ್ರ, ಗೀಚುಬರಹ, ಮರದ ಮೇಲೆ ಅಂಟಿಸಲಾದ, ಮೊಳೆ ಹೊಡೆದ, ಕಟ್ಟಿದ, ಲಗತ್ತಿಸಿದ, ಜೋಡಿಸಿದ ಜಾಹೀರಾತನ್ನು ನಿಷೇಧಿಸಲಾಗಿದೆ. ಹೈಮಾಸ್ಟ್, ಬೀದಿ ದೀಪ, ವಿದ್ಯುತ್ ಕಂಬಗಳ ಮೇಲೆ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ಇಲ್ಲ.

### ಜಾಹೀರಾತು ಎಲ್ಲಿ ಎಷ್ಟು?

| ರಸ್ತೆ/ ವೃತ್ತದ ವಿಸ್ತೀರ್ಣ | ರಸ್ತೆಯ ಪ್ರತಿ 200 ಮೀಟರ್‌ಗೆ ಎರಡೂ ಕಡೆ ಜಾಹೀರಾತು |
|---|---|
| 18 ಮೀ.ನಿಂದ 24 ಮೀ | 1,000 ಚದರಡಿ |
| 24 ಮೀ.ನಿಂದ 30 ಮೀ | 1,200 ಚದಡಿ |
| 30 ಮೀ.ನಿಂದ 60 ಮೀ | 1,500 ಚದಡಿ |
| 60 ಮೀಟರ್‌ಗಿಂತ ಹೆಚ್ಚು | 1,600 ಚದರಡಿ |
| 50 ಸಾವಿರ ಚದರಡಿಯ ವೃತ್ತ | 3,000 ಚದರಡಿ |
| ಇತರೆ ವಾಣಿಜ್ಯ/ ಕೈಗಾರಿಕೆ ಪ್ರದೇಶಗಳಲ್ಲಿ 18 ಮೀಟರ್‌ಗಿಂತ ಕಡಿಮೆ ರಸ್ತೆ | 600 ಚದರಡಿ |
| ಇತರೆ ವಾಣಿಜ್ಯ/ ಕೈಗಾರಿಕೆ ಪ್ರದೇಶಗಳಲ್ಲಿ 12 ಮೀಟರ್‌ಗಿಂತ ಕಡಿಮೆ ರಸ್ತೆ | 500 ಚದರಡಿ |

### ಜಾಹೀರಾತಿ ದರ ಎಲ್ಲೆಲ್ಲಿ ಎಷ್ಟು?

ಕರ್ನಾಟಕ ನೋಂದಣಿ ಕಾಯ್ದೆ 1957ರ ಸೆಕ್ಷನ್ 45 ಬಿ ಅಡಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆ ನಿಗದಿಪಡಿಸಿರುವ ಮಾರ್ಗಸೂಚಿ ದರದಂತೆ ಆಯಾ ರಸ್ತೆ, ಪ್ರದೇಶ, ವೃತ್ತಗಳಿಗೆ ಜಾಹೀರಾತು ಪ್ರದರ್ಶನಕ್ಕೆ ಪ್ರತಿ ತಿಂಗಳಿಗೆ ಶುಲ್ಕ ನಿಗದಿ ಮಾಡಲಾಗಿದೆ.

| ಮಾರ್ಗಸೂಚಿ ದರ (ಪ್ರತಿ ಚದರಡಿ) | ಜಾಹೀರಾತು ಶುಲ್ಕ (ಪ್ರತಿ ಚದರಡಿಗೆ/ ಪ್ರತಿ ತಿಂಗಳಿಗೆ) |
|---|---|
| ₹4,000ಕ್ಕಿಂತ ಕಡಿಮೆ | ₹45 |
| ₹4,000ದಿಂದ ₹6,000 | ₹55 |
| ₹6,000ದಿಂದ ₹8,000 | ₹60 |
| ₹8,000ದಿಂದ ₹15,000 | ₹65 |
| ₹15,000ದಿಂದ ₹25,000 | ₹70 |
| ₹42,500ರಷ್ಟು/ ಅದಕ್ಕಿಂತ ಹೆಚ್ಚು | ₹75 |

### ಎಲ್ಲೆಲ್ಲಿ ಜಾಹೀರಾತಿಗೆ ಅವಕಾಶ ಇಲ್ಲ?

- ಕುಮಾರಕೃಪಾ ರಸ್ತೆ, ವಿಂಡ್ಸರ್ ಮ್ಯಾನರ್ ಜಂಕ್ಷನ್‌ನಿಂದ ಶಿವಾನಂದ ವೃತ್ತ
- ರಾಜಭವನ ರಸ್ತೆ, ಹೈಗ್ರೌಂಡ್ಸ್‌ನಿಂದ ಮಿನ್ಸ್ಕ್ ಸ್ಕ್ವೇರ್
- ಸ್ಯಾಂಕಿ ರಸ್ತೆ, ಹೈಗ್ರೌಂಡ್ಸ್‌ನಿಂದ ವಿಂಡ್ಸರ್ ಹಿಲ್ಸ್ ಸಿಗ್ನಲ್
- ಅಂಬೇಡ್ಕರ್ ವೀಧಿ, ಕೆ.ಆರ್. ವೃತ್ತದಿಂದ ಇನ್‌ಫೆಂಟ್ರಿ ಜಂಕ್ಷನ್
- ಪೋಸ್ಟ್ ಆಫೀಸ್ ರಸ್ತೆ, ಕೆ.ಆರ್. ವೃತ್ತದಿಂದ ಎಸ್‌ಬಿಐ ವೃತ್ತ (ಕೆ.ಜಿ ರಸ್ತೆ)
- ಚಾಲುಕ್ಯ ವೃತ್ತ
- ಮಹಾರಾಣಿ ಕಾಲೇಜ್ ರಸ್ತೆ/ ಶೇಷಾದ್ರಿ ರಸ್ತೆ
- ಕೆ.ಆರ್. ವೃತ್ತ
- ಕಬ್ಬನ್ ಪಾರ್ಕ್ ಹಾಗೂ ಲಾಲ್‌ಬಾಗ್ ಆವರಣ
- ನೃಪತುಂಗ ರಸ್ತೆ, ಕೆ.ಆರ್. ವೃತ್ತದಿಂದ ಪೊಲೀಸ್ ಕಾರ್ನರ್ ಜಂಕ್ಷನ್
- ಪ್ಯಾಲೇಸ್ ರಸ್ತೆ, ಎಸ್‌ಬಿಐ ವೃತ್ತದಿಂದ ಚಾಲುಕ್ಯ ವೃತ್ತ

**₹7.5 ಲಕ್ಷ**
83 ಅಡಿ ಅಗಲವಿರುವ 3 ಕಿ.ಮೀ ಉದ್ದದ ರಸ್ತೆಯಿಂದ ಪ್ರತಿ ತಿಂಗಳಿಗೆ ನಿರೀಕ್ಷಿಸಲಾಗಿರುವ ಜಾಹೀರಾತಿನ ಕನಿಷ್ಠ ಶುಲ್ಕ

### ಜಾಹೀರಾತು ನಿಯಂತ್ರಣ ಸಮಿತಿ

ಜಿಬಿಎ ಮುಖ್ಯ ಆಯುಕ್ತ– ಅಧ್ಯಕ್ಷ; ಬೆಂಗಳೂರು ನಗರ ಪೊಲೀಸ್ ಕಮಿಷನರ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ– ಸದಸ್ಯರು; ಜಿಬಿಎ ಮುಖ್ಯ ಆಯುಕ್ತರು ಸೂಚಿಸುವ ವಿಶೇಷ ಆಯುಕ್ತ– ಸದಸ್ಯ ಕಾರ್ಯದರ್ಶಿ

### ಜಾಹೀರಾತು ಸಲಹಾ ಸಮಿತಿ

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ– ಅಧ್ಯಕ್ಷ; ಜಿಬಿಎ ಮುಖ್ಯ ಆಯುಕ್ತ, ಜಾಹೀರಾತು ಉದ್ಯಮದ ಸಂಘಟನೆಯ ಪ್ರತಿನಿಧಿ, ಯಾವುದಾದರೂ ಎರಡು ನಗರ ಪಾಲಿಕೆ ಆಯುಕ್ತರು (ಪ್ರತಿ ವರ್ಷ ಬದಲು)– ಸದಸ್ಯರು; ಜಿಬಿಎ ಮುಖ್ಯ ಆಯುಕ್ತರು ಸೂಚಿಸುವ ವಿಶೇಷ ಆಯುಕ್ತ– ಸದಸ್ಯ ಕಾರ್ಯದರ್ಶಿ

## ಸುದ್ದಿ 2 ನಿಮಿಷ

### ಬಾಂಗ್ಲಾ ಪ್ರಜೆಗೆ ಜಾಮೀನು ನಕಾರ

**ಬೆಂಗಳೂರು:** ನಕಲಿ ಆಧಾರ್ ಕಾರ್ಡ್ ಬಳಸಿ ಪಡೆದುಕೊಂಡಿದ್ದ ಪಾಸ್‌ಪೋರ್ಟ್ ಮೂಲಕ ಐದು ಬಾರಿ ಬಾಂಗ್ಲಾ ದೇಶಕ್ಕೆ ಪ್ರಯಾಣಿಸಿದ್ದ ಮತ್ತು ಸದ್ಯ ಮಾನವ ಕಳ್ಳಸಾಗಣೆ ಆರೋಪದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಬಾಂಗ್ಲಾ ಪ್ರಜೆಯೊಬ್ಬರಿಗೆ ಜಾಮೀನು ಮಂಜೂರು ಮಾಡಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಆರೋಪಿ ಅಮೋಲ್ ಚಂದ್ರದಾಸ್ ಅಲಿಯಾಸ್ ಸುಜೀಬ್ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

ವಿಚಾರಣೆ ವೇಳೆ ಎನ್‌ಐಎ ಪರ ವಕೀಲ ಪಿ.ಪ್ರಸನ್ನ ಕುಮಾರ್, ‘ಆರೋಪಿಯು ನಕಲಿ ಆಧಾರ್ ಕಾರ್ಡ್ ಹೊಂದಿದ್ದು ಅದು 2017ರ ಡಿಸೆಂಬರ್ 18ರ ದಿನಾಂಕ ಹೊಂದಿದೆ. ಅದೇ ದಿನಾಂಕದಂದು ಆತನ ಹೆಸರಿನಲ್ಲಿ ಮತ್ತೊಂದು ಆಧಾರ್ ಕಾರ್ಡ್ ಸೃಷ್ಟಿಸಲಾಗಿದ್ದು, ಒಂದರಲ್ಲಿ ಬೆಂಗಳೂರಿನ ವಿಳಾಸವಿದ್ದರೆ ಮತ್ತೊಂದರಲ್ಲಿ ಅಸ್ಸಾಂ ವಿಳಾಸವಿದೆ. ಆರೋಪಿಗೆ ಜಾಮೀನು ನೀಡಿದರೆ ಆತ ಬಂಧನದಿಂದ ತಪ್ಪಿಸಿಕೊಳ್ಳುವ ಸಾಧ್ಯತೆಗಳಿವೆ’ ಎಂದು ಕಳವಳ ವ್ಯಕ್ತಪಡಿಸಿದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, ‘ಆರೋಪಿ ಬಾಂಗ್ಲಾದ ಪ್ರಜೆಯಾಗಿದ್ದು, ಒಂದೇ ದಿನದಲ್ಲಿ ಕರ್ನಾಟಕ ಮತ್ತು ಅಸ್ಸಾಂ ವಿಳಾಸದ ನಕಲಿ ಆಧಾರ್ ಕಾರ್ಡ್‌ಗಳನ್ನು ಪಡೆದಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಹಾಗಾಗಿ, ಜಾಮೀನು ನೀಡಲು ಸೂಕ್ತ ಕಾರಣ ಕಂಡುಬರುತ್ತಿಲ್ಲ’ ಎಂಬ ಅಭಿಪ್ರಾಯದೊಂದಿಗೆ ಮೇಲ್ಮನವಿ ವಜಾಗೊಳಿಸಿದೆ.

### ‘ಕಾಲಮಿತಿಯಲ್ಲಿ ಚುನಾವಣೆ’

**ಬೆಂಗಳೂರು:** ‘ಸುಪ್ರೀಂ ಕೋರ್ಟ್ ನೀಡಿರುವ ಆದೇಶದಂತೆ ಜೂನ್ 30ರ ಒಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಪಾಲಿಕೆಗಳ ಚುನಾವಣೆ ನಡೆಸಲಾಗುವುದು. ಈ ಸಂಬಂಧ ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ರಾಜ್ಯ ಚುನಾವಣಾ ಆಯೋಗವು ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿದೆ. ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆಗಳೂ ನಡೆಯಬೇಕಿದೆ. ಸಂವಿಧಾನದ 73 ಮತ್ತು 74ನೇ ತಿದ್ದುಪಡಿ ಅನುಸಾರ ಏನೆಲ್ಲಾ ತೀರ್ಮಾನಗಳನ್ನು ಮಾಡಬೇಕೊ ಅದನ್ನು ಮಾಡಲಾಗುವುದು’ ಎಂದರು.

**ಜನ ಬೆಂಬಲದ ವಿಶ್ವಾಸ:** ‘ಸಂಸತ್ ಚುನಾವಣೆಯಲ್ಲಿ ಮೈತ್ರಿ ಮಾಡಿದಂತೆ ವಿಧಾನಸಭೆ ಮತ್ತು ಪಾಲಿಕೆ ಚುನಾವಣೆಯನ್ನೂ ಬಿಜೆಪಿ- ಜೆಡಿಎಸ್ ಒಟ್ಟಾದರೆ ನೇರ ಹಣಾಹಣಿ ನಡೆಯಲಿದೆ. ನಾವು ಮಾಡುತ್ತಿರುವ ಕೆಲಸಕ್ಕೆ ಜನ ಬೆಂಬಲ ನೀಡಲಿದ್ದು, ಜಿಬಿಎ ಐದೂ ಪಾಲಿಕೆಗಳಲ್ಲೂ ಗೆಲ್ಲುತ್ತೇವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

**19ಕ್ಕೆ ಮತದಾರರ ಕರಡು ಪಟ್ಟಿ:** ಐದು ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆಗೆ ವಾರ್ಡ್‌ವಾರು ಮತದಾರರ ಕರಡು ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗ ಜ.19ಕ್ಕೆ ಪ್ರಕಟಿಸಲಿದೆ.

ಕುವೆಂಪು ಕಲಾಕ್ಷೇತ್ರದಲ್ಲಿ ಮಂಗಳವಾರ ನಡೆದ ವಿಶ್ವೇಶ್ವರಯ್ಯ ಔಷಧ ವಿಜ್ಞಾನಗಳ ಮಹಾವಿದ್ಯಾಲಯದ ಪದವಿ ದಿನ ಕಾರ್ಯಕ್ರಮದಲ್ಲಿ, ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಬಿ. ಕೆಂಚಪ್ಪಗೌಡ, ಅಧ್ಯಕ್ಷ ಎಲ್. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಸಿ.ಜಿ. ಗಂಗಾಧರ್, ಫಾರ್ಮಸಿ ಕಾಲೇಜಿನ ಅಧ್ಯಕ್ಷ ಎಂ.ಬಿ. ಮಂಜೇಗೌಡ, ಕಾಲೇಜಿನ ಪ್ರಾಂಶುಪಾಲ ಡಾ.ಶೇಖರ್ ಉಪಸ್ಥಿತರಿದ್ದರು

### ಬಿಡಿಎಗೆ ನಗರಾಭಿವೃದ್ಧಿ ಇಲಾಖೆ ನಿರ್ದೇಶನ

# ಜಿಬಿಎಗೆ 8 ಬಡಾವಣೆ ಹಸ್ತಾಂತರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸಿರುವ ಅಂಜನಾಪುರ ಟೌನ್‌ಶಿಪ್ ಸೇರಿ ಎಂಟು ಬಡಾವಣೆಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಸಂಬಂಧಪಟ್ಟ ನಗರ ಪಾಲಿಕೆಗಳಿಗೆ ಹಸ್ತಾಂತರಿಸುವಂತೆ ನಗರಾಭಿವೃದ್ಧಿ ಇಲಾಖೆ ಆದೇಶಿಸಿದೆ.

ಬನಶಂಕರಿ 6ನೇ ಹಂತ (1ರಿಂದ 11ನೇ ಬ್ಲಾಕ್), ಬನಶಂಕರಿ 6ನೇ ಹಂತ ಮುಂದುವರಿದ ಬಡಾವಣೆ (4ನೇ ಎಚ್, ಬಿ, ಟಿ ಬ್ಲಾಕ್), ಜಯಪ್ರಕಾಶ್ ನಾರಾಯಣ ನಗರ (ಜೆ.ಪಿ.ನಗರ) 9ನೇ ಫೇಸ್, ಜಯಪ್ರಕಾಶ್ ನಾರಾಯಣ ನಗರ (ಜೆ.ಪಿ.ನಗರ) 8ನೇ ಫೇಸ್, ಅಂಜನಾಪುರ ಟೌನ್‌ಶಿಪ್ ಬಡಾವಣೆ, ಅಂಜನಾಪುರ ಮುಂದುವರಿದ ಬಡಾವಣೆ, ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ (1 ರಿಂದ 6ನೇ ಬ್ಲಾಕ್), ಸರ್ ಎಂ.ವಿಶ್ವೇಶ್ವರಯ್ಯ ಮುಂದುವರಿದ ಬಡಾವಣೆಯನ್ನು (7ರಿಂದ 9ನೇ ಬ್ಲಾಕ್) ಹಸ್ತಾಂತರಿಸಲು ಆದೇಶ ಹೊರಡಿಸಿದೆ.

ಬಿಡಿಎ ಹಸ್ತಾಂತರಿಸುವ ಬಡಾವಣೆಗಳಲ್ಲಿ ಬಾಕಿ ಉಳಿದ ತೆರಿಗೆ ವಸೂಲಿ ಮಾಡಲು ಆಯಾ ನಗರ ಪಾಲಿಕೆಗಳಿಗೆ ಅಧಿಕಾರ ನೀಡಲಾಗಿದೆ.

ಎಂಟು ಬಡಾವಣೆಗಳನ್ನು ಮುಂದಿನ ನಿರ್ವಹಣೆಗಾಗಿ ಹಾಲಿ ಯಾವ ಸ್ಥಿತಿಯಲ್ಲಿ ಇವೆಯೋ ಹಾಗೆಯೇ ಆಯಾ ಪಾಲಿಕೆಗಳಿಗೆ ಹಸ್ತಾಂತರ ಮಾಡಬೇಕು. ಇದನ್ನು ದೃಢಪಡಿಸಿಕೊಳ್ಳಲು ಬಿಡಿಎ, ಜಲಮಂಡಳಿ ಹಾಗೂ ಪಾಲಿಕೆ ಅಧಿಕಾರಿಗಳು ಜಂಟಿ ಪರಿವೀಕ್ಷಣೆ ನಡೆಸಿ ಸಹಿ ಮಾಡಬೇಕು.

ಹಸ್ತಾಂತರಿಸುವಾಗ ಬಡಾವಣೆಯಲ್ಲಿನ ರಸ್ತೆ, ಉದ್ಯಾನ ಇತರೆ ಮೌಲಸೌಕರ್ಯ ಅಭಿವೃದ್ಧಿ ಹೊಂದದಿದ್ದಲ್ಲಿ ಇದಕ್ಕೆ ತಗುಲುವ ವೆಚ್ಚದ ಶೇಕಡ 50ರಷ್ಟು ಮೊತ್ತವನ್ನು ಪಾಲಿಕೆಗಳಿಗೆ ಬಿಡಿಎ ಸಂದಾಯ ಮಾಡಬೇಕು ಎಂದು ಸೂಚಿಸಲಾಗಿದೆ. ಜಲಮಂಡಳಿಗೂ ಇದೇ ನಿಯಮ ಅನ್ವಯಿಸಿ ಆದೇಶ ಹೊರಡಿಸಲಾಗಿದೆ.

ಬಿಡಿಎನಿಂದ ಜಮಾ ಮಾಡುವ ಶೇಕಡ 50ರಷ್ಟು ಮೊತ್ತದ ಜತೆಗೆ ಸಂಬಂಧಪಟ್ಟ ನಗರ ಪಾಲಿಕೆಗಳು, ಜಲಮಂಡಳಿ ಶೇಕಡ 50ರಷ್ಟು ಮೊತ್ತ ಬಳಸಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ.

ಹಸ್ತಾಂತರಗೊಂಡ ಬಡಾವಣೆಗಳ ದಾಖಲಾತಿಗಳನ್ನು ನಿರ್ವಹಿಸಬೇಕು. ಉದ್ಯಾನ, ಬಯಲು ಜಾಗ ಹಾಗೂ ಆಟದ ಮೈದಾನಗಳನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸುವಂತೆ ಸೂಚಿಸಿದೆ. ಒಮ್ಮೆ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ನಿವೇಶನ/ ಮನೆಗಳಿಗೆ ಖಾತಾ ವಿತರಣೆ ಹಾಗೂ ತೆರಿಗೆ ಸಂಗ್ರಹ ಪಾಲಿಕೆ ವಹಿಸಿಕೊಳ್ಳಲಿದೆ. ಆದರೆ, ನಿಯಮದಂತೆ ಸಿ.ಎ. ನಿವೇಶನಗಳು ಬಿಡಿಎ ಮಾಲೀಕತ್ವದಲ್ಲಿರುವ ಬಗ್ಗೆ ವಿವಾದ ಇದ್ದಲ್ಲಿ ಇಂತಹ ಪ್ರದೇಶಗಳನ್ನು ಹಸ್ತಾಂತರ ಮಾಡಬಾರದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಸೇವಾನಿರತರಿಗೆ ಹುದ್ದೆ ನೀಡಲು ಒತ್ತಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ನೇರ ನೇಮಕಾತಿ ಪ್ರಕ್ರಿಯೆಯನ್ನು ರದ್ದುಪಡಿಸಬೇಕು. ಸೇವಾಜ್ಯೇಷ್ಠತೆಯ ಆಧಾರದಲ್ಲಿ ಹಾಲಿ ಇರುವ ಅಧ್ಯಾಪಕರಿಗೆ ಬಡ್ತಿ ನೀಡಿ, ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಉನ್ನತ ಶಿಕ್ಷಣ ಚಿಂತನಾ ವೇದಿಕೆ ಒತ್ತಾಯಿಸಿದೆ.

ಪ್ರಾಂಶುಪಾಲರ 310 ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಿದ್ದ ರಾಜ್ಯ ಸರ್ಕಾರ ನೇರ ಪರೀಕ್ಷೆ ನಡೆಸಿದೆ. 15 ವರ್ಷಗಳಿಂದ ಪ್ರಾಂಶುಪಾಲರ ಹುದ್ದೆಗೆ ನೇಮಕಾತಿ ಪ್ರಕ್ರಿಯೆಗಳೇ ನಡೆದಿರಲಿಲ್ಲ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಾರ್ಚ್ 2022ರಲ್ಲಿ ಅಧಿಸೂಚನೆ ಹೊರಡಿಸಿತ್ತು. ನಿಗದಿಯಾಗಿದ್ದ ಪರೀಕ್ಷೆಗಳನ್ನು ತಾಂತ್ರಿಕ ಕಾರಣಗಳಿಂದ ಎರಡು ಬಾರಿ ಮುಂದೂಡಲಾಗಿತ್ತು. ಅಂತಿಮವಾಗಿ 2023ರ ಜುಲೈ 30ರಂದು ಪರೀಕ್ಷೆ ನಡೆಸಲಾಗಿತ್ತು.

ನೇಮಕಾತಿ ನಿಯಮಗಳು ಗೊಂದಲದಿಂದ ಕೂಡಿದ್ದು, ಅಧಿಸೂಚನೆಯ ನಂತರವೂ ಬದಲಾವಣೆ ಮಾಡುತ್ತಲೇ ಬರಲಾಗಿದೆ. ವಯೋಮಿತಿ, ಜಾತಿ ಮತ್ತು ಆದಾಯ ಪ್ರಮಾಣಪತ್ರ, ಅಂತರ ಇಲಾಖಾ ನೌಕರರಿಗೆ ಅವಕಾಶ ಸೇರಿದಂತೆ ಹಲವು ಗೊಂದಲಗಳು ಇದ್ದವು. ಅರ್ಜಿ ಸಲ್ಲಿಸುವ ಅವಧಿಯನ್ನೂ ಎರಡು ಬಾರಿ ಮುಂದೂಡಲಾಯಿತು. ತಾತ್ಕಾಲಿಕ ಆಯ್ಕೆಪಟ್ಟಿಗೆ ಸಲ್ಲಿಕೆಯಾದ ಆಕ್ಷೇಪಣೆಗಳಿಗೂ ಸರಿಯಾದ ಪ್ರತಿಕ್ರಿಯೆ ನೀಡದೆ ಅಂತಿಮ ಪಟ್ಟಿ ಪ್ರಕಟಿಸಲಾಗಿದೆ ಎಂದು ವೇದಿಕೆ ಅಧ್ಯಕ್ಷ ಟಿ.ರಾಮಲಿಂಗಪ್ಪ, ಡಿ.ರಮೇಶ್, ಶ್ರೀನಿವಾಸ ಗೌಡ, ಮುನಿರಾಮಪ್ಪ ಮತ್ತಿತರರು ದೂರಿದ್ದಾರೆ.

1960ರಿಂದ 2009ರವರೆಗೂ ಪ್ರಾಂಶುಪಾಲರ ಹುದ್ದೆಗಳನ್ನು ಸೇವಾ ಜ್ಯೇಷ್ಠತೆಯ ಆಧಾರದಲ್ಲೇ ನೀಡಲಾಗುತ್ತಿತ್ತು. 2009ರಿಂದ ಇಲ್ಲಿಯವರೆಗೂ ಕಾಯಂ ಪ್ರಾಂಶುಪಾಲರ ನೇಮಕವೇ ಆಗಿಲ್ಲ. ಪ್ರಭಾರ ಕಾರ್ಯದಲ್ಲೇ ಹಲವು ಅಧ್ಯಾಪಕರು ಸೇವಾವಧಿ ಮುಗಿಸಿದ್ದಾರೆ. ಈಗಲಾದರೂ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಬೋಧಕ ಸಿಬ್ಬಂದಿಯನ್ನೇ ಕಾಯಂ ನೇಮಕ ಮಾಡುವ ಮೂಲಕ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದ್ದಾರೆ.

### ಶ್ರೀಶ್ರೀ ವಿರುದ್ಧ ಆತುರದ ಕ್ರಮ ಬೇಡ

**ಬೆಂಗಳೂರು:** ‘ಕಗ್ಗಲೀಪುರ ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನು, ಕೆರೆ ಮತ್ತು ರಾಜಕಾಲುವೆ ಒತ್ತುವರಿ ಆರೋಪಕ್ಕೆ ಸಂಬಂಧಿಸಿದಂತೆ ಆರ್ಟ್ ಆಫ್ ಲಿವಿಂಗ್ ಪ್ರತಿಷ್ಠಾನದ ಸಂಸ್ಥಾಪಕ ಶ್ರೀಶ್ರೀ ರವಿಶಂಕರ ಗುರೂಜಿ ವಿರುದ್ಧದ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಆತುರದ ಕ್ರಮ ಕೈಗೊಳ್ಳಬಾರದು’ ಎಂದು ಹೈಕೋರ್ಟ್, ರಾಜ್ಯ ಪ್ರಾಸಿಕ್ಯೂಷನ್‌ಗೆ ಆದೇಶಿಸಿದೆ.

‘ನನ್ನ ವಿರುದ್ಧ, ಬೆಂಗಳೂರು ಮೆಟ್ರೊಪಾಲಿಟನ್ ಟಾಸ್ಕ್‌ಫೋರ್ಸ್ (ಬಿಎಂಟಿಎಫ್) ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಶ್ರೀಶ್ರೀ ರವಿಶಂಕರ ಗುರೂಜಿ (68) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ, ‘ಶ್ರೀಶ್ರೀ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ–1964ರ ಕಲಂ 192 ಎ ಅಡಿಯಲ್ಲಿ ಬಿಎಂಟಿಎಫ್ ಎಫ್‌ಐಆರ್ ದಾಖಲಿಸಿದೆ. ಬಿಎಂಟಿಎಫ್ ಪೊಲೀಸ್ ಠಾಣೆಯ ಅಧಿಕಾರ ಹೊಂದಿದ್ದು, ನೋಟಿಸ್ ಕೊಡುವ ಅವಶ್ಯ ಇಲ್ಲ. ಬೇಕಾದರೆ ಅರ್ಜಿದಾರರು ತಾವು ಯಾವುದೇ ಒತ್ತುವರಿ ಮಾಡಿಲ್ಲ ಎಂಬುದನ್ನು ಹೇಳಿಬಿಡಲಿ’ ಎಂದು ಅರ್ಜಿದಾರರ ಪರ ವಕೀಲರಿಗೆ ಸವಾಲೆಸೆದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಅರ್ಜಿದಾರರ ಪರ ವಕೀಲ ಪಿ.ಪ್ರಸನ್ನ ಕುಮಾರ್, ‘ಪ್ರಾಸಿಕ್ಯೂಷನ್ ಮಂಡಿಸುತ್ತಿರುವ ವಾದ ಸರಣಿ ತೀರಾ ದುರುದ್ದೃಷ್ಟಕರವಾಗಿದೆ. ಇದು ಸಿವಿಲ್ ಕೇಸಲ್ಲ. ಮೊದಲು ಎಫ್‌ಐಆರ್ ದಾಖಲಿಸಿ ನಂತರ ಸಾಕ್ಷ್ಯ ಹುಡುಕುತ್ತಿರುವ ಪ್ರಾಸಿಕ್ಯೂಷನ್ ಕಳೆದ ಮೂರು ಮುದ್ದತುಗಳಲ್ಲಿ ತಾರೀಖುಗಳನ್ನು ಮಾತ್ರವೇ ಪಡೆಯುತ್ತಿದೆ. ನಮ್ಮ ಅರ್ಜಿದಾರರ ವಿರುದ್ಧ ಯಾವುದೇ ಸಾಕ್ಷ್ಯ ತಂದು ನ್ಯಾಯಾಲಯಕ್ಕೆ ಒಪ್ಪಿಸುತ್ತಿಲ್ಲ’ ಎಂದು ದೂರಿದರು.

‘ಈ ಮುನ್ನ ಮುಖ್ಯ ನ್ಯಾಯಮೂರ್ತಿಯವರ ಮುಂದಿದ್ದ ಸಾರ್ವಜನಿಕ ಹಿತಾಸಕ್ತಿ ಪ್ರಕರಣದಲ್ಲಿ ನಮ್ಮ ಅರ್ಜಿದಾರರು ಐದನೇ ಪ್ರತಿವಾದಿಯಾಗಿದ್ದರು. ವಿಲೇವಾರಿಯಾದ ಈ ಪ್ರಕರಣದಲ್ಲಿ ಮುಖ್ಯ ನ್ಯಾಯಮೂರ್ತಿ ಅವರು ಬೆಂಗಳೂರು ದಕ್ಷಿಣ ತಹಶೀಲ್ದಾರ್ ಅವರಿಂದ ವರದಿ ಪಡೆದಿದ್ದರು. ಆ ವರದಿಯಲ್ಲಿ ಎಲ್ಲೂ ಅರ್ಜಿದಾರರು ಒತ್ತುವರಿ ಮಾಡಿದ್ದಾರೆ ಎಂಬ ಆರೋಪಗಳಿಲ್ಲ. ಅರ್ಜಿದಾರರ ಹೆಸರಿನಲ್ಲಿ ಸ್ಥಿರಾಸ್ತಿಯೂ ಇಲ್ಲ’ ಎಂದರು. ನ್ಯಾಯಪೀಠ ಎಫ್‌ಐಆರ್‌ಗೆ ಮಧ್ಯಂತರ ತಡೆ ನೀಡಿ ಆದೇಶಿಸಿ ವಿಚಾರಣೆ ಮುಂದೂಡಿತು.

# ₹8 ಕೋಟಿ ತೆರಿಗೆ ವಿನಾಯಿತಿ

## ಝೆರೋಧಾ ಬ್ರೋಕಿಂಗ್ ಲಿಮಿಟೆಡ್ ಮೇಲ್ಮನವಿ ಮಾನ್ಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ದೇಶದ ಪ್ರಮುಖ ಆನ್‌ಲೈನ್ ಹೂಡಿಕೆಯ ವೇದಿಕೆ ಎನಿಸಿರುವ ಝೆರೋಧಾದ ಸ್ಥಾಪಕ ಹೂಡಿಕೆದಾರ, ವಿಜಯ್ ಮಾರಿಯಪ್ಪನ್ ಆಸ್ಟಿನ್ ಪ್ರಕಾಶ್ ಅವರು ಭಾರತದ ಶಾಶ್ವತ ನಿವಾಸಿ ಅಲ್ಲದಿರುವುದರಿಂದ, ಡಿಟಿಎಎ (ದುಪ್ಪಟ್ಟು ತೆರಿಗೆ ತಪ್ಪಿಸುವ ಒಪ್ಪಂದ) ಅಡಿಯಲ್ಲಿ ತೆರಿಗೆ ವಿನಾಯಿತಿಗೆ ಅರ್ಹರು’ ಎಂದು ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಳಿ (ಐಟಿಎಟಿ) ಅಭಿಪ್ರಾಯಪಟ್ಟಿದೆ.

ಈ ಕುರಿತಂತೆ ಆಸ್ಟಿನ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ವಿಶಾಖಪಟ್ಟಣಂನಲ್ಲಿರುವ ನ್ಯಾಯಮಂಡಳಿಯ ನ್ಯಾಯಿಕ ಸದಸ್ಯ ರವೀಶ್ ಸೂದ್ ಮತ್ತು ಲೆಕ್ಕಸದಸ್ಯ ಎಸ್.ಬಾಲಕೃಷ್ಣನ್ ಅವರಿದ್ದ ವಿಭಾಗೀಯ ಪೀಠವು, ಆಸ್ಟಿನ್ ಅವರು ಪಾವತಿಸಬೇಕಿದ್ದ ₹8.28 ಕೋಟಿ ಮೊತ್ತಕ್ಕೆ ವಿನಾಯಿತಿ ನೀಡಿ ಇತ್ತೀಚೆಗೆ ಆದೇಶಿಸಿದೆ.

‘ಆಸ್ಟಿನ್ ಭಾರತದಲ್ಲಿ ಶಾಶ್ವತವಾಗಿ ನೆಲಸಿಲ್ಲ (ಸಿಂಗಪುರ ನಿವಾಸಿ) ಮತ್ತು ಅವರು ಕಂಪನಿಯ ಸಲಹೆಗಾರರಾಗಿ ಆದಾಯ ಪಡೆದಿದ್ದಾರೆ ಎಂಬ ಕಾರಣದಿಂದ ಡಿಟಿಎಎ ಅಡಿಯಲ್ಲಿ ವಿನಾಯಿತಿಗೆ ಅರ್ಹರು. ಡಿಟಿಎಎಗೆ ಸಂಬಂಧಿಸಿದಂತೆ ಸಂವಿಧಾನದ 14ನೇ ವಿಧಿಯು ವೃತ್ತಿಪರ ಸೇವೆಗಳ ಬಗ್ಗೆ ವ್ಯಾಖ್ಯಾನಿಸುತ್ತದೆ ಮತ್ತು ಭಾರತ-ಯುಎಇ ನಡುವಿನ ಒಪ್ಪಂದದ ಅನುಸಾರ ಇದೊಂದು ಅಂತರ್ಗತ ವ್ಯಾಖ್ಯಾನವಾಗಿದೆ’ ಎಂದು ಪೀಠವು ತನ್ನ ಆದೇಶದಲ್ಲಿ ವಿವರಿಸಿದೆ.

‘ಆಸ್ಟಿನ್ ಅವರು ಝೆರೋಧಾದಿಂದ ₹8,28,36,896 ಆದಾಯ ಹೊಂದಿದ್ದಾರೆ’ ಎಂದು ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಝೆರೋಧಾಕ್ಕೆ ಆದಾಯ ತೆರಿಗೆ ಇಲಾಖೆಯ ಸಹಾಯಕ ಆಯುಕ್ತರು ಆದಾಯ ತೆರಿಗೆ ಕಾಯ್ದೆ ಅಡಿಯಲ್ಲಿ 2024ರ ಡಿಸೆಂಬರ್ 10ರಂದು ಮೌಲ್ಯ ಪಾವತಿಸಲು ನಿರ್ಣಯಿಸಿದ್ದರು.

ಇದನ್ನು ಪ್ರಶ್ನಿಸಿದ್ದ ಆಸ್ಟಿನ್, ‘ಆದಾಯ ತೆರಿಗೆ ಮೌಲ್ಯಮಾಪಕರು ನಿರ್ಣಯಿಸಿರುವ ಆದಾಯವು ಕಲಂ 90(2)ರ ಅನುಸಾರ ಭಾರತದಲ್ಲಿನ ತೆರಿಗೆಗೆ ಒಳಪಡುವುದಿಲ್ಲ ಮತ್ತು ಇದರ ಪ್ರಯೋಜನವನ್ನು ಪಡೆಯಲು ನಾನು ಅರ್ಹನಿದ್ದೇನೆ’ ಎಂದು ಪ್ರತಿಪಾದಿಸಿದ್ದರು. ಮೌಲ್ಯಮಾಪನ ಅಧಿಕಾರಿ ಈ ಹಕ್ಕನ್ನು ತಿರಸ್ಕರಿಸಿದ್ದರು. ಇದನ್ನು ಪ್ರಶ್ನಿಸಿ ಆಸ್ಟಿನ್ ಮೇಲ್ಮನವಿ ಸಲ್ಲಿಸಿದ್ದರು.

ವಿಚಾರಣೆ ವೇಳೆ ತೆರಿಗೆ ಇಲಾಖೆಯ ಮೌಲ್ಯಮಾಪನ ಅಧಿಕಾರಿ, ‘ಆಸ್ಟಿನ್ ಅವರಿಗೆ ಮೊದಲು ಝೆರೋಧಾ ವತಿಯಿಂದ ಸಂಬಳ ನೀಡಲಾಗುತ್ತಿತ್ತು ನಂತರ ಭಾರತದಲ್ಲಿ ತೆರಿಗೆ ಪಾವತಿಸುವುದನ್ನು ತಪ್ಪಿಸಲು 2020ರ ಅಕ್ಟೋಬರ್ 1ರಿಂದ ಅವರನ್ನು ಸಲಹೆಗಾರರಾಗಿ ನೇಮಕ ಮಾಡಿಕೊಳ್ಳಲಾಗಿದೆ’ ಎಂದು ವಾದ ಮಂಡಿಸಿದ್ದರು.

**ಝೆರೋಧಾ ಬ್ರೋಕಿಂಗ್ ಲಿಮಿಟೆಡ್:** ಕೈಟ್‌ನಂತಹ ವೇದಿಕೆಗಳ ಮೂಲಕ ಷೇರುಗಳು, ಉತ್ಪನ್ನಗಳು, ಕರೆನ್ಸಿಗಳು, ಸರಕುಗಳು, ಮ್ಯೂಚುವಲ್ ಫಂಡ್‌ಗಳು ಮತ್ತು ಬಾಂಡ್‌ಗಳಿಗೆ ಆನ್‌ಲೈನ್ ವ್ಯಾಪಾರ ಒದಗಿಸುವ ಮಧ್ಯವರ್ತಿಯಾಗಿರುವ ‘ಝೆರೋಧಾ ಬ್ರೋಕಿಂಗ್ ಲಿಮಿಟೆಡ್’ ಭಾರತದ ಪ್ರಮುಖ ರಿಯಾಯಿತಿ ದರದ ದಲ್ಲಾಳಿ ಸಂಸ್ಥೆಯಾಗಿದೆ.

ಕಡಿಮೆ ವೆಚ್ಚ, ಉನ್ನತ ತಂತ್ರಜ್ಞಾನ ಮತ್ತು ಶೈಕ್ಷಣಿಕ ಸಂಪನ್ಮೂಲಗಳೊಂದಿಗೆ ಭಾರತೀಯ ಹೂಡಿಕೆಯಲ್ಲಿನ ಅಡೆತಡೆಗಳನ್ನು ತೆಗೆದುಹಾಕುವ ಗುರಿಯನ್ನು ಇದು ಹೊಂದಿದೆ. ಇದನ್ನು 2010ರಲ್ಲಿ ನಿತಿನ್ ಮತ್ತು ನಿಖಿಲ್ ಕಾಮತ್ ಸ್ಥಾಪಿಸಿದರು. ಲಕ್ಷಾಂತರ ಬಳಕೆದಾರರು ಇದರ ಸೇವೆ ಪಡೆಯುತ್ತಿದ್ದಾರೆ.

#### ಮುಖ್ಯಾಂಶಗಳು

- ‘ಡಿಟಿಎಎ ಅಡಿ ತೆರಿಗೆ ವಿನಾಯಿತಿಗೆ ಅರ್ಹ’

### ಸ್ನೇಹಿತನ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ ನ್ಯಾಯಾಲಯದ ನಿರ್ದೇಶನ

# ಮನೆ ತೊರೆದ ಯುವತಿಗೆ ಹೈಕೋರ್ಟ್ ರಕ್ಷಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪೋಷಕರ ದೌರ್ಜನ್ಯ ತಾಳಲಾರದೆ ಸ್ವಇಚ್ಛೆಯಿಂದ ಮನೆ ತೊರೆದು ಬಂದು ಸ್ನೇಹಿತನ ಜೊತೆ ಪ್ರತ್ಯೇಕವಾಗಿ ವಾಸಿಸುತ್ತಿರುವ ಎಂಜಿನಿಯರಿಂಗ್ ಪದವೀಧರೆಯೊಬ್ಬಳ ರಕ್ಷಣೆಗೆ ಹೈಕೋರ್ಟ್ ಮುಂದಾಗಿದೆ.

‘ಸುಳ್ಳು ಆರೋಪಗಳ ಅಡಿಯಲ್ಲಿ ನನ್ನ ವಿರುದ್ಧ ವರ್ತೂರು ಮತ್ತು ರಾಜಗೋಪಾಲ ನಗರ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಯುವತಿಗೆ ಆಶ್ರಯ ನೀಡಿರುವ ಅರ್ಜಿದಾರರು ಸಲ್ಲಿಸಿರುವ ಎರಡು ಪ್ರತ್ಯೇಕ ಕ್ರಿಮಿನಲ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಪೀಠ, ‘ಯುವತಿಯನ್ನು ಅಪಹರಿಸಲಾಗಿದೆ ಎಂಬ ಪೋಷಕರ ದೂರು ಮತ್ತು ಸಾಮಾಜಿಕ ಜಾಲತಾಣದಲ್ಲಿ ಆಕೆಗೆ ಅಶ್ಲೀಲ ಸಂದೇಶ ರವಾನಿಸಿದ್ದಾರೆ ಎಂದು ಆರೋಪಿಸಿ ಮೂರನೇ ವ್ಯಕ್ತಿ ಅರ್ಜಿದಾರರ ವಿರುದ್ಧ ದಾಖಲಿಸಿರುವ ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೊಲೀಸರು ಯಾವುದೇ ಆತುರದ ಕ್ರಮ ಕೈಗೊಳ್ಳಬಾರದು’ ಎಂದು ಪ್ರಾಸಿಕ್ಯೂಷನ್‌ಗೆ ಆದೇಶಿಸಿತು. ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಲಾಗಿದೆ. ಅರ್ಜಿದಾರರ ಪರ ಹೈಕೋರ್ಟ್ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ವಕಾಲತ್ತು ವಹಿಸಿದ್ದಾರೆ.



**ಅರ್ಜಿಯಲ್ಲಿ ಏನಿದೆ?:** ‘ಪೋಷಕರ ದೌರ್ಜನ್ಯ ತಾಳಲಾರದೆ ಮನೆಬಿಟ್ಟು ಬಂದ 24 ವರ್ಷದ ಯುವತಿಗೆ ಆಶ್ರಯ ನೀಡಿದ್ದನ್ನು ತಪ್ಪಾಗಿ ಅರ್ಥೈಸಲಾಗಿದೆ. ಯುವತಿ ಮ್ಯಾಜಿಸ್ಟ್ರೇಟರ ಮುಂದೆ ಈಗಾಗಲೇ ಈ ಕುರಿತು ಸ್ವಇಚ್ಛಾ ಹೇಳಿಕೆಯನ್ನೂ ದಾಖಲಿಸಿದ್ದಾರೆ. ಆದರೂ ಪೋಷಕರು ಕೆಲವು ಮಹಿಳಾ ಸಂಘಗಳ ಸಹಾಯದಿಂದ ನಮ್ಮ ಮನೆಗೆ ನುಗ್ಗಿ ಯುವತಿ ಮತ್ತು ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ಅಶ್ಲೀಲ ಸಂದೇಶ ರವಾನಿಸಿದ ಆರೋಪದಡಿ ಮೂರನೇ ವ್ಯಕ್ತಿಯೊಬ್ಬರಿಂದ ನನ್ನ ವಿರುದ್ಧ ದೂರು ದಾಖಲಿಸಿದ್ದು ಈ ಕ್ರಿಮಿನಲ್ ಪ್ರಕರಣಗಳನ್ನು ರದ್ದುಪಡಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

### 75 ಕ್ರಿಮಿನಲ್ ಕೇಸುಗಳ ಆಸಾಮಿ..!

‘ಈತ ಯಾರೋ ಮೋಸ್ಟ್ ಡೆಕೋರೇಟಿವ್ ಮ್ಯಾನ್ ಇದ್ದಂಗಿದೆಯಲ್ಲಾ? ಈತನ ಎಲ್ಲ ಅಪರಾಧಗಳ ಪಟ್ಟಿ ಕೊಡಿ’ ಎಂದು ಹೈಕೋರ್ಟ್, ಕ್ರಿಮಿನಲ್ ಪ್ರಕರಣವೊಂದರ ವಜಾ ಕೋರಿದ್ದ ಅರ್ಜಿ ವಿಚಾರಣೆಯಲ್ಲಿ ರಾಜ್ಯ ಪ್ರಾಸಿಕ್ಯೂಷನ್‌ಗೆ ಈ ಕುರಿತಂತೆ ನಿರ್ದೇಶಿಸಿದೆ.

‘ನನ್ನ ವಿರುದ್ಧ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಿಜೆಎಂ ಕೋರ್ಟ್‌ನಲ್ಲಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು’ ಎಂದು ಕೋರಿ ನೆಲಮಂಗಲ ಕಸಬಾ ಹೋಬಳಿಯ ಕಲ್ಲುಪಾಳ್ಯದ ಸುರೇಶ್ ಅಲಿಯಾಸ್ ಸಾಯಿ ಕುಮಾರ್ (37) ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರ ಸುರೇಶ್ ಪರ ಹೈಕೋರ್ಟ್ ವಕೀಲ ಬಿ.ಲತೀಫ್ ಪ್ರಕರಣ ರದ್ದುಪಡಿಸುವಂತೆ ಕೋರಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ರಾಜ್ಯ ಪ್ರಾಸಿಕ್ಯೂಷನ್ ಪರ ಹಾಜರಿದ್ದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಆರೋಪಿಯ ವಿರುದ್ಧ ಒಟ್ಟು 75 ಕ್ರಿಮಿನಲ್ ಪ್ರಕರಣಗಳಿವೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಇದಕ್ಕೆ ಸಖೇದಾಶ್ಚರ್ಯ ವ್ಯಕ್ತಪಡಿಸಿದ ನ್ಯಾಯಪೀಠ, ‘ಈತ ಯಾರೋ ಭಾರಿ ಆಸಾಮಿಯೇ ಇರಬೇಕು. ಈತನ ವಿರುದ್ಧದ ಎಲ್ಲ ಕ್ರಿಮಿನಲ್ ಪ್ರಕರಣಗಳ ಪಟ್ಟಿಯನ್ನು ಕೋರ್ಟ್‌ಗೆ ಒದಗಿಸಿ’ ಎಂದು ಜಗದೀಶ್ ಅವರಿಗೆ ಸೂಚಿಸಿ ವಿಚಾರಣೆ ಮುಂದೂಡಿತು. 7ನೇ ತರಗತಿವರೆಗೆ ಓದಿರುವ ಸುರೇಶ್ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ ಕೊಲೆ, ಕೊಲೆ ಯತ್ನ, ಗೂಂಡಾಗಿರಿ, ಅನೈತಿಕ ವ್ಯವಹಾರ, ಕೊಳಚೆ ಪ್ರದೇಶಗಳನ್ನು ಅಕ್ರಮವಾಗಿ ಆಕ್ರಮಿಸಿಕೊಳ್ಳುವುದು, ಕಳ್ಳಭಟ್ಟಿ ಚಟುವಟಿಕೆ ಮತ್ತು ಔಷಧ ಅಪರಾಧಗಳೂ ಸೇರಿದಂತೆ ವಿವಿಧ ಗುರುತರ ಆಪಾದನೆಗಳ ಆರೋಪಗಳಿವೆ.

### ವಿಚಾರಣೆಯಿಂದ ಹಿಂದೆ ಸರಿದ ನ್ಯಾಯಮೂರ್ತಿ

ಗಡಿಪಾರು ಆದೇಶ ಪ್ರಶ್ನಿಸಿ ಸೌಜನ್ಯ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆಯಿಂದ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರು ಹಿಂದೆ ಸರಿದಿದ್ದಾರೆ. ‘ಈ ಅರ್ಜಿ ವಿಚಾರಣೆಯಿಂದ ನಾನು ಹಿಂದೆ ಸರಿಯುತ್ತಿದ್ದೇನೆ’ ಎಂದಷ್ಟೇ ಉಲ್ಲೇಖಿಸಿರುವ ನ್ಯಾಯಮೂರ್ತಿಯವರು, ಈ ಅರ್ಜಿಯನ್ನು ಬೇರೊಂದು ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಪಡಿಸುವಂತೆ ರಿಜಿಸ್ಟ್ರಾರ್ ಜನರಲ್ ಅವರಿಗೆ ಸೂಚಿಸಿದ್ದಾರೆ.

‘ನನ್ನನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ 9 ತಿಂಗಳ ಕಾಲ ರಾಯಚೂರು ಜಿಲ್ಲೆಗೆ ಗಡಿಪಾರು ಮಾಡಿ ಪುತ್ತೂರು ಉಪ ವಿಭಾಗಾಧಿಕಾರಿ 2025ರ ಡಿಸೆಂಬರ್ 16ರಂದು ಹೊರಡಿಸಿರುವ ಆದೇಶ ರದ್ದುಗೊಳಿಸಬೇಕು’ ಎಂದು ಮಹೇಶ್ ಶೆಟ್ಟಿ ತಿಮರೋಡಿ ಕೋರಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಗಂಗಾಸಾಗರ ಮೇಳ**

ಕೋಲ್ಕತ್ತದ ಬಾಬುಘಾಟ್‌ನಲ್ಲಿ ನಡೆಯುತ್ತಿರುವ ಗಂಗಾಸಾಗರ ಮೇಳಕ್ಕೆ ತೆರಳುವ ಯಾತ್ರಾರ್ಥಿಗಳಿಗಾಗಿ ನಿರ್ಮಿಸಿರುವ ತಾತ್ಕಾಲಿಕ ವಿಶ್ರಾಂತಿ ಕೇಂದ್ರದಲ್ಲಿ ಸಾಧುವೊಬ್ಬರು ವಿಶ್ರಾಂತಿ ಪಡೆದರು

**ಸಂಕ್ರಾಂತಿ ಸಂಭ್ರಮ**

ಮಕರ ಸಂಕ್ರಾಂತಿ ಅಂಗವಾಗಿ ಹೈದರಾಬಾದ್‌ನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಕಲಾವಿದರು 'ಚಿಂದು ಯಕ್ಷಗಾನ' ನೃತ್ಯ ಪ್ರದರ್ಶಿಸಿದರು

ನಾಯ್ಡು ವಿರುದ್ಧದ ಪ್ರಕರಣ ಮುಕ್ತಾಯಗೊಳಿಸಿದ ಸಿಐಡಿ 10 | 'ಆಪರೇಷನ್ ಸಿಂಧೂರ ಚಾಲ್ತಿಯಲ್ಲಿದೆ' 9

ವಿಕಸಿತ ಭಾರತ – ಉದ್ಯೋಗ ಖಾತರಿ ಮತ್ತು ಆಜೀವಿಕ ಮಿಷನ್ (ಗ್ರಾಮೀಣ) : ವಿಬಿ–ಜಿ ರಾಮ್ ಜಿ
(ವಿಕಸಿತ ಭಾರತ – ಜಿ ರಾಮ್ ಜಿ) ಕಾಯ್ದೆ, 2025
125 ದಿನಗಳ
ಖಚಿತ ವೇತನ ಉದ್ಯೋಗ

ಗ್ರಾಮಗಳಲ್ಲಿ ಉದ್ಯೋಗಾವಕಾಶಗಳ ಹೆಚ್ಚಳವಾಗುತ್ತದೆ
ಮಾರುಕಟ್ಟೆಗಳು ಉದ್ಭವವಾಗುತ್ತವೆ
ಧಾನ್ಯ ಸಂಗ್ರಾಹಕಗಳು ನಿರ್ಮಾಣಗೊಳ್ಳುತ್ತವೆ
ಕೌಶಲ್ಯ ಅಭಿವೃದ್ಧಿ ಕೇಂದ್ರಗಳು ಸ್ಥಾಪನೆಗೊಳ್ಳುತ್ತವೆ
ಹೀಗಾದಾಗ, ಗ್ರಾಮಗಳು ಸ್ವಾವಲಂಬಿಯಾಗುತ್ತವೆ

ವಿಕಸಿತ ಗ್ರಾಮ ಪಂಚಾಯತ್‌ಗಳು ವಿಕಸಿತ ಭಾರತದ ಮಾರ್ಗ ರೂಪಿಸುತ್ತವೆ
CBC 35101/13/0073/2526

# '10 ನಿಮಿಷದ ಡೆಲಿವರಿ'ಗೆ ಕೊಕ್

## ಕಂಪನಿಯ ಮನವೊಲಿಸಿದ ಕೇಂದ್ರ ಕಾರ್ಮಿಕ ಸಚಿವ ಮಾಂಡವೀಯ

ನವದೆಹಲಿ (ಪಿಟಿಐ): 'ಉತ್ಪನ್ನಗಳನ್ನು 10 ನಿಮಿಷಗಳಲ್ಲಿ ಮನೆಬಾಗಿಲಿಗೆ ತಲುಪಿಸಲಾಗುತ್ತದೆ' ಎಂಬ ಘೋಷಣೆಯನ್ನು ಕ್ವಿಕ್-ಕಾಮರ್ಸ್ ವಲಯದ ಪ್ರಮುಖ ಕಂಪನಿಯಾದ ಬ್ಲಿಂಕ್ಇಟ್ ಕೈಬಿಟ್ಟಿದೆ. ಕೇಂದ್ರ ಕಾರ್ಮಿಕ ಸಚಿವ ಮನಸುಖ್ ಮಾಂಡವೀಯ ಅವರು ಕಂಪನಿಯ ಮನವೊಲಿಸಿದ ನಂತರದಲ್ಲಿ ಅದು ಈ ತೀರ್ಮಾನ ತೆಗೆದುಕೊಂಡಿದೆ.

> **ಗಿಗ್ ಕಾರ್ಮಿಕರ ಬವಣೆಯು ಕಂಪನಿಗಳ ಆಡಳಿತ ಮಂಡಳಿಗೆ ಗೊತ್ತಾಗಲಿಲ್ಲ. ಆದರೆ ಅದು ಕೇಂದ್ರ ಸರ್ಕಾರಕ್ಕೆ ಅರಿವಾಯಿತು. ಸರ್ಕಾರ ಈಗ ಕ್ರಮ ತೆಗೆದುಕೊಂಡಿದೆ.**
> **ರಾಘವ ಛಡ್ಡಾ,** ಎಎಪಿ ಸಂಸದ

ಕ್ವಿಕ್ ಕಾಮರ್ಸ್ ವೇದಿಕೆಗಳಿಗಾಗಿ ಕೆಲಸ ಮಾಡುವ, ಗ್ರಾಹಕರ ಮನೆ ಬಾಗಿಲಿಗೆ ವಿವಿಧ ಉತ್ಪನ್ನಗಳನ್ನು ತ್ವರಿತವಾಗಿ ತಲುಪಿಸುವ ಗಿಗ್ ಕಾರ್ಮಿಕರ ಸುರಕ್ಷತೆಯ ಬಗ್ಗೆ ಕಳವಳಗಳು ವ್ಯಕ್ತವಾಗಿರುವ ಸಂದರ್ಭದಲ್ಲಿ ಈ ನಿರ್ಧಾರ ಪ್ರಕಟ ಆಗಿದೆ.

### ಕಾರ್ಮಿಕರ ಸ್ವಾಗತ

ತಮ್ಮ ಸಮಸ್ಯೆ ಪರಿಹರಿಸಲು ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿದ್ದರ ಬಗ್ಗೆ ಗಿಗ್ ಮತ್ತು ಪ್ಲಾಟ್‌ಫಾರ್ಮ್ ಸೇವೆಗಳ ಕಾರ್ಮಿಕರ ಒಕ್ಕೂಟವು (ಜಿಐಪಿಎಸ್‌ಡಬ್ಲ್ಯುಯು) ಮೆಚ್ಚುಗೆ ವ್ಯಕ್ತಪಡಿಸಿದೆ. ಕಂಪನಿಯ ತೀರ್ಮಾನವನ್ನು ಅದು ಸ್ವಾಗತಿಸಿದೆ.

ಸಚಿವ ಮಾಂಡವೀಯ ಅವರು ಮನವೊಲಿಸಿದ ನಂತರದಲ್ಲಿ '10 ನಿಮಿಷಗಳಲ್ಲಿ ಉತ್ಪನ್ನಗಳನ್ನು ತಲುಪಿಸುವ' ಭರವಸೆಯನ್ನು ಕೈಬಿಡಲು ಕಂಪನಿ ಒಪ್ಪಿಗೆ ನೀಡಿತು ಎಂದು ಮೂಲಗಳು ಮಾಹಿತಿ ನೀಡಿವೆ. ಮಾಂಡವೀಯ ಅವರು ಬ್ಲಿಂಕ್‌ಇಟ್, ಜೆಪ್ಟೊ, ಜೊಮಾಟೊ, ಸ್ವಿಗ್ಗಿ ಪ್ರತಿನಿಧಿಗಳ ಜೊತೆ ಕಳೆದ ವಾರ ಸಭೆ ನಡೆಸಿ, ಉತ್ಪನ್ನಗಳನ್ನು ತಲುಪಿಸಲು ಸಮಯಮಿತಿ ನಿಗದಿ ಮಾಡುವುದರ ಕುರಿತ ಕಳವಳಗಳ ಬಗ್ಗೆ ಚರ್ಚಿಸಿದ್ದರು.

ಬ್ಲಿಂಕ್‌ಇಟ್ ಕಂಪನಿಯ ಒಡೆತನವನ್ನು ಎಟರ್ನಲ್ ಕಂಪನಿ ಹೊಂದಿದೆ. ಬ್ಲಿಂಕ್‌ಇಟ್ ತನ್ನ ಘೋಷವಾಕ್ಯವನ್ನು '10 ಸಾವಿರಕ್ಕೂ ಹೆಚ್ಚು ಉತ್ಪನ್ನಗಳು ಹತ್ತು ನಿಮಿಷಗಳಲ್ಲಿ' ಎಂಬುದರ ಬದಲಾಗಿ '30 ಸಾವಿರಕ್ಕೂ ಹೆಚ್ಚು ಉತ್ಪನ್ನಗಳು ನಿಮ್ಮ ಮನೆ ಬಾಗಿಲಿಗೆ' ಎಂದು ಬದಲಾಯಿಸಿದೆ ಎಂದು ಮೂಲಗಳು ವಿವರಿಸಿವೆ.

ಕ್ವಿಕ್ ಕಾಮರ್ಸ್ (ಗ್ರಾಹಕರಿಗೆ ಬೇಕಾಗುವ ಬಗೆ ಬಗೆಯ ಉತ್ಪನ್ನಗಳನ್ನು ಕೆಲವೇ ನಿಮಿಷಗಳಲ್ಲಿ ಮನೆ ಬಾಗಿಲಿಗೆ ತಲುಪಿಸುವ ಸೇವೆ) ವಲಯದ ಇತರ ಪ್ರಮುಖ ಕಂಪನಿಗಳಾದ ಇನ್‌ಸ್ಟಾಮಾರ್ಟ್ (ಸ್ವಿಗ್ಗಿ ಮಾಲೀಕತ್ವದ ಕಂಪನಿ), ಜೆಪ್ಟೊ ಕೂಡ ಇದೇ ಹೆಜ್ಜೆ ಇರಿಸಬಹುದು ಎಂದು ಮೂಲಗಳು ಮಾಹಿತಿ ನೀಡಿವೆ.

▶10

# ಹೆದ್ದಾರಿ ಕ್ರಿಯಾಯೋಜನೆಗೆ ಕೇಂದ್ರ ತಡೆ

• ಮಂಜುನಾಥ ಹೆಬ್ಬಾರ್

| 49 | 8,223 ಕಿ.ಮೀ | 4,245 ಕಿ.ಮೀ | 3,978 ಕಿ.ಮೀ |
|---|---|---|---|
| ರಾಜ್ಯದಲ್ಲಿರುವ ಹೆದ್ದಾರಿಗಳು | ಹೆದ್ದಾರಿಗಳ ಉದ್ದ | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧೀನದಲ್ಲಿ | ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿ |

ನವದೆಹಲಿ: ಕರ್ನಾಟಕದಲ್ಲಿ ಭೂಸ್ವಾಧೀನ ಪ್ರಕ್ರಿಯೆ ವಿಳಂಬಗತಿಯಲ್ಲಿ ಸಾಗುತ್ತಿದೆ ಎಂಬ ಕಾರಣ ನೀಡಿ 2025–26ನೇ ಸಾಲಿನ ರಾಷ್ಟ್ರೀಯ ಹೆದ್ದಾರಿ ಕ್ರಿಯಾಯೋಜನೆಗೆ ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವಾಲಯ ಅನುಮೋದನೆ ನೀಡದೆ ತಡೆ ಹಿಡಿದಿದೆ.

₹5,536 ಕೋಟಿ ವೆಚ್ಚದಲ್ಲಿ 764 ಕಿ.ಮೀ. ಉದ್ದದ 27 ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗೆ ಕ್ರಿಯಾಯೋಜನೆ ಸಿದ್ಧಪಡಿಸಿ ಲೋಕೋಪಯೋಗಿ ಇಲಾಖೆಯು ಕೇಂದ್ರ ಹೆದ್ದಾರಿ ಸಚಿವಾಲಯಕ್ಕೆ 2025ರ ಮಾರ್ಚ್‌ನಲ್ಲಿ ಸಲ್ಲಿಸಿತ್ತು. ಕ್ರಿಯಾಯೋಜನೆಗೆ ಇಲ್ಲಿಯವರೆಗೆ ಒಪ್ಪಿಗೆ ನೀಡಿಲ್ಲ. ಈ ಆರ್ಥಿಕ ವರ್ಷ ಮುಗಿಯಲು ಎರಡೂವರೆ ತಿಂಗಳಷ್ಟೇ ಉಳಿದಿದೆ.

ರಾಜ್ಯದ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಸಂಬಂಧ ಹೆದ್ದಾರಿ ಸಚಿವಾಲಯವು 2025ರ ಏಪ್ರಿಲ್ 2 ಹಾಗೂ ಜುಲೈ 18ರಂದು ಪ್ರಗತಿ ಪರಿಶೀಲನಾ ಸಭೆ ನಡೆಸಿತ್ತು. ರಾಜ್ಯಕ್ಕೆ ಈಗಾಗಲೇ ಅನುಮೋದಿಸಿರುವ ಹಲವಾರು ಯೋಜನೆಗಳು ಭೂಸ್ವಾಧೀನ ಪ್ರಕ್ರಿಯೆಯ ವಿಳಂಬದಿಂದಾಗಿ ಪ್ರಗತಿ ಸಾಧಿಸಿಲ್ಲ ಎಂದು ಹೆದ್ದಾರಿ ಸಚಿವಾಲಯದ ಉನ್ನತ ಅಧಿಕಾರಿಗಳು ಸಭೆಯಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಭೂಸ್ವಾಧೀನ ಪ್ರಕ್ರಿಯೆ ಬೇಗ ಮುಗಿಸದಿದ್ದರೆ ರಾಜ್ಯದ ಹೆದ್ದಾರಿ ಯೋಜನೆಗಳಿಗೆ ಅನುಮೋದನೆ ನೀಡುವುದಿಲ್ಲ ಎಂದೂ ಎಚ್ಚರಿಸಿದ್ದರು.

ಆ ಬಳಿಕ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ ಕ್ರಿಯಾಯೋಜನೆಗೆ ಅನುಮೋದನೆ ನೀಡುವಂತೆ ಮನವಿ ಮಾಡಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರ ಜತೆಗಿನ ಭೇಟಿಯ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ವಿಷಯ ಪ್ರಸ್ತಾಪಿಸಿದ್ದರು.

▶9

ಸಿ.ಎಂ, ಡಿಸಿಎಂಗೆ ಆಹ್ವಾನ ನೀಡಿದ ರಾಹುಲ್ ಗಾಂಧಿ

# 'ಚರ್ಚೆಗಾಗಿ ದೆಹಲಿಗೆ ಬನ್ನಿ'

ಪ್ರಜಾವಾಣಿ ವಾರ್ತೆ

ಮೈಸೂರು: ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆಯ ಚರ್ಚೆಯಲ್ಲಿರುವ ನಡುವೆಯೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ 'ದೆಹಲಿಗೆ ಬನ್ನಿ' ಎಂದು ಆ ಪಕ್ಷದ ನಾಯಕ ರಾಹುಲ್ ಗಾಂಧಿ ಸಲಹೆ ನೀಡಿದ್ದಾರೆ.

ಸಂಜೆ 5.15ರ ಸುಮಾರಿಗೆ ತಮಿಳುನಾಡಿನ ಗುಡಲೂರಿನಿಂದ ಹೆಲಿಕಾಪ್ಟರ್ ಮೂಲಕ ಇಲ್ಲಿನ ವಿಮಾನ ನಿಲ್ದಾಣಕ್ಕೆ ವಾಪಸಾದ ರಾಹುಲ್ ಅವರನ್ನು ಸಿದ್ದರಾಮಯ್ಯ, ಶಿವಕುಮಾರ್ ಭೇಟಿಯಾದರು.

ಏಕಕಾಲಕ್ಕೆ ಇಬ್ಬರನ್ನು ಎದುರುಗೊಂಡ ರಾಹುಲ್ ಅವರು, ಸಿದ್ದರಾಮಯ್ಯನವರ ಜತೆ ಮಾತನಾಡುತ್ತಲೇ, ಶಿವಕುಮಾರ್ ಅವರಿಂದ ಕೊಂಚ ದೂರ ಕರೆದೊಯ್ದರು. ಅವರೊಂದಿಗೆ ಕೆಲಕ್ಷಣ ಮಾತನಾಡಿದರು. ಅದಾದ ಬಳಿಕ, ಶಿವಕುಮಾರ್ ಅವರನ್ನು ಪ್ರತ್ಯೇಕವಾಗಿ ಕರೆದುಕೊಂಡು ಹೋದ ರಾಹುಲ್, ಅವರೊಂದಿಗೂ ಕೆಲ ಕ್ಷಣ ಮಾತನಾಡಿದರು. ಸೌಜನ್ಯದ ಭೇಟಿಯ ವೇಳೆ, 'ದೆಹಲಿಗೆ ಬನ್ನಿ, ಚರ್ಚಿಸೋಣ' ಎಂದು ರಾಹುಲ್ ಅವರು ಇಬ್ಬರು ನಾಯಕರಿಗೆ ಹೇಳಿದ್ದಾಗಿ ಗೊತ್ತಾಗಿದೆ.

ಪ್ರತ್ಯೇಕವಾಗಿ ಮಾತನಾಡಿದ ವಿಡಿಯೊ ಹಾಗೂ ಫೋಟೊಗಳು ಶಿವಕುಮಾರ್ ಅವರ ಚಟುವಟಿಕೆಗಳನ್ನು ಪ್ರಸಾರ ಮಾಡುವ ವಾಟ್ಸ್ ಆ್ಯಪ್ ಗುಂಪುಗಳಲ್ಲಿ ಹರಿದಾಡಿದವು.

**ಒಂದೇ ವಿಮಾನದಲ್ಲಿ ಸಿ.ಎಂ, ಡಿಸಿಎಂ:** ಮಧ್ಯಾಹ್ನ ಒಂದೇ ವಿಮಾನದಲ್ಲಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರು ಬೆಂಗಳೂರಿನಿಂದ ಮೈಸೂರಿಗೆ ಬಂದಿಳಿದರು.

▶9

ಮೈಸೂರು ವಿಮಾನ ನಿಲ್ದಾಣದಲ್ಲಿ ಮಂಗಳವಾರ ಸಂಜೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಚರ್ಚಿಸಿದರು

### 'ರಾಜಕೀಯ ಚರ್ಚೆ ನಡೆದಿಲ್ಲ'

'ರಾಹುಲ್ ಗಾಂಧಿ ಅವರನ್ನು ನಾವೆಲ್ಲ ಒಟ್ಟಿಗೆ ಭೇಟಿಯಾಗಿದ್ದು, ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

'ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಸದ್ಯ ಯಾವುದೇ ಚರ್ಚೆ ಇಲ್ಲ. ದೆಹಲಿಗೂ ಹೋಗುತ್ತಿಲ್ಲ' ಎಂದೂ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಹುಲ್ ಅವರು ತಮಿಳುನಾಡಿಗೆ ತೆರಳುವ ಮಾರ್ಗ ಮಧ್ಯೆ ಭೇಟಿ ಮಾಡಲಾಗಿದೆ ಎಂದು ಪ್ರತಿಕ್ರಿಯಿಸಿದರು.

▶9

Toyota i-CONNECT | Toyota Mobility Service: Conversion | Fleet | Leasing | TOYOTA U TRUST: Buy | Sell | Exchange - Used car | TOYOTA FINANCIAL SERVICES

**Nandi Toyota**
Bangalore: [Banashankari, Banaswadi, Bannerghatta, Bommanahalli, Whitefield]: 7022340713
Hosur Road: 7353628633
Kanakapura Rd: 9916627733
Queens Rd: 9741310066

**Viva Toyota**
Bangalore: [Hebbal, Vidyaranyapura]: 9900027736
[Airport Rd, Kogilu]: 9900030617
Mysore Rd: 9900030620

**Sundaram Toyota**
Bangalore: [Madavara, Tumkur Rd]: 9741100111

**Bharat Toyota**
(Formerly Ravindu Toyota)
Bangalore: [Rajajinagar, K R Puram, Magadi Rd, Marathahalli, Domlur, Victoria Rd, Yeshwantpur]: 8058245555
Kolar: 9606090040
Tumkur: 9379189796

**Shodha Toyota**
Bagalkot: 8147599463
Belagavi: Shahapur: 8147599461
Poona-Bangalore Road: 7899305505, 7760963774
Bijapur: 9606484983
Davangere: 9008952277
Hubli: 7204818810, 8123047553

**Palace Toyota**
Hunsur: 9663709743
Kushalnagar: 8971524206
Madikeri: 7022671919
Mandya: 9538874907
Mysore: Hootagalli: 9538874906
Krishnamurthy Puram: 9538874923

**United Toyota**
Mangalore: [Bunt's Hostel, Padil & Puttur], Kundapur, Udupi, Puttur, Uttara Kannada: 9686687581

**Shakti Toyota**
Chikkamagaluru, Channarayapatna, Hassan, Kadur: 9980532064
Shivamogga, Sagara: 9686652728

**Patson Toyota**
Belagavi: 9036954788

**Karuna Toyota**
Gulbarga: 7829990004
Raichur: 7829992909

**BJS Toyota**
Hospet: 7829927943
Bellary: 7829927957
Koppal: 7829927968
Chitradurga: 7829927933
Gangavathi: 7829927943

ಚಟಿಕೆ ಸುದ್ದಿ

## ಹೂಡಿಕೆ ನೆಪದಲ್ಲಿ ₹35 ಲಕ್ಷ ವಂಚನೆ

**ಬೆಂಗಳೂರು:** ಸೆಬಿ ಕಂಪನಿಯ ಹಣಕಾಸು ವಿಭಾಗದ ಅಧಿಕಾರಿ ಎಂದು ಹೇಳಿ ವ್ಯಕ್ತಿಯೊಬ್ಬರಿಗೆ ಕರೆ ಮಾಡಿದ್ದ ಸೈಬರ್ ವಂಚಕರು ಹೂಡಿಕೆ ನೆಪದಲ್ಲಿ ₹35 ಲಕ್ಷ ವಂಚಿಸಿದ್ದಾರೆ. ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಂಧ್ರಪ್ರದೇಶದ ಸತೀಶ್ ಹಣ ಕಳೆದುಕೊಂಡವರು. ಸತೀಶ್ ಅವರು ನಗರದ ಖಾಸಗಿ ಕಂಪನಿಯಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾರೆ.

ಷೇರು ಮಾರುಕಟ್ಟೆಯಲ್ಲಿ ಹೂಡಿಕೆಯಲ್ಲಿ ಸತೀಶ್ ಅವರು ಆಸಕ್ತಿ ಹೊಂದಿದ್ದರು. ಅದನ್ನು ಅರಿತಿದ್ದ ಸೈಬರ್ ವಂಚಕರು, ಸೆಬಿ ಸಂಸ್ಥೆಯಿಂದ ಕರೆ ಮಾಡುತ್ತಿರುವುದಾಗಿ ತಿಳಿಸಿ ವಂಚಿಸಿದ್ದಾರೆ.

## ಪವರ್ ಟಿ.ವಿ ರಾಕೇಶ್ ಶೆಟ್ಟಿಗೆ 3 ತಿಂಗಳ ಜೈಲು

**ಬೆಂಗಳೂರು:** ಹಿರಿಯ ಐಪಿಎಸ್ ಅಧಿಕಾರಿ ಬಿ.ಆರ್. ರವಿಕಾಂತೇಗೌಡ ದಾಖಲಿಸಿರುವ ಸಿವಿಲ್ ವ್ಯಾಜ್ಯದಲ್ಲಿ, ನ್ಯಾಯಾಲಯದ ಮಧ್ಯಂತರ ಆದೇಶವನ್ನು ಉಲ್ಲಂಘಿಸಿದ ಆರೋಪದಡಿ ಪವರ್ ಟಿವಿ ಮುಖ್ಯಸ್ಥ ರಾಕೇಶ್ ಶೆಟ್ಟಿ ಅವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಿವಿಲ್ ನ್ಯಾಯಾಲಯ ಮೂರು ತಿಂಗಳ ಜೈಲು ಶಿಕ್ಷೆ ವಿಧಿಸಿದೆ.

ರವಿಕಾಂತೇಗೌಡ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ನಡೆಸಿದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ ಅಬ್ದುಲ್ ಸಲೀಂ ಈ ಕುರಿತಂತೆ ಆದೇಶಿಸಿದ್ದಾರೆ.

‘2023ರ ಸೆಪ್ಟೆಂಬರ್ 8ರಂದು ನ್ಯಾಯಾಲಯ ನೀಡಿದ್ದ ಮಧ್ಯಂತರ ಆದೇಶವನ್ನು ಪ್ರತಿವಾದಿಯಾದ ‘ಪವರ್ ಸ್ಮಾರ್ಟ್ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿ’ ವ್ಯವಸ್ಥಾಪಕ ನಿರ್ದೇಶಕ ರಾಕೇಶ್ ಸಂಜೀವ ಶೆಟ್ಟಿ ಅವರು ಉಲ್ಲಂಘಿಸುವ ಮೂಲಕ ನ್ಯಾಯಾಲಯದ ಆದೇಶಕ್ಕೆ ಅವಿಧೇಯರಾಗಿ ನಡೆದುಕೊಂಡಿರುವುದು ಸಾಬೀತಾಗಿದೆ’ ಎಂದು ಆದೇಶದಲ್ಲಿ ವಿವರಿಸಲಾಗಿದೆ.

‘ರಾಕೇಶ್ ಶೆಟ್ಟಿ ಮೂರು ತಿಂಗಳ ಕಾಲ ಜೈಲಿನಲ್ಲಿ ಇರಬೇಕು. ಜೈಲಿನಲ್ಲಿ ರಾಕೇಶ್ ಶೆಟ್ಟಿ ಅವರಿಗೆ ತಗಲುವ ಖರ್ಚು ವೆಚ್ಚಗಳನ್ನು ರವಿಕಾಂತೇಗೌಡ ಅವರೇ ಭರಿಸಬೇಕು’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಸಂಚಾರಕ್ಕೆ ಅಡ್ಡಿಪಡಿಸಿದರೂ ಎಫ್‌ಐಆರ್

### ಪಶ್ಚಿಮ ವಿಭಾಗದಲ್ಲಿ ಬಿಗಿ ಕ್ರಮ ಜಾರಿ ಮಾಡಿದ ಸಂಚಾರ ಪೊಲೀಸರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಇದರಿಂದ ಸಂಚಾರಕ್ಕೂ ಅಡಚಣೆ ಉಂಟಾಗುತ್ತಿದೆ. ಹೀಗಾಗಿ ಸಂಚಾರ ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ನಗರ ಸಂಚಾರ ವಿಭಾಗದ ಪೊಲೀಸರು ಮುಂದಾಗಿದ್ದಾರೆ.

ವ್ಹೀಲಿ ಹಾಗೂ ಮದ್ಯಸೇವಿಸಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಎಫ್‌ಐಆರ್ ದಾಖಲಿಸುತ್ತಿದ್ದ ಸಂಚಾರ ಪೊಲೀಸರು, ಇದೀಗ ಸಿಗ್ನಲ್ ಜಂಪ್ ಮಾಡುವುದು, ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಚಲಿಸುವುದು, ಸಂಚಾರಕ್ಕೆ ಅಡಚಣೆ ಮಾಡುವವರ ಹಾಗೂ ಪಾದಚಾರಿ ಮಾರ್ಗದಲ್ಲಿ ದ್ವಿಚಕ್ರ ವಾಹನ ಚಾಲನೆ ಮಾಡುವವರ ವಿರುದ್ಧವೂ ಎಫ್‌ಐಆರ್ ದಾಖಲಿಸಲು ಆರಂಭಿಸಿದ್ದಾರೆ.

ದಂಡ ಹಾಕಿ ಕಳುಹಿಸುವುದರಿಂದ ಚಾಲಕರು ಮತ್ತೆ ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿದ್ದರು. ಅದನ್ನು ತಪ್ಪಿಸುವ ಉದ್ದೇಶದಿಂದ ಎಫ್‌ಐಆರ್ ದಾಖಲಿಸಲಾಗುತ್ತಿದೆ. ಪಶ್ಚಿಮ ವಿಭಾಗದ ಎಲ್ಲ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲೂ ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲು ಮಾಡಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 281 (ಸಾರ್ವಜನಿಕ ಮಾರ್ಗದಲ್ಲಿ ಅಜಾಗರೂಕತೆ ಅಥವಾ ನಿರ್ಲಕ್ಷ್ಯದ ಚಾಲನೆ) ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ. ಈ ಹಿಂದೆ ನಿಯಮ ಉಲ್ಲಂಘಿಸುತ್ತಿದ್ದವರು ಸ್ಥಳದಲ್ಲೇ ದಂಡ ಪಾವತಿಸಿ ಮನೆಗೆ ತೆರಳುತ್ತಿದ್ದರು. ಮುಂದಿನ ದಿನಗಳಲ್ಲಿ ಅದಕ್ಕೆ ಅವಕಾಶ ಇಲ್ಲ. ಎಫ್‌ಐಆರ್ ದಾಖಲಾದ ಮೇಲೆ ಸ್ಥಳದಲ್ಲೇ ವಾಹನವನ್ನು ಜಪ್ತಿ ಮಾಡಲಾಗುತ್ತಿದೆ. ದಂಡ ಪಾವತಿಗೆ ನ್ಯಾಯಾಲಯಕ್ಕೇ ಹೋಗಬೇಕಾಗುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಪಾದಚಾರಿ ಮಾರ್ಗದಲ್ಲಿ ನಿಲುಗಡೆ ಮಾಡಿದ್ದ ಆಟೊಗಳನ್ನು ತೆರವು ಮಾಡಿದ ಪೊಲೀಸರು

ಸಿಗ್ನಲ್‌ಗಳ ಬಳಿ ನಿಯಮ ಉಲ್ಲಂಘನೆ(ಸಿಗ್ನಲ್ ಜಂಪಿಂಗ್) ಪ್ರಕರಣಗಳಿಗೆ ಸಂಬಂಧಿಸಿದಂತೆ 2025ರ ಜನವರಿಯಿಂದ ನವೆಂಬರ್‌ವರೆಗೆ 6,62,447 ಪ್ರಕರಣ, ನಿರ್ಬಂಧಿತ ರಸ್ತೆಯಲ್ಲಿ ಸಂಚರಿಸಿದವರ ವಿರುದ್ಧ 3,02,962 ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಸ್ ಹಾಗೂ ರೈಲು ನಿಲ್ದಾಣಗಳ ಬಳಿಯ ನಿರ್ಬಂಧಿತ ಸ್ಥಳಗಳಲ್ಲಿ ವಾಹನಗಳನ್ನು ನಿಲ್ಲಿಸಿ ಸುಗಮ ಸಂಚಾರಕ್ಕೆ ತೊಂದರೆ ಉಂಟು ಮಾಡುತ್ತಿರುವ ಆಟೊ ರಿಕ್ಷಾ, ಕಾರು ಹಾಗೂ ದ್ವಿಚಕ್ರ ವಾಹನಗಳ ಮಾಲೀಕರ ವಿರುದ್ಧವೂ ಪ್ರಕರಣ ದಾಖಲು ಮಾಡಿಕೊಳ್ಳಲಾಗುತ್ತಿದೆ. ಸಿಗ್ನಲ್ ಜಂಪ್ ಮಾಡುವುದರಿಂದ ಅಪಘಾತ ಸಂಭವಿಸುವ ಸಾಧ್ಯತೆಯಿದೆ. ಹೀಗಾಗಿ ಬಿಗಿಯಾದ ಕ್ರಮ ಜಾರಿಗೆ ತರಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

### ದಾಖಲೆ ದಂಡ ಸಂಗ್ರಹ

2025ರಲ್ಲಿ ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ₹251.26 ಕೋಟಿ ದಂಡ ಸಂಗ್ರಹಿಸಿದ್ದಾರೆ.

### ಯುವಕ ಸಾವು ಪ್ರಕರಣಕ್ಕೆ ತಿರುವು, ಸಿಐಡಿಯಿಂದ ಮುಂದುವರಿದ ತನಿಖೆ

# ವ್ಯಸನ ಮುಕ್ತ ಕೇಂದ್ರದ 8 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಡಕಮಾರನಹಳ್ಳಿಯ ವ್ಯಸನ ಮುಕ್ತ ಕೇಂದ್ರದಲ್ಲಿ ಯುವಕ ದರ್ಶನ್ (23) ಅವರು ಮೃತಪಟ್ಟಿದ್ದ ಪ್ರಕರಣವು ತಿರುವು ಪಡೆದಿದ್ದು, ಕೇಂದ್ರದ ಎಂಟು ಸಿಬ್ಬಂದಿಯನ್ನು ಸಿಐಡಿ ಪೊಲೀಸರು ಬಂಧಿಸಿದ್ದಾರೆ.

ವ್ಯಸನ ಮುಕ್ತ ಕೇಂದ್ರದ ಉಸ್ತುವಾರಿ ನವೀನ್, ಸಹಾಯಕ ಅಖಿಲ್, ಕೆಲಸಗಾರ ನಾರಾಯಣ ಅಲಿಯಾಸ್ ನಾಣಿ, ಅಡುಗೆ ಕೆಲಸಗಾರರಾದ ಹಿತೇಶ್ ಕುಮಾರ್, ಮಂಜು, ಸಿಬ್ಬಂದಿಯಾದ ಸಾಹಿಲ್ ಅಹಮ್ಮದ್, ನವೀನ್ ಕುಮಾರ್ ಮತ್ತು ಮೈಸೂರಿನ ರವಿ ಬಂಧಿತರು.

ನ.26ರಂದು ದರ್ಶನ್ ಅವರು ಮೃತಪಟ್ಟಿದ್ದರು. ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ಸಿಐಡಿಗೆ ವರ್ಗಾವಣೆ ಮಾಡಿ ಆದೇಶಿಸಿದ್ದರು.

ಆರೋಪಿಗಳು, ದರ್ಶನ್ ಅವರಿಗೆ ಫೈಬರ್ ಲಾಠಿ, ಪ್ಲಾಸ್ಟಿಕ್ ಪೈಪ್, ಮರದ ತುಂಡಿನಿಂದ ಥಳಿಸಿದ್ದರು. ವ್ಯಸನ ಮುಕ್ತ ಕೇಂದ್ರದಿಂದ ತೆರಳುವುದಾಗಿ ದರ್ಶನ್ ಹೇಳಿದ್ದಕ್ಕೆ ಎಂಟು ಮಂದಿ ಅವರ ಮೇಲೆ ಹಲ್ಲೆ ಮಾಡಿದ್ದರು. ಹಲ್ಲೆ ನಡೆಸಿದ ಮೂರು ದಿನಗಳ ಬಳಿಕ ಯುವಕ ಮೃತಪಟ್ಟಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

‘ಪೊಲೀಸರ ಹಲ್ಲೆಯಿಂದ ಮಗ ಮೃತಪಟ್ಟಿದ್ದಾನೆ’ ಎಂದು ಈ ಹಿಂದೆ ಪೋಷಕರು ಆರೋಪಿಸಿದ್ದರು. ಅದಾದ ಮೇಲೆ ಇಲಾಖಾ ತನಿಖೆ ಕಾಯ್ದಿರಿಸಿ ವಿವೇಕನಗರ ಠಾಣೆಯ ಇನ್‌ಸ್ಪೆಕ್ಟರ್ ಶಿವಕುಮಾರ್ ಹಾಗೂ ನಾಲ್ವರು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಿ ನಗರ ಜಂಟಿ ಪೊಲೀಸ್ ಕಮಿಷನರ್ ಆದೇಶಿಸಿದ್ದರು. ದರ್ಶನ್ ಅವರ ತಾಯಿ ಆದಿಲಕ್ಷ್ಮಿ ಅವರು ನೀಡಿದ್ದ ದೂರು ಆಧರಿಸಿ, ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಕೊಲೆ ಮತ್ತು ಜಾತಿ ನಿಂದನೆ ಪ್ರಕರಣ ದಾಖಲಾಗಿತ್ತು.

### ಏನಿದು ಪ್ರಕರಣ?

‘ದರ್ಶನ್ ಅವರಿಗೆ ಪ್ರತಿನಿತ್ಯ ಮದ್ಯ ಸೇವಿಸುವ ಅಭ್ಯಾಸ ಇತ್ತು. ಮದ್ಯ ಸೇವಿಸಿ ಡೆಲಿವರಿ ಹುಡುಗನ ಜತೆಗೆ ರಸ್ತೆಯಲ್ಲಿ ಗಲಾಟೆ ಮಾಡುತ್ತಿದ್ದರು. ಇದೇ ವಿಚಾರಕ್ಕೆ ವಿವೇಕನಗರ ಠಾಣೆಯ ಪೊಲೀಸರು ದರ್ಶನ್‌ನನ್ನು ಠಾಣೆಗೆ ಕರೆದುಕೊಂಡು ಹೋಗಿದ್ದರು. ನ.15ರಂದು ಠಾಣೆಗೆ ತೆರಳಿದ್ದ ದರ್ಶನ್ ಅವರ ತಾಯಿ ಪುತ್ರನನ್ನು ಮನೆಗೆ ಕಳುಹಿಸುವಂತೆ ಕೋರಿಕೊಂಡಿದ್ದರು. ‘ಅವನು ಎಲ್ಲರ ಬಳಿಯೂ ಗಲಾಟೆ ಮಾಡಿಕೊಳ್ಳುತ್ತಿದ್ದಾನೆ. ಅವನನ್ನು ಜೈಲಿಗೆ ಕಳುಹಿಸುತ್ತೇವೆ’ ಎಂದು ಪೊಲೀಸರು ಹೇಳಿದ್ದರು. ಮಗನಿಗೆ ಕುಡಿತದ ಚಟ ಬಿಡಿಸಲು ವ್ಯಸನ ಮುಕ್ತ ಕೇಂದ್ರಕ್ಕೆ ಸೇರಿಸುವಂತೆ ತಾಯಿ ಕೋರಿಕೊಂಡಿದ್ದರು. ಬಳಿಕ ಕೇಂದ್ರಕ್ಕೆ ಸೇರಿಸಿದ್ದರು’ ಎಂಬುದು ಗೊತ್ತಾಗಿದೆ.

‘ವ್ಯಸನ ಮುಕ್ತ ಕೇಂದ್ರಕ್ಕೆ ಪ್ರತಿನಿತ್ಯ ಕರೆ ಮಾಡಿ ವಿಚಾರಿಸಿಕೊಳ್ಳುತ್ತಿದ್ದೆ. ಮಗ ಚೆನ್ನಾಗಿದ್ದಾನೆ ಎಂದೇ ಅಲ್ಲಿನ ಸಿಬ್ಬಂದಿ ಹೇಳಿದ್ದರು. ನ.26ರ ಬೆಳಿಗ್ಗೆ 11ರ ಸುಮಾರಿಗೆ ಕೇಂದ್ರದ ಸಿಬ್ಬಂದಿ ಕರೆ ಮಾಡಿ ನಿಮ್ಮ ಮಗ ಮೃತಪಟ್ಟಿದ್ದಾನೆ ಎಂಬುದಾಗಿ ತಿಳಿಸಿದ್ದರು. ಆ ಕೇಂದ್ರಕ್ಕೆ ಹೋಗುವಷ್ಟರಲ್ಲಿ ಮೃತದೇಹವನ್ನು ನೆಲಮಂಗಲ ಆಸ್ಪತ್ರೆಗೆ ರವಾನೆ ಮಾಡಲಾಗಿತ್ತು. ಈ ಸಂಬಂಧ ಯಾವುದೇ ಮಾಹಿತಿ ನೀಡಿರಲಿಲ್ಲ. ಉಸಿರಾಟದ ತೊಂದರೆ ಇತ್ತು ಎಂಬುದಾಗಿ ಹೇಳಿದ್ದರು’ ಎಂದು ಆದಿಲಕ್ಷ್ಮಿ ಅವರು ದೂರಿನಲ್ಲಿ ಉಲ್ಲೇಖಿಸಿದ್ದರು.

### ವಿದೇಶಿ ನೋಟು ಕದ್ದ ಆರೋಪಿ ಸೆರೆ

**ಬೆಂಗಳೂರು:** ಮನೆಯ ಬಾಗಿಲು ಒಡೆದು ಚಿನ್ನ ಹಾಗೂ ವಜ್ರದ ಆಭರಣ, ವಿದೇಶಿ ನೋಟು ಕಳ್ಳತನ ಮಾಡಿದ್ದ ಆರೋಪಿಯನ್ನು ಮೈಕೊ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ತಿರುವಣ್ಣಾಮಲೈ ನಿವಾಸಿ ರಾಮಸ್ವಾಮಿ (45) ಬಂಧಿತ.

ಆರೋಪಿಯಿಂದ ₹7.36 ಲಕ್ಷ ಮೌಲ್ಯದ 33 ಗ್ರಾಂ ವಜ್ರ ಹಾಗೂ ಚಿನ್ನದ ಆಭರಣ, 1 ಕೆ.ಜಿ 220 ಗ್ರಾಂ ಬೆಳ್ಳಿಯ ಸಾಮಗ್ರಿ, ವಿದೇಶಿ ನೋಟು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಠಾಣಾ ವ್ಯಾಪ್ತಿಯ ವಿಜಯಾ ಬ್ಯಾಂಕ್ ಲೇಔಟ್‌ನ ನಿವಾಸಿಯೊಬ್ಬರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ದೂರುದಾರರು ಭೂತಾನ್ ಪ್ರವಾಸಕ್ಕೆ ತೆರಳಿದಾಗ ಕಳ್ಳತನ ನಡೆದಿತ್ತು.

### ದರೋಡೆ ಪ್ರಕರಣ ಮೂವರ ಸೆರೆ

**ಬೆಂಗಳೂರು:** ದರೋಡೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಮೂವರನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸುರೇಶ್ ಅಲಿಯಾಸ್ ಸೂರಿ, ಶಶಿಕುಮಾರ್ ಮತ್ತು ಅಖಿಲ್ ಬಂಧಿತರು. ಡಿ.31ರಂದು ವ್ಯಕ್ತಿಯೊಬ್ಬರನ್ನು ಆರೋಪಿಗಳು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಬೆದರಿಸಿ ₹1 ಲಕ್ಷ ದೋಚಿ ಪರಾರಿಯಾಗಿದ್ದರು. ಹಣ ಕಳೆದುಕೊಂಡವರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಬಂಧಿತರು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹಾಗೂ ನಗರದೊಳಗೆ ರಾತ್ರಿ ವೇಳೆ ವಾಹನ ಸವಾರರನ್ನು ಅಡ್ಡಗಟ್ಟಿ ದರೋಡೆ ನಡೆಸುತ್ತಿದ್ದರು. ಸೂರ್ಯಸಿಟಿ, ಮಾದನಾಯಕನಹಳ್ಳಿ, ಹೆಬ್ಬಗೋಡಿ, ಬ್ಯಾಡರಹಳ್ಳಿ ಸೇರಿದಂತೆ ಹಲವು ಠಾಣೆಗಳ ವ್ಯಾಪ್ತಿಯಲ್ಲಿ ದರೋಡೆ ಮಾಡಿದ್ದರು. ಬ್ಯಾಡರಹಳ್ಳಿಯಲ್ಲಿ ಲಾರಿ ಚಾಲಕನಿಂದ ಹಾಗೂ ಮಾದನಾಯಕನಹಳ್ಳಿಯಲ್ಲಿ ವಕೀಲರಿಂದ ಹಣ ಸುಲಿಗೆ ಮಾಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.

2025ರ ಸೆಪ್ಟೆಂಬರ್‌ನಲ್ಲಿ ಮೂವರನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದರು. ನಂತರ, ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಆರೋಪಿಗಳು, ಮತ್ತೆ ಅದೇ ಕೃತ್ಯಕ್ಕೆ ಇಳಿದಿದ್ದರು.

ಸುದ್ದಿ 2 ನಿಮಿಷ

### ನಟ ಯಶ್ ಜನ್ಮದಿನಕ್ಕೆ ಬ್ಯಾನರ್ ಅಳವಡಿಕೆ: ಎಫ್‌ಐಆರ್

**ಬೆಂಗಳೂರು:** ನಟ ಯಶ್ ಅವರ ಜನ್ಮದಿನಾಚರಣೆಯ ಸಂದರ್ಭದಲ್ಲಿ ಬ್ಯಾನರ್ ಹಾಕಿದ್ದಕ್ಕೆ ಸಂಬಂಧಿಸಿದಂತೆ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಜಿ.ಎಸ್ ಕ್ರಿಯೇಷನ್ಸ್ ಹಾಗೂ ವೇಣು ಗ್ರೂಪ್ಸ್ ವಿರುದ್ಧ ಪ್ರಕರಣ ದಾಖಲಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವಸಂತನಗರ ಉಪ ವಿಭಾಗದ ಸಹಾಯಕ ಎಂಜಿನಿಯರ್ ಪೂಜಾರಪ್ಪ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಚಾಲುಕ್ಯ ವೃತ್ತದಿಂದ ವಿಂಡ್ಸರ್ ಮ್ಯಾನರ್ ವೃತ್ತದವರೆಗೆ ಗಾಲ್ಫ್ ಕ್ಲಬ್ ಗೋಡೆಯ ಮೇಲೆ ಜಿ.ಎಸ್ ಕ್ರಿಯೇಷನ್ಸ್ ಹಾಗೂ ವೇಣು ಗ್ರೂಪ್ಸ್‌ನವರು ನಟ ಯಶ್ ಅವರ ಜನ್ಮದಿನದ ಪ್ರಯುಕ್ತ ಅವರ ಭಾವಚಿತ್ರವುಳ್ಳ ಬಂಟಿಂಗ್ಸ್/ಬ್ಯಾನರ್‌ಗಳನ್ನು ಅನಧಿಕೃತವಾಗಿ ಅಂಟಿಸಲಾಗಿತ್ತು. ಯಾವುದೇ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದುಕೊಂಡಿಲ್ಲ. ಅಲ್ಲದೇ ನಗರದ ಸೌಂದರ್ಯವನ್ನು ವಿರೂಪಗೊಳಿಸುವ ಉದ್ದೇಶದಿಂದ ಬ್ಯಾನರ್ ಅಳವಡಿಸಲಾಗಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಿ’ ಎಂಬುದಾಗಿ ಕೋರಿ ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲು ಮಾಡಲಾಗಿದೆ.

### ಹೆಚ್ಚಿನ ಪರಿಹಾರಕ್ಕೆ ಆಗ್ರಹ

**ಬೆಂಗಳೂರು:** ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ- 1, ಬಿಬಿಸಿ) ಯೋಜನೆಗೆ ಸ್ವಾಧೀನಪಡಿಸಿಕೊಳ್ಳುತ್ತಿರುವ ಜಮೀನಿಗೆ ಹೆಚ್ಚಿನ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಸಂತ್ರಸ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು.

ಅಧಿಕಾರಿಗಳಿಗೆ ಮನವಿ ಸಲ್ಲಿಸಲು ಅವಕಾಶ ನೀಡದ ಪೊಲೀಸರು, ಪ್ರತಿಭಟನಕಾರರನ್ನು ವಶಕ್ಕೆ ಪಡೆದು ಬಿಎಂಟಿಸಿ ಬಸ್‌ನಲ್ಲಿ ಸಿ.ಎ.ಆರ್. ಕೇಂದ್ರಕ್ಕೆ ಕರೆದೊಯ್ದು ಬಳಿಕ ಬಿಡುಗಡೆ ಮಾಡಿದರು.

ನಗರದಲ್ಲಿ ಸಂಚಾರ ದಟ್ಟಣೆ ತಗ್ಗಿಸುವ ನಿಟ್ಟಿನಲ್ಲಿ ವರ್ತುಲ ರಸ್ತೆ ನಿರ್ಮಾಣಕ್ಕೆ ಬಿಡಿಎ ವತಿಯಿಂದ 2005ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. 20 ವರ್ಷ ಕಳೆದರೂ ಯೋಜನೆಯಡಿ ಜಮೀನು ಕಳೆದುಕೊಂಡ ರೈತರಿಗೆ ಪರಿಹಾರ ನೀಡಿಲ್ಲ. ಕಳೆದ ಸಚಿವ ಸಂಪುಟ ಸಭೆಯಲ್ಲಿ ಅವೈಜ್ಞಾನಿಕ ತೀರ್ಮಾನ ಕೈಗೊಳ್ಳಲಾಗಿದೆ. ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಮತ್ತು ಪುನರ್ವಸತಿ ಕಾಯ್ದೆ ಪ್ರಕಾರ ಪರಿಹಾರ ನೀಡಬೇಕು ಎಂದು ಸಂತ್ರಸ್ತರು ಒತ್ತಾಯಿಸಿದರು.

‘ಬೆಂಗಳೂರು ಅಭಿವೃದ್ಧಿಗಾಗಿ ಜಮೀನು ನೀಡಲು ಸಿದ್ಧರಿದ್ದೇವೆ. ಸ್ವಾಧೀನಪಡಿಸಿಕೊಳ್ಳುವ ಜಮೀನಿಗೆ ಮಾರುಕಟ್ಟೆ ದರವನ್ನು ಸರ್ಕಾರ ನೀಡಬೇಕು. ಈ ನಿಟ್ಟಿನಲ್ಲಿ ರೈತರ ಪರ ಎನ್ನುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಧ್ಯಪ್ರವೇಶಿಸಿ ಭೂ ಪರಿಹಾರ ನೀಡಲು ಕ್ರಮವಹಿಸಬೇಕು. ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ಅವರು ನಿರ್ಧಾರವನ್ನು ಪುನರ್ ಪರಿಶೀಲನೆ ಮಾಡಬೇಕು’ ಎಂದು ಮನವಿ ಮಾಡಿದರು.

ಸೂಕ್ತ ಪರಿಹಾರ ನೀಡಬೇಕು. ಇಲ್ಲವಾದಲ್ಲಿ ನ್ಯಾಯಾಲಯದಲ್ಲಿ ದಾವೆ ಹೂಡಲು ಅಭಿಯಾನ ಆರಂಭಿಸಲಾಗುವುದು’ ಎಂದು ಎಚ್ಚರಿಸಿದರು. ಜಮೀನು ವಾಪಸ್ ನೀಡಿ, ಎನ್‌ಒಸಿ ಕೊಟ್ಟು ಬಿಡಲಿ. ಪರಿಹಾರ ಕೋರಿ ರೈತರು ಕಚೇರಿ ಬಾಗಿಲಿಗೆ ಬಂದರೂ ಒಳಗೆ ಬಿಡುತ್ತಿಲ್ಲ’ ಎಂದು ಸಂತ್ರಸ್ತೆ ಇಂದ್ರಮ್ಮ ಬೇಸರ ವ್ಯಕ್ತಪಡಿಸಿದರು.



# ಹೋರಾಟಕ್ಕೆ ಬಿಜೆಪಿ ತೀರ್ಮಾನ

## ಒಳಮೀಸಲಾತಿ: ಅಲೆಮಾರಿಗಳಿಗೆ ನ್ಯಾಯಕ್ಕಾಗಿ ಹಿರಿಯ ನಾಯಕರ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಒಳಮೀಸಲಾತಿಯಲ್ಲಿ ಅಲೆಮಾರಿಗಳಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ರಾಜ್ಯವ್ಯಾಪಿ ಹೋರಾಟ ನಡೆಸಲು ಬಿಜೆಪಿ ಹಿರಿಯ ನಾಯಕರ ಸಭೆ ತೀರ್ಮಾನಿಸಿದೆ. ಇದರ ಉಸ್ತುವಾರಿಯನ್ನು ಸಂಸದ ಬಸವರಾಜ ಬೊಮ್ಮಾಯಿ ಅವರಿಗೆ ವಹಿಸಲು ನಿರ್ಧರಿಸಲಾಗಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಛಲವಾದಿ ನಾರಾಯಣಸ್ವಾಮಿ, ಜಗದೀಶ ಶೆಟ್ಟರ್, ಗೋವಿಂದ ಕಾರಜೋಳ ಹಾಜರಿದ್ದರು.

**ಮುಖ್ಯಾಂಶಗಳು**

- ಬಿ.ವೈ.ವಿಜಯೇಂದ್ರ ಅಧ್ಯಕ್ಷತೆಯಲ್ಲಿ ಸಭೆ
- ಸಂಸದ ಬಸವರಾಜ ಬೊಮ್ಮಾಯಿ ಹೆಗಲಿಗೆ ಹೋರಾಟದ ಉಸ್ತುವಾರಿ

‘ನಮ್ಮ ಸರ್ಕಾರ ಅಲೆಮಾರಿಗಳಿಗೂ ಶೇ 1ರಷ್ಟು ಒಳಮೀಸಲಾತಿ ನೀಡಿತ್ತು. ಅತ್ಯಂತ ವೈಜ್ಞಾನಿಕವಾಗಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹಂಚಿಕೆ ಮಾಡಿದ್ದೆವು. ಪರಿಶಿಷ್ಟ ಜಾತಿಯ ಯಾವುದೇ ಸಮುದಾಯಕ್ಕೂ ಅನ್ಯಾಯ ಮಾಡಿರಲಿಲ್ಲ. ಸಿದ್ದರಾಮಯ್ಯ ಸರ್ಕಾರ ನೀಡಿರುವ ಪ್ರಮಾಣಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲೇ ಹಂಚಿಕೆ ಮಾಡಿದ್ದೆವು. ಆದರೆ, ಕಾಂಗ್ರೆಸ್ ಸರ್ಕಾರ ಅಲೆಮಾರಿಗಳಿಗೆ ಏನೂ ಕೊಟ್ಟಿಲ್ಲ’ ಎಂದು ಬೊಮ್ಮಾಯಿ ಅವರು ಅಭಿಪ್ರಾಯ ಪಟ್ಟರು’ ಎಂದು ಮೂಲಗಳು ಹೇಳಿವೆ.

‘ಈಗ ಸಿದ್ದರಾಮಯ್ಯ ಸರ್ಕಾರ ನಿಗದಿ ಮಾಡಿರುವ ಒಳಮೀಸಲಾತಿ ಪ್ರಮಾಣದ ಬಗ್ಗೆ ಪರಿಶಿಷ್ಟ ಜಾತಿಗಳಲ್ಲಿ ಯಾರಿಗೂ ಸಮಾಧಾನವಿಲ್ಲ. ವಿಶೇಷವಾಗಿ ಅಲೆಮಾರಿ ಸಮುದಾಯ ಆಕ್ರೋಶಗೊಂಡಿದೆ. ಈ ಹಿನ್ನೆಲೆಯಲ್ಲಿ ವಂಚನೆಗೊಳಗಾದವರಿಗೆ ನಾವು ಧ್ವನಿಯಾಗಬೇಕು. ಹೋರಾಟ ನಡೆಸುವಂತೆ ಪಕ್ಷದ ವರಿಷ್ಠರಿಂದಲೂ ಸೂಚನೆ ಇದೆ. ಆದ್ದರಿಂದ, ಪರಿಶಿಷ್ಟ ಸಮುದಾಯಕ್ಕೆ ಸೇರಿದ ನಾಯಕರ ಜತೆ ಸಭೆ ಮಾಡಿ ಹೋರಾಟದ ರೂಪುರೇಷೆ ತೀರ್ಮಾನಿಸಲಾಗುವುದು’ ಎಂದು ಬೊಮ್ಮಾಯಿ ಅವರು ಸಭೆಗೆ ವಿವರಿಸಿದರು.

‘ಪಕ್ಷದಲ್ಲಿರುವ ಪರಿಶಿಷ್ಟ ಸಮುದಾಯದ ನಾಯಕರ ಮೂಲಕ ಹೋರಾಟವನ್ನು ಸಂಘಟಿಸಲಾಗುವುದು. ಪರಿಶಿಷ್ಟ ಸಮುದಾಯಕ್ಕೆ ಸೇರಿದ ಸಂಘಟನೆಗಳನ್ನೂ ಜತೆಗೆ ಸೇರಿಸಿಕೊಳ್ಳಬೇಕು’ ಎಂದು ಬೊಮ್ಮಾಯಿ ಅಭಿಪ್ರಾಯ ವ್ಯಕ್ತಪಡಿಸಿದ್ದಾಗಿ ಮೂಲಗಳು ಹೇಳಿವೆ.

‘ವಿವಿಧ ಜಿಲ್ಲೆಗಳಲ್ಲಿ ನಡೆಸಲು ಉದ್ದೇಶಿಸಿರುವ ಸರಣಿ ಹೋರಾಟಗಳಲ್ಲಿ ಎಲ್ಲ ನಾಯಕರೂ ತೊಡಗಿಸಿಕೊಳ್ಳಬೇಕು. ರಾಜ್ಯದಲ್ಲಿ ಆಡಳಿತ ಯಂತ್ರವೇ ಕುಸಿದು ಹೋಗಿದ್ದು, ಕಾನೂನು ಸುವ್ಯವಸ್ಥೆ ನೆಲಕಚ್ಚಿದೆ. ಜನ ಭಯಭೀತರಾಗಿರುವ ಈ ಸಂದರ್ಭದಲ್ಲಿ ಪಕ್ಷದ ನಾಯಕರು ಜನರ ನೆರವಿಗೆ ಧಾವಿಸಬೇಕು’ ಎಂದು ಯಡಿಯೂರಪ್ಪ ಸೂಚನೆ ನೀಡಿದರೆಂದು ಮೂಲಗಳು ಹೇಳಿವೆ.

# ವಿದ್ಯಾರ್ಥಿ ಸಂಘಕ್ಕೆ ಚುನಾವಣೆ: ಸಮ್ಮತಿ

**ಬೆಂಗಳೂರು:** ವಿದ್ಯಾರ್ಥಿ ಸಂಘಗಳ ಚುನಾವಣೆಗಳನ್ನು ಮರು ಆರಂಭಿಸುವ ಕುರಿತು ವರದಿ ನೀಡಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ರಚಿಸಿದ್ದ ಸಮಿತಿಯು ಈ ಕುರಿತು ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಲು ಮುಂದಾಗಿದೆ.

ಸಮಿತಿಯ ಮೊದಲ ಸಭೆಯ ಬಳಿಕ ಈ ಬಗ್ಗೆ ಮಾಹಿತಿ ನೀಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ, ‘ಚುನಾವಣೆ ನಡೆಸಲು ಸಮಿತಿಯ ಎಲ್ಲ ಸದಸ್ಯರೂ ಸಮ್ಮತಿ ಸೂಚಿಸಿದ್ದಾರೆ. ಜ.22ರಂದು ಎರಡನೇ ಸಭೆ ನಡೆಯಲಿದೆ’ ಎಂದರು.

## ಸಾರ್ವಜನಿಕ ಪ್ರಕಟಣೆ / ಸ್ಪಷ್ಟೀಕರಣ

ದಿವಂಗತ ಕೆ.ಸಿ. ರಘು (ಮರಣ ದಿನಾಂಕ: 15.10.2023) ಅವರು ಕಾನೂನುಬದ್ಧವಾಗಿ ವಿವಾಹವಾಗಿದ್ದ ಪತ್ನಿ ದೀಪಾ ವಿಶ್ವನಾಥನ್ ಮಾತ್ರ ಎಂಬುದನ್ನು ಸಾರ್ವಜನಿಕವಾಗಿ ಸ್ಪಷ್ಟಪಡಿಸಲಾಗುತ್ತಿದೆ.

ಆಶಾ ಕೆ.ಎಸ್. (ಆಶಾ ರಘು) ಅವರು ದಿವಂಗತ ಕೆ.ಸಿ. ರಘು ಅವರ ಪತ್ನಿ ಎಂಬುದಾಗಿ ಹೇಳುವ ಅಥವಾ ಸೂಚಿಸುವ ಯಾವುದೇ ಹೇಳಿಕೆಗಳು,ಪತ್ರಿಕಾ/ ಮಾಧ್ಯಮ ವರದಿಗಳು, ಸಾಮಾಜಿಕ ಜಾಲತಾಣದ ಪೋಸ್ಟ್‌ಗಳು, ಚಿತ್ರಗಳು ಅಥವಾ ಇನ್ನಿತರ ಯಾವುದೇ ವರದಿಗಳು ಸುಳ್ಳು, ಆಧಾರರಹಿತ ಮತ್ತು ವಾಸ್ತವಾಂಶಗಳಿಗೆ ವಿರುದ್ಧವಾಗಿವೆ.

ಈ ರೀತಿಯ ತಪ್ಪು ಮಾಹಿತಿಗಳು, ವರದಿಗಳು ಅಥವಾ ಪೋಸ್ಟಿಂಗ್ಗಳು ಸಾರ್ವಜನಿಕರು ಹಾಗೂ ಮಾಧ್ಯಮಗಳು ಪ್ರಕಟಿಸುವುದರಿಂದ ಅಥವಾ ಹಂಚಿಕೊಳ್ಳುವುದರಿಂದ ದೂರವಿರಬೇಕೆಂದು ವಿನಂತಿಸಲಾಗಿದೆ. ಇಂತಹ ಸುಳ್ಳು ಹೇಳಿಕೆಗಳನ್ನ ಮಾಹಿತಿಗಳನ್ನ ಮುಂದುವರಿಸಿ ಹರಡುವ ಯಾವುದೇ ವ್ಯಕ್ತಿಗಳು ಅಥವಾ ಸಂಸ್ಥೆಗಳು ಅದರ ಪರಿಣಾಮಗಳಿಗೆ ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ.

ಪ್ರಕಟಿಸಿದವರು:

ದೀಪಾ ವಿಶ್ವನಾಥನ್ (ಪತ್ನಿ)
ಸಿಂಧು ರಘು (ಮಗಳು)
ಬೆಂಗಳೂರು;

ಕೆ.ಸಿ. ರವಿ, ಕೆ.ಸಿ. ಶಿವ, ಕೆ.ಸಿ. ಮಹೇಂದ್ರ ಮತ್ತು ಕೆ.ಸಿ. ಶಂಕರ್ (ಸಹೋದರರು)
ಕಲ್ಮನೆ, ಕೂವೆ ಪೋಸ್ಟ್,
ಮೂಡಿಗೆರೆ ತಾ ಚಿಕ್ಕಮಗಳೂರು ಜಿಲ್ಲೆ 577160

ಜಾಹೀರಾತು

## ಫಾರ್ಚೂನ್ ಅಂಡ್ ಫೇಮ್ ಅಲೈನ್: ಜ್ಯೋತಿಷ-ಸಂಖ್ಯಾಶಾಸ್ತ್ರಜ್ಞೆ ಸ್ವೆಟ್ಟಾ ಜುಮಾನಿ ಬೆಂಗಳೂರಿಗೆ (ಜನವರಿ 14-16-2026)

ಜ್ಯೋತಿಷ ಮತ್ತು ಸಂಖ್ಯಾಶಾಸ್ತ್ರಗಳೆರಡನ್ನೂ ಬಳಸಿ ವ್ಯಕ್ತಿಯ ಗುಣಲಕ್ಷಣಗಳು, ಭವಿಷ್ಯ ಮತ್ತು ಜೀವನದ ವಿವಿಧ ಅಂಶಗಳ ಬಗ್ಗೆ ಭವಿಷ್ಯ ಹೇಳುವ ಖ್ಯಾತ ತಜ್ಞೆ ಸ್ವೆಟ್ಟಾ ಜುಮಾನಿ (ಸಂಖ್ಯಾಶಾಸ್ತ್ರ ಜಗತ್ತಿನ ದೊರೆಯೆಂದೇ ಕರೆಯಲಾಗುವ ಸಂಜಯ್ ಬಿ. ಜುಮಾನಿ ಅವರ ಸಹೋದರಿ) ಅವರು 2026ರ ಜನವರಿ 14ರಿಂದ 16ರವರೆಗೆ ಬೆಂಗಳೂರಿನಲ್ಲಿ ಮುಖಾಮುಖಿ ನೇರ ಸಂದರ್ಶನದ ಕಾರ್ಯಕ್ರಮದ ಮೂಲಕ ಆಸಕ್ತರ ಭವಿಷ್ಯವನ್ನು ಹೇಳುವ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ.

ಕಳೆದ 25 ವರ್ಷಗಳಿಂದ ಜುಮಾನಿ ಕುಟುಂಬವು ದೇಶದ ವಿವಿಧೆಡೆ ಸಾವಿರಾರು ಜನರ ವೃತ್ತಿಜೀವನ, ಕೌಟುಂಬಿಕ ಸಂಬಂಧಗಳು, ಆರೋಗ್ಯ, ವ್ಯಾಪಾರ ವಹಿವಾಟು ಮತ್ತು ಜೀವನದ ವಿವಿಧ ಆಯ್ಕೆಗಳ ಬಗ್ಗೆ ಜನರಿಗೆ ಮಾರ್ಗದರ್ಶನ ಮಾಡುತ್ತ ಬಂದಿದ್ದಾರೆ. ತಮ್ಮ ಜೆರ್ಸಿ ಸಂಖ್ಯೆಯನ್ನು 7ರಿಂದ 23ಕ್ಕೆ ಬದಲಿಸಿದ ನಂತರ ದೇಶಕ್ಕೆ ಮೊಟ್ಟಮೊದಲ ಮಹಿಳಾ ಕ್ರಿಕೆಟ್ ವಿಶ್ವಕಪ್ ಪ್ರಶಸ್ತಿಯನ್ನು ತಂದು ಮಹಿಳಾ ಕ್ರಿಕೆಟ್‌ನ ಪ್ರಭೆಯನ್ನು ಉತ್ತುಂಗಕ್ಕೆ ಏರಿಸಿದ ಭಾರತದ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಜುಮಾನಿ ಕುಟುಂಬದಿಂದ ಭವಿಷ್ಯ ಕೇಳಿ ಲಾಭ ಪಡೆದ ಮಿನುಗುತಾರೆ. ಜುಮಾನಿ ಕುಟುಂಬದ ಗ್ರಾಹಕರ ಪಟ್ಟಿಯಲ್ಲಿ ಇನ್ನೊಬ್ಬ ಕ್ರಿಕೆಟ್ ಆಟಗಾರ್ತಿ ರೇಣುಕಾ ಠಾಕೂರ್, ಪುರುಷ ಕ್ರಿಕೆಟ್ ತಂಡದ ಹಾರ್ದಿಕ್ ಪಾಂಡ್ಯ, ಜಿತೇಶ್ ಶರ್ಮಾ, ಜಿಯೋ ಮೊಬೈಲ್ ಸಂಸ್ಥೆ, ನಟಿ ಪ್ರೀತಿ ಜಿಂಟಾ, ನಿರ್ಮಾಪಕ-ನಿರ್ದೇಶಕ ರೋಹಿತ್ ಶೆಟ್ಟಿ, ಕೋಲ್ಕತಾ ನೈಟ್ ರೈಡರ್ಸ್ ಟೀಮ್, ಶಾರುಖ್ ಖಾನ್, ಆನಂದ್ ಎಲ್ ರೈ, ಮೋಹಿತ್ ಡಿ. ಸೂರಿ, ಏಕತಾ ಆರ್. ಕಪೂರ್ ಮತ್ತು ಚಿತ್ರನಟ ಅಜಯ್ ದೇವಗನ್ ಮುಂತಾದ ಖ್ಯಾತನಾಮರು ಸೇರಿದ್ದಾರೆ.

ತಮ್ಮ ನಿಖರವಾದ ಭವಿಷ್ಯದ ಮೂಲಕ ಜಗತ್ತಿನ ಗಮನಸೆಳೆದಿರುವ ಸ್ವೆಟ್ಟಾ ಜವಾನಿ ತಮ್ಮ ‘ಭವಿಷ್ಯ’ದ ಮೂಲಕ ಪತ್ರಿಕೆಗಳ ಹೆಡ್‌ಲೈನ್‌ಗಳಲ್ಲಿ ಮಿಂಚಿದ್ದಾರೆ. ಅದು ಬೆಳ್ಳಿಯ ದರದ ನಾಗಾಲೋಟ ಇರಬಹುದು, ಅಥವಾ ಬಂಗಾರದ ಬೆಲೆಯ ನಿರಂತರ ಏರಿಕೆ ಇರಬಹುದು, ಅಥವಾ ಜಗತ್ತಿನ ವಿವಿಧ ಭಾಗಗಳಲ್ಲಿ ಸಂಭವಿಸಿದ ಅಪಘಾತಗಳ ಬಗೆಗಿನ ಭವಿಷ್ಯ ಇರಬಹುದು, ಅಥವಾ ವಿವಿಧ ದೇಶಗಳ ಮಧ್ಯೆ ಬಿಕ್ಕಟ್ಟುಗಳು ಉಲ್ಬಣಿಸುವುದು, ವ್ಯಾಪಾರ ವಹಿವಾಟಿನಲ್ಲಿ ತೀವ್ರ ಪೈಪೋಟಿಯಿಂದಾಗಿ ಹೆಚ್ಚುತ್ತಿರುವ ದ್ವೇಷಮಯ ಪರಿಸ್ಥಿತಿ, ಒಂದೇ ಎರಡೇ... ಸ್ವೆಟ್ಟಾ ಅವರ ನಿಖರ ಭವಿಷ್ಯವಾಣಿಗಳಿಗೆ ಕೊನೆ ಮೊದಲಿಲ್ಲ. ಭಾರತವೂ ಸೇರಿದಂತೆ ವಿವಿಧ ದೇಶಗಳ ಮೇಲೆ ಅಧ್ಯಕ್ಷ ಟ್ರಂಪ್ ಅವರು ತೆರಿಗೆಯನ್ನು ಬೇಕಾಬಿಟ್ಟಿಯಾಗಿ ಏರಿಸಿದ್ದು ಜಾಗತಿಕ ತಲ್ಲಣಗಳಿಗೆ ಕಾರಣವಾಗಿರುವುದು ಮೊದಲಾದವು ಸ್ವೆಟ್ಟಾ ಅವರು ‘ಭವಿಷ್ಯ’ಗಳ ಪಟ್ಟಿಯಲ್ಲಿ ಸೇರಿವೆ.

ಉಳಿದೆಲ್ಲ ಭವಿಷ್ಯಗಳಿಗಿಂತ ಎದ್ದು ಕಾಣುವ ಭವಿಷ್ಯಗಳೆಂದರೆ ವಿರಾಟ್ ಕೊಹ್ಲಿ ಅವರಿಗೆ ಪ್ರಸಕ್ತ ವರ್ಷ ಶುಭದಾಯಕವಾಗಿರುವುದರ ಬಗೆಗಿನದು. 2025 (ಒಟ್ಟು ಮೊತ್ತ 9) (ಮಂಗಳ ಗ್ರಹ)ಗಳ ಜತೆಗೆ ಶಿಸ್ತು. ಗುರಿ ಮತ್ತು ಸಂಖ್ಯಾಶಾಸ್ತ್ರದಲ್ಲಿ ಸಾಧನೆಗಳು ವಿರಾಟ್ ಕೊಹ್ಲಿ ಟೀಮ್‌ನಲ್ಲಿದ್ದ ಆರ್‌ಸಿಬಿ 18 ವರ್ಷಗಳ ಬಳಿಕ ಐಪಿಎಲ್ ಟೂರ್ನಿ ಗೆಲ್ಲುವುದು ಎಂದು ಸ್ವೆಟ್ಟಾ ಅವರು ನುಡಿದಿದ್ದ ಭವಿಷ್ಯ ಎದ್ದು ಕಾಣುತ್ತದೆ.

ಸೂರ್ಯನ ವರ್ಷ ಎಂದು ಪರಿಗಣಿಸಲಾಗುವ 2026ರಲ್ಲಿ ನಾವು ಕಾಲಿಡುತ್ತಿರುವಂತೆಯೇ ಸ್ವೆಟ್ಟಾ ಅವರ ಪ್ರಕಾರ, ಇದೊಂದು ಉಜ್ವಲ ಭವಿಷ್ಯದ, ನಾಯಕತ್ವದ, ನವೀಕರಣದ ಹಂತವಾಗಿರುವ ಜೊತೆಗೆ ಒಬ್ಬ ವ್ಯಕ್ತಿಯ ಹೆಸರು, ಸಂಖ್ಯೆ, ಜೀವನದ ಪ್ರಮುಖ ನಿರ್ಧಾರಗಳನ್ನು ಸೂಕ್ತ ಗ್ರಹಗಳ ಶಕ್ತಿಯ ನೆರವಿನಿಂದ ಕೈಗೊಳ್ಳಲು ಇದು ಸಕಾಲವಾಗಿದೆ. ಈ ಉಜ್ವಲ ವರ್ಷವು ನಿಮ್ಮ ಜೀವನದಲ್ಲಿ ವೈಯಕ್ತಿಕವಾಗಿ ಮತ್ತು ವೃತ್ತಿಪರ ಜೀವನದಲ್ಲಿ ಯಾವ ರೀತಿಯ ಬದಲಾವಣೆಗಳನ್ನು ಕಾಣಬಹುದು ಎಂಬುದನ್ನು ಅರಿಯಲು, ಸ್ವೆಟ್ಟಾ ಅವರ ಜತೆಗಿನ ಆಳವಾದ, ಪರಸ್ಪರ ಮುಖಾಮುಖಿ ಭೇಟಿ ನಿಮಗೆ ಜೀವನದ ಅಂತರ್ ದೃಷ್ಟಿಯನ್ನು ಪಡೆಯುವಲ್ಲಿ ಸಹಕಾರಿಯಾಗಲಿದೆ.

ಸ್ವೆಟ್ಟಾ ಅವರ ಜತೆಗಿನ ಸಮಾಲೋಚನೆಯ ವೇಳೆಗೆ ಅವರನ್ನು ಪ್ರಮುಖ ಕ್ಷೇತ್ರಗಳಾದ ಆರ್ಥಿಕ ಯೋಜನೆ, ಹೂಡಿಕೆ ವಿಚಾರಗಳು, ವೃತ್ತಿಪರ ಜೀವನ, ಶೈಕ್ಷಣಿಕ ಜೀವನ, ಹೊಂದಾಣಿಕೆ, ನವಜಾತ ಶಿಶುವಿಗೆ ನಾಮಕರಣ ಮತ್ತು ವ್ಯಾಪಾರ ಮತ್ತು ಬ್ರ್ಯಾಂಡ್ ಅಭಿವೃದ್ಧಿ ಮೊದಲಾದ ವಿಷಯಗಳ ಬಗ್ಗೆ ಭವಿಷ್ಯ ಮತ್ತು ಸಂಖ್ಯಾಶಾಸ್ತ್ರದ ಆಧಾರದಿಂದ ಹೊರಹೊಮ್ಮುವ ಯೋಜನೆಗಳ ಮೂಲಕ ಮಾರ್ಗದರ್ಶನದ ಬಗ್ಗೆ ಅರಿಯಬಹುದಾಗಿದೆ.

**ಸಂದರ್ಶನಗಳು ಕಡ್ಡಾಯವಾಗಿ ಬುಕಿಂಗ್ ಮೂಲಕ ಮಾತ್ರ :**
+91 99647 78624, +91 97380 55145
+91 98348 85132
Website: www.jumaani.com
E-mail swettajumaani@rediffmail.com

## ಗೊರೂರು ಪಂಕಜಗೆ ಪ್ರಶಸ್ತಿ

**ಬೆಂಗಳೂರು:** ಕಾಸರಗೋಡಿನ ಕನ್ನಡ ಭವನದ ವತಿಯಿಂದ ‘ಕನ್ನಡ ಭವನ’ದ ರಜತ ಸಂಭ್ರಮದ ಅಂಗವಾಗಿ ನೀಡುವ ಪ್ರತಿಷ್ಠಿತ ಕನ್ನಡ ಪಯಸ್ವಿನಿ ಅಚೀವ್‌ಮೆಂಟ್ ರಾಷ್ಟ್ರೀಯ ಪ್ರಶಸ್ತಿಗೆ ಹಾಸನದ ಗೊರೂರು ಪಂಕಜ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಡಾ. ವಾಮನ್ ರಾವ್ ಬೇಕಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೊರೂರು ಪಂಕಜ

ಕಾಸರಗೋಡಿನ ಕೃಷ್ಣದೇವರಾಯ ವೇದಿಕೆಯಲ್ಲಿ ಜನವರಿ 18ರಂದು ನಡೆಯಲಿರುವ ಸಂಸ್ಥೆಯ ರಜತ ಸಂಭ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಹೇಳಿದ್ದಾರೆ.

**ನಿಧನ ವಾರ್ತೆ**

## ವೆಂಕಮ್ಮ



ವೆಂಕಮ್ಮ

**ಬೆಂಗಳೂರು:** ಕನ್ನಡಪ್ರಭ ಸಂಪಾದಕರಾಗಿದ್ದ ದಿವಂಗತ ಕೆ.ಸತ್ಯನಾರಾಯಣ ಅವರ ಪತ್ನಿ ವೆಂಕಮ್ಮ(91) ಅವರು ಮಂಗಳವಾರ ಸಂಜೆ ಜಯನಗರದ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ.

2025 Intake

JSS ACADEMY OF HIGHER EDUCATION & RESEARCH (DEEMED TO BE UNIVERSITY) MYSURU

NAAC GRADE A++

PURSUE CAREER IN
PSYCHOLOGY
STAY AHEAD WITH EDUCATION

**Admission Notification: 2025**

JSS Academy of Higher Education & Research (JSS AHER), Mysuru, invites online application for entrance test & admission to following RCI regulated programs for 2025-26 admission.

| Sl. | Courses | Intake |
|---|---|---|
| 1 | MA Clinical Psychology (2 years) | 10 |
| 2 | Professional Diploma in Clinical Psychology (1 year) | 10 |

As per the eligibility criteria prescribed by the RCI, candidates aspiring to appear for the JSS Academy of Higher Education & Research (JSS AHER) entrance examination may submit their applications online through the official website:www.jssuni.edu.in. Comprehensive details regarding the entrance test & other relevant information will be provided in the information brochure available on the JSS AHER website.

The Date of Entrance test & admission will be Notified on the website: www.jssuni.edu.in

Apply by: 30th Jan, 2026 (Friday)

**JSS Academy of Higher Education & Research**
JSS Medical Institutions Campus, S.S. Nagara Bannimantap
Mysuru, Karnataka, ☎: 0821-2548014/416/400
: +91 99808 41859 : admissions@jssuni.edu.in

## ಜೇನು ನೊಣ ಕಡಿತ: ಸಾವು

ಹೊನ್ನಾವರ (ಉತ್ತರ ಕನ್ನಡ): ತಾಲ್ಲೂಕಿನ ಅನಿಲಗೋಡ ಜನತಾ ವಿದ್ಯಾಲಯದ ಹಿಂಭಾಗದ ರಸ್ತೆಯಲ್ಲಿ ಮಂಗಳವಾರ ಜೇನುನೊಣಗಳು ಕಚ್ಚಿ ಕೃಷಿ ಕೂಲಿಕಾರ್ಮಿಕ ಮಂಜುನಾಥ ಗಣಪ ಅಂಬಿಗ (53) ಮೃತಪಟ್ಟಿದ್ದಾರೆ.

'ಅನಿಲಗೋಡ ಹೊಳೆಬದಿಕೇರಿ ನಿವಾಸಿ ಮಂಜುನಾಥ ತೀವ್ರ ಅಸ್ವಸ್ಥಗೊಂಡಿದ್ದರು. ಅವರು ಆಸ್ಪತ್ರೆಯ ಮಾರ್ಗ ಮಧ್ಯೆಯೇ ಮೃತಪಟ್ಟರು. ಅವರೊಂದಿಗೆ ಇದ್ದ ನಾಲ್ಕು ಮಂದಿ ಓಡಿ ಪಾರಾಗಿದ್ದಾರೆ' ಎಂದು ಮಂಕಿ ಠಾಣೆ ಪೊಲೀಸರು ತಿಳಿಸಿದ್ದಾರೆ. 'ಜೇನು ಕಡಿತದ ಪ್ರಕರಣಗಳು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ' ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಮೃತರ ಕುಟುಂಬಕ್ಕೆ ಪರಿಹಾರ ಸಿಗಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

## ಸಂಭಲ್: ಕೆರೆ ಒತ್ತುವರಿ; ಸಮೀಕ್ಷೆ ಆರಂಭ

ಸಂಭಲ್ (ಉತ್ತರ ಪ್ರದೇಶ) (ಪಿಟಿಐ): ಸಂಭಲ್‌ನ ಸರಾಯ ತರೀನ್ ಪ್ರದೇಶದಲ್ಲಿರುವ ಕೆರೆ ಒತ್ತುವರಿ ಸಂಬಂಧ ಜಿಲ್ಲಾಡಳಿತವು ಸಮೀಕ್ಷೆ ಕಾರ್ಯ ಕೈಗೊಂಡಿದೆ.

ಕೆರೆಗೆ ಸೇರಿದ ಜಾಗದಲ್ಲಿ ಸುಮಾರು 40 ಮನೆಗಳನ್ನು ನಿರ್ಮಿಸಲಾಗಿದೆ. ನಾಯಬ್ ತಹಶೀಲ್ದಾರ್ ದೀಪಕ್ ಜುರೇಲ್ ನೇತೃತ್ವದಲ್ಲಿ ಕಂದಾಯ ಇಲಾಖೆಯ 25 ಸದಸ್ಯರ ತಂಡವು ಸಮೀಕ್ಷೆ ಕಾರ್ಯದಲ್ಲಿ ತೊಡಗಿದೆ.

## 'ಧರ್ಮಸ್ಥಳ: ವರದಿ ಸಲ್ಲಿಸಲು ಎಸ್‌ಐಟಿಗೆ ಸೂಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳ ಮತ್ತು ಸುತ್ತ ಮುತ್ತಲಿನ ಪ್ರದೇಶದಲ್ಲಿ ಮಹಿಳೆಯರ ಅಸಹಜ ಸಾವು ಹಾಗೂ ನಾಪತ್ತೆ ಪ್ರಕರಣಗಳ ತನಿಖೆಯ ವರದಿಯನ್ನು ತಮಗೆ ಸಲ್ಲಿಸುವಂತೆ ವಿಶೇಷ ತನಿಖಾ ತಂಡದ(ಎಸ್‌ಐಟಿ) ಮುಖ್ಯಸ್ಥರಿಗೆ ನಿರ್ದೇಶನ ನೀಡುವಂತೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಅವರು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದಾರೆ.

ಈ ಪ್ರಕರಣಗಳ ಸಮಗ್ರ ತನಿಖೆಗೆ ಎಸ್‌ಐಟಿ ರಚಿಸುವಂತೆ ಕೋರಿ ಆಯೋಗ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿತ್ತು. ಸರ್ಕಾರವು ಎಸ್‌ಐಟಿ ರಚಿಸಿತ್ತು. ಎಸ್‌ಐಟಿ ವ್ಯಾಪ್ತಿಯಲ್ಲಿ ದಾಖಲಾಗುವ ಎಲ್ಲ ಪ್ರಕರಣ ತನಿಖೆ ನಡೆಸಬೇಕು ಎಂದು ಸರ್ಕಾರ ಸೂಚಿಸಿದ್ದರೂ ಎಸ್‌ಐಟಿ ಸಾಕ್ಷಿ ದೂರುದಾರರ ಹೇಳಿಕೆ ಆಧರಿಸಿದ ತನಿಖೆಗಷ್ಟೇ ಸೀಮಿತವಾದಂತಿದೆ. ಮಹಿಳಾ ಆಯೋಗಕ್ಕೆ ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಇದ್ದು, ಈ ತನಿಖೆಯ ವರದಿಯನ್ನು ತರಿಸಿಕೊಳ್ಳಬಹುದಾಗಿದೆ. ಈವರೆಗೆ ನಡೆಸಿರುವ ತನಿಖೆಯ ವರದಿಯನ್ನು ಸಲ್ಲಿಸಿ ಎಂದು ಎಸ್‌ಐಟಿ ಮುಖ್ಯಸ್ಥರಿಗೆ ಪತ್ರ ಬರೆದಿದ್ದರೂ, ಯಾವುದೇ ಉತ್ತರ ಬಂದಿರುವುದಿಲ್ಲ. ಈ ವಿಚಾರದಲ್ಲಿ ತಾವು ತಕ್ಷಣವೇ ಮಧ್ಯ ಪ್ರವೇಶಿಸಬೇಕು ಎಂದು ಅವರು ಪತ್ರದಲ್ಲಿ ಆಗ್ರಹಿಸಿದ್ದಾರೆ.

**'ಅವಾಚ್ಯ, ಅಶ್ಲೀಲ ಪದಬಳಕೆ ನಿಯಂತ್ರಿಸಿ':** 'ಮನರಂಜನಾ ಕಾರ್ಯಕ್ರಮ, ಸಾಮಾಜಿಕ ಜಾಲತಾಣಗಳಲ್ಲಿ ಅವಾಚ್ಯ ಮತ್ತು ಅಶ್ಲೀಲ ಪದ ಬಳಕೆಯ ಹಾಡುಗಳನ್ನು ಹರಿಯ ಬಿಡಲಾಗುತ್ತಿದೆ. ಇದರಿಂದ ತಮಗೆ ಮುಜುಗರವಾಗುತ್ತಿದೆ ಎಂದು ಅನೇಕ ಮಹಿಳೆಯರು ಮತ್ತು ಯುವತಿಯರು ದೂರು ನೀಡಿದ್ದಾರೆ. ಹಾಡುಗಾರಿಕೆಯಲ್ಲಿ ಅವಾಚ್ಯ, ಅಶ್ಲೀಲ ಪದ ಬಳಕೆ ನಿಯಂತ್ರಣಕ್ಕೆ ಕ್ರಮ ತೆಗೆದುಕೊಳ್ಳಿ' ಎಂದು ಮಹಿಳಾ ಆಯೋಗವು ಪೊಲೀಸ್ ಮಹಾ ನಿರ್ದೇಶಕರಿಗೆ ಪತ್ರ ಬರೆದಿದೆ.

ಕಲಬುರಗಿ ಕೇಂದ್ರ ಕಾರಾಗೃಹ

## ಜೈಲಿಗೆ ಫೋನ್ ಎಸೆಯಲು ಯತ್ನ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಕೆಲ ದುಷ್ಕರ್ಮಿಗಳು ಹೊರಗಿನಿಂದ ಸ್ಮಾರ್ಟ್‌ಫೋನ್‌ಗಳು, ಸಿಗರೇಟ್ ಪ್ಯಾಕೆಟ್‌ಗಳು, ಬೀಡಿ ಕಟ್ಟುಗಳು, ಬೆಂಕಿ ಪೊಟ್ಟಣಗಳು ಹಾಗೂ ಎರಡು ದೊಣ್ಣೆಗಳನ್ನು ಜೈಲಿನೊಳಗೆ ಎಸೆಯಲು ಯತ್ನಿಸಿದ್ದಾರೆ.

ಒಂದು ಪ್ರಕರಣದಲ್ಲಿ ಜ.12ರಂದು ಮಧ್ಯಾಹ್ನ 3 ಗಂಟೆ ಹೊತ್ತಿಗೆ 'ಎ' ಮತ್ತು 'ಬಿ' ಪಾಯಿಂಟ್ ನಡುವೆ ವ್ಯಕ್ತಿಯೊಬ್ಬ ಒಂದು ಉಂಡೆ ಆಕಾರ ಚೆಂಡಿನಂಥ ವಸ್ತುವನ್ನು ಎಸೆಯಲು ಯತ್ನಿಸಿದ್ದ. ಇದನ್ನು ಕೆಎಸ್‌ಐಎಸ್‌ಎಫ್ ಪಡೆಯ ಸಿಬ್ಬಂದಿ ತಡೆದಿದ್ದಾರೆ. ಜೊತೆಗೆ ಆ ವಸ್ತುಗಳನ್ನು ಎಸೆಯಲು ಯತ್ನಿಸಿದ ವ್ಯಕ್ತಿ ಹಾಗೂ ಆತನ ನೆರವಿಗೆ ಬಂದಿದ್ದ ಇನ್ನಿಬ್ಬರನ್ನು ವಶಕ್ಕೆ ಪಡೆದು ಪೊಲೀಸರಿಗೆ ಒಪ್ಪಿಸಿದ್ದಾರೆ.

'ಚಂಡಿನಂಥ ಉಂಡೆಯಲ್ಲಿ ಎರಡು ಸ್ಮಾರ್ಟ್‌ಫೋನ್‌ಗಳು, 3 ಪ್ಯಾಕೆಟ್ ಸಿಗರೇಟ್, 10 ಕಟ್ಟು ಬೀಡಿ ಹಾಗೂ ಬೆಂಕಿಪೊಟ್ಟಣಗಳು ದೊರೆತಿವೆ' ಎಂದು ಕೆಎಸ್‌ಐಎಸ್‌ಎಫ್ ಇನ್‌ಸ್ಪೆಕ್ಟರ್ ಶರಣಬಸವ ದೂರಿನಲ್ಲಿ ತಿಳಿಸಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ ಜ.12ರಂದು ರಾತ್ರಿ 10.50ರ ಹೊತ್ತಿಗೆ ಜೈಲಿನ 'ಎ' ಮತ್ತು 'ಬಿ' ಪಾಯಿಂಟ್ ನಡುವೆ ಮೂವರು ವ್ಯಕ್ತಿಗಳು ಜೈಲಿನೊಳಗೆ ನಿಷೇಧಿತ ವಸ್ತುಗಳನ್ನು ಎಸೆಯಲು ಯತ್ನಿಸಿದ್ದಾರೆ. ಈ ಕುರಿತು ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

**ಟಿ.ಪಿ.ಶೇಷ ಭೇಟಿ:** ಕೇಂದ್ರ ಕಾರಾಗೃಹಕ್ಕೆ ಮಂಗಳವಾರ ಕಾರಾಗೃಹಗಳ ಇಲಾಖೆಯ ಡಿಐಜಿ ಟಿ.ಪಿ.ಶೇಷ ಅವರು ಭೇಟಿ ನೀಡಿ ಪರಿಶೀಲಿಸಿದರು ಎಂದು ಮೂಲಗಳು ಹೇಳಿವೆ.

## ಸ್ವಂತ ಹಣದಿಂದ ಕೊಳವೆಬಾವಿ ಕೊರೆಸಿದ ಶಿಕ್ಷಕಿ

ಪ್ರಜಾವಾಣಿ ವಾರ್ತೆ

ಒಳ್ಳೆ ಸುದ್ದಿ

ಅರಕಲಗೂಡು (ಹಾಸನ ಜಿಲ್ಲೆ): ತಾಲ್ಲೂಕಿನ ಸಂತೆ ಮರೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಶಶಿಕಲಾ ಅವರು ವೈಯಕ್ತಿಕವಾಗಿ ₹80 ಸಾವಿರ ವೆಚ್ಚ ಮಾಡಿ, ವಾರದ ಹಿಂದೆ ಕೊಳವೆಬಾವಿ ಕೊರೆಸಿ ಶಾಲೆಯ ನೀರಿನ ಕೊರತೆ ನೀಗಿಸಿದ್ದಾರೆ.

'ಕುಡಿಯಲು ಹಾಗೂ ಶೌಚಾಲಯಕ್ಕೆ ನೀರಿನ ತೀವ್ರ ಸಮಸ್ಯೆ ಇದ್ದುದನ್ನು ಗಮನಿಸಿ, ಕೊಳವೆಬಾವಿ ಕೊರೆಸಿ ಮೋಟಾರ್ ಅಳವಡಿಸಲಾಗಿದೆ' ಎಂದು ಅವರು ತಿಳಿಸಿದರು.

'ಶಾಲೆಗೆ ಕಿಟಕಿ, ಬಾಗಿಲು ದುರಸ್ತಿ ಅಗತ್ಯವಿದೆ. ವಿದೇಶದಲ್ಲಿರುವ ಮಗಳು ₹20 ಸಾವಿರ ನೀಡುವುದಾಗಿ ಹೇಳಿದ್ದಾಳೆ. ಉಳಿಕೆ ಹಣ ಭರಿಸಿ ದುರಸ್ತಿ ಮಾಡಿಸಲು ನಿರ್ಧರಿಸಿದ್ದೇನೆ' ಎಂದು ಹೇಳಿದರು.

ಶಾಲೆಗೆ ಭೇಟಿ ನೀಡಿದ ಬಿಇಒ ಕೆ.ಪಿ.ನಾರಾಯಣ್ ಮಾತನಾಡಿ, 'ಬೇಸಿಗೆಯಲ್ಲಿ ನೀರಿನ ಸಮಸ್ಯೆ ಎದುರಿಸುತ್ತಿದ್ದ ಶಾಲೆಗೆ ಮುಖ್ಯಶಿಕ್ಷಕಿ ಶಾಶ್ವತ ಪರಿಹಾರ ಒದಗಿಸಿರುವುದು ಶ್ಲಾಘನೀಯ. ಅವರ ಸೇವೆ ಅನನ್ಯ' ಎಂದರು.

'ಶಾಲೆಗೆ ಅಗತ್ಯವಿರುವ ಸೌಲಭ್ಯಗಳ ಕುರಿತು ಮನವಿ ಸಲ್ಲಿಸಿದ್ದಾರೆ. ಈಗಾಗಲೇ ₹2.5 ಲಕ್ಷ ಅನುದಾನ ನಿಗದಿಯಾಗಿದ್ದು, ಹೆಚ್ಚುವರಿ ಆರ್ಥಿಕ ನೆರವನ್ನೂ ಒದಗಿಸಲಾಗುವುದು' ಎಂದರು.

ಶಿಕ್ಷಣ ಸಂಯೋಜಕ ಯೋಗೇಶ್, ಎಸ್‌ಡಿಎಂಸಿ ಅಧ್ಯಕ್ಷ ರವಿ ಮಾತನಾಡಿದರು. ಶಿಕ್ಷಕರಾದ ಇಂದ್ರೇಗೌಡ, ಓದೇಶ್, ಪಾಂಡುರಾಜನ್, ಓಬಳೇಶ, ಮಹೇಶ್, ವಸಂತಕುಮಾರ್, ರೇಖಾ, ಶೈಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


### ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
#2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು–560 009.
ದೂರವಾಣಿ ಸಂಖ್ಯೆ: 080-22265383. Website: www.kiadb.in

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–25/488/2025–26 ದಿನಾಂಕ:13.01.2026

**ಟೆಂಡರ್ ಆಹ್ವಾನ ಪ್ರಕಟಣೆ**

(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಗಳಲ್ಲಿ ಅನುಭವ ಹೊಂದಿರುವ ಕೆಸಿಇಐಯಲ್ಲಿ ನೋಂದಾಯಿತ ಸೂಪರ್ ಗ್ರೇಡ್ ವಿದ್ಯುತ್ ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ಟೆಂಡರನ್ನು ಆಹ್ವಾನಿಸಲಾಗಿದೆ.

**ಕಾಮಗಾರಿಯ ಹೆಸರು:** ಕಲಬುರಗಿ ಜಿಲ್ಲೆ ಮತ್ತು ತಾಲ್ಲೂಕಿನ ನಂದೂರು ಕೆಸರಟಗಿ ಕೈಗಾರಿಕಾ ಪ್ರದೇಶ, 3ನೇ ಹಂತದಲ್ಲಿ ವಿದ್ಯುತ್ ಮೂಲಸೌಕರ್ಯ ಒದಗಿಸುವ ಕಾಮಗಾರಿ.

ಬಿಡ್ಡಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **16.02.2026, ಸಂಜೆ 4.00 ಗಂಟೆಯವರೆಗೆ.**

ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2
ವಾಸಾಸಂಇ/ವಾಪ್ರ/ಜಿಎ/5008/2025–26

### ಕರ್ನಾಟಕ ಸರ್ಕಾರ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,

**ಐ.ಎಫ್.ಟಿ.ಸಂಖ್ಯೆ: 30/2025–26 ದಿನಾಂಕ: 08.01.2026**

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–1 & 4ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.121.00 ಲಕ್ಷಗಳು ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.3.23 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 17–01–2026 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆಪಿಪಿ–ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/924/ಕೆಎಸ್‌ಎಂಸಿಎ/2025–26

### TAMIL NADU NEWSPRINT AND PAPERS LIMITED

TNPL
Kagithapuram - 639 136. Karur Dist. Tamil Nadu.

NOTICE INVITING TENDER

| Tender No. | Material Description | Due date |
|---|---|---|
| 252613 006969 | Procurement of 1,000 MT ± 5% Office Waste Paper (White Records) in Bale form from Karnataka for TNPL Unit-I at Kagithapuram. | 21.01.2026 |

Corrigendum if any will be issued in TNPL Website and NIC Portal only. For further details, please visit websites : www.tnpl.com / https://tntenders.gov.in/nicgep/app

DIPR/189/Tender/2026 *TNPL - Maker of bagasse based eco-friendly Paper*

### ಕರ್ನಾಟಕ ಸರಕಾರ
### ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ದೂ.: 08472 -220196, midnglb@rediffmail.com / midnglb1@gmail.com

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–4/2025–26/4147 ದಿನಾಂಕ: 12–01–2026

**–:ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–2 & 4)**

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2025–26ನೇ ಸಾಲಿನ 4702 ಆಣೆಕಟ್ಟು–ಪಿಕಪ್ ನಿರ್ಮಾಣ ಕಾಮಗಾರಿಗಳು, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: ಕನಿಷ್ಠ ರೂ. **24,66,502.92** ಗರಿಷ್ಠ ರೂ. **241,02,845.95,** 3) ಗುತ್ತಿಗೆದಾರರ ಅರ್ಹತೆ ವಿವರ: 3ನೇ ದರ್ಜೆ ಮೇಲ್ಪಟ್ಟು (ಬಿಡ್‌ನಲ್ಲಿ ಇರುವಂತೆ) 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಕೆ.ಪಿ.ಪಿ. ಪೋರ್ಟಲ್‌ನಂತೆ ಇ.ಎಂ.ಡಿ. ಮೊತ್ತ ಕನಿಷ್ಠ ರೂ. 49,400.00 ಗರಿಷ್ಠ ರೂ. 3,62,000.00, 5) ಪ್ರೀ ಬಿಡ್ ಸಭೆಯ ದಿನಾಂಕ: **20–01–2026 ಸಮಯ 11.00 ಗಂಟೆಯ ವರೆಗೆ,** 6) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: **21–01–2026 ಸಮಯ 11.00 ಗಂಟೆಯ ವರೆಗೆ,** 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **22–01–2026 ಸಮಯ 17.30 ಗಂಟೆಯ ವರೆಗೆ,** 8) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **23–01–2026 ಸಮಯ 17.30 ಗಂಟೆಯ ವರೆಗೆ,** 9) ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: **27–01–2026 ಸಮಯ 17.30 ಗಂಟೆಯ ವರೆಗೆ,** 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 11) ಅಂತರಜಾಲ ತಾಣದ ವಿಳಾಸ: www. kppp.Karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/967/ಕೆ.ಎಸ್.ಎಂ.ಸಿ.&ಎ/2025–26

### ಪಟ್ಟಣ ಪಂಚಾಯತ್ ಕಾರ್ಯಾಲಯ
ಬೈಂದೂರು–576214, ಉಡುಪಿ ಜಿಲ್ಲೆ

ಸಂ: ಬೈ.ಪ.ಪ/ಕಿ.ಅ/SBM 2.0/ಸಿಆರ್/104/2025–26 ದಿ: 09/01/2026

**ಈ–ಟೆಂಡರ್ ಪ್ರಕಟಣೆ**

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಆದ್ಯಾದೇಶ 1999 ನಿಯಮಾವಳಿಗಳು 2000 ರಂತೆ ಬೈಂದೂರು ಪಟ್ಟಣ ಪಂಚಾಯತ್ ವ್ಯಾಪ್ತಿಯ ಸ್ವಚ್ಛ ಭಾರತ್ ಮಿಷನ್ (ನಗರ) 2.0 ನಿಧಿಯಡಿಯಲ್ಲಿ ನಿರ್ವಹಿಸಬೇಕಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ CLASS III ಮತ್ತು ಮೇಲ್ಪಟ್ಟ ದರ್ಜೆಯ ಅರ್ಹ ಸಿವಿಲ್ ಗುತ್ತಿಗೆದಾರರಿಂದ KPPP ಪೋರ್ಟಲ್ ನಲ್ಲಿ Standard Tender Document KW-4 ರಂತೆ ಮರು ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿ: 17.01.2026 ರಂದು ಅಪರಾಹ್ನ ಸಮಯ: 5.00 ಗಂಟೆ ಆಗಿರುತ್ತದೆ.

ಕಾಮಗಾರಿ ಹೆಸರು ಮತ್ತು ಟೆಂಡರ್ ಸಂಖ್ಯೆ: (1) Construction of office Building (II) Construction of Security Building (III) Construction of Toilet Building (IV) Development of Rain Water Harvesting (RWH) (V) Construction of Compound Wall & Gate (VI ) Sinking of Borewell and Installation of Submersible Pump (VII) Construction of Weigh Bridge Flatform (VIII) External electrification works (IX) Construction of Internal CC Road (X) Construction of Internal CC Drain at Proposed SWM Site in the limits of Byndoor TP (DMA/2025-26/OW/WORK_INDENT38758/CALL-4)

ಟೆಂಡರಿಗಿಟ್ಟ ಮೊತ್ತ: ರೂ. 1,52,00,000/–, ಇಎಮ್‌ಡಿ: ರೂ. 2,00,000/–

ಕಾಮಗಾರಿ ಆಸಕ್ತ ಗುತ್ತಿಗೆದಾರರು https://kppp.karnataka.gov.in/ ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚುವರಿ ಮಾಹಿತಿಗಾಗಿ ಈ ಕಚೇರಿಯ ಕೆಲಸದ ವೇಳೆಯಲ್ಲಿ ಕಿರಿಯ ಅಭಿಯಂತರರ ವಿಭಾಗವನ್ನು ಸಂಪರ್ಕಿಸಬಹುದಾಗಿದೆ.

ಸಹಿ/–, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್, ಬೈಂದೂರು
ಸಹಿ/–, ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ್, ಬೈಂದೂರು
ವಾಸಾಇ/ಸನಿಉ/ಕೆಎಸ್‌ಎಂಸಿಎ/663/25–26 ದಿ: 13.01.2026

### ಕರ್ನಾಟಕ ಸರ್ಕಾರ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
### ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ

3ನೇ ಮಹಡಿ, "ಗ್ರಾಮೀಣಾಭಿವೃದ್ಧಿ ಭವನ", ಆನಂದರಾವ್ ವೃತ್ತ, ಬೆಂಗಳೂರು – 560009.
ದೂರವಾಣಿ ಸಂಖ್ಯೆ: 080–29710021/22/23/24 ಫ್ಯಾಕ್ಸ್: 080–29710025
ಇ–ಮೇಲ್: coo.krrda.karbng@gmail.com ವೆಬ್‌ಸೈಟ್: http://www.krrda.in

ಸಂಖ್ಯೆ:ಕೆಆರ್‌ಆರ್‌ಡಿಎ/ತಾಂ.ಸ–03/ಜೆ.ಇ–02/208/ಟೆಂಡರ್ ನೋ–7/2025–26/2585 ದಿನಾಂಕ: 13–01–2026

**ಟೆಂಡರ್ ಪ್ರಕಟಣೆ–7**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕೆ.ಆರ್.ಆರ್.ಡಿ.ಎ ಯಿಂದ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಈ ಕೆಳಕಂಡ ಇಂಡೆಂಟ್ ಸಂಖ್ಯೆಯ ಕಾಮಗಾರಿಗೆ ಐಟಂ ದರದ ಟೆಂಡರ್‌ನ್ನು ಕರೆದಿದ್ದು, ವಿವರಗಳು ಈ ಕೆಳಕಂಡಂತಿವೆ.

I) ಕಲ್ಯಾಣ ಪಥ ಯೋಜನೆ, ಬಳ್ಳಾರಿ ಜಿಲ್ಲೆ:

i) Indent No: KRRDA/2024-25/RD/WORK_INDENT 151/ Call-7, ಟೆಂಡರ್‌ಗಿಟ್ಟ ಮೊತ್ತ (APT): ರೂ. 1265.99 ಲಕ್ಷಗಳು, ಇ.ಎಂ.ಡಿ (EMD): ಟೆಂಡರ್‌ಗಿಟ್ಟ ಮೊತ್ತಕ್ಕೆ ಶೇ. 1.00%, ಕನಿಷ್ಠ ರೂ. 15.00 ಲಕ್ಷಗಳು.

ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿಯ ವಿವರಗಳು ಕೆಳಕಂಡಂತಿವೆ:

1) ಪ್ರಿ–ಬಿಡ್ ಸಭೆಯ ದಿನಾಂಕ: **21–01–2026 ರಂದು ಬೆಳಿಗ್ಗೆ 11.00 ಗಂಟೆಗೆ.** 2) ಬಿಡ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ: **29–01–2026 ರಂದು ಸಂಜೆ 5.00 ಗಂಟೆವರೆಗೆ.** 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **30–01–2026 ರಂದು ಸಂಜೆ 5.05 ಗಂಟೆ ನಂತರ.** 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **02–02–2026 ರಂದು ಸಂಜೆ 5.00 ಗಂಟೆ ನಂತರ ಅಥವಾ ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ.**

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿಕೊಂಡ ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಈ ಸಂಬಂಧ ಮಾಹಿತಿಗಾಗಿ **ಕಾರ್ಯಪಾಲಕ ಇಂಜಿನಿಯರ್, ಕೆ.ಆರ್.ಆರ್.ಡಿ.ಎ.,** ರವರನ್ನು ಸಂಪರ್ಕಿಸಲು ಹಾಗೂ ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಟೆಂಡರಿಂಗ್ ಅಧಿಕಾರಿ ಮತ್ತು ಕಾರ್ಯಪಾಲಕ ಇಂಜಿನಿಯರ್
ಕ.ಗ್ರಾ.ರ.ಅ. ಸಂಸ್ಥೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/5010/ಅಡ್ವರ್ಟೋರ್/2025–26

### ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು

Email : ka.chikkamagaluru.dudc@gmail.com Phone : 08262-239010

1115470:File No.-DUDCCK-ENGGOMISC/4/2026-ENG ದಿನಾಂಕ : 03–01–2026

**ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ 2025–26ರ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂಮೆಂಟ್ ಪೋರ್ಟಲ್ ಮುಖಾಂತರ ಷರತ್ತುಗಳಿಗೊಳಪಡಿಸಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ಷರತ್ತುಗಳಿಗೊಳಪಟ್ಟು ಟೆಂಡರ್ ಸಲ್ಲಿಸಬಹುದಾಗಿದೆ.

| ಕ್ರ | ಇಂಡೆಂಟ್ ನಂ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಮೀಸಲಾತಿ | ಇಎಂಡಿ ರೂಗಳಲ್ಲಿ |
|---|---|---|---|---|
| 1 | DMA/2025-26/RD/WORK_INDENT53095 | 100.00 | ಸಾಮಾನ್ಯ | 84,600.00 |
| 2 | DMA/2025-26/RD/WORK_INDENT53153 | 100.00 | ಎಸ್.ಟಿ | 42,350.00 |
| 3 | DMA/2025-26/RD/WORK_INDENT53154 | 100.00 | ಸಾಮಾನ್ಯ | 84,650.00 |
| 4 | DMA/2025-26/RD/WORK_INDENT53155 | 100.00 | ಎಸ್.ಸಿ | 42,350.00 |
| 5 | DMA/2025-26/RD/WORK_INDENT53156 | 97.00 | ಸಾಮಾನ್ಯ | 82,200.00 |
| 6 | DMA/2025-26/RD/WORK_INDENT53158 | 90.00 | ಸಾಮಾನ್ಯ | 76,000.00 |
| 7 | DMA/2025-26/RD/WORK_INDENT53159 | 95.00 | ಪ್ರವರ್ಗ–1ಎ | 40,175.00 |
| 8 | DMA/2025-26/RD/WORK INDENT53160 | 100.00 | ಸಾಮಾನ್ಯ | 84.650.00 |
| 9 | DMA/2025-26/RD/WORK_INDENT53161 | 100.00 | ಎಸ್.ಸಿ | 42.375.00 |
| 10 | DMA/2025-26/RD/WORK_INDENT53163 | 100.00 | ಪ್ರವರ್ಗ–2ಎ | 42,350.00 |
| 11 | DMA/2025-26/RD/WORK_INDENT53164 | 68.00 | ಸಾಮಾನ್ಯ | 57,600.00 |

ಟೆಂಡರ್ ಫಾರಂ ಬೆಲೆ ಇ–ಪ್ರೊಕ್ಯೂರ್‌ಮೆಂಟ್‌ನಂತೆ. ಕಾಲಾವಧಿ–06 ತಿಂಗಳು (ಮಳೆಗಾಲ ಹೊರತುಪಡಿಸಿ)
ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 22.01.2026ರ 17.00ಗಂಟೆಯವರೆಗೆ.
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.01.2026 ರ 17.30 ಗಂಟೆಗೆ
3. ಆರ್ಥಿಕ ಬಿಡ್ ತೆರೆಯುವ ದಿನಾಂಕ: 27.01.2026 ರ 11.00 ಗಂಟೆಗೆ
ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಕಾರಣಾಂತರಗಳಿಂದ ಯಾವುದೇ ಬದಲಾವಣೆಗಳಾದ್ದಲ್ಲಿ ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು. ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು

### ಪುರಸಭಾ ಕಾರ್ಯಾಲಯ, ಹೊಸದುರ್ಗ–577527
(ಜಿಲ್ಲೆ: ಚಿತ್ರದುರ್ಗ.)

ಫೋನ್ ನಂ. 08199–230221 E-mail:tmchosadurga@yahoo.com
Webist: hosadurgatown.gov.in

ಕ್ರಮಾಂಕ : ತಾ.ಶಾ/ಸಿಆರ್–07/2025–26/09 ದಿನಾಂಕ: 13.01.2026

**ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ 2016 ಪ್ರಕಾರ ಹೊಸದುರ್ಗ ಪುರಸಭೆ ವ್ಯಾಪ್ತಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿನಾಂಕ 03.02.2026 ರ ಸಂಜೆ 5:00 ಗಂಟೆವರೆಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ.

www.hosdurgatown.mrc.gov.in ಮತ್ತು https://kppp.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.

ಕಾಮಗಾರಿ ಹೆಸರು:–**(1)** DMA/2025-26/RD/WORK_INDENT53950 ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) (ಜಿ.ಎಸ್.ಟಿ. ಹೊರತು ಪಡಿಸಿ):–42,36,940–00 ಇ.ಎಂ.ಡಿ (ರೂ.ಗಳಲ್ಲಿ):–50,000/– ನಿಗಧಿಪಡಿಸಿದ ಕಾಲಾವಧಿ:–4 ತಿಂಗಳು
**(2)** DMA/2025-26/RD/WORK_INDENT53955 ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)(ಜಿ.ಎಸ್.ಟಿ. ಹೊರತು ಪಡಿಸಿ):–16,86,746.00/– ಇ.ಎಂ.ಡಿ (ರೂ.ಗಳಲ್ಲಿ):–42,168/– ನಿಗಧಿಪಡಿಸಿದ ಕಾಲಾವಧಿ:–4 ತಿಂಗಳು

ಷರತ್ತುಗಳು:– ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ವಿಭಾಗದಲ್ಲಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಮತ್ತು ಈ ಪುರಸಭೆಯ ಅಧಿಕೃತ ಅಂತರ್ಜಾಲ ತಾಣ http://www.hosadurgatown.mrc.gov.in ರ Tenders ವಿಭಾಗದಲ್ಲೂ ಸಹ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.

ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಹೊಸದುರ್ಗ. ಹಾಗೂ ಉಪ ವಿಭಾಗಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ
ಸಹಿ/–ಮುಖ್ಯಾಧಿಕಾರಿಗಳು, ಪುರಸಭೆ, ಹೊಸದುರ್ಗ.
DIPR/CTA/KSMCA/595/2025-26

### ಕರ್ನಾಟಕ ಸರ್ಕಾರ
### ಕರ್ನಾಟಕ ಚಲನಚಿತ್ರ ಅಕಾಡೆಮಿ
Karnataka Chalanachitra Academy

ಕನ್ನಡ ಚಲನಚಿತ್ರ ಅಮೃತೋತ್ಸವ ಭವನ ಸಂಕೀರ್ಣ, ನಂ. 20/ಎ, ನಂದಿನಿ ಲೇಔಟ್, ಬೆಂಗಳೂರು–560096. ದೂರವಾಣಿ: 080–23493410
ಇ–ಮೇಲ್: chalanachitraacademy@gmail.com

ಸಂ: ಕಚಅ/17ನೇ ಬೆಂ.ಅಂ.ಚಿ/ಉ&ಸ ವೇ.ನಿ./ಅ.ಇ–ಟೆಂಡರ್/40/2025–26 ದಿನಾಂಕ: 13.01.2026

**17ನೇ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದ ಉದ್ಘಾಟನಾ ಮತ್ತು ಸಮಾರೋಪ ಸಮಾರಂಭದ ವೇದಿಕೆ ನಿರ್ಮಾಣ ಇನ್ನಿತರ ಕಾರ್ಯಗಳಿಗೆ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ**

17ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಮತ್ತು ಸಮಾರೋಪ ಸಮಾರಂಭದ ವೇದಿಕೆ ನಿರ್ಮಾಣ, ಬ್ಯಾಕ್‌ಡ್ರಾಪ್, ಆಸನಗಳು ಮತ್ತು ಬ್ಯಾರಿಕೇಡಿಂಗ್ ವ್ಯವಸ್ಥೆ, ವೇದಿಕೆಗೆ ಧ್ವನಿ ಮತ್ತು ಬೆಳಕಿನ ವ್ಯವಸ್ಥೆ ಎಲ್‌ಇಡಿ ಸ್ಕ್ರೀನ್, ಸ್ವಾಗತ ಕಮಾನು ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಲು ತಗುಲುವ ವೆಚ್ಚದ ಕುರಿತಂತೆ ಇ–ಇಲಾಖೆಯ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಂಡಿರುವ ಅರ್ಹ ಟೆಂಡರ್‌ದಾರರಿಂದ ದ್ವಿ–ಲಕೋಟೆಯ (Technical & Financial) ವಿಧಾನದಲ್ಲಿ ಅಲ್ಪಾವಧಿ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ: 13.01.2026 ರಂದು ಮಧ್ಯಾಹ್ನ 3.00 ಗಂಟೆ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಇ–ಟೆಂಡರ್‌ಗಳನ್ನು ಇಎಂಡಿ ಮೊತ್ತ **ರೂ. 1,65,000/–** (ರೂ. ಒಂದು ಲಕ್ಷದ ಆರವತ್ತೈದು ಸಾವಿರ ಮಾತ್ರ) ಇ–ಪೇಮೆಂಟ್ ಮೂಲಕ ದಿನಾಂಕ : **21.01.2026 ರ ಸಂಜೆ 5.00 ಗಂಟೆಯೊಳಗೆ** ಸಲ್ಲಿಸಬಹುದು. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಅರ್ಹತೆ ಷರತ್ತುಗಳ ವಿವರ ಇತ್ಯಾದಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ: +91–080–46010000, +91–080–68948777ನ್ನು ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಕಚೇರಿ (080–23493410)ಯನ್ನು ಸಂಪರ್ಕಿಸಬಹುದು. ಟೆಂಡರ್‌ನ ಅಂದಾಜು ಮೊತ್ತ **ರೂ. 110.00 ಲಕ್ಷಗಳು.**

ಸಹಿ/– ರಿಜಿಸ್ಟ್ರಾರ್
DIPR/CP/SA/5022/2025-26

### ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

**ಟೆಂಡರ್‌ಗಾಗಿ ಆಹ್ವಾನ**

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

| ಕ್ರ. ಸಂ. | ಕಾಮಗಾರಿಗಳ ವಿವರ | ಕಾಮಗಾರಿಗಿಟ್ಟ ಮೊತ್ತ / ಇಎಂಡಿ ಮೊತ್ತ |
|---|---|---|
| | **ಮುಖ್ಯ ಅಭಿಯಂತರರ ಕಛೇರಿ (ಯುಡಬ್ಲ್ಯೂಪಿ), 5ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು – 560 009** | |
| | ಸಂ: ಬೆಂ.ಜ.ಮಂ/ಮುಅ(ಯುಡಬ್ಲ್ಯೂಪಿ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/306/2025–26 ದಿನಾಂಕ:12.01.2026 | |
| 1 | ಕೋರಮಂಗಲದಲ್ಲಿ 7 ವರ್ಷಗಳ ಅವಧಿಯವರೆಗೆ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿದಂತೆ ತೃತೀಯ ಹಂತದ ಸಂಸ್ಕರಣೆ ಮತ್ತು ವಾಸನೆ ನಿಯಂತ್ರಣ ಘಟಕಗಳೊಂದಿಗೆ ಬಿಎನ್‌ಆರ್‌ನೊಂದಿಗೆ ಇಂಟಿಗ್ರೇಟೆಡ್ ಫಿಕ್ಸೆಡ್–ಫಿಲ್ಮ್ ಆಕ್ಟಿವೇಟೆಡ್ ಸ್ಲಡ್ಜ್(ಐಎಫ್‌ಎಎಸ್) ಆಧಾರಿತ 20 ಎಂಎಲ್‌ಡಿ ಎಸ್‌ಟಿಪಿಯ ವಿನ್ಯಾಸ, ನಿರ್ಮಾಣ ಮತ್ತು ಕಾರ್ಯಾರಂಭಗೊಳಿಸುವುದು (ಟರ್ನ್‌ಕೀ ಕಾಂಟ್ರಾಕ್ಟ್) (2ನೇ ಕರೆ). | ರೂ. 73.60 ಕೋಟಿಗಳು / ರೂ. 73.60 ಲಕ್ಷಗಳು |
| | ಸಂ: ಬೆಂ.ಜ.ಮಂ/ಮುಅ(ಯುಡಬ್ಲ್ಯೂಪಿ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/308/2025–26 ದಿನಾಂಕ:12.01.2026 | |
| 2 | ಕಾಡುಗೋಡಿಯಲ್ಲಿ 7 ವರ್ಷಗಳ ಅವಧಿಯವರೆಗೆ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿದಂತೆ ತೃತೀಯ ಹಂತದ ಸಂಸ್ಕರಣೆ ಮತ್ತು ವಾಸನೆ ನಿಯಂತ್ರಣ ಘಟಕಗಳೊಂದಿಗೆ ಬಿಎನ್‌ಆರ್‌ನೊಂದಿಗೆ ಇಂಟಿಗ್ರೇಟೆಡ್ ಫಿಕ್ಸೆಡ್–ಫಿಲ್ಮ್ ಆಕ್ಟಿವೇಟೆಡ್ ಸ್ಲಡ್ಜ್(ಐಎಫ್‌ಎಎಸ್) ಆಧಾರಿತ 20 ಎಂಎಲ್‌ಡಿ ಎಸ್‌ಟಿಪಿಯ ವಿನ್ಯಾಸ, ನಿರ್ಮಾಣ ಮತ್ತು ಕಾರ್ಯಾರಂಭಗೊಳಿಸುವುದು (ಟರ್ನ್‌ಕೀ ಕಾಂಟ್ರಾಕ್ಟ್) (2ನೇ ಕರೆ). | ರೂ. 80.66 ಕೋಟಿಗಳು / ರೂ. 80.66 ಲಕ್ಷಗಳು |
| | ಸಂ: ಬೆಂ.ಜ.ಮಂ/ಮುಅ(ಯುಡಬ್ಲ್ಯೂಪಿ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/310/2025–26 ದಿನಾಂಕ:12.01.2026 | |
| 3 | ಬಸವನಪುರದಲ್ಲಿ 7 ವರ್ಷಗಳ ಅವಧಿಯವರೆಗೆ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿದಂತೆ ತೃತೀಯ ಹಂತದ ಸಂಸ್ಕರಣೆ ಮತ್ತು ವಾಸನೆ ನಿಯಂತ್ರಣ ಘಟಕಗಳೊಂದಿಗೆ ಬಿಎನ್‌ಆರ್‌ನೊಂದಿಗೆ ಎಸ್‌ಬಿಆರ್ ಆಧಾರಿತ 10 ಎಂಎಲ್‌ಡಿ ಎಸ್‌ಟಿಪಿಯ ವಿನ್ಯಾಸ, ನಿರ್ಮಾಣ ಮತ್ತು ಕಾರ್ಯಾರಂಭಗೊಳಿಸುವುದು (ಟರ್ನ್‌ಕೀ ಕಾಂಟ್ರಾಕ್ಟ್) (2ನೇ ಕರೆ). | ರೂ. 45.92 ಕೋಟಿಗಳು / ರೂ. 45.92 ಲಕ್ಷಗಳು |
| | ಮೇಲಿನ ಎಲ್ಲಾ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **28.01.2026ರ ಸಂಜೆ 4.00 ಗಂಟೆಯವರೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **29.01.2026 ರ ಸಂಜೆ 5.00 ಗಂಟೆಗೆ.** ಸಹಿ/– ಮುಖ್ಯ ಅಭಿಯಂತರರು(ಯುಡಬ್ಲ್ಯೂಪಿ) | |
| | **ಮುಖ್ಯ ಅಭಿಯಂತರರ ಕಛೇರಿ (ಕಾವೇರಿ–ಕಾ&ನಿ), 8ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು – 560 009** | |
| | ಸಂ: ಬೆಂ.ಜ.ಮಂ/ಮುಅ(ಕಾವೇರಿ–ಕಾ&ನಿ)/ಅಮುಅ(ಕಾವೇರಿ–ಕಾ&ನಿ)–1/2206/2025/2025–26 ದಿನಾಂಕ:12.01.2026 | |
| 4 | ಶಿವ ಬ್ಯಾಲೆನ್ಸಿಂಗ್ ಜಲಾಶಯ (ಎಸ್‌ಬಿಆರ್)ದಿಂದ ಎಸ್‌ಬಿಆರ್ ಪೈಪ್ ಒಳಹರಿವಿನಲ್ಲಿ 5ನೇ ಹಂತದ ಪೈಪ್‌ಲೈನ್‌ಗೆ 3200ಮಿಮೀ ವ್ಯಾಸದ ಹೆಚ್ಚುವರಿ ಕಚ್ಚಾ ನೀರಿನ ಪೈಪ್‌ಲೈನ್ ಅನ್ನು ವಿಸ್ತರಿಸುವ ಕಾಮಗಾರಿಗಾಗಿ ನಿರ್ಮಾಣ, ಮೇಲ್ವಿಚಾರಣೆ ಸೇರಿದಂತೆ ಯೋಜನಾ ನಿರ್ವಹಣಾ ಸಲಹಾ ಸೇವೆಗಳನ್ನು ಒದಗಿಸುವುದು. | ರೂ. 160.24 ಲಕ್ಷಗಳು / ರೂ. 2.40 ಲಕ್ಷಗಳು |
| | ಮೇಲಿನ ಎಲ್ಲಾ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **28.01.2026ರ ಸಂಜೆ 4.00 ಗಂಟೆಯವರೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **29.01.2026 ರ ಸಂಜೆ 4.00 ಗಂಟೆಗೆ.** ಸಹಿ/– ಮುಖ್ಯ ಅಭಿಯಂತರರು(ಕಾವೇರಿ–ಕಾ&ನಿ) | |

ಟೆಂಡರ್ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು **https://kppp.karnataka.gov.in** ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ವಾಪ್ರ/ಜಿಎ/4981/2025–26

### ಕರ್ನಾಟಕ ಸರ್ಕಾರ
### ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ದೇವಗಿರಿ–ಯಲ್ಲಾಪುರ, ಹಾವೇರಿ–581110

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
Website : https://himshaveri.karnataka.gov.in
E-mail : tenders.hims.dme@gmail.com

ಸಂ: ಹಿಮ್ಸ್/ಗ್ರೂಪ್ 'ಡಿ'/17/2025–26, ದಿನಾಂಕ : 12/01/2026

**ಮರು ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ**

ವಿಷಯ : 2025–26 ನೇ ಸಾಲಿಗಾಗಿ ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾವೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ವೃಂದದ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಸಂಬಂಧ ಟೆಂಡರ್ ಕರೆಯುವ ಬಗ್ಗೆ.

ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾವೇರಿಯಲ್ಲಿ 2025–26 ನೇ ಸಾಲಿಗಾಗಿ ವಿವಿಧ ವೃಂದದ ಸಿಬ್ಬಂದಿಗಳ ಸೇವೆಯನ್ನು ಸರಬರಾಜು ಆದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಹೊರ ಸಂಪನ್ಮೂಲ ಏಜನ್ಸಿಯ ಮುಖಾಂತರ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act ) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ (https://kppp.karnataka.gov.in) Portal ಮೂಲಕ ಟೆಂಡರ ಕರೆಯಲಾಗಿದೆ.

(01) ಟೆಂಡರ್ ಪ್ರಕಟಣೆ ದಿನಾಂಕ : **12/01/2026** (02) ಟೆಂಡರ್‌ನ ಒಟ್ಟು ಅಂದಾಜು ಮೌಲ್ಯ ರೂ. **335.00** ಲಕ್ಷಗಳು (03) ಪ್ರಿ–ಬಿಡ್ ಮೀಟಿಂಗ್ ದಿನಾಂಕ : **19/01/2026** (04) ಆನ್‌ಲೈನ್‌ನಲ್ಲಿ ಟೆಂಡರ್ ಅನ್ನು KPP Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ : **26/01/2026** ಅಪರಾಹ್ನ 4:30 (05) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : **27/01/2026** ಅಪರಾಹ್ನ 4:30 (06) ತಾಂತ್ರಿಕ ಲಕೋಟೆಯ ದಾಖಲೆಗಳ ಪರಿಶೀಲನೆ ತಿಳಿಸಲಾಗುವುದು (07) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : ತಿಳಿಸಲಾಗುವುದು (08) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಶೇ 2.5% ರಷ್ಟು : ರೂ. **3,35,386.00/–** (09) E-Procurement Portal Processing Fees : https://kppp.karnataka.gov.in Portal ನಲ್ಲಿ ನಿಗದಿಪಡಿಸಿರುವಂತೆ (10) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ರಜಾ ದಿನಗಳನ್ನು ಹೊರತುಪಡಿಸಿ : ಡೀನ್ ಮತ್ತು ನಿರ್ದೇಶಕರು, ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ ದೂರವಾಣಿ ಸಂಖ್ಯೆ : **08375–200015**, ಮೋ : **8660990320**

ಸಹಿ/– ಡೀನ್ ಮತ್ತು ನಿರ್ದೇಶಕರು,
ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/627/2025–26

### ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

No: EE/ UTP /RNR/Madag Masur/LIS-Hangal/ Call-2/PB-4/ 2025-26/2435 Date: 07-01-2026.

**(ಕೆ.ಪಿ.ಪಿ ಪೋರ್ಟಲ್ ಮುಖಾಂತರ) ಟೆಂಡರ್ ಪ್ರಕಟಣೆ ಕರೆ–2**
**ದ್ವಿ – ಲಕೋಟೆ ಪದ್ಧತಿ**

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಮದಗ ಮಾಸೂರು ಕೆರೆಯ ಎಡದಂಡೆ ಮತ್ತು ಬಲದಂಡೆ ಕಾಲುವೆಗಳ ಆಧುನೀಕರಣ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ 4701 ಮದಗ ಮಾಸೂರು ಯೋಜನೆ ರಡಿ ಕಾಮಗಾರಿಯ ಟೆಂಡರ್‌ನ್ನು ಉಲ್ಲೇಖಿತ ಪತ್ರ (1) ರನ್ವಯ ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಯ ಟೆಂಡರ್ ಮೊತ್ತ ರೂ. 5031.68 ಲಕ್ಷಗಳು (GST ಸೇರಿ) ಇರುತ್ತದೆ ಮತ್ತು ಇ.ಎಂ.ಡಿ ಮೊತ್ತವು ರೂ:42.64 ಲಕ್ಷಗಳ ವರೆಗೆ ಇರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (ಹಿಂದಿರುಗಿಸಲಾಗದ್ದು) https://kppp.karnataka.gov.in ನಲ್ಲಿ ನೋಡಿಕೊಂಡು ತುಂಬತಕ್ಕದ್ದು. (1) ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ:09–01–2026 ರಿಂದ 21–01–2026 ರ ಸಂಜೆ 5.00 ರ ವರೆಗೆ (2) ಪ್ರೀ –ಬಿಡ್ ಮೀಟಿಂಗ್ ದಿನಾಂಕ:14–01–2026 ಸಂಜೆ 4.00 ಕ್ಕೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿ., 4ನೇ ಮಹಡಿ ಕಾಫೀ ಬೋರ್ಡ್ ಕಟ್ಟಡ, ನಂ.01 ಡಾ॥ ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು ರವರ ಕಛೇರಿಯಲ್ಲಿ. (3) ಟೆಂಡರ್ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 17–01–2026 ಸಂಜೆ 4.00 ರ ವರೆಗೆ (4) ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 21–01–2026 ರ ಸಂಜೆ 5.00 ರ ವರೆಗೆ (5) ದಿನಾಂಕ 22–01–2026 ರಂದು ಸಂಜೆ 5.30 ಗಂಟೆಗೆ ತಾಂತ್ರಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು. ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ. (08373) 297332 ಕ್ಕೆ ಸಂಪರ್ಕಿಸುವುದು. ಷರತ್ತು ಬದ್ಧ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.
1621

# ಹಾಸನ, ಚಿಕ್ಕಮಗಳೂರಿನಲ್ಲಿ ಮಳೆ: ಕೊಯ್ಲಿಗೆ ಅಡ್ಡಿ

ಪ್ರಜಾವಾಣಿ ವಾರ್ತೆ

**ಹಾಸನ:** ಜಿಲ್ಲೆಯ ಹಲವೆಡೆ ಮಂಗಳವಾರ ಸಂಜೆ ಮಳೆಯಾಗಿದ್ದು, ಭತ್ತ, ಕಾಫಿ ಕೊಯ್ಲಿಗೆ ಆತಂಕ ಎದುರಾಗಿದೆ.

ಜಿಲ್ಲಾ ಕೇಂದ್ರದಲ್ಲಿ ಸಂಜೆ 5.30ಕ್ಕೆ ಆರಂಭವಾದ ಜಿಟಿಜಿಟಿ ಮಳೆ 45 ನಿಮಿಷಕ್ಕೂ ಹೆಚ್ಚು ಹೊತ್ತು ಸುರಿಯಿತು. ಮಲೆನಾಡು ಭಾಗವಾದ ಬೇಲೂರು, ಸಕಲೇಶಪುರ, ಹೆತ್ತೂರು, ಆಲೂರಿನಲ್ಲೂ ಮಳೆಯಾಯಿತು.

‘ಭತ್ತದ ಜೊತೆಗೆ ಕಾಫಿ ಕೊಯ್ಲು ಕೂಡಾ ನಡೆದಿದ್ದು, ಮಳೆಯಿಂದ ತೊಂದರೆಯಾಗುತ್ತಿದೆ’ ಎಂಬುದು ಬೆಳೆಗಾರರ ಅಳಲು.

‘ಕೊಯ್ಲು ಮಾಡಿರುವ ಭತ್ತವೆಲ್ಲ ತೋಯ್ದಿರುವುದರಿಂದ ಕಾಳು ಬಿಡಿಸಲು ಸಮಸ್ಯೆಯಾಗುತ್ತಿದೆ. ಬಿತ್ತನೆಯಿಂದ ಕಟಾವಿನವರೆಗೂ ಮಳೆ ಕಾಡುತ್ತಿದೆ’ ಎಂದು ಹೆತ್ತೂರಿನ ರೈತರ ರಾಮಕೃಷ್ಣ ಹಾಗೂ ಆಲೂರು ತಾಲ್ಲೂಕಿನ ಕೆ.ಹೊಸಕೋಟೆಯ ದರ್ಶನ್ ಹೇಳಿದರು.

**ಬಾಳೆಹೊನ್ನೂರು– ಜೋರುಮಳೆ (ಚಿಕ್ಕಮಗಳೂರು):** ಜಿಲ್ಲೆಯ ಬಾಳೆಹೊನ್ನೂರು ಸುತ್ತಮುತ್ತ ಮಂಗಳವಾರ ಮಧ್ಯಾಹ್ನ ಒಂದು ಗಂಟೆಗೂ ಅಧಿಕ ಕಾಲ ಗುಡುಗು, ಸಿಡಿಲು ಸಹಿತ ಜೋರು ಮಳೆ ಸುರಿಯಿತು.

ತರೀಕೆರೆ ಸುತ್ತಮುತ್ತ ಹಾಗೂ ಕಳಸ ತಾಲ್ಲೂಕಿನಲ್ಲಿಯೂ ಮಳೆ ಸುರಿಯಿತು.

ಅಡಿಕೆ, ಕಾಫಿ, ಭತ್ತದ ಕೊಯ್ಲು ಆರಂಭಗೊಂಡಿದ್ದು ರೈತರು ಬಹುತೇಕ ಬೆಳೆಗಳನ್ನು ಒಣಗಲು ಅಂಗಳದಲ್ಲಿ ಹಾಕಿದ್ದರು. ದಿಢೀರ್ ಮಳೆಯಿಂದಾಗಿ ಫಸಲು ರಕ್ಷಿಸಲು ಪರದಾಡಿದರು.

**ಬೆಳಗಾವಿ ವಿವಿಧೆಡೆ ಮಳೆ:** ಬೆಳಗಾವಿ, ನಿಪ್ಪಾಣಿ ನಗರ ಸೇರಿ ತಾಲ್ಲೂಕಿನ ವಿವಿಧೆಡೆ ಮಂಗಳವಾರ ಒಂದು ತಾಸು ಸಾಧಾರಣ ಮಳೆ ಸುರಿಯಿತು. ಸಂಜೆ ಶೀತಗಾಳಿಯ ಜತೆಗೆ ಮಳೆಯಾಯಿತು.

ಬೆಳಗಾವಿಯಲ್ಲಿ ಮಂಗಳವಾರ ಸುರಿದ ಮಳೆಯಿಂದಾಗಿ ಸರ್ದಾರ್ಸ್ ಮೈದಾನದಲ್ಲಿ ನೀರು ಸಂಗ್ರಹಗೊಂಡಿತು ಪ್ರಜಾವಾಣಿ ಚಿತ್ರ

## ಕೊಡಗಿನ ಕೆಲವೆಡೆ ಮಳೆ

ಪ್ರಜಾವಾಣಿ ವಾರ್ತೆ

**ಮಡಿಕೇರಿ:** ದಕ್ಷಿಣ ಕೊಡಗಿನ ಕೆಲವೆಡೆ ಮಂಗಳವಾರ ರಾತ್ರಿ ವರ್ಷದ ಮೊದಲ ಮಳೆ ಸುರಿದಿದೆ. ಹುದಿಕೇರಿ, ಚೆಯ್ಯಂಡಾಣೆ, ಕುಟ್ಟ ಸೇರಿದಂತೆ ಹಲವೆಡೆ ಹಗುರ ಮಳೆಯಾಗಿದೆ.

ಕಾಫಿ ಬೆಳೆಗಾರರನ್ನು ಕಂಗಾಲಾಗಿಸಿದೆ. ಒಣಗಲು ಹಾಕಿದ್ದ ಕಾಫಿ ತೋಯ್ದು ಹೋಗಿದೆ. ಜಿಲ್ಲೆಯ ಕೆಲವು ಭಾಗಗಳಲ್ಲಿ ಗುಡುಗು, ಮಿಂಚು ವಾತಾವರಣ ಕಂಡು ಬಂದು, ಬೆಳೆಗಾರರನ್ನು ಆತಂಕಕ್ಕೆ ದೂಡಿದೆ.

# ‘ನರೇಗಾ’ಕ್ಕಾಗಿ ಹೋರಾಟ

## ‘ವಿಬಿ ಜಿ ರಾಮ್ ಜಿ’ ಕಾಯ್ದೆ ರದ್ದಾಗುವವರೆಗೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಯುಪಿಎ ಸರ್ಕಾರ ಜಾರಿಗೆ ತಂದಿದ್ದ ನರೇಗಾ ಕಾಯ್ದೆ ಮರು ಜಾರಿ ಆಗುವವರೆಗೆ ಹೋರಾಟ ಮುಂದುವರಿಸುವುದಾಗಿ ಪ್ರತಿಜ್ಞೆ ಮಾಡಿದ ರಾಜ್ಯ ಕಾಂಗ್ರೆಸ್ ನಾಯಕರು, ‘ನರೇಗಾ ಉಳಿಸಿ ಅಭಿಯಾನವನ್ನು ಜನಾಂದೋಲನವಾಗಿ ಪರಿವರ್ತಿಸುತ್ತೇವೆ’ ಎಂದು ಘೋಷಿಸಿದರು.

ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಕೆಪಿಸಿಸಿ ವತಿಯಿಂದ ಮಂಗಳವಾರ ನಡೆದ ‘ನರೇಗಾ ಬಚಾವೊ ಸಂಗ್ರಾಮ’ ಕಾರ್ಯಕ್ರಮದ ಪೂರ್ವಸಿದ್ಧತಾ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ವಿಬಿ ಜಿ ರಾಮ್ ಜಿ ಕಾಯ್ದೆ ರದ್ದಾಗಿ ನರೇಗಾ ಕಾಯ್ದೆ ಪುನರ್‌ಸ್ಥಾಪನೆ ಆಗುವವರೆಗೆ ಹೋರಾಟವನ್ನು ಮುಂದುವರಿಸಬೇಕು’ ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

‘ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೆ ನಡೆಯಲಿರುವ ಈ ಆಂದೋಲನ ಜನಾಂದೋಲನವಾಗಿ ಪರಿವರ್ತನೆ ಆಗಬೇಕು. ಉತ್ತರ ಭಾರತದಲ್ಲಿ ಕೃಷಿ ಕಾಯ್ದೆಗಳ ಬದಲಾವಣೆಗೆ ರೈತರು ಹೋರಾಡಿದಂತೆ ನಾವೂ ಹೋರಾಟ ಮಾಡಬೇಕು’ ಎಂದರು.

‘ನರೇಗಾ ಕಾಯ್ದೆ ರದ್ದು ಮಾಡಿರುವುದನ್ನು ಎಐಸಿಸಿ ಕಾರ್ಯಕಾರಿ ಸಮಿತಿ ಸಭೆ ಗಂಭೀರವಾಗಿ ಪರಿಗಣಿಸಿದೆ. ಕೇಂದ್ರ ಸರ್ಕಾರ ನರೇಗಾ ರದ್ದು ಮಾಡಿ, ವಿಬಿ ಜಿ ರಾಮ್ ಜಿ ಎಂಬ ಹೊಸ ಕಾಯ್ದೆಯನ್ನು ರೂಪಿಸಿದೆ. ಮಹಾತ್ಮ ಗಾಂಧಿ ಹೆಸರು ಎಂದರೆ ಬಿಜೆಪಿಯವರಿಗೆ ಅಲರ್ಜಿ’ ಎಂದು ಹೇಳಿದರು.

‘ಹಳೆ ಕಾಯ್ದೆ ಪ್ರಕಾರ ಕಾರ್ಮಿಕರು ಗ್ರಾಮೀಣ ಪ್ರದೇಶದಲ್ಲಿ 365 ದಿನ ಕೆಲಸ ಕೇಳಬಹುದಾಗಿತ್ತು. ತಮ್ಮ ಊರಿನಲ್ಲಿ, ಜಮೀನಿನಲ್ಲಿಯೇ ಕೆಲಸ ಮಾಡಬಹುದಾಗಿತ್ತು. ಮೋದಿ ಸರ್ಕಾರ ಅದನ್ನು ಬದಲಾಯಿಸಿ ಹೊಸ ಕಾಯ್ದೆ ಜಾರಿಗೆ ತಂದಿದೆ. ಹೊಸ ಕಾಯ್ದೆಯಲ್ಲಿರುವ ರಾಮ, ದಶರಥ ರಾಮ, ಸೀತಾ ರಾಮ ಅಥವಾ ಕೌಶಲ ರಾಮನಲ್ಲ. ಅದು ಮಹಾತ್ಮಾ ಗಾಂಧಿ ಕೊಂದ ನಾಥೂರಾಮ’ ಎಂದರು.

ಸಭೆಯಲ್ಲಿ ಎಐಸಿಸಿ ಕಾರ್ಯದರ್ಶಿಗಳಾದ ಗೋಪಿನಾಥ್ ಪಳನಿಯಪ್ಪನ್, ಮಯೂರ್ ಜೈಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ಸಚಿವರಾದ ಕೆ.ಜೆ. ಜಾರ್ಜ್, ಪ್ರಿಯಾಂಕ್ ಖರ್ಗೆ, ಕೆ.ಎಚ್. ಮುನಿಯಪ್ಪ, ಎಂ.ಸಿ. ಸುಧಾಕರ್, ರಾಮಲಿಂಗಾರೆಡ್ಡಿ, ಕೃಷ್ಣ ಬೈರೇಗೌಡ, ಎನ್. ಚಲುವರಾಯಸ್ವಾಮಿ, ಶಿವರಾಜ್ ತಂಗಡಗಿ, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಮತ್ತಿತರರು ಇದ್ದರು.

### ಕೈಜೋಡಿಸದಿದ್ದರೆ ಹುದ್ದೆಗೆ ಕುತ್ತು: ಡಿ.ಕೆ. ಶಿವಕುಮಾರ್

‘ನರೇಗಾ ಬಚಾವೊ ಹೋರಾಟದಲ್ಲಿ ಆಸಕ್ತಿ ತೋರಿಸದ ಪಕ್ಷದ ವೀಕ್ಷಕರು, ಪದಾಧಿಕಾರಿಗಳನ್ನು ಹುದ್ದೆಯಿಂದ ಕಿತ್ತು ಹಾಕಲಾಗುವುದು’ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದರು.

‘ಸಂಸದರು, ಶಾಸಕರು,ಪರಿಷತ್ ಸದಸ್ಯರು ಇಲ್ಲದ ಕ್ಷೇತ್ರಗಳಲ್ಲಿ ಹೋರಾಟಕ್ಕೆ ಬಲ ನೀಡಲು ವೀಕ್ಷಕರನ್ನು ನೇಮಿಸಲಾಗಿದೆ. ಎಐಸಿಸಿ ನಿರ್ದೇಶನ ನೀಡಿರುವ ಎಲ್ಲ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಮಾಡಲೇಬೇಕು. ಸೂಚನೆಯನ್ನು ಪಾಲಿಸದವರ ಬಗ್ಗೆ ವರದಿ ನೀಡುವಂತೆ ಎಐಸಿಸಿ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಲಾಗಿದೆ. ಪಕ್ಷದಲ್ಲಿ ಸ್ಥಾನಮಾನ ಸಿಗಬೇಕೆಂದರೆ ಈ ಅಭಿಯಾನವನ್ನು ಯಶಸ್ವಿಗೊಳಿಸಬೇಕು’ ಎಂದು ಪಕ್ಷದ ಪ್ರಮುಖರಿಗೆ ಸೂಚಿಸಿದರು.

‘ನರೇಗಾ ಉಳಿಸಿ ಹೋರಾಟದ ಭಾಗವಾಗಿ ನಡೆಯಲಿರುವ ಪಾದಯಾತ್ರೆಯ ನೇತೃತ್ವವನ್ನು ಸಚಿವರು, ಶಾಸಕರು, ಪಕ್ಷದ ನಾಯಕರು ವಹಿಸಬೇಕು. ಎಲ್ಲಿ ಶಾಸಕರಿಲ್ಲವೊ ಆ ಕ್ಷೇತ್ರಗಳಲ್ಲಿ ನಾನು ಪಾದಯಾತ್ರೆ ಮಾಡುತ್ತೇನೆ. ವಿಶೇಷವಾಗಿ ಶಿಕಾರಿಪುರದಲ್ಲಿ ನಡೆಯುವ ಪಾದಯಾತ್ರೆಗೆ ನಾನು ಹೋಗುತ್ತೇನೆ’ ಎಂದರು.

### ‘ಕೈ’ ಹೋರಾಟದ ಹಾದಿ

- ಬುಧವಾರ (ಜ.14) ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಎರಡು ದಿನಗಳ ವಿಶೇಷ ಅಧಿವೇಶನ ಕರೆಯುವ ಬಗ್ಗೆ ತೀರ್ಮಾನ
- ನರೇಗಾ ಮರು ಜಾರಿ ಮತ್ತು ಹೊಸ ಕಾಯ್ದೆಯ ಅನನುಕೂಲಗಳ ಕುರಿತು ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ
- ಜಿಲ್ಲೆಗಳಲ್ಲಿ ಉಸ್ತುವಾರಿ ಸಚಿವರಿಂದ, ತಾಲ್ಲೂಕು ಮಟ್ಟಗಳಲ್ಲಿ ಮುಖಂಡರಿಂದ ಮಾಧ್ಯಮಗೋಷ್ಠಿ
- ಇದೇ 26ರಿಂದ ಫೆ.7ರವರೆಗೆ ವಿಧಾನಸಭೆ ಕ್ಷೇತ್ರ ಮಟ್ಟದಲ್ಲಿ 5ರಿಂದ 10 ಕಿ.ಮೀ ಪಾದಯಾತ್ರೆ
- ಸ್ಥಳೀಯ ಮಟ್ಟದ ಕಾರ್ಯಕ್ರಮದಲ್ಲಿ ಎಲ್‌ಇಡಿ ಪರದೆಯಲ್ಲಿ ಸೋನಿಯಾ ಗಾಂಧಿಯ ಸಂದೇಶದ ಪ್ರಸಾರ
- ನರೇಗಾ ಮರು ಜಾರಿ ಆಗ್ರಹಿಸಿ ತಾಲ್ಲೂಕು ಕಚೇರಿಗೆ ಮನವಿ
- ಜಿಲ್ಲೆ, ರಾಜ್ಯಮಟ್ಟದಲ್ಲಿ ಬೃಹತ್ ಸಮಾವೇಶ

# ಸರ್ಕಾರದ ವಿರುದ್ಧ ಸರಣಿ ಹೋರಾಟ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಸರ್ಕಾರದ ವಿರುದ್ಧ ಇದೇ 17 ರಂದು ಬಳ್ಳಾರಿಯಲ್ಲಿ ಬೃಹತ್ ಹೋರಾಟ ಆಯೋಜಿಸಲಾಗಿದ್ದು, ಆ ಬಳಿಕ ಸರ್ಕಾರದ ವೈಫಲ್ಯಗಳ ವಿರುದ್ಧ ವಿವಿಧ ಜಿಲ್ಲೆಗಳಲ್ಲಿ ಸರಣಿ ಹೋರಾಟಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಸಂಸದರಾದ ಜಗದೀಶ ಶೆಟ್ಟರ್ ಹಾಗೂ ಗೋವಿಂದ ಕಾರಜೋಳ ಅವರ ಜತೆ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರೈತರಿಗೆ ವಿವಿಧ ಭರವಸೆಗಳನ್ನು ನೀಡಿ ಒಂದೂ ಈಡೇರಿಸದೇ ಸರ್ಕಾರ ವಂಚನೆ ಮಾಡಿದೆ. ಇದನ್ನು ಖಂಡಿಸಿ ಬಾಗಲಕೋಟೆಯಲ್ಲಿ ಹೋರಾಟ ನಡೆಸಲಿದ್ದೇವೆ’ ಎಂದು ಹೇಳಿದರು.

‘ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳಿಗೆ ಹಣ ಪಾವತಿ ಸಂಬಂಧ ಬೆಳಗಾವಿ ಅಧಿವೇಶನದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಸುಳ್ಳು ಮಾಹಿತಿ ನೀಡಿದ್ದರು. ಎರಡು ತಿಂಗಳ ಗೃಹಲಕ್ಷ್ಮಿ ಹಣ ಪಾವತಿ ಮಾಡದೇ ವಂಚಿಸಲಾಗಿದೆ. ಇದರ ಮೊತ್ತ ₹5,000 ಕೋಟಿ. ಈ ಹಣ ಎಲ್ಲಿ ಹೋಗಿದೆ ಎಂದು ಪ್ರಶ್ನಿಸಿದ ಅವರು, ಗೃಹಲಕ್ಷ್ಮಿ ಹಣದ ಪಾವತಿ ಮಾಡದೇ ಇರುವುದನ್ನು ಖಂಡಿಸಿ ಹುಬ್ಬಳ್ಳಿಯಲ್ಲಿ ಬೃಹತ್ ಪ್ರತಿಭಟನೆ ಆಯೋಜಿಸಲಿದ್ದೇವೆ’ ಎಂದು ಹೇಳಿದರು.

ರಾಜ್ಯದಲ್ಲಿ ಡ್ರಗ್ಸ್ ಹಾವಳಿ ತೀವ್ರವಾಗಿ ಏರಿಕೆಯಾಗಿದೆ. ಯುವಕರು ಇದಕ್ಕೆ ಬಲಿಯಾಗುತ್ತಿದ್ದಾರೆ. ಇದರ ವಿರುದ್ಧ ಮೈಸೂರಿನಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದರು.

**ದಲಿತ ಶಾಸಕಿ ಭಾಗೀರಥಿ ಮುರುಳ್ಯ ವಿರುದ್ಧ ‘ಎಕ್ಸ್’ನಲ್ಲಿ ಕಾಂಗ್ರೆಸ್ ಕಾರ್ಯಕರ್ತ ಶ್ರದ್ಧಾಂಜಲಿ ಸಂದೇಶ ಹಾಕಿದರೂ ಆತನ ವಿರುದ್ಧ ಪೊಲೀಸರು ಕ್ರಮ ತೆಗೆದುಕೊಂಡಿಲ್ಲ**

**ಬಿ.ವೈ.ವಿಜಯೇಂದ್ರ**

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಇದೇ 5ರಿಂದ 39 ಸಂಘಟನಾ ಜಿಲ್ಲೆಗಳ ಪಕ್ಷದ ಪ್ರಮುಖರ ಸರಣಿ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ವಿವಿಧ ಜಿಲ್ಲೆಗಳ ರಾಜಕೀಯ ಸ್ಥಿತಿಗತಿ, ಪಕ್ಷದ ಸಂಘಟನೆಯ ಪರಿಸ್ಥಿತಿ ಚರ್ಚಿಸಲಾಯಿತು. ಅಲ್ಲದೇ, ಮುಂಬರುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಗೆಲುವು ಸಾಧಿಸುವ ಕುರಿತು ಚರ್ಚಿಸಲಾಯಿತು ಎಂದು ಅವರು ಹೇಳಿದರು.

‘ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಮುಂದಿನ ದಿನಗಳಲ್ಲಿ ಗಮನಹರಿಸಲಿದ್ದೇವೆ. ಎಸ್‌ಐಆರ್ ಬಿಹಾರ ರಾಜ್ಯದ ಚುನಾವಣೆ ಮೇಲೆ ಪರಿಣಾಮ ಬೀರಿದೆ. ಅಲ್ಲಿನ ಮತದಾರರ ಪಟ್ಟಿಯಲ್ಲಿದ್ದ 65 ಲಕ್ಷ ನಕಲಿ ಮತದಾರರ ಹೆಸರನ್ನು ಚುನಾವಣಾ ಆಯೋಗ ಕೈಬಿಟ್ಟಿದೆ. ಉತ್ತರಪ್ರದೇಶದಲ್ಲಿ 2.5 ಕೋಟಿಗೂ ಹೆಚ್ಚು ನಕಲಿ ಮತದಾರರನ್ನು ಕೈಬಿಟ್ಟಿದೆ’ ಎಂದು ವಿಜಯೇಂದ್ರ ತಿಳಿಸಿದರು.

### ‘ವಿಬಿ ಜಿ ರಾಮ್ ಜಿ ವಿರುದ್ಧ ಷಡ್ಯಂತ್ರ’

ಗ್ರಾಮೀಣ ಜನರ ಸ್ನೇಹಿ ‘ವಿಬಿ ಜಿ ರಾಮ್ ಜಿ’ ಯೋಜನೆ ಕುರಿತು ಅಪಪ್ರಚಾರ ನಡೆಸಲು ಕಾಂಗ್ರೆಸ್ ಷಡ್ಯಂತ್ರ ನಡೆಸಿದೆ ಎಂದು ಬಿ.ವೈ.ವಿಜಯೇಂದ್ರ ಟೀಕಿಸಿದರು. ರಾಜ್ಯದ ಜನತೆ ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದಾರೆ. ಈ ವಿಚಾರ ಗೊತ್ತಾಗುತ್ತಿದ್ದಂತೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಮುಂದೂಡಿ ನರೇಗಾ ವಿಷಯವನ್ನು ಕೈಗೆತ್ತಿಕೊಂಡಿದೆ. ರಾಹುಲ್ ಗಾಂಧಿ, ಸಿದ್ದರಾಮಯ್ಯ ಅಪಪ್ರಚಾರದ ಷಡ್ಯಂತ್ರ ರೂಪಿಸಿದ್ದಾರೆ ಎಂದರು.


## ಪ್ರಥಮ ವರ್ಷದ ಪುಣ್ಯಸ್ಮರಣೆ

**ಪಿ. ನಾರಾಯಣಸ್ವಾಮಿ ಯವರು**

ನಿಧನ: 14.01.2025

ನೀವು ನಮ್ಮೆಲ್ಲರನ್ನು ಅಗಲಿ ಒಂದು ವರ್ಷ ಕಳೆದರೂ ನಮ್ಮಿಂದ ನಿಮ್ಮನ್ನು ಮರೆಯಲಾಗುತ್ತಿಲ್ಲ. ನಮಗೆ ತೋರಿದ ಪ್ರೀತಿ, ವಾತ್ಸಲ್ಯ ಮತ್ತು ಮಾರ್ಗದರ್ಶನ ನಮಗೆ ಸದಾ ಪ್ರೇರಣೀಯ. ನೀವು ನಮ್ಮ ಹೃದಯಗಳಲ್ಲಿ ಮತ್ತು ಕಾರ್ಯಗಳಲ್ಲಿ ಸದಾ ಸ್ಮರಣೀಯರಾಗಿದ್ದೀರಿ.

ಇಂತಿ:
ವಿ. ಲತಾ ಮತ್ತು ಕುಟುಂಬವರ್ಗ

# ಲ್ಯಾಂಡ್ ಅಗ್ರಿಗೇಟರ್ ಪೋರ್ಟಲ್ ಆರಂಭ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇ.ವಿ ಚಾರ್ಜಿಂಗ್ ಹಾಗೂ ಬ್ಯಾಟರಿ ವಿನಿಮಯ ಕೇಂದ್ರಗಳ ಸ್ಥಾಪನೆ, ತ್ವರಿತ ವಿದ್ಯುತ್ ಸಂಪರ್ಕಕ್ಕೆ ಏಕ ಗವಾಕ್ಷಿ ವ್ಯವಸ್ಥೆಯನ್ನು ಹೊಂದಿರುವ 'ಲ್ಯಾಂಡ್ ಅಗ್ರಿಗೇಟರ್ ಪೋರ್ಟಲ್' ಅನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಆರಂಭಿಸಿದೆ.

ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ಈಚೆಗೆ ಪೋರ್ಟಲ್‌ಗೆ ಚಾಲನೆ ನೀಡಿದ್ದು ಭೂಮಾಲೀಕರು, ಸರ್ಕಾರಿ ಇಲಾಖೆಗಳು, ಖಾಸಗಿ ಸಂಸ್ಥೆಗಳು ಇ.ವಿ ಚಾರ್ಜಿಂಗ್ ಹಾಗೂ ಬ್ಯಾಟರಿ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಲು ಹಾಗೂ ಬೆಸ್ಕಾಂನಿಂದ ತ್ವರಿತವಾಗಿ ವಿದ್ಯುತ್ ಸಂಪರ್ಕ ಪಡೆಯಲು ಪೋರ್ಟಲ್ ಮೂಲಕ ಅವಕಾಶ ಕಲ್ಪಿಸಲಾಗಿದೆ.

ನಗರ ಹಾಗೂ ಹೆದ್ದಾರಿಗಳಲ್ಲಿ ಇ.ವಿ ಮೂಲಸೌಕರ್ಯಗಳನ್ನು ತ್ವರಿತವಾಗಿ ಸ್ಥಾಪಿಸಲು ಭೂ ಮಾಲೀಕರು ಮತ್ತು ಚಾರ್ಜಿಂಗ್ ಆಪರೇಟರ್‌ಗಳಿಗೆ ಈ ಪೋರ್ಟಲ್ ನೆರವಾಗಲಿದೆ. ಇ.ವಿ ಹಬ್‌ಗಳ ನಿರ್ಮಾಣವನ್ನು ಉತ್ತೇಜಿಸುವ ಸಲುವಾಗಿ ರಾಷ್ಟ್ರೀಯ ಹೆದ್ದಾರಿಯ ಇ.ವಿ ವಿಭಾಗ ಬೆಸ್ಕಾಂ ಜೊತೆ ಕೈಜೋಡಿಸಿದೆ.

ಈ ಪೋರ್ಟಲ್ ಮೂಲಕ ಭೂ ಮಾಲೀಕರು ತಮ್ಮ ಭೂಮಿಯನ್ನು ಇ.ವಿ ಚಾರ್ಜಿಂಗ್ ಹಾಗೂ ಬ್ಯಾಟರಿ ವಿನಿಮಯ ಕೇಂದ್ರಗಳ ಸ್ಥಾಪನೆಗೆ ಆದಾಯ ಹಂಚಿಕೆ ಆಧಾರದ ಮೇಲೆ ಬಾಡಿಗೆಗೆ ಅಥವಾ ಭೋಗ್ಯಕ್ಕೆ ನೀಡಲು ಅವಕಾಶ ಇದೆ.

### ಇ.ವಿ. ಚಾರ್ಜಿಂಗ್, ಬ್ಯಾಟರಿ ವಿನಿಮಯ ಕೇಂದ್ರಗಳ ಸ್ಥಾಪನೆಗೆ ಏಕ ಗವಾಕ್ಷಿ ವ್ಯವಸ್ಥೆ

### ಮುಖ್ಯಾಂಶಗಳು

- ಬೆಸ್ಕಾಂನಿಂದ ಉಪಕ್ರಮ
- ತ್ವರಿತವಾಗಿ ವಿದ್ಯುತ್ ಸಂಪರ್ಕ ಪಡೆಯಲು ಅವಕಾಶ

ಅದೇ ರೀತಿ ವಿತರಕರು ಮತ್ತು ಚಾರ್ಜ್ ಪಾಯಿಂಟ್ ಆಪರೇಟರ್‌ಗಳು ಇ.ವಿ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆ, ಕಾರ್ಯಾಚರಣೆ ಹಾಗೂ ನಿರ್ವಹಣೆ ವಹಿಸಿಕೊಳ್ಳಬಹುದು.

ಸಾರ್ವಜನಿಕ–ಖಾಸಗಿ ಸಹಭಾಗಿತ್ವವನ್ನು ಬಲಪಡಿಸಿ, ಸ್ಥಳೀಯವಾಗಿ ಆರ್ಥಿಕ ಅವಕಾಶಗಳನ್ನು ಸೃಷ್ಟಿಸುತ್ತದೆ. ಇ.ವಿ ಚಾರ್ಜಿಂಗ್ ಮತ್ತು ಬ್ಯಾಟರಿ ವಿನಿಮಯ ಕೇಂದ್ರಗಳ ಸ್ಥಾಪನೆಯನ್ನು ಸುಲಭಗೊಳಿಸಲಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ ತಿಳಿಸಿದ್ದಾರೆ.

### ಪ್ರಮುಖ ಉದ್ದೇಶಗಳು

- ಇ.ವಿ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಬ್ಯಾಟರಿ ವಿನಿಮಯ ಕೇಂದ್ರಗಳ ಸ್ಥಾಪನೆಗೆ ಭೂಮಿಯನ್ನು ಬಾಡಿಗೆಗೆ ನೀಡಲು ಉತ್ತೇಜನ
- ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಹಾಗೂ ಅನುಮೋದನೆ ಪ್ರಕ್ರಿಯೆಯ ಪ್ರಗತಿ ಪರಿಶೀಲನೆ
- ಭೂ ಮಾಲೀಕರು ಸುಲಭವಾಗಿ ನೋಂದಣಿ ಮಾಡಿಕೊಂಡು ತಮ್ಮ ಭೂಮಿಯನ್ನು ಇ.ವಿ ಚಾರ್ಜಿಂಗ್ ಮತ್ತು ಬ್ಯಾಟರಿ ವಿನಿಮಯ ಕೇಂದ್ರಗಳಿಗೆ ನೀಡಲು ವ್ಯವಸ್ಥೆ

# ಸಂಕ್ರಾಂತಿ ಖರೀದಿ ಸಂಭ್ರಮ

## ಎಲ್ಲೆಲ್ಲೂ ಕಬ್ಬಿನ ರಾಶಿ ಹೂವಿನ ದರ ಏರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಂಕ್ರಾಂತಿ ಹಬ್ಬದ ಆಚರಣೆಗೆ ನಗರ ಸಜ್ಜಾಗಿದೆ. ಇಲ್ಲಿನ ವಿವಿಧ ಮಾರುಕಟ್ಟೆಗಳಲ್ಲಿ ಸಂಕ್ರಾಂತಿ ಹಬ್ಬಕ್ಕಾಗಿ ಕಬ್ಬು, ಗೆಣಸು ಹಾಗೂ ಅವರೆಕಾಯಿ ಖರೀದಿ ಜೋರಾಗಿದೆ.

ಸಂಕ್ರಾಂತಿ ಹಬ್ಬ ಗುರುವಾರವಿದ್ದು, ನಗರದ ಕೆ.ಆರ್.ಮಾರುಕಟ್ಟೆಯಲ್ಲಿ ರಾಶಿ, ರಾಶಿ ಕಬ್ಬಿನ ಜಲ್ಲೆ ಮಾರಾಟಕ್ಕಾಗಿ ಲಭ್ಯವಿದೆ. ಕಬ್ಬಿನ ಜಲ್ಲೆ ತಲಾ ₹60ರಂತೆ ಮಾರಾಟ ಆಗುತ್ತಿದೆ. ನಗರದ ಪ್ರಮುಖ ಬಡಾವಣೆಗಳಲ್ಲೂ ಕಬ್ಬು, ಕಡಲೆಕಾಯಿ, ಅವರೆಕಾಯಿ, ಗೆಣಸು ರಾಶಿ ಹಾಕಲಾಗಿದ್ದು, ಮಾರುಕಟ್ಟೆ ಕಳೆಗಟ್ಟಿದೆ.

ಕಡಲೆಕಾಯಿ ಮತ್ತಷ್ಟು ತುಟ್ಟಿಯಾಗಿದೆ. ಗುಣಮಟ್ಟದ ಕಡಲೆಕಾಯಿ ಕೆ.ಜಿ.ಗೆ ₹80 ಮತ್ತು ₹120ರಂತೆ ಮಾರಾಟವಾಗುತ್ತಿದೆ. ಗಾಂಧಿ ಬಜಾರ್, ಮಲ್ಲೇಶ್ವರ, ಜಯನಗರ, ಯಶವಂತಪುರ, ರಾಜಾಜಿನಗರ, ಮಡಿವಾಳ, ಚಾಮರಾಜಪೇಟೆಯ ರಸ್ತೆ ಬದಿಯಲ್ಲಿ ಕಿರು ಮಾರುಕಟ್ಟೆಗಳು ಸೃಷ್ಟಿ ಆಗಿವೆ. ಎಳ್ಳು-ಬೆಲ್ಲ ಮಿಶ್ರಿತ ಪೊಟ್ಟಣಗಳು, ಸಕ್ಕರೆ ಹಾಗೂ ಬೆಲ್ಲದ ಅಚ್ಚುಗಳನ್ನು ಮಾರಾಟ ಮಾಡಲಾಗುತ್ತಿದೆ.

ಎಳ್ಳು ಬೆಲ್ಲ ಮಿಶ್ರಿತ ಪೊಟ್ಟಣಗಳು ವಿವಿಧ ಗಾತ್ರಗಳಲ್ಲಿ ಲಭ್ಯ ಇವೆ. ಸಣ್ಣ ಪೊಟ್ಟಣದ ದರ ₹50. ಮಳಿಗೆಗಳಲ್ಲಿ ಒಂದು ಕೆ.ಜಿ.ಯ ಎಳ್ಳುಬೆಲ್ಲ ಮಿಶ್ರಿತ ಪೊಟ್ಟಣದ ದರ ₹320ರಿಂದ ₹350 ಇದೆ. ಅರ್ಧ ಕೆ.ಜಿ ಸಕ್ಕರೆ ಅಚ್ಚು ₹150ರಂತೆ ಮಾರಾಟವಾಗುತ್ತಿದೆ.

'ಸಂಕ್ರಾಂತಿ ಹಬ್ಬಕ್ಕೆ ಹೂವಿನ ದರ ಏರಿಕೆಯಾಗಿದೆ. ಒಂದು ಕೆ.ಜಿ. ಕನಕಾಂಬರ ₹600, ಮಲ್ಲಿಗೆ ₹1,800, ಚೆಂಡು ₹60, ಸೇವಂತಿಗೆ ₹150, ಗುಲಾಬಿ ₹150 ಮತ್ತು ಸುಗಂಧ ರಾಜ ₹80 ರಂತೆ ಮಾರಾಟವಾಗುತ್ತಿವೆ' ಎಂದು ಕೆ.ಆರ್.ಮಾರುಕಟ್ಟೆಯ ಹೂವಿನ ವರ್ತಕ ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

ಸಂಕ್ರಾಂತಿ ಹಬ್ಬದ ಅಂಗವಾಗಿ ಮಾರಾಟಕ್ಕೆ ತಂದ ಕಬ್ಬನ್ನು ಕೆ.ಆರ್ ಮಾರುಕಟ್ಟೆಯಲ್ಲಿ ಕಾರ್ಮಿಕರು ಲಾರಿಯಿಂದ ಇಳಿಸಿದರು –ಚಿತ್ರ: ರಂಜು ಪಿ.

| ಸಂಕ್ರಾಂತಿ ವಿಶೇಷ | |
|---|---|
| ಬಾಳೆಕಂಬ ಜೋಡಿಗೆ | 100 |
| ಮಾವಿನ ತೋರಣ | 20 |
| ಕಬ್ಬು ಜೋಡಿಗೆ | 120 |

ಮಲ್ಲೇಶ್ವರದಲ್ಲಿ ಮಹಿಳೆಯರು ಎಳ್ಳು, ಬೆಲ್ಲ, ಸಕ್ಕರೆ ಅಚ್ಚುಗಳನ್ನು ಖರೀದಿಸಿದರು –ಚಿತ್ರ: ಬಿ.ಕೆ.ಜನಾರ್ದನ್

**ದರ ಪ್ರತಿ ಕೆಜಿಗೆ (₹ಗಳಲ್ಲಿ)**

| | ಕಳೆದ ವಾರ | ಈ ವಾರ |
|---|---|---|
| ಮಲ್ಲಿಗೆ | 600 | 1,800 |
| ಕನಕಾಂಬರ | 400 | 600 |
| ಗುಲಾಬಿ | 100 | 150 |
| ಸೇವಂತಿಗೆ | 80 | 100 |
| ಸುಗಂಧರಾಜ | 70 | 120 |
| **ಹಣ್ಣುಗಳ ದರ ಪ್ರತಿ ಕೆ.ಜಿಗೆ** | | |
| ದ್ರಾಕ್ಷಿ | 150 | 200 |
| ಸೇಬು | 120 | 180 |
| ದಾಳಿಂಬೆ | 160 | 200 |
| ಏಲಕ್ಕಿ ಬಾಳೆ | 70 | 80 |

# ಜನವರಿ 29ರಿಂದ ವಿವೇಕ ದೀಪ್ತಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವೇದಾಂತ ಭಾರತಿ ಸಂಸ್ಥೆ ನಗರದ ಅರಮನೆ ಮೈದಾನದಲ್ಲಿ ಜ.29ರಿಂದ ನಾಲ್ಕು ದಿನ ರಾಷ್ಟ್ರ ಮಟ್ಟದ ವಿವೇಕ ದೀಪ್ತಿ ಕಾರ್ಯಕ್ರಮವನ್ನು ಆಯೋಜಿಸಿದೆ.

ಭಾರತದ ಜ್ಞಾನ ಪರಂಪರೆಯ ಆಧಾರದ ಮೇಲೆ ಅನುಭವಾತ್ಮಕ ಕಲಿಕೆ ಹಾಗೂ ಸಮೂಹ ಚಿಂತನೆಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಲೆಂದು ಈ ಕಾರ್ಯಕ್ರಮ ರೂಪಿಸಲಾಗಿದೆ. ಮೊದಲನೇ ದಿನ ಆದಿ ಶಂಕರಾಚಾರ್ಯರು ರಚಿಸಿದ ಶ್ರೀ ದಕ್ಷಿಣಾಮೂರ್ತಿ ಅಷ್ಟಕದ ತತ್ತ್ವೋಪದೇಶಗಳನ್ನು ಆಧರಿಸಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ದಕ್ಷಿಣಾಸ್ಯ ದರ್ಶಿನಿ ಪ್ರದರ್ಶನ ಹಾಗೂ ಮೂರನೇ ದಿನ ದಕ್ಷಿಣಾಮೂರ್ತಿ ಅಷ್ಟಕ ಸ್ತೋತ್ರ ಮಹಾಸಮರ್ಪಣೆ ಪ್ರಮುಖ ಆಕರ್ಷಣೆಗಳಾಗಿವೆ.

ಶೃಂಗೇರಿ ಶಾರದಾ ಪೀಠದ ಪೀಠಾಧಿಪತಿ ಭಾರತಿ ತೀರ್ಥ ಸ್ವಾಮೀಜಿ ಹಾಗೂ ಉತ್ತರಾಧಿಕಾರಿ ವಿಧುಶೇಖರ ಭಾರತಿ ಸ್ವಾಮೀಜಿ ಅವರ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಲಿದೆ. ಯಡತೊರೆ ಮಠದ ಶಂಕರ ಭಾರತಿ ಸ್ವಾಮೀಜಿ ಹಾಗೂ ಅವರ ಉತ್ತರಾಧಿಕಾರಿ ಬ್ರಹ್ಮಾನಂದ ಭಾರತಿ ಸ್ವಾಮೀಜಿ ಅವರು ಭಾಗವಹಿಸಲಿದ್ದಾರೆ.

## ಸುದ್ದಿ 2 ನಿಮಿಷ

### ಪುಸ್ತಕ ಖರೀದಿ: ₹25 ಕೋಟಿಗೆ ಮನವಿ

**ಬೆಂಗಳೂರು:** 'ಏಕಗವಾಕ್ಷಿ ಯೋಜನೆಯಡಿ ಕನ್ನಡ ಪುಸ್ತಕಗಳ ಖರೀದಿಗೆ ಮುಂಬರುವ ಬಜೆಟ್‌ನಲ್ಲಿ ₹25 ಕೋಟಿ ಅನುದಾನ ಮೀಸಲಿಡಬೇಕು' ಎಂದು ಕರ್ನಾಟಕ ಲೇಖಕ-ಪ್ರಕಾಶಕರ ಮತ್ತು ಮುದ್ರಕರ ಒಕ್ಕೂಟವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಗ್ರಹಿಸಿದೆ.

'ತಮ್ಮ ಸರ್ಕಾರ ಕಳೆದ ಬಜೆಟ್‌ನಲ್ಲಿ ₹ 10 ಕೋಟಿ ಅನುದಾನವನ್ನು ಕನ್ನಡ ಪುಸ್ತಕಗಳ ಖರೀದಿಗೆ ಮೀಸಲಿಟ್ಟಿತ್ತು. ಈಗ ಕನ್ನಡ ಪುಸ್ತಕೋದ್ಯಮವು ಹಲವು ಗಂಭೀರ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಕಚ್ಚಾ ವಸ್ತುಗಳ ಬೆಲೆ ಏರಿಕೆ, ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೊದಲಾದ ಅಡೆತಡೆಗಳಿಂದ ಪುಸ್ತಕೋದ್ಯಮದ ಮೇಲೆ ಹೆಚ್ಚಿನ ಒತ್ತಡ ಉಂಟಾಗಿದೆ. ಇಂತಹ ಪರಿಸ್ಥಿತಿಯಲ್ಲಿಯೂ ಕನ್ನಡ ಸಾಹಿತ್ಯ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ. ಆದರೆ, ಸರ್ಕಾರದ ಕೆಲವು ನೀತಿ ನಿರ್ಧಾರಗಳ ಕಾರಣದಿಂದ ಪುಸ್ತಕಗಳ ಖರೀದಿ ಹಾಗೂ ವಿತರಣೆ ಪ್ರಕ್ರಿಯೆಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ಆದ್ದರಿಂದ ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕು' ಎಂದು ಪತ್ರದಲ್ಲಿ ಒತ್ತಾಯಿಸಿದೆ.

### ಜೇನು ಸಾಕಾಣಿಕೆ: ಗೀತಂ ವಿ.ವಿ ಬೆಂಬಲ

**ಬೆಂಗಳೂರು:** ಗೀತಂ ಡೀಮ್ಡ್ ಟುಬಿ ವಿಶ್ವವಿದ್ಯಾಲಯವು ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಹಯೋಗದಲ್ಲಿ ಸಮಾನತೆ, ಸಬಲೀಕರಣ, ಅಭಿವೃದ್ಧಿಗಾಗಿ ವಿಜ್ಞಾನ ಯೋಜನೆಯಡಿ (ಸೀಡ್) ಜೇನುಕುರುಬ ಸಮುದಾಯವರಿಗೆ ಜೇನು ಪೆಟ್ಟಿಗೆ, ಉಪಕರಣಗಳನ್ನು ವಿತರಣೆ ಮಾಡಿದೆ.

ಮೈಸೂರು ಜಿಲ್ಲೆ ಎಚ್.ಡಿ.ಕೋಟೆಯಲ್ಲಿ ನಡೆದ ಸಮಾರಂಭದಲ್ಲಿ ಜೇನು ಸಾಕಾಣಿಕೆ ತರಬೇತಿ ಹಾಗೂ ತಂತ್ರಜ್ಞಾನದ ನೆರವು ಪಡೆದ ಫಲಾನುಭವಿಗಳಿಗೆ 500 ಪೆಟ್ಟಿಗೆ, ಉಪಕರಣಗಳನ್ನು ನೀಡಲಾಯಿತು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜೇನು ಕೃಷಿ ತಜ್ಞ ಕೆ.ಟಿ. ವಿಜಯಕುಮಾರ್ ಹಾಗೂ ಅವರ ತಂಡದವರು ಜೇನು ಗೂಡು ನಿರ್ವಹಣೆ, ರೋಗ ನಿಯಂತ್ರಣ, ಜೇನು ಸಂಸ್ಕರಣೆ ಹಾಗೂ ಮಾರುಕಟ್ಟೆ ತಂತ್ರಗಳ ಕುರಿತು ಪ್ರಾಯೋಗಿಕವಾಗಿ ಮಾಹಿತಿ ನೀಡಿದರು.

ಇದೇ ವೇಳೆ ಜೇನು ಉತ್ಪನ್ನಗಳ ಮೌಲ್ಯವರ್ಧನೆಗೆ ಅಗತ್ಯ ಸೌಲಭ್ಯಗಳೊಂದಿಗೆ 2 ಜೇನು ಸಂಸ್ಕರಣಾ ಕೇಂದ್ರಗಳನ್ನು ಸ್ಥಾಪಿಸಲಾಯಿತು.

ಗೀತಂ ವಿ.ವಿಯ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರಾಧ್ಯಾಪಕಿ ಐ.ಜೀನಾ ಜಾಕೋಬ್, ಸಹ ಸಂಶೋಧಕರಾದ ಕೆ.ಗೀತಾ, ಟಿ.ಪ್ರಸನ್ನ ವೆಂಕಟೇಶನ್, ಎ.ವಿಶ್ವಭಾರತಿ, ಸುಜಿತ್ ಬಸಕ್, ಡಿ.ನಿರ್ಮಲಾದೇವಿ, ಯೋಜನೆ ಮಾರ್ಗದರ್ಶಕರಾದ ವಂಶೀಧರ್ ಯಂಡಪಲ್ಲಿ, ಸಂಶೋಧನಾ ಸಮಿತಿ ಅಧ್ಯಕ್ಷ ಕೆ.ಜಿ. ಮೋಹನ್ ಉಪಸ್ಥಿತರಿದ್ದರು.


ಪ್ರಜಾವಾಣಿ

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## JOB OPPORTUNITIES

### Marketing & Sales

**TELECALLERS (FEMALE)** BUSINESS EXECUTIVES (MALE) Graduates with English Communication, Computer Knowledge, Basaveswarnagar Media Office: 9845411113

**WANTED SALES** Managers (Male & Female), Sales Executives and Telecallers. Contact 8867627879

### Multiple Vacancy

**A LEADING** Integrated Service Provider with more than Two Decade of market presence is looking for following personnels: (1) FACILITY MANAGER: A well Experience Candidate is Required to work in an Establishment Located at Kasturba Road, Bangalore. (2) BUSINESS DEVELOPMENT EXECUTIVES: A well Experienced Candidate in Facility Management Services to work in corporate office at BTM Layout. (3) BUSINESS DEVELOPMENT EXECUTIVES: A well Experience Candidate in Physical Security Industries to work in corporate office at BTM Layout. (4) FIELD OFFICERS: A well Experience Candidate in Physical Security Industries to work in Bangalore South, East & West Regions Candidates should have valid Driving Licenses with two-wheeler. ESI, PF & Conveyance apart from decent take home salary. Contact or forward your CV to: 9740033923 8147002652 9900596738 or info@networkda.com

### Teachers / Professors

**JOB OPPORTUNITIES FOR TEACHERS / LECTURERS, ADMINISTRATIVE STAFF, COMPUTER TECHNICIANS, ELECTRICIANS, SCHOOL BUS DRIVERS AND MECHANICS.**
**The Archdiocesan Board of Education (ABE), Bengaluru,**
**REQUIRES**
Teaching Staff for LKG to Degree Classes, and Clerks / Accountants for its ICSE and State Board Institutions. Interested Candidates should submit / send their Applications to
**The ABE Office at Room No.112, Paalanaa Bhavana, Archdiocesan Pastoral Centre, No. 5, Nandidurga Road, Jayamahal Extension, Benson Town P.O, Bengaluru - 560 046 on or before 30.01.2026**
(During Office Hours only).
**From 10.00 a.m. and 4.30 p.m. on Weekdays; and on Saturdays from 10.00 a.m. to 12.30 p.m.**
**For more details, contact :**
Phone : 080-23333050
Mobile : 96117 53050 / 96117 59050
Email : abeoffice26@gmail.com

**RBANM's Educational Charities**
CONJUCTIS VIRIBUS
ESTABLISHED 1873

We are looking for qualified, passionate, and committed educators who can take forward the vision of our founder which is to 'promote the creation of a more equitable and just society through quality education'. We want educators who can help us to 'provide an all-round holistic education to young people that enables them to realise their full potential and contribute to societal well-being.'

| Category | Subject/ Position | Primary & Middle school (Grade 1 to 7) | High school (Grade 8 to 10) | No. of Posts |
|---|---|---|---|---|
| Teaching Staff | English | 3 | 2 | 5 |
| | Hindi | 3 | 1 | 4 |
| | EVS/Science | 3 | 2 | 5 |
| | Mathematics | 1 | 2 | 3 |
| | Physical Education (PE) Teachers | 2 | - | 2 |
| | Kannada | 1 | - | 1 |
| | Social Science | 2 | - | 2 |
| | Remedial Teacher | 2 | - | 2 |

| Category | Subject / Position | No. of Posts |
|---|---|---|
| Non-Teaching Staff | Office Administrative Assistants | 3 |
| | Counsellors | 2 |

**Eligibility:** Candidates should possess relevant qualifications, subject expertise, and a strong commitment to student-centred learning
**We offer:**
- A value-driven work environment
- Opportunities for professional growth
- A supportive and collaborative academic culture

Interested candidates may apply with their updated resume.
Contact : +91 63648 93967.
Email ID: office@rbanmscharities.in
Location: RBANM's Educational Charities # 24, GangadharaChettyRoad Sivan Chetty Gardens Bengaluru – 560042

**Sacred Heart Girls' High School**
Museum Road, Bangalore-560025
Ph: 080-41278742, Mob: 8970711094
**Teachers Wanted for ICSE & ISC**
Post Graduate, Graduate, Trained and experienced TEACHERS for the following Subjects.
English, Chemistry, History & Civics, Computer Science, Robotics & A.I., Librarian.
Send your resumes to the e-mail ID: office@shghs.edu.in on or before 27-01-2026

**THE REGENCY** Public School (ICSE) Vidyaranyapura, Bangalore-97 is HIRING TEACHERS for English, Social Studies, Mathematics, Computer Science. Qualification- Graduation/ Master's degree in the subject with B.Ed. Good communication skill with experience required Send Resume to faculty22recruit@gmail.com or Call-080-29533770

**ST. JOSEPH'S COLLEGE OF LAW**
18, Residency Road, Bengaluru-560 025.
Mobile: 94815 45478
Tel.: 080-2222 3352
Website: www.sjcl.edu.in
**WANTED**
Full Time Teaching Faculty in Law, with Ph.D preferred
Apply Online @ career.sjcl.edu.in before 18-01-2026

**RAJYA VOKKALIGARA SANGHA**
**KEMPEGOWDA INSTITUTE OF MEDICAL SCIENCES AND RESEARCH CENTRE**
RVS/ADMN/1726/2025-26 Date:13.01.2026
Applications are invited for vacant post in **Kempegowda Institute of Medical Sciences and Hospital,** Bangalore -560004.

| Sl. No. | Designation | Vacant Posts | Eligibility Criteria |
|---|---|---|---|
| 1 | Medical Superintendent | 1 | a. MD/MS Clinical department b. As per NMC guidelines c. 10 years teaching experience d. Minimum 5 yrs teaching experience as Professor |
| 2 | Administrative Medical officer | 1 | a. MBBS, MD/MS b. Hospital Administrative experience c. Ex- defence first priority |
| | **Department** | **Assistant Professor** | **Reqd Senior Residents** |
| 3 | Anatomy | - | 4 |
| 4 | Physiology | 1 | 4 |
| 5 | Biochemistry | 3 | 3 |
| 6 | Pharmacology | - | 2 |
| 7 | Microbiology | - | 1 |
| 8 | Community Medicine | - | 1 |
| 9 | Forensic Medicine | 1 | 4 |
| 10 | General Medicine | 4 | 1 |
| 11 | General Surgery | 4 | 0 |
| 12 | OBG | 1 | 0 |
| 13 | Emergency Medicine & ICU | 2 | 6 MD/DNB in Emergency Medicine / Medicine / Anaesthesia / Pulmonology / General Surgery |
| | **Designation** | **No of Posts** | **Qualification** |
| 14 | Speech Therapist (ENT) | 1 | B Sc / MSc Speech Pathology |
| 15 | Echo Cardiology Technician | 2 | B Sc cardiac technologist with 2 years exprerience / M Sc |

Note : Candidates should be eligible as per NMC guidelines, required certificates should be attached compulsorily

**FOR SUPERSPECIALITY DEPARTMENT**

| Sl. No. | Department | No of Posts | Qualification |
|---|---|---|---|
| 1 | Medical Gastroentrology | 1 | DM Gastroentrology |
| 2 | Medical Oncologist | 1 | DM/DnB in Medical Oncology |
| 3 | Cardiology | 2 | DM Cardiology |
| 4 | Neurology | 1 | DM Neurology |
| 5 | Urology | 1 | MCh |
| 6 | Plastic Surgery | 1 | MCh |
| 7 | Neuro Surgery | 3 | MCh |
| 8 | Interventional Radiologist | Consultant | Radiologist (PDCC) |
| 9 | Cardio Thoracic Surgery | Consultant | MCh |
| 10 | Intensivist ICU & Emergency Medicine | 3 | MD / DNB in Emergency Medicine / Medicine / Anaesthesia / Pulmonology with ICU experience, Scale with extra allowance |

Application to be submitted at Principal, KIMS office, BSK 2nd Stage or Email to : principalkims@gmail.com
Last date for submission of Application : 30-01-2026
Interview will be held on 09-02-2026 (Walk in interview)
Venue : 2nd Floor, Rajya Vollakigara Sanga, Meeting Hall, Bangalore -560004

Sd/- Principal KIMS; Sd/- Chairman GC KIMS; Sd/- Chairman GC, Superspeciality; Sd/- Chairman KIMSH; Sd/- Treasurer RVS; Sd/- Joint Secretary RVS; Sd/- Vice President -1 RVS; Sd/- Vice President -2 RVS; Sd/- Honorary President RVS; Sd/- General Secretary RVS; Sd/- President RVS

*** For any Queries contact to Dr. H.B Shivakumar, Principal KIMS Ph: 98450 09961

**ARVIND Residential School & PU College**
Kunigal. Ph: 08132-210000/ 01. Mob: 9945210041/ 9483683002.
Website: www.arvindinternationalschool.com, www.arvindpucollege.com
REQUIRES DEDICATED & PASSIONATE PROFESSIONALS WITH GOOD COMMUNICATION SKILLS
- PUC LECTURERS (Science & Commerce Stream) Well Experienced NEET & JEE faculties
- VICE-PRINCIPAL & CO-ORDINATOR (ICSE/ CBSE/ STATE)
- Nursery/ Primary/ Middle School/ High school Teachers (ICSE/ CBSE/ STATE)
- Warden (M/F), Nurse (F), Office Asst. PE Teachers Experienced in all streams with desired qualification

Send your resume with recent passport size photo to airsjobs@gmail.com within 7 days

**ST.CHARLES WOMEN'S** PU College Invites well-qualified and committed faculty members (preferably female, residents of Bengaluru) with excellent communication skills for the following positions: Teaching Staff (Post Graduate): Physics, Chemistry, Mathematics, Biology, Computer Science, History, Economics, Business Studies, Accountancy, Statistics, Physical Education, Kannada, Hindi, English and French. Non -Teaching Staff: Office Admin & Lab Assistant Eligible candidates may attend a walk-in interview with their resume and a recent passport- size photograph or send email within 5 days from the date of publication of this advertisement at the address given below: ST. CHARLES WOMEN'S PU COLLEGE St. Thomas Town, Lingarajapuram, B'lore-84. Ph: 080- 25800997, 8951817353, 7337771636 Email: stcharlespu@gmail.com

**JOB**
To Place your Classified Ads Contact: 9886213331

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

### Manager

**WANTED MALE** Candidate for Leading Wireless Telecom Company: (A) MANAGER -Marketing /Business Development, (B) MANAGER -Sales & Service, Qualification- Diploma /B.Sc. /Engg (E&C/ E&E) 5-8 years experience with 2 wheeler. 9845602130 9945026468

### Engg/ Production Technical

**ELECTRICAL TECHNICIANS having experience in hotel background (3 or 5 star ), are required for software company maintenance in Bangalore, 35000/- salary along with PF, ESI, bonus and accommodation. Candidates with ITI/Diploma pls Contact: 9886987898, 9900816937, 9845080989**

### Hotel

**WANTED: MANAGER/** SUPERVISOR with Hotel Management/Business Administration experience & Experienced COOKS for CAFE MYTHRI at Bommasandra, Bangalore-560099. Contact: 080-26601239/ 9741862781. Email- cafemythri@gmail.com

## RENTAL PROPERTIES

### Accommodation Available

### Commercial

**FOR RENT:** PRIME COMMERCIAL BUILDING, Mariappa Rd, off CMR Main Rd, Kalyan Nagar. Ideal for Clinic, Diagnostic, Tuition, Corporate Office, Banks. GF-300 sqft, FF- 1250 sqft, SF-1250 sqft, TF-500 sqft. Ample parking (4 cars & 25 two-wheelers). 24/7 power & water. Ph: 9845123866, 9880016254. Location: Google Maps -13.021880, 77.638321

## REAL ESTATE SELLING

### General

### Out-Station

**100'X200' (25** cents) vacant land having absolute marketable title, suitable for construction of house or homestay &etc, situated on the side of Madikeri-- Talacauvery highway at Cherambane Town is available for sale. Aiyappa K.A, Contact number 9448106059/ 7204406565

### Joint Development

### Tumkur Road

**JV 2.5** Acres Converted Land Near Tata Homes New Haven. Approach 80' Road. 9008406693/9008406695.

## BUSINESS

### Business Offers

### Finance

**MSME LOAN** Available For Any Start-UpsCompanies And Existing Running Companies,Hotels,Shops Establishments Etc Contact-7204995189

**WE ARRANGE** Loan against Commerical/ Residential Building/School Building/ Hospital Building Convention Hall/ Bar & Restaurant Property and Business loan from Schedule Banks. Call Mrs Jyothi 8971132289, 9380509779

## PERSONAL

### Change of Name

**CHANGE OF NAME**
I, **Sobhana Padinharey Velingode,** residing at No. 39, Sowparnika, Opp Lakeview Defence Colony, Shettyhalli, Bangalore-560015, have changed my name to **SHOBHANA KUMAR** vide affidavit dated 09-01-2026 before notary B Seshagiri, Bangalore. Henceforth I shall be called **SHOBHANA KUMAR** only

**CHANGE OF NAME**
I, **SAIHARA BANU & SAIRA BANU** W/o **SAMEER ULLA KHAN,** R/at No.228 3rd Main Road, Ilyas Nagar, Bengaluru-560078. Declare that the above names pertain to me only Henceforth I shall be known as **SAIHARA BANU,** vide affidavit Dated 12/01/2026 sworn before notary L.Puttaraju, Bengaluru.

# ಅನಧಿಕೃತ ಕಟ್ಟಡ ತೆರವಿಗೆ ತಂಡ

## ನಿರ್ಮಾಣದ ಪ್ರಾರಂಭದಲ್ಲೇ ಪರಿಶೀಲಿಸಲು ಜಿಬಿಎ ಆಯುಕ್ತರ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅನಧಿಕೃತ ಕಟ್ಟಡಗಳಿಗೆ ನೋಟಿಸ್ ನೀಡಿ, ತಂಡಗಳನ್ನು ರಚಿಸಿ ತೆರವು ಕಾರ್ಯಾಚರಣೆ ನಡೆಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಅನಧಿಕೃತ ಕಟ್ಟಡಗಳಿಗೆ ನೋಟಿಸ್ ನೀಡಿದ ನಂತರ ನಿಯಮಾನುಸಾರ ತೆರವು ಆದೇಶ ಹೊರಡಿಸಲು ಸೂಚಿಸಿದರು.

ಅನಧಿಕೃತ ಕಟ್ಟಡಗಳ ಪರಿಶೀಲನೆ ನಡೆಸಿ, ಹೆಚ್ಚುವರಿ ಮಹಡಿಗಳನ್ನು ನಿರ್ಮಿಸಿದ್ದಲ್ಲಿ ಅವುಗಳನ್ನು ಕೂಡಲೇ ತೆರವುಗೊಳಿಸಬೇಕು. ಈ ಸಂಬಂಧ ಅಧಿಕಾರಿಗಳು ಹಾಗೂ ಮಾರ್ಷಲ್‌ಗಳನ್ನು ಒಳಗೊಂಡ ತಂಡಗಳನ್ನು ರಚಿಸಬೇಕು ಎಂದರು.

ನಕ್ಷೆ ಮಂಜೂರಾತಿ ಪಡೆಯದೆ ನಿರ್ಮಾಣವಾಗುತ್ತಿರುವ ಕಟ್ಟಡಗಳನ್ನು ಮೊಹರು ಮಾಡಬೇಕು. ಕಟ್ಟಡ ನಿರ್ಮಾಣದ ಪ್ರಾರಂಭದಲ್ಲೇ ನಿಯಮ ಉಲ್ಲಂಘನೆ ಆಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ, ಶಿಸ್ತು ಕ್ರಮಗಳನ್ನು ಕೈಗೊಂಡು ಅನಧಿಕೃತ ಕಟ್ಟಡ ನಿರ್ಮಾಣವನ್ನು ತಡೆಯಬೇಕು. ಕಟ್ಟಡ ನಿರ್ಮಾಣದಿಂದ ರಸ್ತೆ ಬದಿಯಲ್ಲಿ ರಾಶಿಯಾಗುವ ಭಗ್ನಾವಶೇಷಗಳನ್ನು ಕೂಡಲೇ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ 10 ವಿಧಾನಸಭಾ ಕ್ಷೇತ್ರಗಳು ಹಾಗೂ 21 ಉಪ ವಿಭಾಗಗಳಿದ್ದು, ಸುಮಾರು 6 ಲಕ್ಷ ಆಸ್ತಿಗಳಿವೆ. ₹1,281 ಕೋಟಿ ಆಸ್ತಿ ತೆರಿಗೆ ಸಂಗ್ರಹ ಗುರಿ ಹೊಂದಲಾಗಿದ್ದು, ಇದುವರೆಗೆ ₹733 ಕೋಟಿ ಸಂಗ್ರಹಿಸಲಾಗಿದೆ. ಬಾಕಿ ಆಸ್ತಿ ತೆರಿಗೆಯನ್ನು ನಿಗದಿತ ಕಾಲಮಿತಿಯೊಳಗೆ ಸಂಗ್ರಹಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಪಶ್ಚಿಮ ನಗರ ಪಾಲಿಕೆ ಆಯುಕ್ತ ಕೆ.ವಿ. ರಾಜೇಂದ್ರ ಮಾತನಾಡಿ, 'ವಾಣಿಜ್ಯ ಸ್ವತ್ತುಗಳಿರುವ ಪ್ರದೇಶಗಳಲ್ಲಿ ಎಲ್ಲಾ ಕಂದಾಯ ಅಧಿಕಾರಿಗಳು ಸೇರಿ ದಿನಕ್ಕೆ 50ರಿಂದ 80 ಆಸ್ತಿಗಳ ಪರಿಷ್ಕರಣೆ ನಡೆಸಲಾಗುತ್ತಿದೆ. ಬಿ-ಖಾತಾದಿಂದ ಎ-ಖಾತಾ ಪರಿವರ್ತನೆಗೆ ಸಲ್ಲಿಸಿದ ಅರ್ಜಿಗಳನ್ನೂ ಪರಿಶೀಲಿಸಿ ಎ-ಖಾತಾ ನೀಡುವ ಕಾರ್ಯ ಪ್ರಗತಿಯಲ್ಲಿದೆ' ಎಂದು ಹೇಳಿದರು.

**ತೆರವು:** ಬ್ಯಾಟರಾಯನಪುರ ವಿಭಾಗ ವ್ಯಾಪ್ತಿಯಲ್ಲಿನ ಜಕ್ಕೂರು ಉಪ ವಿಭಾಗದ ವಾರ್ಡ್ ಸಂಖ್ಯೆ 17 ರ ಜಕ್ಕೂರು ದಾಸರಹಳ್ಳಿ ಬಡಾವಣೆಯಲ್ಲಿ ನಕ್ಷೆ ಮಂಜೂರಾತಿ ಪಡೆಯದೆ ನಿರ್ಮಿಸಲಾಗುತ್ತಿದ್ದ ಕಟ್ಟಡವನ್ನು ಉತ್ತರ ನಗರ ಪಾಲಿಕೆ ಸಿಬ್ಬಂದಿ ತೆರವುಗೊಳಿಸಿದರು.

ನೆಲ + 1 ಮಹಡಿ ಕಟ್ಟಡದ ಮೇಲೆ ಹೆಚ್ಚುವರಿಯಾಗಿ ಎರಡು ಅಂತಸ್ತು ಕಟ್ಟಡ ನಿರ್ಮಾಣ ಮಾಡಲಾಗುತ್ತಿತ್ತು. ಕಟ್ಟಡದ 4ನೇ ಅಂತಸ್ತಿಗೆ ಯಾವುದೇ ಪರವಾನಗಿ ಪಡೆಯದೇ ಅನಧಿಕೃತವಾಗಿ ನಿರ್ಮಿಸಲಾಗುತ್ತಿತ್ತು ಎಂದು ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು.

### ಗೊಬ್ಬರ ಮಾರಾಟ ಅಭಿಯಾನ

ಬೆಂಗಳೂರು ಉತ್ತರ ನಗರ ಪಾಲಿಕೆಯ ಹೆಬ್ಬಾಳ ವಿಭಾಗ ವ್ಯಾಪ್ತಿಯ ವಾರ್ಡ್ ನಂ. 18ರ ರಾಧಾಕೃಷ್ಣ ದೇವಸ್ಥಾನ ವ್ಯಾಪ್ತಿಯಲ್ಲಿ ಹಸಿ ಕಸದಿಂದ ಗೊಬ್ಬರ ತಯಾರಿಸಿ ಮಾರಾಟ ಮಾಡುವ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಹಸಿ ತ್ಯಾಜ್ಯ– ಗೊಬ್ಬರ ಘಟಕದಿಂದ ಸುಮಾರು 300 ಕೆ.ಜಿ ಗೊಬ್ಬರವನ್ನು ಪ್ರತಿ ಕೆ.ಜಿಗೆ ₹150ರಂತೆ ಮಾರಾಟ ಮಾಡಲಾಯಿತು. ₹45 ಸಾವಿರ ಸಂಗ್ರಹವಾಯಿತು ಎಂದು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು.

ತ್ಯಾಜ್ಯವನ್ನು ವಾರ್ಡಿನ ವ್ಯಾಪ್ತಿಯಲ್ಲಿಯೇ ಕ್ರೋಡೀಕರಿಸಿ ಹಾಗೂ ಮನೆಗಳಲ್ಲಿಯೇ ಕಾಂಪೋಸ್ಟಿಂಗ್ ಮಾಡಿ ತ್ಯಾಜ್ಯದ ಪ್ರಮಾಣವನ್ನು ಇಳಿಕೆ ಮಾಡಬೇಕು ಎನ್ನುವುದು ಈ ಉಪಕ್ರಮದ ಉದ್ದೇಶವಾಗಿದೆ. ಪ್ರತಿದಿನವೂ ನಗರ ಪಾಲಿಕೆಯ ಸಿಬ್ಬಂದಿ ಈ ನಿಟ್ಟಿನಲ್ಲಿ ಶ್ರಮಿಸುತ್ತಿದ್ದು, ಸಾರ್ವಜನಿಕರು ಕೈಜೋಡಿಸಬೇಕು ಎಂದರು.

# ನೋಟಿಸ್ ನೀಡಿಲ್ಲ: ಬೈರತಿ ವಾದ

**ಬೆಂಗಳೂರು:** 'ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ ಇತರೆ ಆರೋಪಿಗಳ ವಿರುದ್ಧ ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಿರುವ ಸಿಐಡಿ, ಶಾಸಕ ಬೈರತಿ ಬಸವರಾಜ ಅವರ ವಿರುದ್ಧ ಮಾತ್ರ ದೋಷಾರೋಪ ಪಟ್ಟಿ ಸಲ್ಲಿಸಿಲ್ಲ. ಅವರ ವಿರುದ್ಧ ತನಿಖೆ ನಡೆಸಲಾಗುವುದು ಎಂದಷ್ಟೇ ಹೇಳಿದೆ' ಎಂದು ಆರೋಪಿ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಅರುಹಿದರು. ಬೈರತಿ ಬಸವರಾಜ ಅವರು ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಸವರಾಜ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ, 'ತನಿಖೆಯು ಸಿಐಡಿ ಪೊಲೀಸರಿಗೆ ವರ್ಗಾವಣೆ ಆದ ನಂತರ ಈತನಕ ತನಿಖೆಗೆ ಹಾಜರಾಗುವಂತೆ ನೋಟಿಸ್ ನೀಡಿಲ್ಲ. ಭಾರತೀನಗರ ಠಾಣಾ ಪೊಲೀಸರ ಮುಂದೆ ನೀಡಿದ ಹೇಳಿಕೆಗಳು ಸುಳ್ಳು ಎನ್ನುವುದು ನಿರೀಕ್ಷಣಾ ಜಾಮೀನು ರದ್ದುಪಡಿಸುವಂತೆ ಕೋರುವುದಕ್ಕೆ ಆಧಾರ ಎನಿಸುವುದಿಲ್ಲ' ಎಂದು ಪ್ರತಿಪಾದಿಸಿದರು. ವಿಚಾರಣೆ ಬುಧವಾರ ನಡೆಯಲಿದೆ.

# 'ಶಿಕ್ಷಣದ ಮೂಲಕ ಸಂವಿಧಾನ ರಕ್ಷಣೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಶಿಕ್ಷಣ ಸಂಸ್ಥೆ, ವಿಶ್ವವಿದ್ಯಾಲಯಗಳು ಸಂವಿಧಾನವನ್ನು ಶಿಕ್ಷಣದ ಭಾಗವಾಗಿಸಿಕೊಂಡು ಸಂವಿಧಾನದ ಆಶಯ, ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬಿತ್ತಬೇಕು. ಆಗ ಮಾತ್ರ ಸಂವಿಧಾನದ ಸಂರಕ್ಷಣೆ ಸಾಧ್ಯ' ಎಂದು ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಕುಲಪತಿ ವಿಶ್ವನಾಥ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಶಿಕ್ಷಕೇತರ ನೌಕರರ ಸಂಘದ ವತಿಯಿಂದ ಜ್ಞಾನಭಾರತಿ ಆಡಳಿತ ಕಚೇರಿಯಲ್ಲಿ ಮಂಗಳವಾರ ಆಯೋಜಿಸಿದ್ದ 'ಪ್ರಸ್ತುತ ಕಾಲಘಟ್ಟದಲ್ಲಿ ಭಾರತೀಯ ಸಂವಿಧಾನದ ಸಂರಕ್ಷಣೆ ಮತ್ತು ಅದರ ಮುಂದಿರುವ ಸವಾಲುಗಳು' ಎಂಬ ಚಿಂತನ ಮಂಥನ ವಿಶೇಷ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದರು.

ಭಾರತದ ಸಾಮಾಜಿಕ ವ್ಯವಸ್ಥೆಗೆ ಬಿ.ಆರ್.ಅಂಬೇಡ್ಕರ್ ಸಂವಿಧಾನ ಅತ್ಯಾವಶ್ಯಕ. ಪ್ರಸ್ತುತ ಸಂವಿಧಾನವನ್ನು ಅಲುಗಾಡಿಸುವ ಶಕ್ತಿಗಳು ಕಾರ್ಯ ಪ್ರವೃತ್ತವಾಗಿವೆ. ಯಾವುದೇ ಸರ್ಕಾರ, ಪಕ್ಷಗಳು ಅಧಿಕಾರಕ್ಕೆ ಬಂದರೂ ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಳಕೆ ಮಾಡಿ ಆ ಸಂಸ್ಥೆಗಳನ್ನು ನಿರ್ಜೀವಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ' ಎಂದು ತಿಳಿಸಿದರು.



ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಶಿಕ್ಷಕೇತರ ನೌಕರರ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗೊಲ್ಲಹಳ್ಳಿ ಶಿವಪ್ರಸಾದ್, ಕೆ.ಟಿ. ಶಾಂತಲಾ, ಪ್ರೊ.ರಮೇಶ್, ಡಾ. ವಿಶ್ವನಾಥ್, ಪ್ರೊ. ಜಯಕರ ಎಸ್.ಎಂ ಅವರು ಬುದ್ಧ ಮತ್ತು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಮಾತನಾಡಿ, ದೇಶದ ಸಂವಿಧಾನ ಸರ್ವ ಜನಾಂಗಕ್ಕೆ ಸೇರಿದ್ದು, ಆದರೆ ದಲಿತರಿಗೆ ಮಾತ್ರ ಸೀಮಿತ ಎಂಬ ತಪ್ಪು ಪರಿಕಲ್ಪನೆಯಿದೆ. ಸ್ವಹಿತಾಸಕ್ತಿ ಬಿಟ್ಟು ಸಮಾಜಕ್ಕೆ ಬೆಳಕು ಚೆಲ್ಲಿದ ಮಹನೀಯರನ್ನು ಮರೆತು ತಮಗೆ ಬೇಕಾದವರನ್ನು ಮೆರೆಸುವ ಪಿತೂರಿ ಈ ದೇಶದಲ್ಲಿ ನಡೆಯುತ್ತಿದೆ' ಎಂದರು.

ಕಾರ್ಯಕ್ರಮದಲ್ಲಿ ರಾಜಕೀಯ ಚಿಂತಕರಾದ ಕವಿತಾ ರೆಡ್ಡಿ, ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ರಮೇಶ್, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ, ಕುಲಸಚಿವೆ ಕೆ.ಟಿ. ಶಾಂತಲಾ, ಕುಲಸಚಿವ (ಮೌಲ್ಯಮಾಪನ) ಪ್ರೊ.ಸಿ.ಎಸ್. ಕರಿಗಾರ್, ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಶಿಕ್ಷಕೇತರ ನೌಕರರ ಸಂಘದ ಅಧ್ಯಕ್ಷ ಶಿವಪ್ಪ ಉಪಸ್ಥಿತರಿದ್ದರು.

# 'ಯುವ ಸಮೂಹದಲ್ಲಿ ವೈಜ್ಞಾನಿಕ ಚಿಂತನೆ ಬೆಳೆಸಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ವಿದ್ಯಾರ್ಥಿಗಳು ಹಾಗೂ ಯುವ ಸಮೂಹದಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಹೆಚ್ಚಿನ ಒತ್ತು ನೀಡಬೇಕು' ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಸಲಹೆ ನೀಡಿದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ನೀಡುವ 'ಜೀವಮಾನ ಸಾಧನೆ ಪ್ರಶಸ್ತಿ'ಗಳನ್ನು ಇಬ್ಬರು ಹಿರಿಯ ವಿಜ್ಞಾನಿಗಳಿಗೆ ಮಂಗಳವಾರ ನಗರದಲ್ಲಿ ಪ್ರದಾನ ಮಾಡಿ ಅವರು ಮಾತನಾಡಿದರು.

'ಸಂಶೋಧನೆ ಮತ್ತು ಆವಿಷ್ಕಾರಗಳು ಕೇವಲ ಪ್ರಯೋಗಾಲಯಗಳಿಗೆ ಸೀಮಿತವಾಗದೆ, ಅವುಗಳ ಲಾಭ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು. ವಿಜ್ಞಾನ ಮತ್ತು ಸಮಾಜದ ನಡುವಿನ ಅಂತರವನ್ನು ಕಡಿಮೆ ಮಾಡಲು ಇಂತಹ ಕಾರ್ಯಕ್ರಮಗಳು ಸ್ಫೂರ್ತಿದಾಯಕವಾಗಿವೆ' ಎಂದು ಹೇಳಿದರು.

'ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ. ಅಕಾಡೆಮಿಯನ್ನು ದೇಶದ ಮಾದರಿ ಸಂಸ್ಥೆಯನ್ನಾಗಿ ರೂಪಿಸಲು ಎಲ್ಲ ರೀತಿಯ ನೆರವು ನೀಡಲಾಗುವುದು' ಎಂದು ಭರವಸೆ ನೀಡಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನಿರ್ದೇಶಕ ಸದಾಶಿವ ಪ್ರಭು, ಅಕಾಡೆಮಿ ಅಧ್ಯಕ್ಷ ಎ.ಎಚ್. ರಾಜಾಸಾಬ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆರ್.ಆನಂದ್ ಉಪಸ್ಥಿತರಿದ್ದರು.

**ಪ್ರಶಸ್ತಿ ಪುರಸ್ಕೃತರು:** ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಭಾರತೀಯ ಪ್ರಾಣಿಶಾಸ್ತ್ರ ಸರ್ವೇಕ್ಷಣಾ ಇಲಾಖೆಯ ಮಾಜಿ ನಿರ್ದೇಶಕ ರಾಮಕೃಷ್ಣ ಅವರಿಗೆ ಸಿ.ಎನ್.ಆರ್. ರಾವ್ ಕೆಎಸ್‌ಟಿಎ ಜೀವಮಾನ ಸಾಧನೆ ಪ್ರಶಸ್ತಿ, ಕನ್ನಡ ಭಾಷೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವಲ್ಲಿ ಸೇವೆ ಸಲ್ಲಿಸಿದ ಮೈಸೂರಿನ ಸಿಎಫ್‌ಟಿಆರ್‌ಐ ಮಾಜಿ ವಿಜ್ಞಾನಿ ಶ್ರೀಮತಿ ಹರಿಪ್ರಸಾದ್ ಅವರಿಗೆ ಕನ್ನಡದಲ್ಲಿ ವಿಜ್ಞಾನ ಸಂವಹನಕ್ಕಾಗಿ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿಜ್ಞಾನ– ತಂತ್ರಜ್ಞಾನ ಕ್ಷೇತ್ರಗಳಲ್ಲಿ ಶೈಕ್ಷಣಿಕ ಸಂಸ್ಥೆಗಳು ಹಾಗೂ ಶಿಕ್ಷಣ ತಜ್ಞರು, ಸಂಶೋಧಕರು, ಎಂಜಿನಿಯರ್‌ಗಳು ನೀಡಿದ ಕೊಡುಗೆಗಳನ್ನು ಗುರುತಿಸಲು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಫೆಲೋ ಆಫ್ ಕೆಎಸ್‌ಟಿಎ ಗೌರವ ನೀಡುತ್ತದೆ. ಫೆಲೋಶಿಪ್‌ಗೆ ಆಯ್ಕೆಯಾದ 33 ಸಾಧಕರನ್ನು ಸನ್ಮಾನಿಸಲಾಯಿತು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಫೆಲೋಶಿಪ್‌ಗೆ ಆಯ್ಕೆ ಮಾಡಿದ್ದು, ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿ ವೂಡೇ.ಪಿ.ಕೃಷ್ಣ (ಮಧ್ಯೆ) ಅವರನ್ನು ಸನ್ಮಾನಿಸಲಾಯಿತು

## ನಗರದಲ್ಲಿ ಇಂದು

**'ಸ್ವಾಮಿ ವಿವೇಕಾನಂದರ ಚಿಂತನೆಗಳು: ಪ್ರಸ್ತುತತೆ ಮತ್ತು ಸಾರ್ವಕಾಲಿಕತೆ' ವಿಚಾರಸಂಕಿರಣ:** ಉದ್ಘಾಟನೆ: ಸ್ವಾಮಿ ವೀರೇಶಾನಂದ, ವಿಷಯ ಮಂಡನೆ: ಜಿ. ಬಿ. ಹರೀಶ್, ಆರತಿ ವಿ.ಬಿ., ರಾಜೇಶ್ ಪದ್ಮಾರ್, ರಮ್ಯಾ ಕಲ್ಲೂರು, ಉಪಸ್ಥಿತಿ: ದೇವರಾಜ್ ಬಿ.ಕೆ., ಸುಜಾತ ದೇವರಾಜ್, ಲಕ್ಷ್ಮೀಶ್ ಹೆಗಡೆ ಸೋಂದಾ, ಆಯೋಜನೆ ಹಾಗೂ ಸ್ಥಳ: ರಾಯಲ್ ಕಾಲೇಜು, ಮತ್ತಿಕೆರೆ, ಬೆಳಿಗ್ಗೆ 10

**ಹರಿವು ಬುಕ್ಸ್ ಸುಗ್ಗಿ, ನೂತನ ಮಳಿಗೆ ಉದ್ಘಾಟನೆ:** ಆಯೋಜನೆ ಹಾಗೂ ಸ್ಥಳ: ಹರಿವು ಬುಕ್ಸ್, ನಂ.67, 1ನೇ ಮಹಡಿ, ಸೌತ್ ಅವೆನ್ಯೂ ಕಾಂಪ್ಲೆಕ್ಸ್, ಡಿವಿಜಿ ರಸ್ತೆ, ಬೆಳಿಗ್ಗೆ 11

**ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನ ಉದ್ಘಾಟನೆ:** ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಎಸ್.ಎಸ್. ಮಲ್ಲಿಕಾರ್ಜುನ್, ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಗಾಜಿನ ಮನೆ, ಲಾಲ್‌ಬಾಗ್, ಸಂಜೆ 4

**30ನೇ ವಾರ್ಷಿಕ ಸಂಕ್ರಾಂತಿ ಸಂಗೀತ ಉತ್ಸವ:** ಸಾನ್ನಿಧ್ಯ: ಸ್ವಯಂಪ್ರಕಾಶ ಸಚ್ಚಿದಾನಂದ ಸ್ವಾಮೀಜಿ, 'ಶ್ರೀಕಂಠ ಶಂಕರ' ಬಿರುದು: ವಿ.ವಿ. ಸುಬ್ರಹ್ಮಣ್ಯಂ, 'ಶಂಕರಾದ್ವೈತ ತತ್ವಜ್ಞಾನ' ಬಿರುದು: ಧಾಳಿ ನರಸಿಂಹ ಭಟ್, ಅತಿಥಿ: ಎಸ್. ಅಹಲ್ಯಾ, ಆಯೋಜನೆ: ವಿದ್ವಾನ್ ಆರ್. ಕೆ. ಶ್ರೀಕಂಠನ್ ಟ್ರಸ್ಟ್, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 5.15

**'ಲೆಜೆಂಡ್ ಆಫ್ ಫ್ರೇಮ್ ಡ್ರಮ್ಸ್' ವಿಶೇಷ ಫ್ಯೂಷನ್ ಸಂಗೀತ:** ಖಂಜಿರ: ಅಮೃತ್ ನಟರಾಜ್, ಡೊಯರಾ: ಅಬ್ಬೋಸ್ ಕೊಸಿಮೊವ್, ಸ್ಲೈಡ್ ಗಿಟಾರ್: ಪ್ರಕಾಶ್ ಸೊಂಟಕ್ಕೆ, ಕೀಬೋರ್ಡ್: ಶಾಡ್ರಾಕ್ ಸೊಲೊಮನ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 6

**ಮಾರ್ಗಶೀರ್ಷೋತ್ಸವ:** ಪಿಟೀಲು: ಗಂಗಾ ಶಶಿಧರನ್, ತವಿಲ್: ತ್ರಿಪ್ಪುನಿತುರ ಶ್ರೀಕುಮಾರ್, ಘಟ: ಮಂಜೂರ್ ಉನ್ನಿಕೃಷ್ಣನ್, ಕೀಬೋರ್ಡ್: ಚೇರ್ತಾಲ ಸುನಿಲಾಲ್, ರಿದಮ್ ಪ್ಯಾಡ್: ವೈಕಾಮ್ ವಿಜಯ್‌ಕುಮಾರ್, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಕೆಳಗಿನ ಇ-ಮೇಲ್‌ಗೆ ಕಳುಹಿಸಿ..
nagaradalli_indu@prajavani.co.in

## ಚಿಟಿಕೆ ಸುದ್ದಿ

### ಮೆಟ್ರೊ: ಠೇವಣಿ ರಹಿತ ಕ್ಯೂಆರ್ ಪಾಸ್

**ಬೆಂಗಳೂರು:** ನಮ್ಮ ಮೆಟ್ರೊದಲ್ಲಿ ಅನಿಯಮಿತವಾಗಿ ಪ್ರಯಾಣಿಸುವವರು ಸ್ಮಾರ್ಟ್ ಕಾರ್ಡ್‌ಗೆ ಭದ್ರತಾ ಠೇವಣಿ ಇಡುವುದರ ಬದಲು ಇನ್ನು ಮುಂದೆ ಠೇವಣಿ ಹೊರೆ ಇಲ್ಲದ ಕ್ಯೂಆರ್ ಕೋಡ್ ಆಧಾರಿತ ಪಾಸ್ ಬಳಸಬಹುದು.

ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ(ಬಿಎಂಆರ್‌ಸಿಎಲ್) ಮೊಬೈಲ್ ಕ್ಯೂಆರ್ ಆಧಾರಿತ 1, 3 ಮತ್ತು 5 ದಿನಗಳ ಪ್ರಯಾಣದ ಪಾಸ್ ಅನ್ನು ಪರಿಚಯಿಸಿದೆ. ಜ.15ರಿಂದ ಇದು ಜಾರಿಗೆ ಬರಲಿದೆ. 1 ದಿನದ ಪಾಸ್ ₹250, 3 ದಿನದ ಪಾಸ್ ₹550 ಹಾಗೂ 5 ದಿನದ ಪಾಸ್‌ಗೆ ₹850 ದರ ನಿಗದಿಪಡಿಸಲಾಗಿದೆ.

ಇದುವರೆಗೆ ಅನಿಯಮಿತ ಪ್ರಯಾಣ ಪಾಸ್‌ಗಳು, ಕೇವಲ ಕಾಂಟ್ಯಾಕ್ಟ್‌ಲೆಸ್ ಸ್ಮಾರ್ಟ್ ಕಾರ್ಡ್‌ಗಳ ಮೂಲಕವೇ ಲಭ್ಯವಾಗುತ್ತಿದ್ದು, ₹50 ಭದ್ರತಾ ಠೇವಣಿ ಪಾವತಿಸುವುದು ಕಡ್ಡಾಯವಾಗಿತ್ತು. ಕ್ಯೂಆರ್ ಪಾಸ್‌ಗಳು ಮೊಬೈಲ್ ಫೋನ್‌ಗಳಲ್ಲಿ ಡಿಜಿಟಲ್ ರೂಪದಲ್ಲಿ ಲಭ್ಯವಾಗುವುದರಿಂದ ಯಾವುದೇ ಭದ್ರತಾ ಠೇವಣಿ ಪಾವತಿಸುವ ಅಗತ್ಯವಿಲ್ಲ ಎಂದು ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಪಾಸ್‌ಗಳನ್ನು ನಮ್ಮ ಮೆಟ್ರೊ ಅಧಿಕೃತ ಆ್ಯಪ್ ಮೂಲಕ ಖರೀದಿಸಬಹುದು. ಇತರ ಮೊಬೈಲ್ ಅಪ್ಲಿಕೇಶನ್‌ಗಳಲ್ಲಿ ಶೀಘ್ರ ಪರಿಚಯಿಸಲಾಗುವುದು. ಪ್ರಯಾಣಿಕರು ತಮ್ಮ ಮೊಬೈಲ್‌ನಲ್ಲಿ ಪ್ರದರ್ಶಿಸಲಾದ ಕೋಡ್ ಸ್ಕ್ಯಾನ್ ಮಾಡಿ ಪ್ರವೇಶ ಮತ್ತು ನಿರ್ಗಮನ ಆಗಬಹುದು ಎಂದು ತಿಳಿಸಲಾಗಿದೆ.

### ಹಳದಿ ಮಾರ್ಗ 10 ನಿಮಿಷಕ್ಕೊಂದು ರೈಲು

**ಬೆಂಗಳೂರು:** ಆರ್.ವಿ. ಕಾಲೇಜ್‌ನಿಂದ ಬೊಮ್ಮಸಂದ್ರ ನಡುವಿನ ಹಳದಿ ಮಾರ್ಗದಲ್ಲಿ ದಟ್ಟಣೆ ಅವಧಿಯಲ್ಲಿ ಮೆಟ್ರೊ ರೈಲುಗಳು ಜ.15ರಿಂದ ಪ್ರತಿ 10 ನಿಮಿಷಕ್ಕೊಮ್ಮೆ ಸಂಚರಿಸಲಿವೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ ತಿಳಿಸಿದೆ.

ಸೋಮವಾರದಿಂದ ಶನಿವಾರದವರೆಗೆ ಸದ್ಯ ಪ್ರತಿ 13 ನಿಮಿಷಕ್ಕೆ ಒಂದು ರೈಲು ಸಂಚರಿಸುತ್ತಿದೆ. ಇದು 10 ನಿಮಿಷಕ್ಕೆ ಕಡಿತವಾಗಲಿದೆ. ಭಾನುವಾರದಂದು 15 ನಿಮಿಷದ ಬದಲು 14 ನಿಮಿಷಕ್ಕೆ ಒಂದು ರೈಲು ಸಂಚರಿಸಲಿದೆ ಎಂದು ತಿಳಿಸಲಾಗಿದೆ.

ಈ ಮಾರ್ಗದಲ್ಲಿ ಏಳನೇ ರೈಲು ಸಂಚರಿಸುವುದರಿಂದ ಸಮಯದಲ್ಲಿ ಕಡಿತವಾಗಲಿದೆ. ಆದರೆ ಮೊದಲ ಹಾಗೂ ಕೊನೆಯ ರೈಲು ಸಂಚಾರದ ಸಮಯದಲ್ಲಿ ವ್ಯತ್ಯಾಸ ಇರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

# ರೈಲಿನಲ್ಲಿ ಕಳ್ಳತನ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರೈಲು ಪ್ರಯಾಣಿಕರನ್ನು ಪರಿಚಯಿಸಿಕೊಂಡು ಟೀ ಹಾಗೂ ಜ್ಯೂಸ್‌ನಲ್ಲಿ ಮತ್ತುಬರುವ ಔಷಧ ಬೆರೆಸಿ ಕೊಟ್ಟು ಪ್ರಜ್ಞೆ ತಪ್ಪಿದ ಬಳಿಕ ಕಳ್ಳತನ ಮಾಡುತ್ತಿದ್ದ ಬಿಹಾರದ ಇಬ್ಬರನ್ನು ಬೈಯಪ್ಪನಹಳ್ಳಿ ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ಮೊಹಮ್ಮದ್ ಸಫಾರ್ ಹಾಗೂ ಸತಮ್ ಬಂಧಿತರು.

ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಬಿಹಾರದ ಕೃಷ್ಣಕುಮಾರ್ ಅವರಿಗೆ ಮತ್ತುಬರುವ ಔಷಧ ನೀಡಿ ಅವರ ಬ್ಯಾಗ್, ಮೊಬೈಲ್ ಹಾಗೂ ನಗದು ಕಳ್ಳತನ ಮಾಡಿಕೊಂಡು ಆರೋಪಿಗಳು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಕುಮಾರ್ ಅವರು ನಗರದಿಂದ ಪಟ್ನಾದ ದಾನಾಪುರಕ್ಕೆ ಪ್ರಯಾಣಿಸಲು ರೈಲು ಹತ್ತಿದ್ದರು. ಪಕ್ಕದಲ್ಲೇ ಬಂದು ಕುಳಿತಿದ್ದ ಆರೋಪಿಗಳು 'ನಾವೂ ಬಿಹಾರದವರು' ಎಂಬುದಾಗಿ ಪರಿಚಯಿಸಿಕೊಂಡಿದ್ದರು. ಸ್ವಲ್ಪ ಹೊತ್ತಿನ ಬಳಿಕ 'ಟೀ ಕುಡಿಯೋಣ' ಎಂದು ಕೇಳಿದ್ದರು. ಕುಮಾರ ಅವರೂ ಒಪ್ಪಿದ್ದರು. ಆರೋಪಿಗಳ ಪೈಕಿ ಒಬ್ಬಾತ ರೈಲಿನಿಂದ ಕೆಳಕ್ಕೆ ಇಳಿದು ಹೋಗಿ ಮತ್ತುಬರುವ ಔಷಧ ಬೆರೆಸಿದ್ದ ಟೀ ತಂದು ಕೊಟ್ಟಿದ್ದ. ಟೀ ಕುಡಿದ ಮೇಲೆ ಕುಮಾರ್ ಅವರು ಪ್ರಜ್ಞೆ ತಪ್ಪಿದ್ದರು. ಆಗ, ₹ 4 ಸಾವಿರ ನಗದು, ಬ್ಯಾಗ್ ಹಾಗೂ ಚಿನ್ನದ ಸರವನ್ನು ಕಳ್ಳತನ ಮಾಡಿಕೊಂಡು ಪರಾರಿ ಆಗಿದ್ದರು ಎಂದು ರೈಲ್ವೆ ಪೊಲೀಸರು ಹೇಳಿದರು.

ಮೊಹಮ್ಮದ್ ಸಫಾರ್

ಸತಮ್

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಇಂಡೆಂಟ್ ಸಂ: ಬಿಡಿಎ/2025–26/ಎಸ್‌ಇ0090 ದಿನಾಂಕ: 13.01.2026

**ಟೆಂಡರ್ ಪ್ರಕಟಣೆ**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು, **"ಬೆಂಅಪ್ರಾಕ್ಕೆ ಕುಂದುಕೊರತೆ ನಿರ್ವಹಣೆ ಪೋರ್ಟಲ್‌ನ ವಿನ್ಯಾಸ, ಅಭಿವೃದ್ಧಿ ಮತ್ತು ಅನುಷ್ಠಾನಕ್ಕಾಗಿ ಐಟಿ ಸಲಹಾ ಸೇವೆ ಆಯ್ಕೆಗಾಗಿ"** ಟೆಂಡರುಗಳನ್ನು ಆಹ್ವಾನಿಸಿದೆ.
ಟೆಂಡರ್ ದಸ್ತಾವೇಜುಗಳು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **ದಿನಾಂಕ: 13.01.2026** ರಿಂದ ಲಭ್ಯ ಮತ್ತು ಬಿಡ್ ಸಲ್ಲಿಸಲು ಕೊನೆಯ **ದಿನಾಂಕ: 23.01.2026** ರಂದು ಸಂಜೆ **5.30** ಗಂಟೆ ವರೆಗೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 27.01.2026** ರಂದು ಬೆಳಗ್ಗೆ **11.30** ಗಂಟೆಗೆ. ಆಸಕ್ತ ಬಿಡ್‌ದಾರರು ವಿವರವಾದ ಮಾಹಿತಿಗಾಗಿ **https://kppp.karnataka.gov.in** ಅನ್ನು ಪರಿವೀಕ್ಷಿಸಬಹುದು ಅಥವಾ ಇಡಿಪಿ ಸೆಲ್, ಬಿಡಿಎ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.
ಯಾವುದೇ ಬದಲಾವಣೆಗಳು ಅಥವಾ ಸಕಾಲಿಕ ಮಾಹಿತಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಆದ್ದರಿಂದ ಬಿಡ್‌ದಾರರು ನಿಯಮಿತವಾಗಿ ಪೋರ್ಟಲ್ ಅನ್ನು ಪರಿಶೀಲಿಸಲು ವಿನಂತಿಸಲಾಗಿದೆ.
ಸಹಿ/- ಇಲಾಖಾ ಮುಖ್ಯಸ್ಥರು, ಇಡಿಪಿ ಸೆಲ್, ಬಿಡಿಎ, ಬೆಂಗಳೂರು

**ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫೋನ್ : 080–22024000
ಇ-ಮೇಲ್: mdkrdcl@gmail.com ವೆಬ್‌ಸೈಟ್: http://www.krdcl.in

ಸಂ:ಕರಅನಿನಿ/ಐಎಫ್‌ಬಿ/ಕಂಪನಿ ಕಾರ್ಯದರ್ಶಿ/2025–26/3320 ದಿನಾಂಕ: 12–01–2026

**ಕಂಪನಿ ಕಾರ್ಯದರ್ಶಿ ಗುತ್ತಿಗೆ ಸೇವೆ ಅಧಿಸೂಚನೆ**

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು, ಲೋಕೋಪಯೋಗಿ ಇಲಾಖಾ ಅಧೀನದಲ್ಲಿ ಕರ್ನಾಟಕ ಸರ್ಕಾರದ ಸಾರ್ವಜನಿಕ ಉದ್ಯಮವಾಗಿ, ಕಂಪನಿ ಕಾಯ್ದೆ–2013ಯಂತೆ ಕಾರ್ಯನಿರ್ವಹಿಸುತ್ತಿದೆ. **ನಿಗಮದಲ್ಲಿನ ಕಂಪನಿ ಕಾರ್ಯದರ್ಶಿ ಹುದ್ದೆ ಗುತ್ತಿಗೆ ಸೇವೆಗೆ** ಈ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ಕಂಪನಿಯು ಉನ್ನತ ಪರಿಜ್ಞಾನವುಳ್ಳ, ಕ್ರಿಯಾತ್ಮಕ ಕಾರ್ಯಕ್ಷಮತೆ ಮತ್ತು ಫಲಿತಾಂಶ ಆಧಾರಿತ ಕಾರ್ಯನಿರ್ವಹಣೆ ಹೊಂದಿರುವ ಅಭ್ಯರ್ಥಿಯನ್ನು ಕಂಪನಿ ಕಾರ್ಯದರ್ಶಿ ಹುದ್ದೆಯ ನೇಮಕಾತಿ ಕ್ರಮವಹಿಸುತ್ತಿದ್ದು, ವಿವರಗಳು ಈ ಕೆಳಗಿನಂತಿವೆ:

| ಹುದ್ದೆಯ ಹೆಸರು | **ಕಂಪನಿ ಕಾರ್ಯದರ್ಶಿ (ಗುತ್ತಿಗೆ ಸೇವೆ)** |
|---|---|
| ಹುದ್ದೆ ಸಂಖ್ಯೆ | ಒಂದು |
| ಸೇವಾ ಅವಧಿ | ಮೂರು ವರ್ಷಗಳು |
| ಕಾರ್ಯಸ್ಥಾನ | ಕೇಂದ್ರ ಕಛೇರಿ, ಬೆಂಗಳೂರು |
| ವಯೋಮಿತಿ | ಗರಿಷ್ಠ 55 ವರ್ಷಗಳು |
| ವಿದ್ಯಾರ್ಹತೆ | ಅಂಗೀಕೃತ ವಿಶ್ವವಿದ್ಯಾಲಯದ ಪದವಿಯೊಂದಿಗೆ ಕಂಪನಿ ಕಾರ್ಯದರ್ಶಿ ವಿಷಯದ ಪದವಿ ಹಾಗೂ Institute of Company Secretaries of India (ICSI) ಸದಸ್ಯತ್ವ ಹೊಂದಿರಬೇಕು, ಕಾನೂನು ವಿದ್ಯಾರ್ಹತೆ ಹೊಂದಿದ್ದಲ್ಲಿ ಪ್ರಾಮುಖ್ಯತೆ ನೀಡಲಾಗುವುದು. |
| ಭಾಷಾ ಜ್ಞಾನ | ಕನ್ನಡ & ಆಂಗ್ಲಭಾಷೆ ಓದಲು ಮತ್ತು ಬರೆಯಲು ತಿಳಿದಿರುವುದು ಕಡ್ಡಾಯವಾಗಿರುತ್ತದೆ. |
| ಅನುಭವ | ಕಂಪನಿ ಕಾಯ್ದೆ ವಿಷಯದ ಬಗ್ಗೆ ಕನಿಷ್ಠ 3 ರಿಂದ 5 ವರ್ಷಗಳ ಅನುಭವದೊಂದಿಗೆ ಸರ್ಕಾರಿ ಸಂಸ್ಥೆ/ ನಿಗಮ/ ಮಂಡಳಿ/ಸಾರ್ವಜನಿಕ ಉದ್ಯಮಗಳಲ್ಲಿ ಕಾರ್ಯನಿರ್ವಹಣೆಗೆ ಪ್ರಾಧಾನ್ಯತೆ. |
| ಕ್ರೋಢೀಕೃತ ಮಾಸಿಕ ವೇತನ | ರೂ.90,000+ Conveyance allowance |
| ವಿವರಗಳೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | ವಿದ್ಯಾರ್ಹತೆ, ICSI ನ ಸದಸ್ಯತ್ವ ಪ್ರಮಾಣಪತ್ರ, ಗುರುತಿನ ಮತ್ತು ವಿಳಾಸದ ಪುರಾವೆಗಳು, ಅನುಭವದ ವಿವರ ಇತ್ಯಾದಿ ವಿವರಗಳೊಂದಿಗೆ ಅರ್ಜಿಯನ್ನು **ದಿನಾಂಕ: 30–01–2026ರ ಒಳಗೆ** ಕಛೇರಿ ಅವಧಿಯಲ್ಲಿ ಖುದ್ದಾಗಿ ಅಥವಾ ಇಮೇಲ್ ಮೂಲಕ ಸಲ್ಲಿಸುವುದು. |
| ಅಂಚೆ ವಿಳಾಸ & ದೂರವಾಣಿ ಸಂಖ್ಯೆ | ವ್ಯವಸ್ಥಾಪಕ ನಿರ್ದೇಶಕರು, ಸಂಖ್ಯೆ.08, "ಸಂಪರ್ಕ ಸೌಧ", 3ನೇ ಮಹಡಿ, ಡಾ.ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 560 010. 080–22024000. |
| ಮಿಂಚಂಚೆ | mdkrdcl@gmail.com |

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕರಅನಿನಿ ಬೆಂಗಳೂರು
DIPR/CP/YC/5003/2025-26

**ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ**
ನೋಂದಣಿ ಕಚೇರಿ : 30/1, 1ನೇ ಮತ್ತು 2ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಪ್ರದೇಶ, ವಸಂತ ನಗರ, ಬೆಂಗಳೂರು –560051.
ಇ–ಮೇಲ್: dgm3bswml@gmail.com

ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಪಿಆರ್/754/2025–26 ದಿನಾಂಕ : 12.01.2026

**ಇ–ಹರಾಜು ಅಧಿಸೂಚನೆ (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)**

| ಕಾಮಗಾರಿಯ ವಿವರ | ಎಂಎಸ್‌ಡಬ್ಲ್ಯೂ ಅತಿ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಸ್ಕ್ರ್ಯಾಪ್ ವಸ್ತುಗಳ ವಿಲೇವಾರಿ ಮಾಡುವುದು. |
|---|---|

1) ಬೆಂಗಳೂರು ಸಾಲಿಡ್ ವೇಸ್ಟ್ ಮ್ಯಾನೇಜ್ಮೆಂಟ್ ಲಿಮಿಟೆಡ್, ಎಂಎಸ್‌ಡಬ್ಲ್ಯೂ ಅತಿ ತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ ಸ್ಕ್ರ್ಯಾಪ್ ವಸ್ತುಗಳ ವಿಲೇವಾರಿಗಾಗಿ "**ಎಲ್ಲಿ ಇದೆಯೋ ಹಾಗೆಯೇ**" ಎಂಬ ಆಧಾರದ ಮೇಲೆ ಇ–ಹರಾಜನ್ನು ಆಹ್ವಾನಿಸುತ್ತದೆ.
2) ಬಿಡ್‌ದಾರರು ಬಿಡ್ ನೀಡಲಾದ ಘಟಕದಲ್ಲಿ ಅನ್ವಯವಾಗುವ ತೆರಿಗೆಗಳನ್ನು ಹೊರತುಪಡಿಸಿ ವಸ್ತುಗಳಿಗೆ ತಮ್ಮ ಅತ್ಯಧಿಕ ದರವನ್ನು ಉಲ್ಲೇಖಿಸಬೇಕು.
3) ಆಸಕ್ತ ಡೀಲರ್‌ಗಳು ಈ ಕಚೇರಿಯಿಂದ ಪೂರ್ವಾನುಮೋದನೆ ಪಡೆದು ಯಾವುದೇ ಕೆಲಸದ ದಿನದಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ಗಂಟೆಯವರೆಗೆ ಸ್ಥಾವರಗಳನ್ನು ಪರಿಶೀಲಿಸಬಹುದು.
4) ಬಿಡ್‌ದಾರರು ಹರಾಜು ಸೂಚನೆಯ ವಿವರದ ಪ್ರಕಾರ ಹರಾಜು ಪ್ರಾರಂಭದ ಸಮಯ, ಹರಾಜು ಅಂತ್ಯದ ಸಮಯ ಮತ್ತು ಬಿಡ್ಡಿಂಗ್‌ಗಾಗಿ ಡೆಲ್ಟಾ ಸಮಯವನ್ನು ಗಮನಿಸಬೇಕು.
5) ಅಗತ್ಯ ಇಎಂಡಿ ಮತ್ತು ಸಂಬಂಧಿತ ದಾಖಲೆಗಳೊಂದಿಗೆ ಇ–ಹರಾಜಿನಲ್ಲಿ ಭಾಗವಹಿಸುವಿಕೆಯನ್ನು ದೃಢೀಕರಿಸಲು ಕೊನೆಯ ದಿನಾಂಕ, ಲೈವ್ ಬಿಡ್ಡಿಂಗ್‌ನ ದಿನಾಂಕ ಮತ್ತು ಸಮಯವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ನವೀಕರಿಸಲಾಗುತ್ತದೆ.
6) ಸ್ವೀಕರಿಸಿದ ಯಾವುದೇ ಅಥವಾ ಎಲ್ಲಾ ಪ್ರತಿಕ್ರಿಯೆಗಳನ್ನು ಸ್ವೀಕರಿಸುವ/ ತಿರಸ್ಕರಿಸುವ ಹಕ್ಕನ್ನು ಯಾವುದೇ ಕಾರಣಗಳನ್ನು ನೀಡದೆ ಬಿಎಸ್‌ಡಬ್ಲ್ಯೂಎಂಎಲ್ ನ ಉಪ ಪ್ರಧಾನ ವ್ಯವಸ್ಥಾಪಕರು–3, ಇವರಿಗೆ ಕಾಯ್ದಿರಿಸಲಾಗಿದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು
ವಾಸಾಸಂಇ/ವಾ.ಪ್ರ/5021/ಶಿರಡಿ ಸಾಯಿ/2025–26

**ಮಾಲೂರು ನಗರ ಯೋಜನಾ ಪ್ರಾಧಿಕಾರ, ಮಾಲೂರು**
ಮಾರುತಿ ಬಡಾವಣೆ 2ನೇ ಹಂತ, ಮಾಡ್ರನ್ ಶಾಲೆ ಹತ್ತಿರ, ತಿರುಮಲ ಕಲ್ಯಾಣ ಮಂಟಪ ರಸ್ತೆ, ಮಾಲೂರು–563 130, ಕೋಲಾರ ಜಿಲ್ಲೆ, ಕಛೇರಿ ದೂರವಾಣಿ ಸಂಖ್ಯೆ: 08151–299920,
Web Site:www.malur.tpa.gov.in, Email:ms.malur.planning.authority@gmail.com

ಸಂಖ್ಯೆ: ಮಾಯೋಪ್ರಾ/ಭೂ.ಬ/2024–25/1581 ದಿನಾಂಕ: 12.01.2026

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮ | ಸ.ನಂ | ವಿಸ್ತೀರ್ಣ ಎ/ಗು | ಅನುಮೋದಿತ ಮಹಾ ಯೋಜನೆ ಪ್ರಕಾರ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪ ಯೋಗ | ಷರಾ |
|---|---|---|---|---|---|---|---|---|---|
| 1. | ಸುಬ್ರಮಣಿ ಬಿನ್ ದೊಡ್ಡಪುಟ್ಟಪ್ಪ | ಮಾಲೂರು | ಕಸಬಾ | ಮಾಲೂರು | 149/2 | 2ಎ–01ಗು | ಕೈಗಾರಿಕೆ | ವಸತಿ | – |
| 2. | ಸುಬ್ರಮಣಿ ಬಿನ್ ದೊಡ್ಡಪುಟ್ಟಪ್ಪ | ಮಾಲೂರು | ಕಸಬಾ | ಮಾಲೂರು | 149/3 | 2ಎ–00 | ಕೈಗಾರಿಕೆ | ವಸತಿ | – |

**ಷರಾ:** ಈ ಜಮೀನುಗಳಲ್ಲಿ ವಿನ್ಯಾಸದ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ. ಸದರಿ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿ, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:445/ಕೆಎಸ್‌ಎಂಸಿಎ/2025–26

**ಕರ್ನಾಟಕ ಸರ್ಕಾರ**
**ಸಹಕಾರ ಇಲಾಖೆ ಬಹಿರಂಗ ಹರಾಜು ಇಸ್ತಿಹಾರ್**

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,
1) ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, 4ನೇ ವಲಯ ಸಿ.ಇ.ಪಿ ಸಂಖ್ಯೆ:– ಎ.ಆರ್.ಬಿ–4/ಸಿಇಪಿ/ 174/2025–26 ರಂತೆ ಅಧಿಕಾರ ಹೊಂದಿರುವ ಮಾರಾಟಾಧಿಕಾರಿಯಾದ ನಾನು ತಿಳಿಯಪಡಿಸುವುದೇನೆಂದರೆ. **ಶ್ರೀಮತಿ ಬಿ.ವಿ ನಾಗಮಣಿ W/o ಜಿ. ಬಸವರಾಜು.**

| ಸುಸ್ತಿದಾರರ ಹೆಸರು | ಹರಾಜು ಮಾಡುವ ಹಾಸ್ತಿಗಳ ವಿವರ | ಹರಾಜು ನಡೆಯುವ ಸ್ಥಳ ದಿನಾಂಕ ಮತ್ತು ಸಮಯ | ಸುಸ್ತಿದಾರರಿಂದ ವಸೂಲಾಗಬೇಕಾಗಿರುವ ಮೊತ್ತ |
|---|---|---|---|
| ಶ್ರೀಮತಿ ಬಿ.ವಿ ನಾಗಮಣಿ W/o ಜಿ. ಬಸವರಾಜು; ಸಿ.ಇ.ಪಿ ಸಂಖ್ಯೆ:– ಎ.ಆರ್.ಬಿ– 4/ಸಿಇಪಿ/174/2025–26 | #182/1, ಸರ್ವೆ ನಂ–43 & 44/1, ಬಿಬಿಎಂಪಿ ವಾರ್ಡ್ ನಂ–129, ರಾಜರಾಜೇಶ್ವರಿ ನಗರ ಸಭೆಯ 2ನೇ ವಾರ್ಡಿನ ವ್ಯಾಪ್ತಿ, ಶ್ರೀಗಂಧದಕಾವಲು, ಬೆಂಗಳೂರು–560091. ನಿವೇಶನದ ಅಳತೆ ಪೂರ್ವದಿಂದ ಪಶ್ಚಿಮಕ್ಕೆ 75 ಅಡಿಗಳು, ಉತ್ತರದಿಂದ ದಕ್ಷಿಣಕ್ಕೆ 17 ಅಡಿಗಳು ಒಟ್ಟು 1275 ಅಡಿಗಳ ಅಳತೆಯುಳ್ಳ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ : ಸರ್ಕಾರಿ ಮೋರಿ, ಪಶ್ಚಿಮಕ್ಕೆ : ರಸ್ತೆ. ಉತ್ತರಕ್ಕೆ : ಶ್ರೀಮತಿ ಸರೋಜಮ್ಮರವರ ಸ್ವತ್ತು. ದಕ್ಷಿಣಕ್ಕೆ : ಶ್ರೀ ವಿಜಯ್ ಕುಮಾರ್‌ರವರ ಸ್ವತ್ತು | **ನಂ–182, 18ನೇ ಕ್ರಾಸ್, ರಾಜೀವ್ ಗಾಂಧಿನಗರ, ಸುಂಕದಕಟ್ಟೆ, ಬೆಂಗಳೂರು–560091. ದಿನಾಂಕ: 30.01.2026 ಶುಕ್ರವಾರ, ಬೆಳಿಗ್ಗೆ 11–00 ಕ್ಕೆ** | ಸಂಘಕ್ಕೆ ಬರಬೇಕಾದ ಒಟ್ಟು ಸಾಲದ ಮೊತ್ತ **ದಿನಾಂಕ 05.11.2025ರ** ವರೆಗೆ ಬಡ್ಡಿ ಸೇರಿ ರೂ. **17,17,201/–** ಮತ್ತು **06.11.2025** ರಿಂದ ಮುಂದುವರಿದ ಬಡ್ಡಿ, ಜಾಹಿರಾತು ಹಾಗೂ ಇತರೆ ಎಲ್ಲಾ ಖರ್ಚುಗಳು |

ಇವರು **ಶ್ರೀ ಭೈರವೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.**, ನಂ. 575/ಬಿ, 8ನೇ ಮುಖ್ಯರಸ್ತೆ, 22ನೇ ಕ್ರಾಸ್, ಎಂ.ಆರ್.ಸಿ.ಆರ್ ಬಡಾವಣೆ, ವಿಜಯನಗರ, ಬೆಂಗಳೂರು–560040. ಇವರಲ್ಲಿ ತಮ್ಮ ಸ್ಥಿರಾಸ್ತಿಯ ಮೇಲೆ ಸಾಲ ಪಡೆದು ಸುಸ್ತಿದಾರರಾಗಿ ಸಾಲದ ಬಾಬ್ತು ಡಿಕ್ರಿಯಾಗಿ ಸೊಸೈಟಿ ಆಧಾರ ಮಾಡಿದ ಈ ಕೆಳಗೆ ನಮೂದಿಸಿರುವ ಸ್ವತ್ತನ್ನು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಯಮ 38ರನ್ವಯ ಬಹಿರಂಗ ಹರಾಜು ಮಾಡಲಾಗುವುದು, ಸಾರ್ವಜನಿಕರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಈ ಸ್ವತ್ತನ್ನು ಹರಾಜಿನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ **ಪ್ರಭಾರ ಕಾರ್ಯದರ್ಶಿ, ಶ್ರೀ ಭೈರವೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.**, ನಂ. 575/ಬಿ, 8ನೇ ಮುಖ್ಯರಸ್ತೆ, 22ನೇ ಕ್ರಾಸ್, ಎಂ.ಆರ್.ಸಿ.ಆರ್ ಬಡಾವಣೆ, ವಿಜಯನಗರ, ಬೆಂಗಳೂರು–560040 ಇವರಲ್ಲಿ ಪಡೆಯಬಹುದು. **ದೂರವಾಣಿ ಸಂಖ್ಯೆ:– 080–23383530, ಮೊಬೈಲ್ ನಂಬರ್ : 8867391475.**

**ಹರಾಜಿನ ಷರತ್ತುಗಳು ಮತ್ತು ನಿಯಮಗಳು**

1. ಹರಾಜಿನ ಮುನ್ನ ಸಾಲ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ.
2. ಕಟ್ಟಡ/ನಿವೇಶನ ಯಾವ ರೀತಿಯಲ್ಲಿದೆಯೋ ಅದೇ ರೀತಿಯಲ್ಲಿ ಹರಾಜು ಮಾಡಲಾಗುವುದು.
3. ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ಪ್ರಾರಂಭಿಕ ಠೇವಣಿ ರೂ. 25,000/–ಗಳನ್ನು ಹರಾಜಿನ ದಿನ ಸ್ಥಳದಲ್ಲಿಯೇ ನಗದಾಗಿ ಪಾವತಿಸಿ ರಸೀದಿಯನ್ನು ಪಡೆದು ಹಾಜರು ಪಡಿಸತಕ್ಕದ್ದು, ಹರಾಜು ಪೂರ್ಣಗೊಂಡ ನಂತರ ಈ ಮೊಬಲಗನ್ನು ಯಶಸ್ವಿಯಾಗದ ಬಿಡ್ಡುದಾರರಿಗೆ ಸ್ಥಳದಲ್ಲಿಯೇ ಹಿಂತಿರುಗಿಸಲಾಗುವುದು.
4. ಹರಾಜಿನಲ್ಲಿ ಬಿಡ್ ನಿಂತ ತಕ್ಷಣ ಹರಾಜು ಮೊಬಲಗಿನ ಶೇ. 15ರಷ್ಟು ಹಣವನ್ನು ಸ್ಥಳದಲ್ಲಿಯೇ ಡಿ.ಡಿ ಅಥವಾ ಆರ್.ಟಿ.ಜಿ.ಎಸ್ ಮುಖಾಂತರ ಪಾವತಿಸತಕ್ಕದ್ದು, ಉಳಿದ ಹಣವನ್ನು ಹರಾಜು ನಡೆಸಿದ ದಿನಾಂಕದಿಂದ ನೋಂದಣಿ ವೆಚ್ಚ ಸಹಿತ 45 ದಿನದೊಳಗಾಗಿ ಡಿ.ಡಿ ಅಥವಾ ಆರ್.ಟಿ.ಜಿ.ಎಸ್ ಮೂಲಕ ಪಾವತಿ ಮಾಡತಕ್ಕದ್ದು, ತಪ್ಪಿದ್ದಲ್ಲಿ ಬಿಡ್‌ದಾರರು ಪಾವತಿ ಮಾಡಿರುವ ಹಣವನ್ನು ಕಾನೂನು ರೀತ್ಯ ಮುಟ್ಟುಗೋಲು ಹಾಕಿಕೊಂಡು ಬದಲಿ ಹರಾಜು ಮಾಡಲಾಗುವುದು.
5. ಹರಾಜಿನ ಇತರೆ ಷರತ್ತುಗಳನ್ನು ಫಾರಂ ನಂ–8ರಲ್ಲಿ ಪ್ರಕಟಿಸಿ ಬಹಿರಂಗಪಡಿಸಿರುತ್ತದೆ. ಸ್ವತ್ತಿನ ವಿವರಣೆ ಅಥವಾ ಅಂದಾಜು ಮಾಡಲಾಗಿರುವ ವಿಸ್ತೀರ್ಣದ ವಿಷಯದಲ್ಲಿ ಹಾಗೂ ಮೌಲ್ಯಮಾಪನವಾಗಿರುವ ತಪ್ಪುಗಳಿಗೆ ಈ ನ್ಯಾಯಾಲಯ ಮತ್ತು ಸರ್ಕಾರ ಹಾಗೂ ಸಂಘವು ಜವಬ್ದಾರಿಯಲ್ಲ.
6. ಬಿಡ್ ಮೊಬಲಗು ಆಸ್ತಿಯ ಬೆಲೆಗಿಂತ ಕಡಿಮೆಯಾದಲ್ಲಿ ಆಸ್ತಿಯನ್ನು ಅಂತಹ ಬಿಡ್‌ದಾರರಿಗೆ ಬಿಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಸಿಎಸ್ ನಿಯಮಗಳ ಪ್ರಕಾರ ಮಾರಾಟಾಧಿಕಾರಿಯವರು ಹೊಂದಿರುತ್ತಾರೆ.
7. ಒಂದು ವೇಳೆ ಸದರಿ ಸ್ವತ್ತಿನ ಬಗ್ಗೆ ನ್ಯಾಯಾಲಯದಿಂದ ವ್ಯಾಜ್ಯವಾದಲ್ಲಿ ತಡೆಯಾಜ್ಞೆ ಬಂದಲ್ಲಿ ಬಿಡ್‌ದಾರರು ಪಾವತಿಸಿದ ಶೇ.15ರಷ್ಟು ಮೊತ್ತಕ್ಕೆ ಬಡ್ಡಿ ನೀಡಲಾಗುವುದಿಲ್ಲ. ನ್ಯಾಯಾಲಯ ತೀರ್ಪಿಗೆ ಸದರಿ ಹರಾಜು ಒಳಪಡುತ್ತದೆ.
8. ಹರಾಜಿನಲ್ಲಿ ಯೋಗ್ಯ ಬೆಲೆ ಬಾರದಿದ್ದಲ್ಲಿ ಹರಾಜಿಗಿಟ್ಟಿರುವ ಸ್ಥಿರಾಸ್ತಿಯನ್ನು ಖರೀದಿಸುವ ಮತ್ತು ಆಸ್ತಿ ವರ್ಗಾವಣೆ ಮಾಡಿಕೊಳ್ಳುವ ಹಕ್ಕನ್ನು ಸೊಸೈಟಿಯು ಹೊಂದಿರುತ್ತದೆ.
9. ಬಾಕಿದಾರನು ಸಂಘಕ್ಕೆ ಪಾವತಿಸಬೇಕಾಗಿರುವ ಸಂಪೂರ್ಣ ಸಾಲದ ಮೊತ್ತವನ್ನು ಮರುಪಾವತಿಸಲು ಇಚ್ಛಿಸಿದ್ದಲ್ಲಿ ಬಹಿರಂಗ ಹರಾಜಿನ ದಿನಾಂಕದಿಂದ 30 ದಿನಗಳ ಒಳಗಾಗಿ ಬಹಿರಂಗ ಹರಾಜಿನಲ್ಲಿ ಯಶಸ್ವಿ ಬಿಡ್ ದಾರರು ಪಾವತಿಸಿರುವ ಶೇ. 15ರ ಪಾವತಿ ಮೊತ್ತಕ್ಕೆ ಶೇ.5 ರಂತೆ ಬಡ್ಡಿ ಸೇರಿದ ಮೊತ್ತವನ್ನು ಪಾವತಿಸಲು ಭಾದ್ಯತರಾಗಿರತಕ್ಕದ್ದು.
10. ಸ್ಥಿರಾಸ್ತಿ ಹರಾಜಿನ ಮಾರಾಟ ಸ್ಥಿರೀಕರಣವು ಹರಾಜಿನ ಷರತ್ತಿಗೆ ಒಳಪಟ್ಟಿರುತ್ತದೆ. ಬಿಡ್‌ದಾರರು ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮಾರಾಟ ಸ್ಥಿರೀಕರಣಕ್ಕೆ ಸರ್ಕಾರದವರು ಜವಾಬ್ದಾರರಾಗಿರುವುದಿಲ್ಲ.
11. ಸ್ಥಿರಾಸ್ತಿ ಹರಾಜನ್ನು ಯಾವುದೇ ಕಾರಣ ನೀಡದೇ ಮುಂದೂಡುವ/ಸ್ಥಗಿತಗೊಳಿಸುವ ಅಥವಾ ರದ್ದುಗೊಳಿಸುವ ಆಧಿಕಾರವು ಮಾರಾಟಾಧಿಕಾರಿಯವರಿಗೆ ಇರುತ್ತದೆ.

ದಿನಾಂಕ: 12.12.2025
ಸ್ಥಳ : ಬೆಂಗಳೂರು
ಸಹಿ/–
ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು/ಮಾರಾಟಾಧಿಕಾರಿ
4ನೇ ವಲಯ, ಬೆಂಗಳೂರು–560003

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

# ಅಭಿಮತ

**ಸುಭಾಷಿತ**

ಶಮೆ ಇಲ್ಲದ ಶಾಂತಿ ಶಾಂತಿಯೇ ಅಲ್ಲ,
ಮನೋ ವಿಭ್ರಾಂತಿ.

–ಕೆ.ಎಸ್. ನಿಸಾರ್ ಅಹಮದ್

**ಸಂಪಾದಕೀಯ**

## ಒತ್ತುವರಿ ತೆರವು ಕಾರ್ಯಾಚರಣೆ ಪ್ರಭಾವಿಗಳಿಗೆ ವಿನಾಯಿತಿ ಏಕೆ?

**ಕೋಗಿಲು** ಪ್ರದೇಶದಲ್ಲಿ ಘನ ತ್ಯಾಜ್ಯ ನಿರ್ವಹಣೆಗಾಗಿ ಮೀಸಲಾಗಿರಿಸಿದ್ದ ಭೂಮಿಯ ಒತ್ತುವರಿಯನ್ನು ತೆರವುಗೊಳಿಸಿದ ನಂತರ, ಥಣಿಸಂದ್ರದಲ್ಲಿ ಅತಿಕ್ರಮಣಕ್ಕೆ ಒಳಗಾಗಿದ್ದ ಭೂಮಿಯನ್ನು ತೆರವುಗೊಳಿಸುವ ಕಾರ್ಯಾಚರಣೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಡೆದಿದೆ. ಒತ್ತುವರಿದಾರರಿಂದ ಸಾರ್ವಜನಿಕ ಸ್ಥಳಗಳನ್ನು ಹಿಂದಕ್ಕೆ ಪಡೆಯುವ ಸರ್ಕಾರದ ಕ್ರಮ ಸ್ವಾಗತಾರ್ಹ. ಕೆರೆಯ ಅಂಗಳ, ರಾಜಕಾಲುವೆ ಹಾಗೂ ಸಾರ್ವಜನಿಕ ಪ್ರದೇಶಗಳಲ್ಲಿನ ಅಕ್ರಮ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಸರ್ಕಾರ ವಿಳಂಬವಾಗಿಯಾದರೂ ಪ್ರಾರಂಭಿಸಿದೆ. ಆದರೆ, ಈ ಕ್ರಮ ಸಹಾನುಭೂತಿ ಹಾಗೂ ಸಮಾನತೆಯನ್ನು ಒಳಗೊಂಡಿಲ್ಲದಿರುವುದು ಕಾರ್ಯಾಚರಣೆ ಉದ್ದೇಶದ ಪ್ರಾಮಾಣಿಕತೆಯ ಬಗ್ಗೆಯೇ ಅನುಮಾನ ಉಂಟಾಗಲು ಆಸ್ಪದ ಕಲ್ಪಿಸಿದೆ. ಕೋಗಿಲು ಪ್ರಕರಣದಿಂದ ಸ್ವಲ್ಪಮಟ್ಟಿಗೆ ಪಾಠ ಕಲಿತಂತಿರುವ ಬಿಡಿಎ, ಥಣಿಸಂದ್ರದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನಿರ್ವಸಿತರಾದವರಿಗೆ ತಾತ್ಕಾಲಿಕ ವಸತಿ ಹಾಗೂ ಆಹಾರದ ವ್ಯವಸ್ಥೆ ಮಾಡಿದೆ. ಆದರೂ, ಯಾವುದೇ ಮುನ್ಸೂಚನೆ ನೀಡದೆ ಕಾರ್ಯಾಚರಣೆ ನಡೆಸಲಾಗಿದೆ ಹಾಗೂ ತಮ್ಮನ್ನು ನಿಕೃಷ್ಟವಾಗಿ ನಡೆಸಿಕೊಳ್ಳಲಾಗಿದೆ ಎಂದು ಕೆಲವು ಸಂತ್ರಸ್ತರು ದೂರಿದ್ದಾರೆ. ಇಂಥ ಕಾರ್ಯಾಚರಣೆಗೆ ಸಂಬಂಧಿಸಿದಂತೆ, ಒತ್ತುವರಿದಾರರಲ್ಲಿ ಕಡು ಬಡವರಷ್ಟೇ ಎದ್ದು ಕಾಣಿಸುತ್ತಾರೆ ಹಾಗೂ ಬಲಾಢ್ಯರ ಒತ್ತುವರಿ ಅದೃಶ್ಯವಾಗಿಯೇ ಉಳಿಯುತ್ತದೆ ಎನ್ನುವುದನ್ನು ನಗರಾಡಳಿತ ಒಪ್ಪಿಕೊಳ್ಳಬೇಕು; ನೋವು ಹಾಗೂ ಅವಮಾನ ಉಂಟುಮಾಡುವಂತಹ ಕಾರ್ಯಾಚರಣೆಯಲ್ಲಿ ಬರೀ ಬಲಪ್ರಯೋಗವನ್ನಷ್ಟೇ ಅವಲಂಬಿಸಬಾರದು.

ದೀರ್ಘ ಕಾಲದಿಂದ ಬಾಕಿ ಉಳಿದಿದ್ದ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಸಹಾನುಭೂತಿಯಿಂದ ಹಾಗೂ ಪಾರದರ್ಶಕವಾಗಿ ನಡೆಸಬೇಕಾಗಿದೆ. ನ್ಯಾಯದ ಸಂಕೇತವಾಗಿ ಬುಲ್ಡೋಜರ್ ಬಳಕೆ ಆಗಬೇಕಾಗಿದೆ.

ಒತ್ತುವರಿ ಪ್ರದೇಶಗಳು ಬೆಂಗಳೂರು ಮಹಾನಗರ ಒಪ್ಪಿಕೊಳ್ಳಲು ನಿರಾಕರಿಸುತ್ತಿರುವ ಕಟು ವಾಸ್ತವವೊಂದರ ಸಂಕೇತಗಳಾಗಿವೆ. ನಗರದ ಕೊಳೆಗೇರಿಗಳು ಆಕಸ್ಮಿಕ ಬಡತನದ ಸ್ಥಾವರಗಳಷ್ಟೇ ಆಗಿರದೆ, ಭೂಗತಲೋಕ, ಸ್ಥಳೀಯ ಗೂಂಡಾಗಳು, ರಾಜಕಾರಣಿಗಳು ಹಾಗೂ ಭ್ರಷ್ಟ ಅಧಿಕಾರಿಗಳ ನಿಕಟ ಸಹಯೋಗದಲ್ಲಿ ಅವು ರೂಪುಗೊಂಡಿವೆ. ಒತ್ತುವರಿ ಇದ್ದಕ್ಕಿದ್ದಂತೆಯೇ ನಡೆಯುತ್ತದೆ. ಮೊದಲಿಗೆ ಭೂಮಿಯನ್ನು ಗುರ್ತಿಸಲಾಗುತ್ತದೆ, ರಾತ್ರೋರಾತ್ರಿ ಅದನ್ನು ಆಕ್ರಮಿಸಿಕೊಳ್ಳಲಾಗುತ್ತದೆ ಮತ್ತು ಮತಬ್ಯಾಂಕ್ ರೂಪುಗೊಳ್ಳಲು ಅಗತ್ಯವಾದ ಜನ ಸಮೂಹವನ್ನು ತ್ವರಿತವಾಗಿ ಅಲ್ಲಿ ನೆಲೆಗೊಳಿಸಲಾಗುತ್ತದೆ. ಆ ವಸತಿಗಳಿಗೆ ಅನೌಪಚಾರಿಕವಾಗಿ ಬಾಡಿಗೆ ಪಡೆಯಲಾಗುತ್ತದೆ; ಅದಕ್ಕೆ ಪ್ರತಿಯಾಗಿ 'ರಕ್ಷಣೆ'ಯ ಭರವಸೆ ನೀಡಲಾಗುತ್ತದೆ. ಇಂಥ ಅಕ್ರಮ ಒಪ್ಪಂದ ಅನೇಕ ಪ್ರಶ್ನೆಗಳಿಗೆ ಎಡೆ ಮಾಡಿಕೊಡುತ್ತದೆ. ತನಗೆ ಸೇರದ ಭೂಮಿಯನ್ನು ವ್ಯಕ್ತಿಯೊಬ್ಬ ಮಾರಾಟ ಮಾಡುವುದು ಹೇಗೆ ಹಾಗೂ ಕೆಲವು ಸಂದರ್ಭಗಳಲ್ಲಿ ಆ ಭೂಮಿ ನೋಂದಣಿಯೂ ಆಗುವುದು ಹೇಗೆ? ಸರ್ಕಾರಿ ಭೂಮಿ, ಕೆರೆಗಳ ಅಂಗಳ ಹಾಗೂ ರಾಜಕಾಲುವೆಗಳ ದಾಖಲೆಗಳನ್ನು ಸಬ್ ರಿಜಿಸ್ಟ್ರಾರ್‌ಗಳು ಹೇಗೆ ಒಪ್ಪಿಕೊಳ್ಳುತ್ತಾರೆ? ಇವೆಲ್ಲ ವಹಿವಾಟುಗಳು ಪರಸ್ಪರ ಸಹಯೋಗವಿಲ್ಲದೆ ನಡೆಯುವುದು ಸಾಧ್ಯವಿಲ್ಲ. ಕೊಳೆಗೇರಿಗಳ ಮೇಲೆ ಪ್ರಾಬಲ್ಯ ಸಾಧಿಸಿದ್ದ ಸ್ಲಂ ಭರತ್ ಎನ್ನುವ ಭೂಗತಲೋಕದ ಕುಖ್ಯಾತ ವ್ಯಕ್ತಿಯೊಬ್ಬ ಪೊಲೀಸ್ ಎನ್‌ಕೌಂಟರ್‌ಗೆ ಬಲಿಯಾದುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. 1990ರ ದಶಕದಲ್ಲಿ ಕಾಂಗ್ರೆಸ್ ನಾಯಕರೊಬ್ಬರು ತಮ್ಮ ಹೆಸರಿನೊಂದಿಗೆ 'ಸ್ಲಂ' ವಿಶೇಷಣ ಸೇರಿಸಿಕೊಂಡಿದ್ದರು ಮತ್ತು ಸಚಿವರೂ ಆಗಿದ್ದರು. ಸ್ನಾಯುಬಲ ಮತ್ತು ಚುನಾವಣಾ ರಾಜಕಾರಣದೊಂದಿಗೆ ಕೊಳೆಗೇರಿಗಳು ಬೆಸೆದುಕೊಂಡಿರುವ ಉದಾಹರಣೆಗಳು ಹೊಸತೂ ಅಲ್ಲ, ಆಕಸ್ಮಿಕವೂ ಅಲ್ಲ.

2007ರಲ್ಲಿ ಸಲ್ಲಿಕೆಯಾದ ಎ.ಟಿ. ರಾಮಸ್ವಾಮಿ ವರದಿಯು, ಅಧಿಕಾರಿಗಳ ಕುಮ್ಮಕ್ಕಿನೊಂದಿಗೆ ಶ್ರೀಮಂತರು ಮತ್ತು ಪ್ರಭಾವಿಗಳು ಸಾವಿರಾರು ಎಕರೆ ಸರ್ಕಾರಿ ಭೂಮಿ ಕಬಳಿಸಿರುವುದನ್ನು ಬಹಿರಂಗಪಡಿಸಿತ್ತು. ಆ ವರದಿಯಲ್ಲಿ ಹೆಸರಿಸಿರುವ ಅನೇಕರು ಈಗಲೂ ಯಾವುದೇ ಕ್ರಮಕ್ಕೆ ಒಳಪಡದೆ, ಸವಲತ್ತುಗಳನ್ನು ಆನಂದಿಸುತ್ತಲೇ ಇದ್ದಾರೆ. ಇದಕ್ಕೆ ಪ್ರತಿಯಾಗಿ ಬಡವರು ಬುಲ್ಡೋಜರ್ ಪ್ರಹಾರ ಎದುರಿಸಿದ್ದಾರೆ. ಕರ್ನಾಟಕ ಭೂ ಕಬಳಿಕೆ ಪ್ರತಿಬಂಧಕ ಕಾಯ್ದೆ ಇದ್ದೂ ಉಪಯೋಗಕ್ಕೆ ಬರುತ್ತಿಲ್ಲ. ಈ ಕಾಯ್ದೆಯನ್ನು ಪ್ರಾಮಾಣಿಕವಾಗಿ ಬಳಸಿದರೆ, ಅಕ್ರಮ ವಸತಿಗಳಲ್ಲಿ ವಾಸಿಸುವ ನಿವಾಸಿಗಳು ಮಾತ್ರವಲ್ಲದೆ, ಅತಿಕ್ರಮಣ ಕೃತ್ಯಗಳಿಗೆ ಹಣಕಾಸು ಒದಗಿಸುವವರು ಹಾಗೂ ಅವರಿಗೆ ಬೆಂಬಲ, ರಕ್ಷಣೆ ನೀಡುವವರನ್ನೂ ಬಯಲಿಗೆಳೆಯಬಹುದಾಗಿದೆ. ಆಗ ಕೊಳೆಗೇರಿಗಳನ್ನು ಕೆಡಹುವಾಗ ದೊರೆಯುವ ಚಿತ್ರಗಳು ಈಗಿನದಕ್ಕಿಂತಲೂ ಬೇರೆಯದೇ ಆಗಿರಬಹುದು. ಒತ್ತುವರಿಗಳ ಹಿಂದಿರುವ ಮಾಫಿಯಾ ಮತ್ತು ಭ್ರಷ್ಟ ಆಡಳಿತ ವ್ಯವಸ್ಥೆಯನ್ನು ನಿರ್ಮೂಲಗೊಳಿಸುವುದು ರಾಜಕೀಯ ಇಚ್ಛಾಶಕ್ತಿಗೆ ನೈಜ ಪರೀಕ್ಷೆಯಾಗಿದೆ. ಅದು ಸಾಧ್ಯ ಆಗುವವರೆಗೂ, ಬುಲ್ಡೋಜರ್‌ಗಳು ನ್ಯಾಯದ ಬದಲು ಅಧಿಕಾರದ ಸಂಕೇತಗಳಾಗಿಯಷ್ಟೇ ಉಳಿಯುವ ವಿರೋಧಾಭಾಸವನ್ನು ನೋಡುತ್ತಿರಬೇಕಾಗುತ್ತದೆ.

**ಜಾಲಾಡಿ**

### ಅಂತರರಾಷ್ಟ್ರೀಯ ವೃದ್ಧಾಶ್ರಮ

ಒಂದು ಅಂತರರಾಷ್ಟ್ರೀಯ ವೃದ್ಧಾಶ್ರಮ ಸ್ಥಾಪಿಸಿ ಎಪ್ಪತ್ತು- ಎಂಬತ್ತು ವರ್ಷ ವಯಸ್ಸಾದ ಖಮೇನಿ, ಷಿ ಜಿನ್ ಪಿಂಗ್, ಟ್ರಂಪ್, ಪುಟಿನ್ ಇವರನ್ನೆಲ್ಲ ಅಲ್ಲಿಗೆ ಕಳಿಸಬೇಕು.

**ಅಶೋಕ ಶೆಟ್ಟರ್,** ಲೇಖಕ, 'ಫೇಸ್‌ಬುಕ್'ನಿಂದ

**ಕಿಡಿನುಡಿ**

ಪ್ರಸಿದ್ಧ ಸೋಮನಾಥ ಕ್ಷೇತ್ರದಲ್ಲಿ ದೇವರ ದರ್ಶನ ಪಡೆದ ಪ್ರಧಾನಿಯವರನ್ನು ಟೀಕಿಸುವ ಮಲ್ಲಿಕಾರ್ಜುನ ಖರ್ಗೆಯವರೇ, ಇನ್ನೂ ಎಷ್ಟು ದಿನ ನಿಮ್ಮೊಳಗಿರುವ ನಂಜನ್ನು ಬಯಲು ಮಾಡಿಕೊಳ್ಳುತ್ತೀರಿ? ನಾಡಿನ ಇತಿಹಾಸ ಮತ್ತು ಅಸ್ಮಿತೆಯ ಮೇಲೆ ನಿಮಗೇಕೆ ಇಷ್ಟು ಅಸಹನೆ?

**ಬಿ.ವೈ. ವಿಜಯೇಂದ್ರ, ಅಧ್ಯಕ್ಷ,** ಬಿಜೆಪಿ ರಾಜ್ಯ ಘಟಕ

### 25 ವರ್ಷಗಳ ಹಿಂದೆ

ಭಾನುವಾರ, 14-1-2001

**• ಕಾಸರಗೋಡು ಮುಗಿದ ಅಧ್ಯಾಯ: ನಾಯನಾರ್**

**ಕಾಸರಗೋಡು,** ಜ. 13– ಕರ್ನಾಟಕದೊಂದಿಗೆ ಕಾಸರಗೋಡನ್ನು ವಿಲೀನಗೊಳಿಸುವ ವಿಷಯ ಮುಗಿದ ಅಧ್ಯಾಯ ಎಂದು ಕೇರಳದ ಮುಖ್ಯಮಂತ್ರಿ ಹಾಗೂ ಸಿಪಿಎಂ ಪಾಲಿಟ್ ಬ್ಯೂರೊ ಸದಸ್ಯ ಇ.ಕೆ. ನಾಯನಾರ್ ಇಂದು ಹೇಳಿದ್ದಾರೆ.

ಮಂಗಳೂರಿನಲ್ಲಿ ನಿನ್ನೆ ಕೇಂದ್ರ ಸರ್ಕಾರದ ವಿರುದ್ಧ ಸಿಪಿಎಂ ಪಕ್ಷದ ಪ್ರತಿಭಟನಾ ರ‍್ಯಾಲಿಯಲ್ಲಿ ಭಾಗವಹಿಸಿ ವಾಪಸಾಗುತ್ತಿದ್ದ ಅವರು, ಇಂದು ಕಾಞಂಗಾಡ್‌ನಲ್ಲಿ ಮಾತನಾಡಿದರು. ಮಹಾಜನ ಆಯೋಗದ ವರದಿ ಜಾರಿಗೆ ಈಗ ಅರ್ಥವಿಲ್ಲ. ಕಾಸರಗೋಡು ಕೇರಳದ ಅವಿಭಾಜ್ಯ ಅಂಗ. 1956ರಲ್ಲಿ ಅಂದಿನ ರಾಜ್ಯಗಳ ಗಡಿ ನಿರ್ಣಯವಾದ ನಂತರ ಮತ್ತೆ ಈ ವಿಷಯವನ್ನು ಕೆದಕುವ ಅಗತ್ಯವಿಲ್ಲ. ಬೆಳಗಾವಿಯನ್ನು ಮಹಾರಾಷ್ಟ್ರದೊಂದಿಗೆ ವಿಲೀನ ಮಾಡಬೇಕೆಂದು ಮಹಾರಾಷ್ಟ್ರ ಸರ್ಕಾರವು ಹಲವು ಬಾರಿ ಮಾಡಿದ ಮನವಿಯನ್ನು ಕರ್ನಾಟಕ ತಿರಸ್ಕರಿಸಿದೆ. ಹಾಗಿರುವಾಗ ಕಾಸರಗೋಡಿನ ವಿಲೀನ ಪ್ರಶ್ನೆಯನ್ನು ಈಗ ಎತ್ತುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

### 75 ವರ್ಷಗಳ ಹಿಂದೆ

ಭಾನುವಾರ, 14-1-1951

**• ತಯಾರಿಕೆ ವೆಚ್ಚ: ವಿದೇಶಿ ಪೈಪೋಟಿಯೊಡನೆ**

**ನವದೆಹಲಿ,** ಜ. 13– ಉತ್ಪಾದನಾ ವೆಚ್ಚವನ್ನು ತಗ್ಗಿಸಿ, ವಿದೇಶೀಯರ ಪೈಪೋಟಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ಸಕ್ಕರೆ ಕೈಗಾರಿಕೆಯವರು ತಯಾರಾಗಿರಬೇಕೆಂದು ಕೇಂದ್ರದ ಆಹಾರ ಸಚಿವ ಕೆ.ಎಂ. ಮುನ್ಷಿಯವರು ಭಾರತದ ಸಕ್ಕರೆ ಕಾರ್ಖಾನೆಗಳ ಸಂಘದ ಸರ್ವ ಸದಸ್ಯರ ವಾರ್ಷಿಕ ಸಭೆ ಉದ್ಘಾಟಿಸುತ್ತಾ ಇಂದು ಇಲ್ಲಿ ಹೇಳಿದರು.

ಇಂದು ದೇಶದ ಮುಂದಿರುವ ಮೂರು ಸಮಸ್ಯೆಗಳ ಪರಿಹಾರ ಕಾರ್ಯದಲ್ಲಿ ಸರ್ಕಾರದೊಡನೆ ಸಹಕರಿಸಲು ಸಿದ್ಧರಾಗಿದ್ದು ಸಕ್ಕರೆ ಕೈಗಾರಿಕೆ ಸಾಧ್ಯವಾದಷ್ಟು ವಿಧವಿಧದಲ್ಲೂ ಸಹಾಯ ಮಾಡಲು ಸರ್ಕಾರ ಸಿದ್ಧವಿರುವುದಾಗಿ ಮುನ್ಷಿ ಭರವಸೆಯಿತ್ತರು.

ಸರ್ಕಾರವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಿರುವುದಾಗಿಯೂ, ಬೆಲ್ಲದ ಬೆಲೆ ಪರಮಾವಧಿ ಇಳಿಯುವುದಕ್ಕೆ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳುವುದಾಗಿಯೂ ಅವರು ತಿಳಿಸಿದರು.

# 'ಹಣಗಾರಿಕೆ' ನಿರತ ರಾಜಕಾರಣ!

**ವಿಶ್ಲೇಷಣೆ**

**ಚಂದ್ರಕಾಂತ ವಡ್ಡು**

ಗಣಿಗಾರಿಕೆಯ ಜಾಗದಲ್ಲೀಗ 'ಹಣಗಾರಿಕೆ' ಕಾಣಿಸಿಕೊಂಡಿದೆ. 'ಬಳ್ಳಾರಿ ರಿಪಬ್ಲಿಕ್' ಪ್ರಭಾವ ಮಂಕಾಗಿದೆ; ಅದರ ಜಾಗದಲ್ಲಿ ಹಲವು ರಿಪಬ್ಲಿಕ್‌ಗಳು ತಲೆಯೆತ್ತಿವೆ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿನ ರಿಪಬ್ಲಿಕ್‌ಗಳ ದೆಸೆಯಿಂದ ರೂಪುಗೊಂಡಿರುವ 'ಹಣಗಾರಿಕೆ' ಉದ್ಯಮವಾಗಿ ರೂಪುಗೊಳ್ಳುತ್ತಿರುವ ಸಂದರ್ಭದಲ್ಲಿ 'ಬಡವರ ಮಕ್ಕಳ' ನಾಳೆಗಳು ಹೇಗಿರಬಹುದು?

ಸಿದ್ದರಾಮಯ್ಯ ಅವರು ದಾಖಲೆ ಅವಧಿಯ ಮುಖ್ಯಮಂತ್ರಿಯಾಗಿ ದೇವರಾಜ ಅರಸು ಅವರನ್ನು ಮೀರಿಸಿದ ಈ ಸಂದರ್ಭದಲ್ಲಿ ಇಬ್ಬರೂ ಸಾಮಾಜಿಕ ನ್ಯಾಯ ಪ್ರತಿಪಾದಕರ ಆಡಳಿತ ಮಾದರಿಗಳ ತುಲನೆಯು ಅಗತ್ಯವಾಗಿ, ಸಹಜವಾಗಿ ಆಗಬೇಕಾದ ಕಾರ್ಯ. ಅದು ಭರದಿಂದ ಸಾಗಿದೆ. ಈ ರಾಜಕೀಯ ನಾಯಕದ್ವಯರು ಸರ್ಕಾರದ ನೇತೃತ್ವವಹಿಸಿಕೊಂಡು ನಡೆಸಿದ ಆಡಳಿತ, ಜಾರಿಗೆ ತಂದ ಕಾನೂನುಗಳು ಹಾಗೂ ಕಲ್ಯಾಣ ಕಾರ್ಯಕ್ರಮಗಳ ಅವಲೋಕನದ ಜೊತೆಗೇ ಇಬ್ಬರ ಅಧಿಕಾರಾವಧಿಯ ಕಾಲಘಟ್ಟಗಳ ವ್ಯತ್ಯಾಸಗಳನ್ನು ತಕ್ಕಡಿಯಲ್ಲಿ ಇರಿಸುವ ಜರೂರು ಕೂಡ ಇದೆ. ನಾಗರಿಕ ಸಮಾಜವನ್ನು ಬೆಚ್ಚಿಬೀಳಿಸಿರುವ ಬಳ್ಳಾರಿಯ ಭಯಾನಕ ಘಟನೆಗಳ ಹಿನ್ನೆಲೆಯಲ್ಲಿ ಬದಲಾದ ರಾಜಕೀಯ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಇಂಥ ಹೋಲಿಕೆ ನೆರವಾಗಬಹುದು.

ಅರಸು ಅವರ ಆಡಳಿತ ಕಾಲದಲ್ಲಿ ಕಠಿಣ ಸವಾಲುಗಳ ನಡುವೆಯೂ ಸ್ವಾತಂತ್ರ್ಯೋತ್ತರ ಭಾರತದ ಆದರ್ಶಮಯ ವಾತಾವರಣವು ರಾಜಕಾರಣ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ, ವ್ಯಕ್ತಿಗಳಲ್ಲೂ ತುಸುಮಟ್ಟಿಗೆ ಪಸೆ ಉಳಿಸಿಕೊಂಡಿತ್ತು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಆಗಷ್ಟೇ ಮೌಲ್ಯಗಳ ಪತನದ ಪ್ರಕ್ರಿಯೆ ಪಿಳಿಪಿಳಿ ಕಣ್ಣುಬಿಡುತ್ತಿದ್ದ ಕಾಲಘಟ್ಟವದು. ಸಿದ್ದರಾಮಯ್ಯ ಅವರ ಕಾಲದ ಹೊತ್ತಿಗೆ ರಾಜಕಾರಣ, ರಾಜಕಾರಣಿ, ಮತದಾರ ಅಷ್ಟೇ ಅಲ್ಲ, ಒಟ್ಟು ಪ್ರಜಾಪ್ರಭುತ್ವ ವ್ಯವಸ್ಥೆಯ ಸ್ವರೂಪವೇ ವಿರೂಪಗೊಂಡಿರುವ ಸನ್ನಿವೇಶಕ್ಕೆ ನಾಡು ಸಾಕ್ಷಿಯಾಗುತ್ತಿದೆ. ಅರಸು ಕಾಲದಲ್ಲಿ ಪ್ರಚಲಿತದಲ್ಲಿದ್ದ ಅಬಕಾರಿ, ಕ್ಯಾಪಿಟೇಷನ್ ವಲಯದ ಪ್ರಭಾವಗಳು ಸಿದ್ದರಾಮಯ್ಯ ಕಾಲದ ಗಣಿ ಮತ್ತು ರಿಯಲ್ ಎಸ್ಟೇಟ್ ಉದ್ಯಮಗಳ ಹಾವಳಿಯ ಎದುರು ಗೌಣವಾಗಿ ಕಂಡರೆ ಅಚ್ಚರಿಯೆನ್ನಿಸುವುದಿಲ್ಲ.

ಅರಸು ಅವರ ಅಧಿಕಾರಾವಧಿಯ ದಾಖಲೆಯನ್ನು ಮೀರಿದ ಸಂದರ್ಭದಲ್ಲಿ ಸಿದ್ದರಾಮಯ್ಯನವರು ಆಡಿದ ಮಾತುಗಳಲ್ಲಿ ಬದಲಾದ ಕಾಲಧರ್ಮ ಹಾಗೂ ತಮ್ಮಂತಹವರಿಗೂ ಅನಿವಾರ್ಯವಾದ ರಾಜಿ ರಾಜಕಾರಣ ಸೂಚ್ಯವಾಗಿ ಪ್ರಸ್ತಾಪವಾಗಿರುವುದನ್ನು ಗುರುತಿಸಬಹುದು.

ಕರ್ನಾಟಕ ಏಕೀಕರಣ ಪೂರ್ವದಲ್ಲಿ ಆಂಧ್ರ ಪ್ರದೇಶದ ಕುಖ್ಯಾತ ರಾಯಲಸೀಮಾ ವಲಯಕ್ಕೆ ಸೇರಿದ್ದ ಬಳ್ಳಾರಿಯ ಕೆಲವು ಭಾಗಗಳು ಮತ್ತು ಕೆಲವು ಜನರು ಜಮೀನ್ದಾರಿ ಅಹಂಕಾರ, ದರ್ಪ ಮತ್ತು ದೌರ್ಜನ್ಯದಿಂದ ಹೊರಬರಲು ಇನ್ನೂ ಸಾಧ್ಯವಾಗಿಲ್ಲ. ಈ ಫ್ಯೂಡಲ್ ಮನಃಸ್ಥಿತಿಯು ಸಾಮಾಜಿಕ ನಡತೆಯ ಜೊತೆಗೆ ಉದ್ಯಮ ಮತ್ತು ರಾಜಕಾರಣವನ್ನೂ ವ್ಯಾಪಕವಾಗಿ ಆವರಿಸಿಕೊಂಡಿರುವುದು ಎದ್ದುಕಾಣುತ್ತದೆ. ರಾಯಲಸೀಮಾ ಶೈಲಿಯ ಹಿಂಸಾತ್ಮಕ ರಾಜಕಾರಣದಲ್ಲಿ ಕೌಟುಂಬಿಕ ಕಲಹ, ಸ್ಥಳೀಯ ಯಜಮಾನಿಕೆ, ಜಾತಿ ಅಹಂಕಾರಗಳು ಚಾರಿತ್ರಿಕವಾಗಿ ಮೇಲುಗೈ ಪಡೆದಿರುವುದನ್ನು ಗಮನಿಸಬಹುದು.

ವಿವಿಧ ಸಂಪನ್ಮೂಲಗಳು, ಗುತ್ತಿಗೆ ವ್ಯವಹಾರ ಮತ್ತು ಸ್ಥಳೀಯ ಆಡಳಿತದ ಮೇಲಿನ ನಿಯಂತ್ರಣಕ್ಕಾಗಿ ಈ ಶಕ್ತಿಗಳು ಸದಾ ತಿಕ್ಕಾಟದಲ್ಲಿ ತೊಡಗಿರುತ್ತವೆ. ಹೀಗೆ ಖಾಸಗಿ ಅಧಿಕಾರ ಕೇಂದ್ರಗಳ ಹೊರಹೊಮ್ಮುವಿಕೆಯು ಸರ್ಕಾರದ ಅಧಿಕಾರ ಮತ್ತು ಅಸ್ತಿತ್ವಕ್ಕೆ ಧಕ್ಕೆ ತರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಸಾಂವಿಧಾನಿಕ ಆಡಳಿತ ವ್ಯವಸ್ಥೆಯನ್ನು ಬುಡಮೇಲು ಮಾಡಿ ಭಯಭೀತಿಯನ್ನೇ ಸಾಧನವಾಗಿಸಿಕೊಂಡ ಖಾಸಗಿ ಆಳ್ವಿಕೆ ಏರ್ಪಡುವುದು ಅತ್ಯಂತ ಅಪಾಯಕಾರಿ ಬೆಳವಣಿಗೆ. ರಾಜಕಾರಣ, ವ್ಯಾಪಾರ ಮತ್ತು ಅಪರಾಧಗಳ ಸಮ್ಮಿಶ್ರಣದಂತೆ ತೋರುವ ನಾಯಕರ ಸಂಘರ್ಷಗಳಲ್ಲಿ ಭಾಗಿಯಾಗುವುದು, ಗುರಿಯಾಗುವುದು ಅನುಯಾಯಿಗಳ ಪಾಲಿಗೆ ಅನಿವಾರ್ಯ ಕರ್ಮ. ಅಲ್ಲಿನ ಯಜಮಾನ ಸಂಸ್ಕೃತಿಯ ಕ್ರೌರ್ಯಗಳಿಗೆ ಬಳಕೆಯಾಗುವ ಖಾಸಗಿ ಸೈನ್ಯವನ್ನು ಬಳ್ಳಾರಿಯ 'ರೆಡ್ಡಿಗಾರು' ಹೊಂದಿಲ್ಲ ಎನ್ನುವುದು ಅಪ್ಪಟಮಟ್ಟಿಗೆ ನಿರಾಳತೆಯ ವಿಷಯ.

'ರಿಪಬ್ಲಿಕ್ ಆಫ್ ಬಳ್ಳಾರಿ' ಅನ್ನೋ ಮಾತಿಗೆ ದಶಕಗಳ ಇತಿಹಾಸವಿದೆ. ಎಪ್ಪತ್ತು–ಎಂಬತ್ತರ ದಶಕದಲ್ಲಿ ಆಂಧ್ರ ಒಲವಿನ ಕಮ್ಮಾ ಸಮುದಾಯದ ಮುಂಡ್ಲೂರು ಮನೆತನ ಬಳ್ಳಾರಿಯನ್ನು ಆಳುತ್ತಿತ್ತು. ಎಂಬತ್ತರ ದಶಕದಲ್ಲಿ ಗ್ರಾನೈಟ್ ಕುಳ ನಾರಾ ಸೂರ್ಯನಾರಾಯಣರೆಡ್ಡಿ ಕುರುಗೋಡು ಕ್ಷೇತ್ರದ ಶಾಸಕರಾಗುವ ಮೂಲಕ ಅಧಿಕಾರ ಮತ್ತು ಹಣದಿಂದ ಮುನ್ನೆಲೆಗೆ ಬಂದಾಗ ಜನಾರ್ದನರೆಡ್ಡಿ ಸಹೋದರರು ಸಾರ್ವಜನಿಕ ದೃಶ್ಯದಲ್ಲಿಯೇ ಇರಲಿಲ್ಲ. ಹಳೆಯ ತಲೆಮಾರಿನ ನಾರಾಯಣರೆಡ್ಡಿಯ ಮಗನೇ ಉತ್ಸಾಹದಿಂದ ಕುದಿಯುತ್ತಿರುವ ಬಳ್ಳಾರಿಯ ಹಾಲಿ ಯುವಶಾಸಕ ಭರತ್ ರೆಡ್ಡಿ.

ತೊಂಬತ್ತರ ದಶಕದ ಉತ್ತರಾರ್ಧದಲ್ಲಿ ಉಕ್ಕು ತಯಾರಿಕಾ ಕ್ಷೇತ್ರದಲ್ಲಿ ಕೊರೆಕ್ಸ್ ತಂತ್ರಜ್ಞಾನದ ಅಳವಡಿಕೆ ಮತ್ತು ಚೀನಾದ ಬೇಡಿಕೆ ಕಾರಣದಿಂದ ಕಡಿಮೆ ಗುಣಮಟ್ಟದ, ತ್ಯಾಜ್ಯವೆಂದು ಎಸೆದ ಕಬ್ಬಿಣದ ಅದಿರಿಗೆ ಬಂಗಾರದ ಬೆಲೆ ಬಂದು ಗಣಿಗಾರಿಕೆಯ ಆರ್ಭಟ ಆರಂಭವಾಯಿತು. ಆ ಮೂಲಕ ನವ ಬಂಡವಾಳಶಾಹಿಗಳು, ನವ ರಾಜಕಾರಣಿಗಳು, ನವೀನ ಜೀವನಶೈಲಿಗಳ ಜೊತೆಗೆ ಹಳೆಯ ರಾಯಲಸೀಮಾ ಕ್ರೌರ್ಯ ಜೀವ ತಳೆದಿದ್ದು ಇತಿಹಾಸ. ಆಗಲೇ ಕಾಲಿರಿಸಿದ್ದು– ಖಾಸಗಿ ಗನ್‌ಮ್ಯಾನ್‌ಗಳ ನೇಮಕ, ಹೆಲಿಕಾಪ್ಟರ್‌ಗಳ ಹಾರಾಟ, ಕಣ್ಣಿಗೆ ಕಂಡ ಆಸ್ತಿಯನ್ನೆಲ್ಲ ದಕ್ಕಿಸಿಕೊಳ್ಳುವ ದಾಹ, ತಮ್ಮದೇ ನಡೆಯಬೇಕು ಎನ್ನುವ ಅಹಂಕಾರ, ಚುನಾವಣೆಗಳನ್ನು ನಿಯಂತ್ರಿಸುವ ತಾಕತ್ತು. ಇದರ ಮುಂದುವರಿದ ಅವತಾರವಾಗಿಯೇ ಬಳ್ಳಾರಿಯ ಘಟನೆಯನ್ನು, ರೆಡ್ಡಿಗಳ ಆರ್ಭಟವನ್ನು ಗ್ರಹಿಸಬೇಕಾಗುತ್ತದೆ.

ಬಳ್ಳಾರಿಯ ಹಿಂಸಾಚಾರವನ್ನು ಆಕಸ್ಮಿಕವಾಗಿ ನಡೆದ ಬಿಡಿ ಪ್ರಸಂಗವೆಂದು ಭಾವಿಸಬೇಕಿಲ್ಲ; ಇದು ಒಟ್ಟಾರೆ ಕರ್ನಾಟಕದಲ್ಲಿ ಬದಲಾಗುತ್ತಿರುವ ರಾಜಕೀಯ ಸಂಸ್ಕೃತಿಯ ಪ್ರತೀಕ. ರಾಜಕಾರಣವು ನ್ಯಾಯಪ್ರಜ್ಞೆ ಮತ್ತು ಸಾಂವಿಧಾನಿಕ ಆಡಳಿತ ವ್ಯವಸ್ಥೆಯಿಂದ ದೂರ ಸರಿದು ಸಂಘರ್ಷ ಮತ್ತು ಬಲಾಢ್ಯತೆಯ ಮೇಲುಗೈಗೆ ಆಸ್ಪದ ಮಾಡುತ್ತಿರುವುದು ಆತಂಕಕಾರಿ ವಿದ್ಯಮಾನ. ದುಷ್ಟ ಹಿತಾಸಕ್ತಿಗಳ ಕಾದಾಟಕ್ಕೆ ಸಾರ್ವಜನಿಕ ಸ್ಥಳಗಳು ಬಳಕೆಯಾಗುತ್ತಿರುವುದು ಹಾಗೂ ನಾಗರಿಕರು ಮೂಕಪ್ರೇಕ್ಷಕರಾಗುತ್ತಿರುವುದು ಕಳವಳವನ್ನು ಇನ್ನಷ್ಟು ಹೆಚ್ಚಿಸುತ್ತದೆ.

ಬಳ್ಳಾರಿಯ ಹಿಂಸಾತ್ಮಕ ಘರ್ಷಣೆಗೆ ಕಾರಣರಾದ ಇಬ್ಬರೂ ರಾಜಕೀಯ ನಾಯಕರು ಚುನಾಯಿತ ಜನಪ್ರತಿನಿಧಿಗಳು; ಜನಾರ್ದನರೆಡ್ಡಿ ಗಂಗಾವತಿಯ ಶಾಸಕರಾದರೆ, ನಾರಾ ಭರತ್ ರೆಡ್ಡಿ ಬಳ್ಳಾರಿ ನಗರ ಶಾಸಕರು. ಇವರಿಬ್ಬರ ತಾಕಲಾಟ, ಪೀಕಲಾಟದ ರಾಜಕಾರಣದ ಆದಿ ಮತ್ತು ಅಂತ್ಯ ಏನಾದರೂ ಆಗಿರಲಿ, ಇವರನ್ನು ತಮ್ಮ ಪ್ರತಿನಿಧಿಗಳಾಗಿ ಆರಿಸಿದ ಲಕ್ಷಾಂತರ ಮತದಾರರ ಪಾಡೇನು? ಇವರು ತೋರುವ ದಬ್ಬಾಳಿಕೆ ಮತ್ತು ದುಷ್ಟ ವರ್ತನೆಯ ನೈತಿಕ ಹೊಣೆಯನ್ನು ಮತದಾರರು ಹೊರಬೇಕೆ?

ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಸುಪ್ರೀಂ ಕೋರ್ಟ್ ವಕೀಲ ಪ್ರಶಾಂತ್ ಭೂಷಣ್, ಮಹಾ ಸಂಗ್ರಾಮಿ ಎಸ್.ಆರ್. ಹಿರೇಮಠ ಅವರ ಪರಿಶ್ರಮದ ಫಲವಾಗಿ ಗಣಿಗಾರಿಕೆಯ ಆಟಾಟೋಪ ತಹಬಂದಿಗೆ ಬಂದಿರುವುದು ಆಶಾದಾಯಕ ಬೆಳವಣಿಗೆ. ಆದರೆ 'ಗಣಿಗಾರಿಕೆ', 'ಕೈಗಾರಿಕೆ' ಇತ್ಯಾದಿಗಳ ಜಾಗವನ್ನು 'ಹಣಗಾರಿಕೆ ರಾಜಕಾರಣ' ಎಂಬ ನವೋದ್ಯಮ ಆಕ್ರಮಿಸಿಕೊಂಡಿರುವುದು, ಇದು ಇಡೀ ರಾಜ್ಯವನ್ನೇ ಆವರಿಸಿಕೊಂಡಿರುವುದು ಹಲವು ರಿಪಬ್ಲಿಕ್‌ಗಳ ಉಗಮಕ್ಕೆ, ಬೆಳಗುವಿಕೆಗೆ ಎಡೆ ಮಾಡಿರುವುದು ದುರಂತದಾಯಕ ಸ್ಥಿತಿಗೆ ದ್ಯೋತಕ.

ಚುನಾವಣಾ ರಾಜಕಾರಣದ ಮೂಲಕ ಅಧಿಕಾರದ ಗುತ್ತಿಗೆ ಪಡೆಯುವುದು, ಅಧಿಕಾರದ ಗಣಿಯಲ್ಲಿ 'ಹಣಗಾರಿಕೆ' ನಡೆಸುವುದು, ಗಳಿಸಿದ ಹಣವನ್ನು ದಬ್ಬಾಳಿಕೆಗೆ ಬಳಸುವುದು ಒಂದು ಸರಣಿಯಾಗಿ ಮುಂದುವರಿಯುತ್ತಿದೆ. ಗಣಿಗಾರಿಕೆಗೆ ನಿರ್ದಿಷ್ಟ ಪ್ರದೇಶದ ಮಿತಿಯಾದರೂ ಇರುತ್ತದೆ. ಆದರೆ, ಹಣಗಾರಿಕೆ ಉದ್ಯಮವು ರಾಜ್ಯದುದ್ದಕ್ಕೂ ಕಾರ್ಯವ್ಯಾಪ್ತಿ ಹೊಂದಿರುವಂತಹದು; ಶಿಕ್ಷಣ, ಆರೋಗ್ಯ, ಸಹಕಾರ, ರಿಯಲ್ ಎಸ್ಟೇಟ್ ಮುಂತಾದ ಹತ್ತಾರು ರೂಪದಲ್ಲಿ ಇದು ಚಾಲ್ತಿಯಲ್ಲಿದೆ. ವಿವಿಧ ಬಾಬತ್ತುಗಳಲ್ಲಿ ಬಿಡುಗಡೆಯಾಗುವ ಅನುದಾನ, ಅಭಿವೃದ್ಧಿ ಹೆಸರಿನ ಕಾಮಗಾರಿಗಳು, ಇಲಾಖೆಗಳ ದೈನಿಕ–ಮಾಸಿಕ–ವಾರ್ಷಿಕ ವಸೂಲಾತಿಯ ಹಂಚಿಕೆ, ಋಣ ತೀರಿಸಲು ಉದ್ಯಮಿಗಳು ಸಲ್ಲಿಸುವ ಸೂಟ್‌ಕೇಸುಗಳು... ಹೀಗೆ ಹಣಗಾರಿಕೆಯ ಸಂಪನ್ಮೂಲಗಳಿಗೆ ಕೊರತೆಯೇ ಇಲ್ಲ. ಇತ್ತೀಚೆಗೆ ಸರ್ಕಾರಿ ಅಧಿಕಾರಿಗಳ ವರ್ಗಾವಣೆಯು ಸಹ ಹಣಗಾರಿಕೆಯ ಬೃಹತ್ ಉದ್ಯಮವಾಗಿ ಬೆಳೆದು ನಿಂತಿರುವುದು ಸಮಕಾಲೀನ ವಾಸ್ತವ.

ಹಾಗಾಗಿಯೇ ಬೆಳಗಾವಿ, ಮಂಗಳೂರು, ಕಲಬುರಗಿ, ದಾವಣಗೆರೆ, ವಿಜಯಪುರ, ಶಿವಮೊಗ್ಗ ಮುಂತಾದ ಜಿಲ್ಲೆಗಳಲ್ಲಿ ಸ್ಥಳೀಯ ಮಾದರಿಯ ರಿಪಬ್ಲಿಕ್‌ಗಳನ್ನು ಗುರುತಿಸಲು ಸಾಧ್ಯ. ಬೆಂಗಳೂರು ಅಂತೂ ಹಲವು ರಿಪಬ್ಲಿಕ್‌ಗಳ ಒಕ್ಕೂಟ. ಬೆಳಗಾವಿಯಲ್ಲಿ ಕತ್ತಿ, ಜೊಲ್ಲೆ, ಜಾರಕಿಹೊಳಿ ಕುಟುಂಬಗಳು ಪ್ರಕಟಿಸುತ್ತಿರುವ 'ಚುನಾವಣಾ ಪಾಳೇಗಾರಿಕೆ', ದಾವಣಗೆರೆಯಲ್ಲಿ ಶಾಮನೂರು ಕುಟುಂಬ ರಾಜಕಾರಣಕ್ಕೆ ಪರ್ಯಾಯವೇ ಇಲ್ಲವೆಂಬ ವಾತಾವರಣ, ಶಿವಮೊಗ್ಗದಲ್ಲಿ ಯಡಿಯೂರಪ್ಪ ಕುಟುಂಬದ ಪಾರುಪತ್ಯ, ಮೊಮ್ಮಗನ ತನಕ ಚಾಚಿರುವ ಸಿದ್ದರಾಮಯ್ಯನವರ ಕುಟುಂಬಪ್ರೇಮ, ಕಲಬುರಗಿಯಲ್ಲಿ ಖರ್ಗೆ ಪ್ರಾಬಲ್ಯ– ಇವೆಲ್ಲಾ ಪ್ರತಿಬಿಂಬಿಸುವುದು ಇಂಥ ರಿಪಬ್ಲಿಕ್‌ಗಳನ್ನೇ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ 'ಬಡವರ ಮಕ್ಕಳು ಬೆಳಿಬೇಕು ಕಣ್ರಯ್ಯ' ಎಂಬ ನಟ 'ಡಾಲಿ' ಧನಂಜಯ್ ಅವರ ಪ್ರಸಿದ್ಧ ಮಾತಿಗೆ ವಿಶೇಷ ಅರ್ಥ ಮತ್ತು ಒತ್ತು ಸಿಗುತ್ತದೆ.

ಇತರ ಭಾಗಗಳ ಆಧುನಿಕ ಪಾಳೇಗಾರರು ಹಲವು ರೀತಿಯ ಒಳ–ಹೊರ ಸಂಘರ್ಷಗಳಲ್ಲಿ ನಿರತರಾಗಿದ್ದರೂ ಬಳ್ಳಾರಿ ರೀತಿಯಲ್ಲಿ ಬಹಿರಂಗವಾಗಿ ಗುಂಡು ಹಾರಿಸಿಕೊಳ್ಳುವ ಮಟ್ಟ ತಲಪಿಲ್ಲ ಎನ್ನುವುದಷ್ಟೇ ಸಮಾಧಾನಕರ ಸಂಗತಿ.

ಇವೆಲ್ಲಾ ಅನಾಚಾರಗಳ ನಡುವೆ ಪ್ರಜಾಸತ್ತಾತ್ಮಕ ಮೌಲ್ಯಗಳ ಹುಡುಕುವಿಕೆ, ಸ್ಥಾಪಿಸುವಿಕೆ ಸಾಗಬೇಕಿದೆ.

ಎಐ

## ವಾಚಕರ ವಾಣಿ

### ಆಧುನಿಕ ಚಕ್ರವರ್ತಿಗಳ ಹಿಮ್ಮುಖ ಚಲನೆ

**ಹಿಂದಿನ** ಕಾಲದಲ್ಲಿ ಅಲೆಗ್ಸಾಂಡರ್‌ನಂತಹ ಚಕ್ರವರ್ತಿಗಳು ಬೇರೆ ಬೇರೆ ದೇಶಗಳ ಮೇಲೆ ದಂಡೆತ್ತಿ ಹೋಗುತ್ತಿದ್ದರು. ರಣರಂಗದಲ್ಲಿ ಯುದ್ಧ ಮಾಡಿ ರಾಜನನ್ನು ಸೆರೆ ಹಿಡಿದು, ಆತನ ರಾಜ್ಯವನ್ನು ವಶಕ್ಕೆ ಪಡೆದುಕೊಳ್ಳುತ್ತಿದ್ದರು. ಆಧುನಿಕ ಚಕ್ರವರ್ತಿಗಳು ಸೈನ್ಯ ಕಳುಹಿಸಿ ರಾಜನನ್ನು ಅಪಹರಿಸಿ, ಆ ರಾಜ್ಯಕ್ಕೆ ತಾನೇ ಚಕ್ರಾಧಿಪತಿ ಎಂದು ಘೋಷಿಸಿಕೊಳ್ಳುತ್ತಿದ್ದಾರೆ. ವೆನೆಜುವೆಲಾ ಅಧ್ಯಕ್ಷರನ್ನು ಸೆರೆ ಹಿಡಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀತಿ ಇದಕ್ಕೆ ನಿದರ್ಶನ. ಕಾಲಚಕ್ರ ಹಿಮ್ಮುಖವಾಗಿ ತಿರುಗುತ್ತಿದೆಯೆ?

**ಟಿ.ವಿ.ಬಿ. ರಾಜನ್,** ಬೆಂಗಳೂರು

### ನದಿ ಜೋಡಣೆ: ಜೀವಜಾಲಕ್ಕೆ ಸಂಚಕಾರ

**ಬೇಡ್ತಿ**–ವರದಾ ನದಿಗಳ ಜೋಡಣೆ ಬೆಂಬಲಿಸಿ ಹಾವೇರಿಯಲ್ಲಿ ಸಮಾವೇಶ ಮಾಡುವುದಾಗಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಕುಡಿಯುವ ನೀರು ಮತ್ತು ನೀರಾವರಿಗೆಂದು ಬರಪೀಡಿತ ಬಯಲುಸೀಮೆಗೆ ನೀರು ಬೇಕು ಎಂಬುದು ಅವರ ವಾದ. ನೈಸರ್ಗಿಕವಾಗಿ ಹರಿಯುತ್ತ ಅಸಂಖ್ಯಾತ ಜೀವಿಗಳನ್ನು ಪೋಷಿಸಿಕೊಂಡು ಬರುತ್ತಿರುವ ನದಿಯನ್ನು ತಿರುಗಿಸುವ ಬದಲಿಗೆ, ಬಿದ್ದ ಮಳೆಯನ್ನೇ ಹಿಡಿದಿಡುವಂಥ ಯೋಜನೆಗಳನ್ನು ಬೆಂಬಲಿಸಬಾರದೆ? ಬಯಲುಸೀಮೆಯಲ್ಲಿ ಬೆಳೆಯುವ ಬೆಳೆಗಳು ನಮ್ಮೆಲ್ಲರ ಆಹಾರವಾಗಿವೆ. ಅಲ್ಲಿ ನೀರಾವರಿ ಮಾಡಿ ಕಬ್ಬು, ಅಡಿಕೆಯಂತಹ ಏಕಬೆಳೆಯನ್ನು ಪ್ರೋತ್ಸಾಹಿಸುವುದು ಎಷ್ಟು ಸರಿ? ಈಗಾಗಲೇ, ಬಯಲುಸೀಮೆಯಲ್ಲಿ ಅಡಿಕೆ ಬೆಳೆ ವಿಸ್ತೀರ್ಣ ಹೆಚ್ಚಿದೆ. ಕಾಡು, ನಿಸರ್ಗ ನಾಶ ಮಾಡಿ ವಾಣಿಜ್ಯ ಬೆಳೆ ಬೆಳೆಯುವ ನಾವು ಮುಂದೆ ಹೊಟ್ಟೆಗೇನು ತಿನ್ನೋಣ?

**ಶಾರದಾ ಗೋಪಾಲ,** ಧಾರವಾಡ

### 'ಉದಯರವಿ' ಸ್ಮಾರಕ: ನಿರ್ಲಕ್ಷ್ಯ ಏಕೆ?

**ಕುವೆಂಪು** ಕನ್ನಡ ಸಾಹಿತ್ಯ ಲೋಕದ ಅನರ್ಘ್ಯ ರತ್ನ. ಅವರು ವಾಸವಿದ್ದ ಮೈಸೂರಿನ 'ಉದಯರವಿ' ಮನೆಯನ್ನು ಸ್ಮಾರಕ ಮಾಡಬೇಕೆಂಬ ಕೂಗು ಸಿದ್ದರಾಮಯ್ಯನವರು ಮೊದಲ ಬಾರಿಗೆ ಮುಖ್ಯಮಂತ್ರಿ ಆದಾಗಿನಿಂದಲೂ ಕೇಳಿ ಬರುತ್ತಿದೆ. ಅದಕ್ಕೆ ಅಧಿಕಾರಿಗಳು, ಸಚಿವರು ಸಾಕಷ್ಟು ಬಾರಿ ಮಾಹಿತಿ ಪಡೆದರೂ ಯಾವುದೇ ಕೆಲಸ ಆಗಿಲ್ಲ. ಕುವೆಂಪು ಅವರ ಕುಟುಂಬಸ್ಥರೇ ಸ್ಮಾರಕ ನಿರ್ಮಿಸುವ ಕಾರ್ಯಕ್ಕೆ ಮುಂದಾಗಿರುವುದು ಸಂತಸದ ಸಂಗತಿ. ಕನ್ನಡಕ್ಕೆ ಮೊದಲು ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯವನ್ನು ಉದಯರವಿಯಲ್ಲಿಯೇ ಬರೆದರು ಎಂದು ಕೇಳಿದ್ದೇವೆ. ಅಂತಹ ಮನೆಯನ್ನು ಸ್ಮಾರಕವಾಗಿ ನಿರ್ಮಿಸಲು ರಾಜ್ಯ ಸರ್ಕಾರ ನಿರಾಸಕ್ತಿ ತೋರುತ್ತಿರುವುದು ದುರದೃಷ್ಟಕರ. ಕುಪ್ಪಳಿ ಮನೆಯಂತೆ ಈ ಮನೆಯನ್ನೂ ಪ್ರವಾಸಿ ತಾಣವಾಗಿ ರೂಪಿಸಬೇಕಿದೆ.

**ದರ್ಶನ್ ಚಂದ್ರ ಎಂ.ಪಿ.,** ಮುಕ್ಕಡಹಳ್ಳಿ

### ಸ್ಥಳೀಯ ಸಂಸ್ಥೆ ಚುನಾವಣೆಗೆ ತಡ ಬೇಡ

**ಗ್ರೇಟರ್** ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಐದು ಪಾಲಿಕೆಗಳಿಗೆ ಚುನಾವಣೆ ನಡೆಸಲು ಸುಪ್ರೀಂ ಕೋರ್ಟ್ ಗಡುವು ನೀಡಿದೆ. ಕಳೆದ ಐದು ವರ್ಷಗಳಿಂದಲೂ ಸರ್ಕಾರಗಳು ಚುನಾವಣೆ ಮುಂದೂಡುತ್ತಾ ಬಂದಿವೆ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬವು ಅಧಿಕಾರ ವಿಕೇಂದ್ರೀಕರಣದ ಆಶಯಕ್ಕೆ ಪೆಟ್ಟು ನೀಡಲಿದೆ. ಸರಿಯಾದ ಸಮಯಕ್ಕೆ ಲೋಕಸಭೆ, ವಿಧಾನಸಭಾ ಚುನಾವಣೆ ನಡೆಸಬೇಕೆಂದು ಬಯಸುವ ರಾಜಕೀಯ ಪಕ್ಷಗಳು, ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿ ಅನಾದರ ತಳೆಯುವುದು ಸರಿಯಲ್ಲ.

**ಪುಟ್ಟಯ್ಯ ಹಂದನಕೆರೆ,** ತುಮಕೂರು

### ಕಂದಾಯ ಇಲಾಖೆಯ ಬಕಾಸುರರ ಕಥೆ

**ಗ್ರಾಮಲೆಕ್ಕಿಗರ** ತಪ್ಪಿನಿಂದಾಗಿ ಸವದತ್ತಿ ತಾಲ್ಲೂಕಿನ ರೈತ ಈರಪ್ಪ ಈಗ ಕಂದಾಯ ಇಲಾಖೆಯ ಕಂಬ ಸುತ್ತುತ್ತಿರುವ ಕುರಿತು ವರದಿಯಾಗಿದೆ. ಇದು ಕಂದಾಯ ಇಲಾಖೆಯ ಅಧಿಕಾರಿಗಳು ದುಡ್ಡಿನ ಆಸೆಗೆ ಸೃಷ್ಟಿಸಿರುವ ರೌರವ ನರಕದ ಸೂಜಿಮೊನೆ ಅಷ್ಟೆ. ವಾಸ್ತವ ಇದಕ್ಕಿಂತ ಭೀಕರ. ಈ ಇಲಾಖೆಯಲ್ಲಿ ಜನರಿಗೆ ಆಗಬೇಕಿರುವ ಎಷ್ಟೋ ಕೆಲಸಗಳನ್ನು ಅರ್ಧದಿನದಲ್ಲಿ ಮಾಡಿಕೊಡಬಹುದು. ಆದರೆ, ಅಲ್ಲಿರುವ 'ಬಕಾಸುರರು' ಇದಕ್ಕೆ ಆಸ್ಪದ ಕೊಡುವುದಿಲ್ಲ. ಬೇಕೆಂದೇ ಹೆಸರು, ಇನಿಷಿಯಲ್ಸ್, ಚಕ್ಕುಬಂದಿ, ವಿಸ್ತೀರ್ಣ, ಜಮೀನಿನ ನಮೂನೆ ಇತ್ಯಾದಿಯನ್ನು ತಪ್ಪಾಗಿ ನಮೂದಿಸಿ, ಬದುಕಿನ ನೆಮ್ಮದಿಯನ್ನೇ ನಾಶ ಮಾಡುತ್ತಿದ್ದಾರೆ. ಈರಪ್ಪನ ಕತೆಯನ್ನೇ ನೋಡಿ– ತಪ್ಪು ಮಾಡಿದ್ದು ಊರಿನ ಗ್ರಾಮಲೆಕ್ಕಿಗ, ಅದು ಸರಿಯಾಗಬೇಕಾದರೆ ಬೆಂಗಳೂರಿನಲ್ಲೇ ಆಗಬೇಕು! ಇದಕ್ಕಿಂತ ಕ್ರೂರ ವ್ಯಂಗ್ಯ ಇನ್ನೊಂದಿಲ್ಲವೇನೋ?

**ಬಿ.ಎಸ್. ಜಯಪ್ರಕಾಶ ನಾರಾಯಣ,** ಅಗ್ರಹಾರ ಬೆಳಗುಲಿ

### ನೈತಿಕ ಹೊಣೆ ಮರೆತ ಜನಪ್ರತಿನಿಧಿಗಳು

**ರಾಜಕೀಯ** ಪಕ್ಷಗಳ ಮುಖಂಡರ ವರ್ತನೆಯು ಜನಸಾಮಾನ್ಯರಲ್ಲಿ ಬೇಸರ ಹುಟ್ಟಿಸಿದೆ. ಬಳ್ಳಾರಿ ಮತ್ತು ಬೀದರ್ ಜಿಲ್ಲೆಯಲ್ಲಿ ಇತ್ತೀಚೆಗೆ ಜನಪ್ರತಿನಿಧಿಗಳು ನಡೆದುಕೊಂಡ ರೀತಿಯೇ ಇದಕ್ಕೆ ಉದಾಹರಣೆ. ಶಾಸಕರು ಮಾದರಿ ವ್ಯಕ್ತಿತ್ವ ಹೊಂದಿರಬೇಕು ಎಂಬುದು ಮತದಾರರ ಬಯಕೆ. ಆದರೆ, ಅವರ ವೈಯಕ್ತಿಕ ಪ್ರತಿಷ್ಠೆಗೆ ತಳಮಟ್ಟದ ಕಾರ್ಯಕರ್ತರು ಜೀವ ಕಳೆದುಕೊಳ್ಳುವಂತಾಗಿದೆ. ಇಂತಹ ನಡವಳಿಕೆಯಿಂದ ಸಮಾಜಕ್ಕೆ ನೀಡುವ ಸಂದೇಶವಾದರೂ ಏನು?

ಜಿಲ್ಲೆಗಳ ಅಭಿವೃದ್ಧಿ ಅಥವಾ ದೀನ ದಲಿತರ ಕಲ್ಯಾಣಕ್ಕೆ ಜನಪ್ರತಿನಿಧಿಗಳು ಹೋರಾಟ ನಡೆಸಿದ್ದು ವಿರಳ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರ ಮಾತು, ಕೆಲಸ ಇತರರ ಭಾವನೆಗಳಿಗೆ ಧಕ್ಕೆ, ಮುಜುಗರ ತರಬಾರದು. ಹೊಣೆಗಾರಿಕೆ ಅರಿತು ಕೆಲಸ ನಿರ್ವಹಿಸಬೇಕಿದೆ.

**ಕಿರಣ ಮ. ಹೂಗಾರ,** ಧಾರವಾಡ

**ಚುರುಮುರಿ**

### ಸಂಕ್ರಾಂತಿ ಸ್ಪರ್ಧೆ

• ಮಣ್ಣೆ ರಾಜು

**ಚಟ್ನಿಹಳ್ಳಿಯಲ್ಲಿ** ಮುದ್ದೆ ಉಣ್ಣುವ ಸ್ಪರ್ಧೆ ಏರ್ಪಡಿಸಿ ಶಂಕ್ರಿ ಫೇಮಸ್ ಆಗಿದ್ದ, ರೈತರ ಮಕ್ಕಳು ಮದುವೆಯಾಗಲು ಹೆಣ್ಣು ಸಿಗುತ್ತಿಲ್ಲ, ಸರ್ಕಾರವೇ ಹೆಣ್ಣು ಹುಡುಕಿ ಮದುವೆ ಮಾಡಬೇಕು ಎಂದು ಹೋರಾಟ ಮಾಡಿ ಹೆಸರಾಗಿದ್ದ.

ಈಗ ಸಂಕ್ರಾಂತಿ ಅಂಗವಾಗಿ ಕೊಬ್ಬರಿ ಸುಲಿಯುವ ಸ್ಪರ್ಧೆ ಆಯೋಜಿಸಿದ್ದ, ಸುತ್ತಮುತ್ತಲಿನ ಗ್ರಾಮಗಳ ನೂರಾರು ಸ್ಪರ್ಧಿಗಳು ಭಾಗವಹಿಸಿ ಕೊಬ್ಬರಿ ಸುಲಿದಿದ್ದರು. ಸುಲಿಯುವ ಕೂಲಿಯಾಳು ಸಿಗದೆ ಬಹುದಿನಗಳಿಂದ ಸ್ಟಾಕ್ ಉಳಿದಿದ್ದ ಕೊಬ್ಬರಿ ಗಿಟುಕು ರಾಶಿಯನ್ನು ಖಾಲಿ ಮಾಡಿಕೊಂಡ!

ಬಹುಮಾನ ವಿತರಣೆ ಸಮಾರಂಭದಲ್ಲಿ ಶಾಸಕರು ವಿಜೇತರಿಗೆ ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಿ, 'ಕೊಬ್ಬರಿ ವೀರ' ಪ್ರಶಸ್ತಿ ನೀಡಿ ಗೌರವಿಸಿದರು.

'ಸಂಗೀತ, ನೃತ್ಯ, ರಂಗೋಲಿ ಸ್ಪರ್ಧೆಯಂತೆ ಶ್ರೀಮಾನ್ ಶಂಕ್ರಿಯವರು ಸುಗ್ಗಿ ಹಬ್ಬದ ಸಂದರ್ಭದಲ್ಲಿ ಕೊಬ್ಬರಿ ಸುಲಿಯುವ ಸ್ಪರ್ಧೆ ಆಯೋಜಿಸಿರುವುದು ಶ್ಲಾಘನೀಯ ಕಾರ್ಯ. ಕೃಷಿ ಲಾಭದಾಯಕ ಆಗಿಲ್ಲವೆಂದು ಯುವಜನರು ವ್ಯವಸಾಯದಿಂದ ವಿಮುಖರಾಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಶಂಕ್ರಿ ಅವರು ಹೊಲ ಉಳುವ, ಪೈರು ನಾಟಿ ಮಾಡುವ, ಧಾನ್ಯ ಒಕ್ಕಣೆ ಮಾಡುವ ಸ್ಪರ್ಧೆಗಳನ್ನು ನಡೆಸಿ ನಮ್ಮ ಕೃಷಿ ಸಂಸ್ಕೃತಿಯನ್ನು ಎತ್ತಿಹಿಡಿದಿದ್ದಾರೆ...' ಎಂದು ಶಾಸಕರು ಹಾಡಿ ಹೊಗಳಿದರು.

'ಕೃಷಿ ಕಸುಬು ಮರೆಯುತ್ತಿರುವ ರೈತಮಕ್ಕಳನ್ನು ವ್ಯವಸಾಯಕ್ಕೆ ಮರಳಿ ಕರೆತರಲು ಕೃಷಿ ಕೌಶಲ ತರಬೇತಿ ನೀಡುವ ಯೋಜನೆ ಆರಂಭಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ' ಎಂದರು. ಜನ ಚಪ್ಪಾಳೆ ತಟ್ಟಿದರು.

'ಅದ್ಸರಿ, ಇಂತಹ ಸ್ಪರ್ಧೆಗಳನ್ನು ಏರ್ಪಡಿಸುವ ಉದ್ದೇಶವೇನು?' ಶಾಸಕರು ಶಂಕ್ರಿಯ ಕಿವಿಯಲ್ಲಿ ಪಿಸುಗುಟ್ಟಿದರು.

'ದೊಡ್ಡ ಉದ್ದೇಶವೇನೂ ಇಲ್ಲಾ ಸಾರ್, ವ್ಯವಸಾಯಕ್ಕೆ ಕೂಲಿ ಆಳು ಸಿಗುತ್ತಿಲ್ಲ, ಸ್ಪರ್ಧೆ ಅಂತ ಮಾಡಿದರೆ ಬಹುಮಾನ, ಪ್ರಚಾರದ ಆಸೆಗೆ ಜನ ಬಂದು ಭಾಗವಹಿಸುತ್ತಾರೆ, ನಮ್ಮ ಬೇಸಾಯದ ಕೆಲಸವೂ ಆಗುತ್ತದೆ!' ಅಂದ ಶಂಕ್ರಿ.

**ಸಂಗತ**

## ನೋವಿಗೂ ಕರುಣೆಗೂ ಭಾಷೆ ಎಲ್ಲಿಯದು?

ದೀನ ದುರ್ಬಲರ ಸಂಕಟಕ್ಕೆ ಮಿಡಿಯುವ ಮನಸ್ಸುಗಳಿಗೆ ಕೊರತೆಯಿಲ್ಲ. ಅಗತ್ಯ ಇದ್ದವರಿಗೆ ಪ್ರಾಮಾಣಿಕವಾಗಿ ಕೊಡುಗೆ ತಲಪಿಸುವ ಸೇವಾಸೇತುಗಳ ಕೊರತೆಯಿದೆ.

• ಡಾ. ಮುರಳೀಧರ ಕಿರಣಕೆರೆ

**ಸೇವಾಸಂಸ್ಥೆಯೊಂದು** ಅಂಗವಿಕಲರು, ಅನಾಥರು, ಅಸಹಾಯಕ ವೃದ್ಧರಿಗೆ ಆರ್ಥಿಕ ನೆರವು ಮತ್ತು ಸವಲತ್ತುಗಳ ವಿತರಣಾ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಫಲಾನುಭವಿಗಳು, ದಾನಿಗಳು, ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಗಳಾಗಿದ್ದ ಆ ಕಾರ್ಯಕ್ರಮದಲ್ಲಿ, ಕಾರು ಚಾಲಕರೊಬ್ಬರ ಸ್ವಯಂಪ್ರೇರಿತ ನಡೆ ಸಭಿಕರ ಅಂತಃಕರಣವನ್ನು ತಟ್ಟಿತು.

ಅವರು ಬೆಂಗಳೂರಿನಿಂದ ತೀರ್ಥಹಳ್ಳಿಯ ಕಾರ್ಯಕ್ರಮಕ್ಕೆ ಅತಿಥಿಗಳನ್ನು ಕರೆತಂದವರು. ವಿವಿಧ ನಮೂನೆಯ ನ್ಯೂನತೆಗಳಿಂದ ಬಳಲುತ್ತಿರುವವರ ವೇದನೆ, ವಿಕಲಾಂಗ ಮಕ್ಕಳನ್ನು ಸಂಭಾಳಿಸಲು ತಾಯಂದಿರ ಪರದಾಟ, ಚಿಕಿತ್ಸೆಗಾಗಿ ತಮ್ಮಲ್ಲಿದ್ದ ಹಣವನ್ನೆಲ್ಲ ವ್ಯಯಿಸಿ ಸಾಲಕ್ಕೆ ಬಿದ್ದವರ ದಯನೀಯ ಸ್ಥಿತಿ, ಸಂಕಟ, ಯಾತನೆಗಳನ್ನು ಕಣ್ಣಾರೆ ಕಂಡು ಹನಿಗಣ್ಣಾದ ಅವರು– ತಮ್ಮ ಜೇಬಿನಲ್ಲಿದ್ದ ದಿನದ ದುಡಿಮೆಯ 3 ಸಾವಿರ ರೂಪಾಯಿಗಳನ್ನು ಬಡ ತಾಯಿಯೊಬ್ಬರಿಗೆ ನೀಡಿದಾಗ ಹಲವರ ಹೃದಯ ಒದ್ದೆಯಾಗಿತ್ತು!

'ಇವರು ಯಾರೋ ನನಗೆ ಗೊತ್ತಿಲ್ಲ. ದೊಡ್ಡ ಸಹಾಯ ಮಾಡುವಷ್ಟು ಸಾಮರ್ಥ್ಯ ನನಗಿಲ್ಲ. ನನಗೀಗ ನಲವತ್ತೈದು ವರ್ಷ. ಇಲ್ಲಿನ ದೃಶ್ಯ ನಿಜಕ್ಕೂ ನನ್ನ ಕಣ್ಣು ತೆರೆಸಿದೆ. ದಾನದ ಮಹತ್ವ ಅರಿವಾಗಿದೆ' ಎಂಬ ಅವರ ಮಾತು ಆ ಕಾರ್ಯಕ್ರಮದ ಫಲಶ್ರುತಿಯನ್ನು ಸಾರುವುದರ ಜೊತೆಗೆ, ಹಲವರ ಮನಃಪರಿವರ್ತನೆಗೂ ಕಾರಣವಾಯಿತು. ಪ್ರಯತ್ನ ಪ್ರಾಮಾಣಿಕವಾಗಿದ್ದರೆ ಪರಮಾತ್ಮನೂ ಸಹಾಯ ಮಾಡುವನು ಎಂಬ ಜನಪದರ ನುಡಿ ನೆನಪಾಗಿತ್ತು.

ಅಗತ್ಯವಿರುವ ಎಲ್ಲರಿಗೂ ಆಹಾರ, ಆಸರೆ, ಆರೋಗ್ಯ, ಆಶ್ರಯದಂತಹ ಅಗತ್ಯ ಸೌಕರ್ಯ ಕಲ್ಪಿಸುವುದು ಯಾವುದೇ ಸರ್ಕಾರಕ್ಕೂ ಕಷ್ಟಸಾಧ್ಯ. ಸರ್ಕಾರದ ನೆರವಿನಿಂದ ವಂಚಿತರಾದ ದೀನ–ದುರ್ಬಲರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರಿಗೆ ಬದುಕು ಕಟ್ಟಿಕೊಳ್ಳಲು ಸಂಘ–ಸಂಸ್ಥೆಗಳ ನೆರವಿನ ಅಗತ್ಯ ಇದೆ. ಕಷ್ಟದಲ್ಲಿರುವವರಿಗೆ ನೆರವು ನೀಡುವ, ಅವರ ದುಃಖ ದುಮ್ಮಾನಗಳಿಗೆ ಸ್ಪಂದಿಸುವ ದಾನಿಗಳ ಸಂಖ್ಯೆಯೂ ದೊಡ್ಡದಿದೆ. ಇವರಲ್ಲಿ ಎಲ್ಲರೂ ಆರ್ಥಿಕವಾಗಿ ಸ್ಥಿತಿವಂತರೇನಲ್ಲ. ತಮ್ಮ ದುಡಿಮೆಯ ಒಂದು ಭಾಗವನ್ನು ಪರರಿಗೆ ಹಂಚುವ ಮನಃಸ್ಥಿತಿಯವರು. ತಾವು ನೀಡಿದ್ದು ಒಳ್ಳೆಯ ಉದ್ದೇಶಕ್ಕೆ ವಿನಿಯೋಗವಾಗಬೇಕೆಂದು ಇವರು ಸಹಜವಾಗಿಯೇ ಬಯಸುತ್ತಾರೆ. ಕೊಡುವ ಮನಸ್ಸಿದ್ದರೂ ಯಾರಿಗೆ ಕೊಡಬೇಕೆಂದು ಗೊತ್ತಾಗದೇ ತಮ್ಮ ಬಯಕೆಯನ್ನು ಮುಚ್ಚಿಟ್ಟುಕೊಳ್ಳುವವರೂ ಇದ್ದಾರೆ. ಈ ವಿಚಾರದಲ್ಲಿ ಉತ್ತಮ ನಡತೆಯ ಸೇವಾಸಂಸ್ಥೆಗಳಿದ್ದರೆ ದಾನಿಗಳು ದಾನ ಮಾಡಲು ಮುಂದೆ ಬರುತ್ತಾರೆ. ತನ್ಮೂಲಕ ಸಂತೋಷ, ತೃಪ್ತಿ ಅನುಭವಿಸುತ್ತಾರೆ.

ದೀನರು, ದುರ್ಬಲರಿಗೆ ನೆರವು ನೀಡುವ ಹಲವು ಸಂಘ–ಸಂಸ್ಥೆಗಳು ನಮ್ಮ ನಡುವೆ ಇವೆ. ಆದರೆ, ಕೆಲವು ಸಂದರ್ಭಗಳಲ್ಲಿ ಸಹೃದಯರಿಂದ ಪಡೆಯುವ ದಾನ–ದೇಣಿಗೆಯ ದುರುಪಯೋಗವಾಗುತ್ತಿದೆ. ಹೀಗಾದಾಗ ಕೊಡುವವರು ಹಿಂದೇಟು ಹಾಕುತ್ತಾರೆ. ಕೊಡುವವರಿದ್ದರೂ ಸರಿಯಾಗಿ ತಲಪಿಸುವವರು ಇಲ್ಲದಿದ್ದರೆ ಸಹಾಯದ ಅಗತ್ಯ ಇರುವವರಿಗೆ ಅನ್ಯಾಯವಾಗುತ್ತದೆ. ಸೇವಾರ್ಥ ಧರ್ಮಸಂಸ್ಥೆಗಳ ವ್ಯವಹಾರದಲ್ಲಿ ನಿಸ್ವಾರ್ಥತೆ, ಪ್ರಾಮಾಣಿಕತೆ, ಪಾರದರ್ಶಕತೆ, ಸದ್ವಿನಿಯೋಗ ತುಂಬಾ ಮುಖ್ಯ. ಕಾನೂನುಬದ್ಧವಾಗಿ ನೋಂದಾಯಿಸಿಕೊಂಡು, ನಿಯಮಬದ್ಧವಾಗಿ ಕಾರ್ಯ ಚಟುವಟಿಕೆ ನಡೆಸಬೇಕು. ಸಹಾಯ ಮಾಡುವವರು ಮತ್ತು ನಿಜವಾಗಿಯೂ ಅವಶ್ಯಕತೆ ಇರುವವರ ನಡುವೆ ಸಂಪರ್ಕ ಸೇತುವಾಗಿ ಕಾರ್ಯ ನಿರ್ವಹಿಸಬೇಕು.

ಅಂಗವಿಕಲರಿಗೆ ಸಮಾಜದ ಅನುಕಂಪದಿಂದ ಪ್ರಯೋಜನವಾಗದು. ಪದೇ ಪದೇ ದೌರ್ಬಲ್ಯದ ಬಗ್ಗೆಯೇ ಮಾತನಾಡುತ್ತಿದ್ದರೆ, ಮರುಕ ತೋರುತ್ತಿದ್ದರೆ ಅವರು ಮತ್ತಷ್ಟು ಮುದುಡುತ್ತಾರೆ, ಕೀಳರಿಮೆ ಬೆಳೆಯುತ್ತದೆ. ಹಿಂಜರಿಕೆಯ ಕಾರಣದಿಂದ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲಾಗದು. ಪರಾವಲಂಬನೆಯಿಂದಾಗಿ ಮಾನಸಿಕವಾಗಿ ಮತ್ತಷ್ಟು ಕುಸಿಯುತ್ತಾರೆ. ಹಾಗಾಗಿ ಅವರಿಗೆ ವಿಶ್ವಾಸ ತುಂಬುವ ಕಾರ್ಯ ಮಾಡಬೇಕು, ಸ್ವಸಾಮರ್ಥ್ಯದ ಮೇಲೆ ನಂಬಿಕೆ ಬರಿಸಬೇಕು. ಒಂದು ಅಂಗವಿಕಲಗೊಂಡಿದ್ದರೂ ಉಳಿದ ಅಂಗಗಳ ಸಾಮರ್ಥ್ಯವನ್ನು ಮನಗಾಣಿಸಬೇಕು. ಬಹುವಿಧದ ಅಂಗವೈಕಲ್ಯ ಹೊಂದಿದ್ದರೂ, ನಿರಂತರ ಪ್ರಯತ್ನದಿಂದ ಸ್ವಾವಲಂಬಿ ಬದುಕು ಕಟ್ಟಿಕೊಂಡವರು, ಉತ್ತಮ ಉದ್ಯೋಗ ಮಾಡುತ್ತಿರುವವರು, ಸಾಹಸ–ಕ್ರೀಡೆಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಿರುವವರ ಯಶೋಗಾಥೆಗಳನ್ನು ತಿಳಿಸಬೇಕು. ಶಿಕ್ಷಣದ ಮಹತ್ವವನ್ನು ಮನದಟ್ಟು ಮಾಡಿಸುವ ಜೊತೆಗೆ, ಪೂರಕ ಕೌಶಲಗಳ ಕಲಿಕೆಯ ವ್ಯವಸ್ಥೆ ಮಾಡುವುದು ಅಗತ್ಯವಾಗಿ ಆಗಬೇಕಿರುವ ಕಾರ್ಯ.

ಸೇವಾ ಮನೋಭಾವದ ಸಂಘಟನೆಗಳಾಗಲಿ, ಧರ್ಮಾರ್ಥ ಸಂಸ್ಥೆಗಳಾಗಲಿ ತಮ್ಮ ಪ್ರಾಮಾಣಿಕ ಉದ್ದೇಶ, ಚಟುವಟಿಕೆಗಳನ್ನು ಮನದಟ್ಟು ಮಾಡಿಸಲು ಕನಿಷ್ಠ ವರ್ಷಕ್ಕೊಮ್ಮೆಯಾದರೂ ಸಭೆ ನಡೆಸಿ ದಾನಿಗಳು, ಫಲಾನುಭವಿಗಳು, ಆಸಕ್ತ ಸಾರ್ವಜನಿಕರನ್ನು ಒಟ್ಟಿಗೆ ಸೇರಿಸಬೇಕು. ಕೊಡುವವರು ಪಡೆಯುವವರನ್ನು ನೇರವಾಗಿ ಭೇಟಿಯಾಗುವುದರಿಂದ ತಾವು ನೀಡುವ ಸಹಾಯ ಅರ್ಹರನ್ನು ತಲಪುತ್ತಿರುವುದನ್ನು ನೋಡಿ ತೃಪ್ತಿ ಪಡೆಯುತ್ತಾರೆ. ಇದು ಮತ್ತಷ್ಟು ನೀಡಲು ಪ್ರೇರಣೆ ನೀಡುತ್ತದೆ. ಅಲ್ಲಿ ಸೇರಿರುವ ಸಾರ್ವಜನಿಕರೂ ಸಹಾಯದ ಅಗತ್ಯವಿರುವವರ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಸ್ವಯಂಪ್ರೇರಣೆಯಿಂದ ನೆರವಾಗಲು ಮುಂದಾಗುತ್ತಾರೆ.

'ನೊಂದವರ ನೋವು ನೋಯದವರೇನು ಬಲ್ಲರು' ಎಂಬುದು ಅಕ್ಕಮಹಾದೇವಿ ಮಾತು. ಇಂತಹ ಕಾರ್ಯಕ್ರಮಗಳಲ್ಲಿ ಭಾಗಿಗಳಾದಾಗ ಮಾತ್ರ ನೊಂದವರ ನೋವು ನೋಯದವರ ಹೃದಯಕ್ಕೆ ಮುಟ್ಟುತ್ತದೆ. ಕೈಯೆತ್ತಿ ಕೊಡುವಂತೆ ಮನವನ್ನು ಪ್ರಚೋದಿಸುತ್ತದೆ. ದಯೆಯೆಂಬುದು ಕುರುಡರೂ ಕಾಣಬಹುದಾದ, ಕಿವುಡರೂ ಕೇಳಬಹುದಾದ ಮಾನವೀಯ ಭಾಷೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಗಿಗ್ ಕಾರ್ಮಿಕರು: ತ್ವರಿತ ಸೇವೆ, ಬಸವಳಿದ ಬದುಕು

10 ನಿಮಿಷಗಳಲ್ಲಿ ಗ್ರಾಹಕರಿಗೆ ಸರಕುಗಳನ್ನು ತಲುಪಿಸುವ ಪ್ರತಿಪಾದನೆಯನ್ನು ಕೈಬಿಡುವುದಾಗಿ ಬ್ಲಿಂಕಿಟ್ ಹೇಳಿದೆ. ಸ್ವಿಗ್ಗಿ ಮತ್ತು ಜೆಪ್ಟೊ ಕೂಡ ಇದನ್ನೇ ಅನುಸರಿಸುವ ಸಾಧ್ಯತೆ ಇದೆ. ಇದರಿಂದ ಗಿಗ್ ಕಾರ್ಮಿಕರ ಪ್ರಮುಖ ಬೇಡಿಕೆಯೊಂದು ಈಡೇರಿದಂತಾಗಿದೆ. ಕೇಂದ್ರ ಸರ್ಕಾರದ ಮಧ್ಯಪ್ರವೇಶದಿಂದ ಇದು ಸಾಧ್ಯವಾಗಿದೆ. ತಮ್ಮ ಕೆಲಸದ ಸ್ಥಿತಿ ಮತ್ತು ಬದುಕಿನ ಸ್ಥಿತಿ ಉತ್ತಮಗೊಳ್ಳುವ ದಿಸೆಯಲ್ಲಿ ರಾಷ್ಟ್ರಮಟ್ಟದ ಹೋರಾಟಕ್ಕಿಳಿದಿದ್ದ ಗಿಗ್ ಕಾರ್ಮಿಕರಿಗೆ ಸಿಕ್ಕ ಆರಂಭದ ಜಯ ಇದಾಗಿದೆ. ಆದರೆ, ಅವರ ಒಟ್ಟಾರೆ ಸ್ಥಿತಿ ಅಷ್ಟೇನೂ ಆಶಾದಾಯಕವಾಗಿಲ್ಲ

ಪ್ರಜಾವಾಣಿ ವಾರ್ತೆ

**ಕ್ರಿಸ್‌ಮಸ್ ಹಬ್ಬದಂದು** ಮತ್ತು ಹೊಸ ವರ್ಷದ ಆಚರಣೆಯ ವೇಳೆ (2025 ಡಿ.31) ಇ–ಕಾಮರ್ಸ್ ವಲಯದಲ್ಲಿ ತೊಡಗಿಕೊಂಡಿರುವ ಕಾರ್ಮಿಕರು (ಗಿಗ್ ಕಾರ್ಮಿಕರು) ರಾಷ್ಟ್ರವ್ಯಾಪಿ ಹೋರಾಟಕ್ಕೆ ಮುಂದಾಗಿದ್ದರು. ಉತ್ತಮ ವೇತನ, ಸುರಕ್ಷಿತ ಕೆಲಸದ ವಾತಾವರಣ, ಸಾಮಾಜಿಕ ಭದ್ರತಾ ಸೌಲಭ್ಯ ನೀಡುವುದು, 10 ನಿಮಿಷಗಳಲ್ಲಿ ಗ್ರಾಹಕರಿಗೆ ಸರಕು ಪೂರೈಸುವುದನ್ನು ನಿಲ್ಲಿಸುವುದು ಸೇರಿದಂತೆ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಮುಷ್ಕರಕ್ಕೆ ಇಳಿದಿದ್ದರು. ಕೆಲವು ನಗರಗಳಲ್ಲಿ ಮಾತ್ರ ಮುಷ್ಕರ ಯಶಸ್ವಿಯಾಗಿತ್ತು. ಹೊಸ ವರ್ಷದ ವ್ಯಾಪಾರಕ್ಕೆ ಧಕ್ಕೆಯಾಗದಿರಲಿ ಎಂದು ಕೆಲವು ಕ್ವಿಕ್–ಕಾಮರ್ಸ್ ಕಂಪನಿಗಳು ಕಾರ್ಮಿಕರ ವೇತನದಲ್ಲಿ ಅಲ್ಪ ಹೆಚ್ಚಳ ಮಾಡಿದ್ದವು.

ತ್ವರಿತವಾಗಿ ಅಂದರೆ 10ರಿಂದ 30 ನಿಮಿಷಗಳಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಅಥವಾ ಅವರು ಇದ್ದಲ್ಲಿಗೇ ಸರಕುಗಳನ್ನು ಪೂರೈಸುವ ಉದ್ಯೋಗದಲ್ಲಿ ತೊಡಗಿರುವ ಕೋಟಿಗೂ ಹೆಚ್ಚು ಮಂದಿ ಗಿಗ್ ಕಾರ್ಮಿಕರು ದೇಶದಲ್ಲಿದ್ದಾರೆ. ಇ–ಕಾಮರ್ಸ್ ವಲಯದಲ್ಲಿ ಕ್ವಿಕ್ ಕಾಮರ್ಸ್ ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು, ಬ್ಲಿಂಕಿಟ್, ಸ್ವಿಗ್ಗಿ, ಇನ್‌ಸ್ಟಾಮಾರ್ಟ್, ಜೆಪ್ಟೊ, ಬಿಗ್ ಬ್ಯಾಸ್ಕೆಟ್ ಸೇರಿದಂತೆ ಹಲವು ಕಂಪನಿಗಳು ಇಂಥ ಸೇವೆಯನ್ನು ಒದಗಿಸುತ್ತಿವೆ. ಮಳೆ, ಗಾಳಿ, ಬಿಸಿಲು ಮುಂತಾದ ವ್ಯತಿರಿಕ್ತ ಸನ್ನಿವೇಶಗಳಲ್ಲಿಯೂ ಗಿಗ್ ಕಾರ್ಮಿಕರು ಅತ್ಯಂತ ವೇಗವಾಗಿ ಸರಕುಗಳನ್ನು ಪೂರೈಸಲು ಸಾಹಸವನ್ನೇ ಮಾಡುತ್ತಿದ್ದಾರೆ. ನಗರಗಳಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿರುವ ಸಂದರ್ಭಗಳಲ್ಲಿ ಅವರು ಭಾರಿ ಒತ್ತಡ ಎದುರಿಸುತ್ತಾರೆ. ತ್ವರಿತ ಸೇವೆ ಒದಗಿಸುವುದಕ್ಕಾಗಿ ಸಂಚಾರಿ ನಿಯಮಗಳನ್ನು ಉಲ್ಲಂಘಿಸಿ ಬೇಕಾಬಿಟ್ಟಿ ದ್ವಿಚಕ್ರವಾಹನಗಳನ್ನು ಓಡಿಸುವುದು, ಅಪಘಾತಕ್ಕೀಡಾದ ಉದಾಹರಣೆಗಳು ಇವೆ. ಬೆಂಗಳೂರಿನಲ್ಲಿ ಸಂಚಾರ ನಿಯಮ ಉಲ್ಲಂಘಿಸುವವರಲ್ಲಿ ಡೆಲಿವರಿ ಬಾಯ್‌ಗಳ ಸಂಖ್ಯೆಯೇ ಅಧಿಕವಾಗಿದ್ದು, ಮೂರು ವರ್ಷದಲ್ಲಿ 1.46 ಲಕ್ಷ ಪ್ರಕರಣಗಳು ಅವರ ವಿರುದ್ಧ ದಾಖಲಾಗಿವೆ ಎಂದು ಕಳೆದ ವರ್ಷದ ನವೆಂಬರ್‌ನಲ್ಲಿ ಸಂಚಾರ ಪೊಲೀಸರು ಮಾಹಿತಿ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಅಷ್ಟೆಲ್ಲ ಶ್ರಮ ಪಟ್ಟರೂ ತಮಗೆ ಸಿಗುವ ವೇತನ ತೀರಾ ಕಡಿಮೆ. ದಿನಕ್ಕೆ 12ರಿಂದ 16 ಗಂಟೆ ದುಡಿದರೂ ದುಡಿಮೆ ಸಾವಿರದ ಆಸುಪಾಸಿನಲ್ಲಿಯೇ ಇರುತ್ತದೆ ಎನ್ನುವುದು ಅವರ ಅಳಲು. ಗಿಗ್ ಕಾರ್ಮಿಕರ ದುಡಿಮೆಯಲ್ಲಿ ಒಂದು ಪಾಲು ವಾಹನದ ಪೆಟ್ರೋಲ್‌ಗೆ ಮೀಸಲಿಡಬೇಕು. ಜತೆಗೆ, ಮಳೆ, ಗಾಳಿ ತಡೆಯಲು ರೈನ್ ಕೋಟ್ ಇತ್ಯಾದಿ ಕೊಂಡುಕೊಳ್ಳಬೇಕು. ಇಂಥ ಹಲವು ವೆಚ್ಚಗಳನ್ನು ಅವರು ಕೈಯಿಂದಲೇ ಭರಿಸಬೇಕು. ಹೀಗೆ ತಿಂಗಳು ಪೂರ್ತಿ ದುಡಿದ ಹಣ ಬೈಕ್ ರಿಪೇರಿ, ಫೋನ್ ರಿಪೇರಿ ಇತ್ಯಾದಿಗಳಿಗೆ ವೆಚ್ಚವಾದ ಉದಾಹರಣೆಗಳೂ ಹೇರಳವಾಗಿವೆ. ಒಂದು ಕಡೆ ಅಸುರಕ್ಷಿತ ಕೆಲಸದ ವಾತಾವರಣ. ಮತ್ತೊಂದು ಕಡೆ ಕಂಪನಿಗಳ ಕಡೆಯಿಂದಾಗಲಿ, ಸರ್ಕಾರದ ಕಡೆಯಿಂದಾಗಲಿ ತಮಗೆ ಯಾವ ಸೌಲಭ್ಯಗಳೂ ಸಿಗುತ್ತಿಲ್ಲ. ವೈದ್ಯಕೀಯ ವಿಮೆ, ಇಎಸ್ಐ, ಪಿಎಫ್ ಸೌಲಭ್ಯಗಳನ್ನು ಕಲ್ಪಿಸಬೇಕು ಎನ್ನುವುದು ಅವರ ಬೇಡಿಕೆ. ಕೇಂದ್ರ ಸರ್ಕಾರ ಹಾಗೂ ಕೆಲವು ರಾಜ್ಯ ಸರ್ಕಾರಗಳು ಗಿಗ್ ಕಾರ್ಮಿಕರನ್ನು ಈಗ ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಗೆ ಸೇರಿಸಿದ್ದರೂ, ಅವರಿಗೆ ಅದರ ಪ್ರಯೋಜನ ಸಿಕ್ಕಿಲ್ಲ.

**ಆಧಾರ:** ಪಿಟಿಐ, ಪಿಐಬಿ, ಸಂಸತ್ತಿನಲ್ಲಿ ಸಚಿವರ ಉತ್ತರ, ಏಷ್ಯನ್ ಲೇಬರ್ ರಿವ್ಯೂ

### ಗಿಗ್ ಕಾರ್ಮಿಕರು

ಪ್ಲಾಟ್‌ಫಾರ್ಮ್ (ಆ್ಯಪ್) ಆಧಾರಿತ ಸೇವೆಗಳಾದ ಸ್ವಿಗ್ಗಿ, ಜೊಮಾಟೊ, ಜೆಪ್ಟೊ, ಓಲಾ, ಉಬರ್, ಇ–ಕಾಮರ್ಸ್ ಸಂಸ್ಥೆಗಳಾದ ಅಮೆಜಾನ್, ಫ್ಲಿಪ್‌ಕಾರ್ಟ್, ಬಿಗ್ ಬ್ಯಾಸ್ಕೆಟ್ ಮತ್ತಿತರ ಕ್ಷೇತ್ರಗಳಲ್ಲಿ ಪೂರ್ಣಕಾಲಿಕ ಅಥವಾ ಅರೆಕಾಲಿಕ ಡೆಲಿವರಿ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವವರು

### ದೇಶದಲ್ಲಿ ಗಿಗ್ ಕಾರ್ಮಿಕರು

4 ಲಕ್ಷ ಕರ್ನಾಟಕದಲ್ಲಿ

| ವರ್ಷ | ಕಾರ್ಮಿಕರು |
|---|---|
| 2020-21 | 77 ಲಕ್ಷ |
| 2024-25 | 1.27 ಕೋಟಿ |
| 2029-30* | 2.35 ಕೋಟಿ |

* ನೀತಿ ಆಯೋಗ ಮಾಡಿರುವ ಅಂದಾಜು

**₹38.42 ಲಕ್ಷ ಕೋಟಿ**
ದೇಶದ ಗಿಗ್ ಆರ್ಥಿಕತೆಯ ಅಂದಾಜು ಗಾತ್ರ

### ಇ–ಶ್ರಮ್ ಪೋರ್ಟಲ್‌ನಲ್ಲಿ ನೋಂದಣಿಯಾದ ಕಾರ್ಮಿಕರು

(2025ರ ಡಿ.2ರವರೆಗೆ)




## ಕರ್ನಾಟಕ ಸೇರಿ 4 ರಾಜ್ಯಗಳಲ್ಲಿ ಕಾನೂನು

ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವುದಕ್ಕಾಗಿ ಕರ್ನಾಟಕ ಸೇರಿದಂತೆ ನಾಲ್ಕು ರಾಜ್ಯಗಳು ಕಾನೂನನ್ನು ರೂಪಿಸಿವೆ.

ರಾಜ್ಯದಲ್ಲಿ 'ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ–2025'ಗೆ ಕಳೆದ ವರ್ಷದ ಆಗಸ್ಟ್‌ನಲ್ಲಿ ವಿಧಾನಮಂಡಲ ಅಂಗೀಕಾರ ನೀಡಿತ್ತು. ಇದು ಕಾನೂನು ಕೂಡ ಆಗಿದೆ.

ಇದರಡಿ ಗಿಗ್ ಕಾರ್ಮಿಕರು ಕೂಡ ಭವಿಷ್ಯ ನಿಧಿ, ಅಪಘಾತ ವಿಮೆ ಸೌಲಭ್ಯ, ವಸತಿ, ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯ, ಕಾರ್ಮಿಕ ಕೌಶಲಾಭಿವೃದ್ಧಿ, ಅಂತ್ಯಸಂಸ್ಕಾರ ಧನ ಸಹಾಯ ಸೌಲಭ್ಯಕ್ಕೆ ಅರ್ಹರಾಗಲಿದ್ದಾರೆ. ಇದಕ್ಕಾಗಿ ಪ್ರತಿ ವಹಿವಾಟಿನ ಮೇಲೆ ಶೇ 1ರಿಂದ ಶೇ 2 ಮೀರದಂತೆ ಕ್ಷೇಮಾಭಿವೃದ್ಧಿ ಶುಲ್ಕವನ್ನು ಸರ್ಕಾರ ಸಂಗ್ರಹಿಸಲಿದೆ.

ನಿಧಿ ಸಂಗ್ರಹಣೆ, ನಿರ್ವಹಣೆ ಹಾಗೂ ಫಲಾನುಭವಿಗಳಿಗೆ ಮತ್ತು ಅವರ ಅವಲಂಬಿತರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳ 'ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕ ಕಲ್ಯಾಣ ಮಂಡಳಿ' ಸ್ಥಾಪಿಸಲಾಗುವುದು ಎಂದೂ ಸರ್ಕಾರ ಹೇಳಿತ್ತು. ಆದರೆ ಮಂಡಳಿ ಸ್ಥಾಪನೆ ಇನ್ನೂ ಆಗಿಲ್ಲ.

**ರಾಜಸ್ಥಾನ:** ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಕಾನೂನು ರೂಪಿಸಿದ ಮೊದಲ ರಾಜ್ಯ ರಾಜಸ್ಥಾನ. 2023ರಲ್ಲೇ ಕಾನೂನು ಜಾರಿಗೆ ಬಂದಿದ್ದರೂ ಅನುಷ್ಠಾನವಾಗಿಲ್ಲ. ಹೊಸ ಸರ್ಕಾರ ಬಂದ ನಂತರ ಈ ಕಾನೂನು ನನೆಗುದಿಗೆ ಬಿದ್ದಿದೆ

**ಬಿಹಾರ:** ಕಳೆದ ವರ್ಷ ಬಿಹಾರದಲ್ಲೂ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ನೋಂದಣಿ, ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆಗೆ ಶಾಸನ ಸಭೆ ಅಂಗೀಕಾರ ನೀಡಿದೆ. ಇದರ ಅಡಿಯಲ್ಲಿ ಪಿಂಚಣಿ, ವಿಮೆ, ಅಪಘಾತ ವಿಮೆ ಸೇರಿದಂತೆ ವಿವಿಧ ಸೌಲಭ್ಯಗಳು ಗಿಗ್ ಕಾರ್ಮಿಕರಿಗೆ ಲಭ್ಯವಿವೆ. ಆದರೆ, ಅನುಷ್ಠಾನ ನಿಧಾನವಾಗಿದೆ.

**ಜಾರ್ಖಂಡ್:** ಕಳೆದ ವರ್ಷದ ಆಗಸ್ಟ್‌ನಲ್ಲಿ ಜಾರ್ಖಂಡ್ ವಿಧಾನಸಭೆಯು ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ನೋಂದಣಿ ಮತ್ತು ಕಲ್ಯಾಣ) ಮಸೂದೆಯನ್ನು ಅಂಗೀಕರಿಸಿತ್ತು. ಡಿಸೆಂಬ್ 19ರಂದು ರಾಜ್ಯಪಾಲರೂ ಮಸೂದೆಗೆ ಸಹಿ ಹಾಕಿದ್ದರು. ಕಾಯ್ದೆಯು ಕಡ್ಡಾಯ ನೋಂದಣಿ, ಕನಿಷ್ಠ ವೇತನ ಹಾಗೂ ಇತರ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಗಿಗ್ ಕಾರ್ಮಿಕರಿಗೆ ನೀಡುತ್ತದೆ.

## ಸೌಲಭ್ಯಕ್ಕೆ 90 ದಿನ ಕೆಲಸ ಕಡ್ಡಾಯ

ಕಳೆದ ವರ್ಷದ ಬಜೆಟ್‌ನಲ್ಲಿ ದೇಶದಲ್ಲಿರುವ ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಯೋಜನೆಯನ್ನು ಕೇಂದ್ರ ಸರ್ಕಾರ ಘೋಷಿಸಲಾಗಿತ್ತು. 'ಇ–ಶ್ರಮ್ ಪೋರ್ಟಲ್‌ನಲ್ಲಿ ಅವರ ನೋಂದಣಿಗೆ ಅವಕಾಶ ನೀಡುವುದರ ಜೊತೆಗೆ, ಎಲ್ಲ ಕಾರ್ಮಿಕರಿಗೂ ಗುರುತಿನ ಚೀಟಿ ಹಾಗೂ ಪ್ರಧಾನಮಂತ್ರಿ ಆರೋಗ್ಯ ಯೋಜನೆಯ ಅಡಿಯಲ್ಲಿ ಆರೋಗ್ಯ ಸೇವೆಯನ್ನು ನೀಡಲಾಗುವುದು' ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದರು.

**ಕಾರ್ಮಿಕ ಸಂಹಿತೆ ವ್ಯಾಪ್ತಿಗೆ:** ಅಸಂಘಟಿತ ವಲಯದಲ್ಲಿ ಬರುವ ಗಿಗ್ ಕಾರ್ಮಿಕರನ್ನು ಕೇಂದ್ರ ಸರ್ಕಾರವು ಕಳೆದ ವರ್ಷದ ನವೆಂಬರ್‌ನಲ್ಲಿ ಜಾರಿಗೆ ತಂದಿರುವ ನಾಲ್ಕು ಕಾರ್ಮಿಕ ಸಂಹಿತೆಗಳಲ್ಲಿ ಒಂದಾದ ಸಾಮಾಜಿಕ ಭದ್ರತೆ ಕುರಿತ ಸಂಹಿತೆ –2020 ವ್ಯಾಪ್ತಿಗೆ ಸೇರಿಸಲಾಗಿದೆ.

ಗಿಗ್ ಕಾರ್ಮಿಕರು ಕೇಂದ್ರ ಸರ್ಕಾರದ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಪಡೆಯಬೇಕಾದರೆ ಅವರು ಆರ್ಥಿಕ ವರ್ಷವೊಂದರಲ್ಲಿ ನಿರ್ದಿಷ್ಟ ಕಂಪನಿಯಲ್ಲಿ ಕನಿಷ್ಠ 90 ದಿನ ಕೆಲಸ ಮಾಡಬೇಕು ಎಂದು ಕೇಂದ್ರದ ಹೊಸ ಕರಡು ನಿಯಮ ಹೇಳುತ್ತದೆ.

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಇ–ಶ್ರಮ್ ಪೋರ್ಟಲ್‌ನಲ್ಲಿ ನೋಂದಣಿಗೆ ಗಿಗ್ ಕಾರ್ಮಿಕರಿಗೆ ಅವಕಾಶ ನೀಡಿದ್ದರೂ ರಾಷ್ಟ್ರ ಮಟ್ಟದಲ್ಲಿ 2025ರ ಡಿ.2ರವರೆಗೆ 5.14 ಲಕ್ಷ ಮತ್ತು ಕರ್ನಾಟಕದಲ್ಲಿ 17,124 ಮಂದಿ ಮಾತ್ರ ನೋಂದಣಿ ಮಾಡಿಕೊಂಡಿದ್ದಾರೆ

## ಗೋಯಲ್ ಹೇಳಿದ್ದೇನು?

ತ್ವರಿತ ಸೇವೆ ಆಧಾರಿತ ಗಿಗ್ ಮಾದರಿಯು ಕಾರ್ಮಿಕರಿಗೆ ಹೆಚ್ಚು ಒತ್ತಡ ಹೇರುವುದಿಲ್ಲ ಎನ್ನುವುದು ಗಿಗ್ ಉದ್ಯಮಿಗಳ ವಾದ.

ಇತ್ತೀಚೆಗೆ ಇದೇ ವಿಚಾರದ ಬಗ್ಗೆ ಮಾತನಾಡಿದ್ದ ಜೊಮಾಟೊ ಮತ್ತು ಬ್ಲಿಂಕಿಟ್‌ನ ಮಾಲೀಕತ್ವ ಹೊಂದಿರುವ ಎಟರ್ನಲ್ ಸಂಸ್ಥಾಪಕ ಮತ್ತು ಸಿಇಒ ದೀಪಿಂದರ್ ಗೋಯಲ್, 'ಸಮಯದಲ್ಲಿ ಮಾಡಬಹುದಾದ ಹೊಂದಾಣಿಕೆ ಮತ್ತು ಗಿಗ್ ಕಾರ್ಮಿಕರಿಗೆ ಕಂಪನಿಗಳು ನೀಡುವ ಸೌಲಭ್ಯಗಳು ಹಲವು ಕಾರ್ಮಿಕರಿಗೆ ಭರವಸೆದಾಯಕ ಆದಾಯದ ಮೂಲವಾಗಿದೆ' ಎಂದು ಹೇಳಿದ್ದರು.

'2025ರಲ್ಲಿ ಜೊಮಾಟೊ ಮತ್ತು ಬ್ಲಿಂಕಿಟ್‌ಗಳು ವಿತರಣೆ ಪಾಲುದಾರರ (ಗಿಗ್ ಕಾರ್ಮಿಕರು) ವಿಮಾ ಸೌಲಭ್ಯಕ್ಕಾಗಿ ₹100 ಕೋಟಿ ವ್ಯಯಿಸಿವೆ. ಕಳೆದ ವರ್ಷ ಇವರ ಒಂದು ಗಂಟೆಯ ಸರಾಸರಿ ಗಳಿಕೆ (ಟಿಪ್ಸ್ ಹೊರತುಪಡಿಸಿ) ₹102 ಇತ್ತು. 2024ರಲ್ಲಿ ಅದು ₹92 ಆಗಿತ್ತು' ಎಂದು ಗೋಯಲ್ ಹೇಳಿದ್ದರು.

ಅವರ ಪ್ರಕಾರ, 'ದಿನಕ್ಕೆ 10 ಗಂಟೆ, ತಿಂಗಳಿಗೆ 26 ದಿನ ದುಡಿದರೆ ತಿಂಗಳಿಗೆ ₹26,500 ಸಂಪಾದಿಸಬಹುದು. ಇಂಧನ ಮತ್ತು ನಿರ್ವಹಣಾ ವೆಚ್ಚ (ಶೇ 20) ಕಳೆದರೆ, ತಿಂಗಳಿಗೆ ಅವರ ಬಳಿ ₹21 ಸಾವಿರ ಇರುತ್ತದೆ.'

## ರಾಷ್ಟ್ರೀಯ

## 'ಜನ ನಾಯಗನ್‌ಗೆ ನಿರ್ಬಂಧ ಯತ್ನ: ತಮಿಳು ಸಂಸ್ಕೃತಿ ಮೇಲಿನ ದಾಳಿ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: 'ನಟ ವಿಜಯ್ ಅಭಿನಯದ 'ಜನ ನಾಯಗನ್' ಚಲನಚಿತ್ರವನ್ನು ನಿರ್ಬಂಧಿಸುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಪ್ರಯತ್ನವು ತಮಿಳು ಸಂಸ್ಕೃತಿಯ ಮೇಲಿನ ದಾಳಿಯಾಗಿದೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

'ಮೋದಿ ಅವರೇ, ನೀವು ತಮಿಳರ ಧ್ವನಿಯನ್ನು ಹತ್ತಿಕ್ಕುವಲ್ಲಿ ಎಂದಿಗೂ ಯಶಸ್ವಿಯಾಗುವುದಿಲ್ಲ' ಎಂದು ರಾಹುಲ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಲ್ಲದೆ, ಇದೇ ವಿಷಯಕ್ಕೆ ಸಂಬಂಧಿಸಿದಂತೆ ಆಡಳಿತಾರೂಢ ಬಿಜೆಪಿಯನ್ನು ಡಿಎಂಕೆ ಪಕ್ಷವು ಟೀಕಿಸಿದೆ.

ಸಿನಿಮಾ ಬಿಡುಗಡೆಗೆ ಜನವರಿ 9ರಂದು ದಿನ ನಿಗದಿಯಾಗಿತ್ತು. ಆದರೆ, ಪ್ರಮಾಣಪತ್ರ ಸಿಗದ ಕಾರಣ ಸಿನಿಮಾ ಬಿಡುಗಡೆ ವಿಳಂಬಗೊಂಡಿದೆ. ರಾಜಕೀಯ ಪ್ರವೇಶಿಸಿರುವ ವಿಜಯ್ ಅವರ ಕೊನೆಯ ಸಿನಿಮಾ ಎಂದು ಹೇಳಲಾಗುತ್ತಿರುವ ಕಾರಣ ಈ ಸಿನಿಮಾ ಅಭಿಮಾನಿಗಳಲ್ಲಿ ಭಾರಿ ನಿರೀಕ್ಷೆ ಮೂಡಿಸಿದೆ.

ತಮಿಳುನಾಡಿನ ಗೂಡಲೂರಿನ ಸೇಂಟ್ ಥಾಮಸ್ ಇಂಗ್ಲಿಷ್ ಪ್ರೌಢಶಾಲೆಯಲ್ಲಿ ನಡೆದ ಸುಗ್ಗಿ ಹಬ್ಬದಲ್ಲಿ ರಾಹುಲ್ ಗಾಂಧಿ ಅವರು ಸಿಹಿ ಪೊಂಗಲ್ ತಯಾರಿಸಿದರು –ಪಿಟಿಐ ಚಿತ್ರ

### ಪೊಂಗಲ್ ಖಾದ್ಯ ತಯಾರಿಸಿದ ರಾಹುಲ್

**ಉದಕಮಂಡಲ (ತಮಿಳುನಾಡು) (ಪಿಟಿಐ):** ಗೂಡಲೂರಿನ ಸೇಂಟ್ ಥಾಮಸ್ ಇಂಗ್ಲಿಷ್ ಪ್ರೌಢಶಾಲೆಯ ಸುವರ್ಣ ಮಹೋತ್ಸವ ಸಮಾರಂಭ ಹಾಗೂ ಸುಗ್ಗಿ ಹಬ್ಬ 'ಪೊಂಗಲ್' ಆಚರಣೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಭಾಗವಹಿಸಿ ಸಂಭ್ರಮಿಸಿದರು.

ಶಾಲೆಗೆ ಬಂದ ರಾಹುಲ್ ಅವರಿಗೆ ಆತ್ಮೀಯ ಸ್ವಾಗತ ಕೋರಲಾಯಿತು. ಅವರು ಸಾಂಪ್ರದಾಯಿಕ ನೃತ್ಯವನ್ನೂ ಮಾಡಿದರು. 'ಪೊಂಗಲ್' ಆಚರಣೆಯಲ್ಲಿ ಪಾಲ್ಗೊಂಡು, ಜನರ ಜತೆಗೂಡಿ 'ಪೊಂಗಲ್' ಸಿಹಿ ಖಾದ್ಯವನ್ನು ತಯಾರಿಸಿದರು.

### ಜನ ನಾಯಗನ್: ಅರ್ಜಿ ವಿಚಾರಣೆ 19ಕ್ಕೆ

**ನವದೆಹಲಿ (ಪಿಟಿಐ):** 'ಜನ ನಾಯಗನ್' ಚಲನಚಿತ್ರಕ್ಕೆ ಸೆನ್ಸಾರ್ ಪ್ರಮಾಣಪತ್ರ ನೀಡುವಂತೆ ನಿರ್ದೇಶಿಸಿ ಏಕಸದಸ್ಯ ಪೀಠ ನೀಡಿದ್ದ ಆದೇಶಕ್ಕೆ ತಡೆ ನೀಡಿರುವ ಮದ್ರಾಸ್ ಹೈಕೋರ್ಟ್‌ನ ಮಧ್ಯಂತರ ಆದೇಶವನ್ನು ಪ್ರಶ್ನಿಸಿ ಕೆವಿಎನ್ ಪ್ರೊಡಕ್ಷನ್ಸ್ ಎಲ್‌ಎಲ್‌ಪಿ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಜ.19ರಂದು ವಿಚಾರಣೆ ನಡೆಸುವ ಸಾಧ್ಯತೆ ಇದೆ. ಪೀಠವನ್ನು ಇನ್ನೂ ನಿಯೋಜಿಸಿಲ್ಲ.

'ಜನ ನಾಯಗನ್'ಗೆ ತಕ್ಷಣ ಸೆನ್ಸಾರ್ ಪ್ರಮಾಣಪತ್ರ ನೀಡಬೇಕು ಎಂದು ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಗೆ (ಸಿಬಿಎಫ್‌ಸಿ) ಏಕಸದಸ್ಯ ಪೀಠ ನಿರ್ದೇಶನ ನೀಡಿತ್ತು. ಈ ಆದೇಶಕ್ಕೆ ಮದ್ರಾಸ್ ಹೈಕೋರ್ಟ್ ಜ.9ರಂದು ತಡೆ ನೀಡಿತ್ತು.

## ಕಾಲ್ತುಳಿತ: ವಿಜಯ್‌ಗೆ ಸಮನ್ಸ್

ವಿಜಯ್

ನವದೆಹಲಿ (ಪಿಟಿಐ): ಕರೂರು ಕಾಲ್ತುಳಿತಕ್ಕೆ ಸಂಬಂಧಿಸಿ ಜ.19ರಂದು ಎರಡನೇ ಸುತ್ತಿನ ಪ್ರಶ್ನೋತ್ತರಕ್ಕೆ ಹಾಜರಾಗುವಂತೆ ಟಿವಿಕೆ ಮುಖ್ಯಸ್ಥ ಮತ್ತು ನಟ ವಿಜಯ್ ಅವರಿಗೆ ಸಿಬಿಐ ಸಮನ್ಸ್ ಜಾರಿ ಮಾಡಿದೆ.

ಇಲ್ಲಿನ ಕೇಂದ್ರ ಕಚೇರಿಯಲ್ಲಿ ಅಧಿಕಾರಿಗಳು ಸೋಮವಾರ 6ಕ್ಕೂ ಅಧಿಕ ಗಂಟೆ ವಿಜಯ್ ಅವರ ಪ್ರಶ್ನೋತ್ತರ ನಡೆಸಿದ್ದರು. ಎರಡನೇ ಸುತ್ತಿನ ಪ್ರಶ್ನೋತ್ತರಕ್ಕೆ ಮಂಗಳವಾರವೇ ಬರುವಂತೆ ಅಧಿಕಾರಿಗಳು ಹೇಳಿದ್ದರು. 'ಸಂಕ್ರಾಂತಿ ಇರುವುದರಿಂದ ಮತ್ತೊಂದು ದಿನಾಂಕ ನೀಡಿ' ವಿಜಯ್ ಅವರು ಮನವಿ ಮಾಡಿದ್ದರು.

ಪ್ರಕರಣಕ್ಕೆ ಸಂಬಂಧಿಸಿ, ತಮಿಳುನಾಡಿನ ಮಾಜಿ ಎಡಿಜಿ (ಕಾನೂನು ಮತ್ತು ಸುವ್ಯವಸ್ಥೆ) ಎಸ್. ಡೇವಿಡ್ಸನ್ ದೇವಾಶೀರ್ವಾದಂ ಸೇರಿ ಕೆಲವು ಪೊಲೀಸ್ ಅಧಿಕಾರಿಗಳನ್ನು ಸಿಬಿಐ ಅಧಿಕಾರಿಗಳು ಸೋಮವಾರ ತನಿಖೆಗೆ ಒಳಪಡಿಸಿದ್ದರು.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**ಅಶಾಂತಿ** ಪೀಡಿತ ಬಾಂಗ್ಲಾದೇಶದಲ್ಲಿ ವಿಷ್ಣುವಿನ ಪ್ರತಿಮೆಯನ್ನು ಧ್ವಂಸ ಮಾಡಲಾಗಿದೆ ಎಂದು ಪ್ರತಿಪಾದಿಸುತ್ತಾ 'ಎಕ್ಸ್' ಬಳಕೆದಾರರೊಬ್ಬರು, ವಿಷ್ಣುವಿನ ಬೃಹತ್ ವಿಗ್ರಹವನ್ನು ಎಕ್ಸ್‌ಕವೇಟರ್ ಮೂಲಕ ತೆರವುಗೊಳಿಸುತ್ತಿರುವ ಫೋಟೊವೊಂದನ್ನು ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು.

**ಫೋಟೊವನ್ನು** ರಿವರ್ಸ್ ಇಮೇಜ್ ಸರ್ಚ್ ವಿಧಾನದಲ್ಲಿ ಗೂಗಲ್‌ನಲ್ಲಿ ಹುಡುಕಿದಾಗ ದಿ ವೀಕ್ ಮತ್ತು ದ ಸ್ಟ್ರೈಟ್ಸ್ ಟೈಮ್ಸ್‌ನಲ್ಲಿ 2025ರ ಡಿಸೆಂಬರ್‌ನಲ್ಲಿ ಇದೇ ಫೋಟೊ ಸಹಿತ ವರದಿ ಪ್ರಕಟವಾಗಿದ್ದು ಕಂಡು ಬಂತು. ಈ ಘಟನೆಯು ಥಾಯ್ಲೆಂಡ್ ಮತ್ತು ಕಾಂಬೋಡಿಯಾ ಗಡಿಯಲ್ಲಿ ನಡೆದಿದೆ ಎಂದು ವರದಿಗಳಲ್ಲಿ ಹೇಳಲಾಗಿತ್ತು. ದ ಸ್ಟ್ರೈಟ್ಸ್ ಟೈಮ್ಸ್ ವರದಿ ಪ್ರಕಾರ, ಕಾಂಬೋಡಿಯಾಕ್ಕೆ ಸೇರಿದ ಜಾಗದಲ್ಲಿ 2014ರಲ್ಲಿ ವಿಷ್ಣುವಿನ ಪ್ರತಿಮೆಯನ್ನು ಸ್ಥಾಪಿಸಲಾಗಿತ್ತು. ಥಾಯ್ಲೆಂಡ್ ಸೇನೆಯು 2025ರ ಡಿಸೆಂಬರ್ 22ರಂದು ಅದನ್ನು ತೆರವುಗೊಳಿಸಿದೆ. ಎರಡೂ ರಾಷ್ಟ್ರಗಳ ನಡುವೆ ಗಡಿ ಬಿಕ್ಕಟ್ಟು ತೀವ್ರವಾಗಿರುವ ಈ ಸಂದರ್ಭದಲ್ಲಿ ಭದ್ರತಾ ದೃಷ್ಟಿಯಿಂದ ಪ್ರತಿಮೆಯನ್ನು ತೆರವುಗೊಳಿಸಲಾಗಿದೆ ಎಂದು ಸರ್ಕಾರ ಹೇಳಿರುವುದಾಗಿ ಬ್ಯಾಂಕಾಕ್ ಪೋಸ್ಟ್ ವರದಿ ಮಾಡಿದೆ. ಡಿಸೆಂಬರ್ 24ರಂದು ಭಾರತವು ಈ ಕ್ರಮವನ್ನು ಖಂಡಿಸಿತ್ತು. ವಿದೇಶಾಂಗ ಇಲಾಖೆ ಈ ಬಗ್ಗೆ ಹೇಳಿಕೆಯನ್ನು ಬಿಡುಗಡೆ ಮಾಡಿತ್ತು. ಥಾಯ್ಲೆಂಡ್–ಕಾಂಬೋಡಿಯಾ ಗಡಿಯಲ್ಲಿ ನಡೆದ ಘಟನೆಯನ್ನು ಬಾಂಗ್ಲಾದೇಶದಲ್ಲಿ ನಡೆದಿದ್ದು ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

## ಪದಬಂಧ 6284

ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
2.ಶ್ರೇಷ್ಠವಾದ ನೆಲೆಯಿದು (4)
5.ಒಂದನ್ನೊಂದು ಅಗಲದೇ ಇರುವಿಕೆ (5)
7.ಚಕಚಕನೆ ನೇಯುವ ರಾಟೆ (3)
8.ಅಜ್ಜ ಹಿಡಿದಿರುವ ಮೇಕೆ (2)
9.ರೇಕಣ್ಣಪ್ರಿಯ ನಾಗಿನಾಥ ಅಂಕಿತವುಳ್ಳ ವಚನಕಾರ (7)
10.ಅಲೆಯುತ್ತಿರುವಾಗ ತರಂಗ ಕಾಣಿಸಿತಲ್ಲಾ! (2)
11.ವಿಷವುಳ್ಳ ಕಷ್ಟದ ಪರಿಸ್ಥಿತಿ (3)
13.ಕುದುರೆಯ ಮುಖ (5)
14.ಹಜಾರವನ್ನು ಹೀಗೂ ಹೇಳುತ್ತಾರೆ (4)

**ಮೇಲಿಂದ ಕೆಳಕ್ಕೆ**
1.ನಲಿಯುತ್ತಿರುವ ರಾಷ್ಟ್ರ ಪಕ್ಷಿ (3)
3.ರಂಜನೆ ನೀಡುವವರು ತೋರಿಸಿದ್ದು ಅಲೋಹ ಮೂಲಧಾತು (3)
4.ಮಜದಲ್ಲಿರುವ ಚಕ್ರವರ್ತಿ (4)
6.ಫ.ಗು.ಹಳಕಟ್ಟಿಯವರನ್ನು ಹೀಗೆ ಕರೆಯಲಾಗುತ್ತದೆ (7)
8.ಎಲವೋ ಎಂದರೆ ನರಕ ಹೀಗೆಂದರೆ ಸ್ವರ್ಗ! (2)
9.ಪ್ರಾಣಿ ಪಕ್ಷಿಗಳನ್ನು ಹಿಡಿದಿರುವ ಸಾಧನ (2)
10.ಮಾನವುಳ್ಳ ಅಗೌರವ! (4)
11.ವಿಧುರ ಹಿಡಿದಿರುವ ಹವಳ (3)
12.ಆದರ ಪೂರ್ವಕವಾದುದು (3)

| | | | | | | | | |
|---|---|---|---|---|---|---|---|---|
| ■ | 1 | ■ | ■ | ■ | 2 | 3 | | 4 |
| 5 | | | | 6 | ■ | | ■ | |
| ■ | | ■ | ■ | 7 | | | ■ | |
| ■ | ■ | ■ | ■ | | ■ | ■ | 8 | |
| ■ | 9 | | | | | | | ■ |
| 10 | | ■ | ■ | | ■ | ■ | ■ | ■ |
| | ■ | 11 | | | ■ | ■ | 12 | ■ |
| | ■ | | ■ | 13 | | | | |
| 14 | | | | ■ | ■ | ■ | | ■ |

### 6283ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಅಡಿಪಾಯ 3.ಆಯವ್ಯಯ 5.ಮಡದಿ 6.ಮರುಳ 7.ಗಹನ 9.ತಲ್ಲೀನ 11.ವಿಷಮ 12.ಮಸೂರ 14.ಯಮಸುತ 15.ವಿನಾಯಕ

**ಮೇಲಿಂದ ಕೆಳಕ್ಕೆ:** 1.ಅನುರಾಗ 2.ಯಮ 3.ಆದಿ 4.ಯಮಳ 6.ಮಡಿವಂತ 8.ನವಸುಮ 10.ನಳಪಾಕ 11.ವಿದಾಯ 12.ಮತ 13.ರವಿ

## ಸುಡೊಕು 6668

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| | | 1 | | 8 | | | | |
| | | | 1 | | 6 | | | |
| 3 | | 5 | | 2 | | | 8 | |
| | 8 | 7 | | | | | 1 | |
| | | 4 | 7 | 6 | 3 | 8 | | 9 |
| 5 | 9 | | | | | | 7 | |
| | | 2 | | 7 | | 1 | | 5 |
| 1 | | | 2 | | 5 | | 9 | |
| | 5 | | | 4 | | 2 | | 8 |

### 6667 ಸುಡೊಕು

| | | | | | | | | |
|---|---|---|---|---|---|---|---|---|
| 2 | 7 | 9 | 4 | 5 | 3 | 6 | 8 | 1 |
| 6 | 4 | 3 | 1 | 8 | 7 | 2 | 5 | 9 |
| 8 | 1 | 5 | 2 | 6 | 9 | 7 | 3 | 4 |
| 3 | 8 | 4 | 7 | 2 | 6 | 1 | 9 | 5 |
| 7 | 9 | 2 | 8 | 1 | 5 | 4 | 6 | 3 |
| 5 | 6 | 1 | 9 | 3 | 4 | 8 | 2 | 7 |
| 9 | 2 | 7 | 5 | 4 | 8 | 3 | 1 | 6 |
| 1 | 5 | 6 | 3 | 7 | 2 | 9 | 4 | 8 |
| 4 | 3 | 8 | 6 | 9 | 1 | 5 | 7 | 2 |

## ಮತ್ತೆ ಮತ್ತೆ ಸಂಕ್ರಾಂತಿ

ನುಡಿ ಬೆಳಗು

ವಾಸುದೇವ ನಾಡಿಗ್

ಸೂರ್ಯನೇ ತನ್ನ ಪಥವನ್ನು ಬದಲಾಯಿಸುತ್ತಾನೆ. ಜೀವಜಾಲವನ್ನೂ ಬಿಡದೆ ಬದಲಾಯಿಸುತ್ತಾನೆ. ಉತ್ತರಾಯಣದ ಕಡೆಗೆ ಪಯಣ; ಎಲ್ಲರ ಕೂಡ. ಸುಗ್ಗಿಯನ್ನು ಬಿಂಬಿಸುವ ಕಾಲ. ಚಳಿ ನಮ್ಮನ್ನು ಅಗಲುವ ಮುನ್ಸೂಚನೆ. ಬಾಳಿನಲ್ಲಿ ಬದಲಾವಣೆಯ ಹಾಡು ಸಂಕ್ರಾಂತಿ. ಸಣ್ಣ ಎಳ್ಳುಕಾಳು ಬೆಲ್ಲದುಂಡೆಯ ಸಖ್ಯ ಬೆಳೆಸುವ ಮುಹೂರ್ತ. ಈ ಸೂರ್ಯ ಚಂದ್ರ ಗ್ರಹ ತಾರೆಗಳ ಓಡಾಟ ನಿಲ್ಲಲಾರದು. ಮರಳಿ ಮರಳಿ ಬರುವ ಅದೇ ಯುಗಾದಿ, ಅದೇ ದೀಪಾವಳಿ, ಅದೇ ಸುಗ್ಗಿ ಹಬ್ಬ, ಅದೇ ದಸರಾ ಮರುಕಳಿಸಿ ಅದೇ ಅನುಭವ ಕೊಡುತ್ತವೆ. ಋತುಗಳ ಮೇಲೆ ಚಲಿಸುವ ಬಾಳ ಚಕ್ರ ಇದು. ಅವು ಹಾಗಾಗೇ ಇರುತ್ತವೆ.

ನಾವು ಬದಲಾಗಿರುತ್ತೇವೆ. ವಯಸ್ಸು, ರೂಪ, ಗುಣ ಸ್ವೀಕರಿಸುವ ಮನೋಭಾವ ಎಲ್ಲ ಎಲ್ಲ ಬದಲಾಗಿರುತ್ತದೆ. ಹಕ್ಕಿ, ಮರ, ಬಾನು, ನದಿ, ಎಳ್ಳು, ಬೆಲ್ಲ, ಬೇವು, ಬನ್ನಿ ಮರ ಹಾಗೇ ನಿಂತಿರುತ್ತವೆ. ಬದಲಾದ ಕಾಲವನ್ನು ಹಳಿಯುತ್ತಿರುತ್ತೇವೆ. ಏಕೆಂದರೆ ನಮಗೆ ಬಾಯಿ ಇದೆ. ಅವು ಮೌನ. ಗೋಪಾಲಕೃಷ್ಣ ಅಡಿಗರು ಹಾಡಿದ ಹಾಗೆ ಮೌನ ನೆಲವನ್ನು ತಬ್ಬಿದೆ. ಬದಲಾವಣೆ ಬಾಳಿನ ಕುರುಹು; ಒಪ್ಪಿಕೊಳ್ಳೋಣ.

ಇಡೀ ಭೂಮಿ ಋತುಚಕ್ರದ ಒಲವಿಗೆ ಕೂತು ಕಂಗೊಳಿಸುವಾಗ ಅದರ ಜೊತೆಗೆ ರೈತಾಪಿ ಜನರ ಬೆವರು ಬೆಳೆಯಾಗುತ್ತದೆ. ಬೆಲ್ಲದಿಂದ ಬೇವಿನವರೆಗೂ ಇಳೆಯ ಆಳದಲ್ಲಿ ಇಳಿದ ಬೇರುಗಳ ಫಲವೇ.

ತನ್ನದಲ್ಲದ ಕೊಡಲಿಗಳನ್ನೂ ಪಡೆಯುವ ಲೋಭ, ಧುತ್ ಅಂತ ಶ್ರೀಮಂತ ಆಗಲು ಕೋಳಿಯ ಹೊಟ್ಟೆಯನ್ನೇ ಬಗೆದ ಲಾಭಕೋರತನ. ಈ ಕಾರಣ ಸುಗ್ಗಿಕಾಲವೂ ಬದಲಾಗುತ್ತದೆ. ನಿಸರ್ಗದ ಕೂಡ ವ್ಯಾಪಾರಕ್ಕೆ ಕೂತವರ ತಕ್ಕಡಿ. ಆಕಾಶಕ್ಕೂ ನೂಕು ನುಗ್ಗಲು ಈಗ. ಅಗಾಧವಾದ ಶಕ್ತಿಯೊಂದರ ಋಣದಲ್ಲೇ ಬಾಳು ಸವೆಸುವಾಗ ದಾಸಿಮಯ್ಯ ಮಾತಾಡುತ್ತಾನೆ. 'ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ' ಎಂಬ ಮಾತು ನಮ್ಮನ್ನು ಎಚ್ಚರಿಸುತ್ತದೆ. ಸುಳಿದು ಸೂಸುವ ಗಾಳಿಯೇ ವಿಷವಾಗುವ ಸನ್ನಿವೇಶಕ್ಕೆ ತಲುಪಲಾದ ಹಂತ. ಟಾಲ್‌ಸ್ಟಾಯ್ ಅವರ ಅತಿ ಸಣ್ಣಕತೆಯಲ್ಲಿ ಕಣ್ಣಿಗೆ ಕಂಡ ನೆಲವೆಲ್ಲ ತನ್ನದೇ ಆಗುತ್ತದೆ ಎಂಬ ಲಾಲಸೆಯಲ್ಲಿ ಓಡಿ ಶಾಶ್ವತವಾಗಿ ಬಿದ್ದ ಮನುಷ್ಯ ನೆನಪಾಗುತ್ತಾನೆ. ಆಸ್ತಿ ಇರಲಿ, ಒಂದು ಸೂಜಿ ಮೊನೆಗೆ ತಾಕುವ ಮಣ್ಣನ್ನೂ ಕೊಡುವುದಿಲ್ಲ ಎಂದು ಹಟ ತೊಟ್ಟ ಸುಯೋಧನ ಕಾಡುತ್ತಾನೆ.

ಕಳೆದುಕೊಂಡು ಮತ್ತೆ ತುಂಬಿಕೊಳ್ಳುವ ಪ್ರಕೃತಿಯ ಎದುರು ಬರೀ ತುಂಬಿಕೊಂಡೆ ಖಾಲಿಯಾದ ಮನುಷ್ಯನಿಗೆ ಸಂಕ್ರಾಂತಿ ನೂರು ಸಂದೇಶ ಕೊಡುತ್ತದೆ. ಅಡಿಕೆ ತೋಟ ಬಾಳೆ ಎಲೆ ಪತ್ರೆಲೆಗಳ ಜಾಗದಲ್ಲಿ ಪ್ಲಾಸ್ಟಿಕ್ ಬಂದು ಕೂತದ್ದೂ ಒಂದು ಖಾಲಿತನವೇ. ಆ ತಲೆಮಾರು ಅಂಗಳದಲ್ಲಿ ಹಿಟ್ಟಿನ ರಂಗೋಲಿ ಎಳೆದು ಅವು ಕೀಟ ಹಕ್ಕಿಗಳಿಗೂ ಆಹಾರವಾಗಲಿ ಎಂದು ಹರಸಿದವರು. ಮಾವು ಬೇವು ತೋರಣ ವಿಷವಾಯುವನ್ನು ಹಿಡಿದಿಡುವ ಮಾರ್ಗಗಳಾಗಿ ತಣಿದಿದ್ದವು. ಬೆರಳುಗಳ ಸಂಧುಗಳಿಂದ ರಂಗೋಲಿ ಬೀಳುವ ಚೆಲುವಿನ ಕತೆ ಅದು.

ಮತ್ತೆ ಸಂಕ್ರಾಂತಿ ಬಂದಿದೆ, ಯುಗಾದಿಯೂ ಬರುತ್ತದೆ, ಮೋಸ ಮಾಡುವುದಿಲ್ಲ. ಸಿದ್ದೇಶ್ವರ ಸ್ವಾಮೀಜಿ ಹೇಳುವ ಹಾಗೆ 'ಒಳಿತಿನ ಮಾತುಗಳೆಲ್ಲವನೂ ಹೇಳಲಾಗಿದೆ, ಈಗ ಆಚರಣೆ ಮಾತ್ರ ಉಳಿದಿರುವುದು'.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

**14 ಜನವರಿ 2026 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ:** ಪೌಷ ಕೃಷ್ಣ ಏಕಾದಶಿ ಗಂ 17-53 ನಕ್ಷತ್ರ: ಅನುರಾಧ ಗಂ 27-04 ಯೋಗ: ಗಂಡ ಗಂ. 19-56 ಕರಣ: ಬಾಲವ ಗಂ. 17-53 ಧನು ಮಾಸದ 30 ನೇ ದಿನ. ಮಳೆ ನಕ್ಷತ್ರ : ಉತ್ತರಾಷಾಢ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 -01-30 , ಸೂರ್ಯೋದಯ : 07-01 ಸೂರ್ಯಾಸ್ತ : 06-18, ಮುಸ್ಲಿಂ ದಿನಾಂಕ : 24 ರಜಬ್ , ಅದೃಷ್ಟ ಸಂಖ್ಯೆ : 1, 2

**ಮೇಷ:** ಈ ಹಿಂದೆ ಪ್ರಾರಂಭವಾಗಿರುವ ಕಾರ್ಯಗಳು ಮನುಷ್ಯ ಪ್ರಯತ್ನದ ಕೊರತೆಯಿಂದ ಸ್ತಬ್ಧವಾದಂತಾಗಲಿದೆ. ನಿರೀಕ್ಷಿತ ಧನಾಗಮನವಿದ್ದರೂ ಆರ್ಥಿಕ ವಿಷಯಗಳಲ್ಲಿ ಎಚ್ಚರವಹಿಸಿ.

**ವೃಷಭ:** ಸಂದರ್ಭಕ್ಕೆ ಅನುಗುಣವಾಗಿ ತೀರ್ಮಾನ ಅನಿವಾರ್ಯ ಮತ್ತು ಸರಿ ಆಗುವುದು. ಬಂಧುಗಳ ಸಹಾಯದಿಂದ ಪುತ್ರನಿಗೆ ಕಾರ್ಯಾನುಕೂಲ. ಸ್ವಂತ ಕೆಲಸವನ್ನು ಜರೂರಾಗಿ ಮಾಡಬೇಕಾಗುತ್ತದೆ.

**ಮಿಥುನ:** ಧಾರ್ಮಿಕ ವಿಚಾರಗಳತ್ತ ಮನಸ್ಸು ಹರಿಯುವುದು.ಮನೆಯಲ್ಲಿ ದೇವತಾ ಕಾರ್ಯಕ್ರಮಗಳನ್ನು ಏರ್ಪಡಿಸುವಿರಿ. ವಾಯುಬಾಧೆ ಉಂಟಾಗುವುದರಿಂದ ಸಣ್ಣ-ಪುಟ್ಟ ಅನಾರೋಗ್ಯ ಎದುರಾಗುವುದು.

**ಕರ್ಕಾಟಕ:** ಸಂಶೋಧಕರರಿಗೆ ಅನುಕೂಲಕರ ಪುಸ್ತಕ ದೊರೆಯಲಿದೆ. ಸರ್ವರಂಗದಲ್ಲೂ ಜಯಶಾಲಿಯ ಪಟ್ಟ ಹೊಂದುವ ಯೋಗವಿದೆ. ಬೇಕರಿ ಪದಾರ್ಥಗಳ ಮಾರಾಟದಿಂದಲಾಭ ಇರುವುದು.

**ಸಿಂಹ:** ಸಂಬಂಧಿಕರಲ್ಲಿ ಆರ್ಥಿಕ ಅಭಿವೃದ್ಧಿ ವಿಚಾರಕ್ಕೆ ಸಂಬಂಧಿಸಿದಂತೆ ಮಾತುಗಳು ಬರಬಹುದು. ಉದ್ಯೋಗದಲ್ಲಿನ ವರ್ಗಾವಣೆ ರದ್ದು ಮಾಡಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಸ್ಥೈರ್ಯ ಇರಲಿ.

**ಕನ್ಯಾ:** ದಾರಿಹೋಕರ ಟೀಕೆಗಳಿಗೆ ಹೆದರದೆ ಕೆಲಸದಲ್ಲಿ ಸಕಾರಾತ್ಮಕವಾಗಿ ಮುಂದುವರಿಯಿರಿ. ನಟನಾ ವೃತ್ತಿಯವರಿಗೆ ಸಂಪತ್ತು ಹರಿದು ಬರಲಿದೆ. ಸಂತಸದ ವಾತಾವರಣದಿಂದ ನೆಮ್ಮದಿ ಇರುವುದು.

**ತುಲಾ:** ಯಾವುದೇ ನಿಯಮ ಉಲ್ಲಂಘನೆಯಾಗದೇ ಇರುವ ರೀತಿಯಲ್ಲಿ ಇರುವುದು ಉತ್ತಮ. ಶನೈಶ್ಚರನ ಆರಾಧನೆಯಿಂದ ಜಟಿಲ ಸಮಸ್ಯೆ ಇತ್ಯರ್ಥಗೊಂಡು ಪ್ರತಿವಾದಿಗಳು ನಿರುತ್ತರರಾಗುವರು.

**ವೃಶ್ಚಿಕ:** ವ್ಯವಹಾರವನ್ನು ವಿಸ್ತರಿಸುವ ಯೋಜನೆ ಹಾಕಿಕೊಂಡಿದ್ದರೆ ಅದನ್ನು ಅನುಷ್ಠಾನಕ್ಕೆ ತರಲು ಸಕಾಲ. ರಕ್ತದ ಅಶುದ್ಧಿಯಿಂದ ಸಮಸ್ಯೆಗಳು ಕಾಡಬಹುದು. ಜೀವನದ ಬಗ್ಗೆ ನಿರುತ್ಸಾಹ ತಾಳದಿರಿ.

**ಧನು:** ಟ್ರಾವೆಲ್ಸ್ ಏಜೆನ್ಸಿ ಉದ್ಯೋಗದವರಿಗೆ ಲಾಭದಾಯಕ ಬೆಳವಣಿಗೆ ಇರುತ್ತದೆ. ಆಫೀಸಿನಲ್ಲಿ ಸ್ಥಾನಮಾನಗಳು ದೊರೆಯಲಿವೆ. ಉತ್ತಮ ಕಾರ್ಯಗಳಿಗೆ ಎಂದಿನಂತೆ ಶ್ಲಾಘನೆ ಸಿಗುತ್ತದೆ.

**ಮಕರ:** ಹೆಚ್ಚಿನ ಉತ್ಸಾಹ ಕಾಣಿಸುತ್ತಿದ್ದು ಹೊಸದೊಂದು ಹಾದಿಯಲ್ಲಿ ನಡೆಯಲಿದ್ದೀರಿ. ತಂದೆಯವರ ಮನಸ್ಸನ್ನು ನೋಯಿಸದೇ, ತಂದೆಯವರ ಮಾತಿನಂತೆ ನಡೆಯುವುದು ಶ್ರೇಯಸ್ಕರ.

**ಕುಂಭ:** ವ್ಯಾಪಾರದಲ್ಲಿ ಸಹಚರರಿಂದ ಮೋಸವಾಗುತ್ತಿರುವ ವಿಚಾರ ಅನುಭವಕ್ಕೆ ಬಂದು ದುಃಖವಾಗಬಹುದು. ಬದುಕಿನ ಕವಲುದಾರಿಯಲ್ಲಿರುವ ನಿಮಗೆ ಮಾರ್ಗದರ್ಶನ ದೊರೆಯಲಿದೆ.

**ಮೀನ:** ಕೆಲಸದಲ್ಲಿ ವಿಘ್ನಗಳು ಎದುರಾದರೂ, ಅಪೇಕ್ಷಿತ ಫಲ ದೊರಕುವುದು. ದೂರ ಪ್ರಯಾಣದ ಕಾರ್ಯಗಳನ್ನು ಮುಂದೂಡುವುದು ಒಳ್ಳೆಯದು. ಸಮಾಜದಲ್ಲಿ ಮೃದುಭಾಷಿಗಳು ಎನಿಸಿಕೊಳ್ಳುವಿರಿ.

## ಗುಂಡಣ್ಣ

# ಬೆಂಬಲ ಬೆಲೆ ಯೋಜನೆ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಬಲ ಬೆಲೆ ಯೋಜನೆಯಲ್ಲಿ ಶೇಂಗಾ ಸೇರಿದಂತೆ ಹಲವು ಕೃಷಿ ಉತ್ಪನ್ನಗಳ ಖರೀದಿ ಅವಧಿ ವಿಸ್ತರಣೆ ಮಾಡಲಾಗಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಶೇಂಗಾ ಮತ್ತು ಸೋಯಾಬೀನ್ ಖರೀದಿ ಅವಧಿಯನ್ನು ಜನವರಿ 26 ರವರೆಗೆ, ಹೆಸರುಕಾಳು, ಉದ್ದಿನಕಾಳು ಹಾಗೂ ಸೂರ್ಯಕಾಂತಿ ಖರೀದಿ ಅವಧಿಯನ್ನು ಜನವರಿ 22 ರವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಈ ಎಲ್ಲ ಉತ್ಪನ್ನಗಳ ಖರೀದಿ ಅವಧಿಯು ಈಗಾಗಲೇ ಅಂತ್ಯವಾಗಿದ್ದು, ಖರೀದಿ ಪ್ರಕ್ರಿಯೆ ಅವಧಿ ವಿಸ್ತರಣೆ ಮಾಡಬೇಕು ಎಂಬ ಬೇಡಿಕೆ ಬಂದಿದ್ದರಿಂದಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

# ಕೆಪಿಎಸ್‌ಸಿ: ಮೂರೇ ದಿನದಲ್ಲಿ ಸರಿ ಉತ್ತರ ಪ್ರಕಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಗ್ರೂಪ್ 'ಎ' ವೃಂದದ 58 ಬ್ಯಾಕ್‌ಲಾಗ್ ಸೇರಿ ಒಟ್ಟು 400 ಪಶು ವೈದ್ಯಾಧಿಕಾರಿಗಳ ಹುದ್ದೆಗಳ ಭರ್ತಿಗೆ ಇದೇ 9ರಂದು ನಡೆದಿದ್ದ ಸ್ಪರ್ಧಾತ್ಮಕ ಪರೀಕ್ಷೆಯ ಸರಿ ಉತ್ತರಗಳನ್ನು ಕೆಪಿಎಸ್‌ಸಿ ಮಂಗಳವಾರ ಪ್ರಕಟಿಸಿದೆ.

'ಪರೀಕ್ಷೆಯ ಉತ್ತರ ಪತ್ರಿಕೆಗಳ ಸ್ಕ್ಯಾನಿಂಗ್ ಕಾರ್ಯವನ್ನು ಕೇವಲ ಮೂರು ದಿನಗಳಲ್ಲಿ ಪೂರ್ಣಗೊಳಿಸಿ, ಕೆಪಿಎಸ್‌ಸಿ ಕೀ ಉತ್ತರಗಳನ್ನು ಪ್ರಕಟಿಸಿದೆ. ಮೌಲ್ಯಮಾಪನದ ಮೊದಲ ಹಂತದ ಪ್ರಕ್ರಿಯೆ ತ್ವರಿತವಾಗಿ ಮುಗಿದಿರುವುದರಿಂದ 1:3 ಅನುಪಾತದಲ್ಲಿ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನೂ ಶೀಘ್ರದಲ್ಲಿ ಬಿಡುಗಡೆ ಮಾಡಲು ಕೆಪಿಎಸ್‌ಸಿಗೆ ಸಾಧ್ಯವಾಗಲಿದೆ' ಎಂದು ಹುದ್ದೆ ಆಕಾಂಕ್ಷಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ನಗರದ ಮೂರು ಕೇಂದ್ರಗಳಲ್ಲಿ ಇದೇ 8ರಂದು ನಡೆದ ಕನ್ನಡ ಭಾಷಾ ಪರೀಕ್ಷೆಗೆ 629 ಹಾಗೂ 9ರಂದು ನಡೆದ ಸಾಮಾನ್ಯ ಪತ್ರಿಕೆ ಮತ್ತು ನಿರ್ದಿಷ್ಟ ಪತ್ರಿಕೆಯ ಪರೀಕ್ಷೆಗೆ 1,447 ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಕೆಪಿಎಸ್‌ಸಿ ಅವಕಾಶ ಕಲ್ಪಿಸಿತ್ತು.

# ಕಾಡಾನೆ ತುಳಿದು ಕಾರ್ಮಿಕ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

**ಹಾಸನ:** ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಮೂಗಲಿಯಲ್ಲಿ ಮಂಗಳವಾರ ಕಾಡಾನೆ ದಾಳಿಯಿಂದ ತೋಟಕ್ಕೆ ಹೊರಟಿದ್ದ ಕಾರ್ಮಿಕ ಮಹಿಳೆ ಶೋಭಾ (40) ಮೃತಪಟ್ಟರು. ಅವರ ತಾಯಿ ರಾಜಮ್ಮ ಪಾರಾಗಿದ್ದಾರೆ.



ಮೃತದೇಹವಿಟ್ಟು ಪ್ರತಿಭಟಿಸಿದ ಗ್ರಾಮಸ್ಥರು, 'ಪ್ರತಿ ಬಾರಿ ಸಾವು ಸಂಭವಿಸಿದಾಗ ಸರ್ಕಾರವು ಪರಿಹಾರದ ಭರವಸೆ ನೀಡುವುದು ಬಿಟ್ಟರೆ ಶಾಶ್ವತ ಪರಿಹಾರವನ್ನು ಕಲ್ಪಿಸಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಸ್ಥಳಕ್ಕೆ ಧಾವಿಸಿ ಆನೆಯನ್ನು ಕಾಡಿಗೆ ಮರಳಿಸಲು ಅಥವಾ ಸೆರೆ ಹಿಡಿಯಲು ಕ್ರಮ ಕೈಗೊಳ್ಳಬೇಕು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೂಚನೆ ನೀಡಿದ್ದಾರೆ' ಎಂದು ಅರಣ್ಯಾಧಿಕಾರಿಯೊಬ್ಬರು ತಿಳಿಸಿದರು.

**ಆನೆ ಸೆರೆ –ಸಚಿವರ ಸೂಚನೆ:** (ಬೀದರ್ ವರದಿ) 'ಮೂಗಲಿ ಗ್ರಾಮದಲ್ಲಿ ಮಂಗಳವಾರ ಕಾಡಾನೆ ದಾಳಿಗೆ ಮಹಿಳೆ ಸತ್ತಿರುವ ಪ್ರಕರಣದಲ್ಲಿ ಕುಟುಂಬಕ್ಕೆ ಪರಿಹಾರ ನೀಡಬೇಕು. ದಾಳಿ ನಡೆಸಿದ ಆನೆ ಸೆರೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕೂಡಲೇ ಸ್ಥಳಕ್ಕೆ ಧಾವಿಸಿ ಆನೆಯನ್ನು ಕಾಡಿಗೆ ಮರಳಿಸಲು ಅಥವಾ ಆನೆ ಸೆರೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ವನ್ಯಜೀವಿ ವಿಭಾಗದ ಹಿರಿಯ ಅಧಿಕಾರಿಗಳಿಗೆ ಸೂಚಿಸಿರುವ ಅವರು, ಕೂಡಲೇ ಸ್ಥಳಕ್ಕೆ ತೆರಳಿ ಪರಿಸ್ಥಿತಿ ನಿಭಾಯಿಸುವಂತೆ ಹಾಸನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ನಿರ್ದೇಶನ ನೀಡಿದ್ದಾರೆ.

# ಜ. 30ರಿಂದ ಸಾಹಿತ್ಯ ಪರೀಕ್ಷೆ

**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತು 2025–26ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಪರೀಕ್ಷೆಗಳನ್ನು ಇದೇ 30ರಿಂದ ಫೆ.1ರವರೆಗೆ ಹಮ್ಮಿಕೊಂಡಿದೆ.

ಪರೀಕ್ಷೆಗಳು ರಾಜ್ಯದ 13 ಕೇಂದ್ರಗಳಲ್ಲಿ ನಡೆಯಲಿವೆ. ಪರೀಕ್ಷಾ ಪ್ರವೇಶ ಪತ್ರಗಳನ್ನು ವಿದ್ಯಾರ್ಥಿಗಳಿಗೆ ಅಂಚೆ ಮೂಲಕ ಕಳುಹಿಸಲಾಗುತ್ತದೆ. ಇದೇ 22ರ ಒಳಗೆ ಪ್ರವೇಶ ಪತ್ರ ತಲುಪದಿದ್ದಲ್ಲಿ ಪರಿಷತ್ತಿನ ಕೇಂದ್ರ ಕಚೇರಿಯಲ್ಲಿ ವಿಚಾರಿಸಬಹುದು. ದೂರವಾಣಿ ಸಂಖ್ಯೆ 080 26612991 ಅಥವಾ 8618296186ಕ್ಕೆ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧ | ಬೆಂಗಳೂರು, ಶುಕ್ರವಾರ ೦೯ ಜನವರಿ, ೨೦೨೬ (ಪುಷ್ಯ, ೧೯ ಶಕವರ್ಷ, ೧೯೪೭) | ಸಂಚಿಕೆ ೦೭
Volume 161 | BENGALURU, FRIDAY 09, JANUARY, 2026 (PUSHYA, 19, SHAKAVARSHA, 1947) | Issue 07

## ಭಾಗ 3

## ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ನಮೂನೆ–V

## ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.

[ಕರ್ನಾಟಕ ತಿದ್ದುಪಡಿ ನಿಯಮ–5, 20(1) (ಬಿ)]

## ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013ರ ಕಲಂ –11(1)ರ ಮೇರೆಗೆ ಅಧಿಸೂಚನೆ

ಸಂಖ್ಯೆ:ಕಗೃಮಂ/ಭೂಸ್ವಾವಿ/ಬೆಂ.ಗ್ರಾ/ವಿಶ್ವನಾಥಪುರ –ಬ್ಲಾಕ್–2/52/2025–26 ದಿನಾಂಕ:07.01.2026

ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ವಸತಿ ಯೋಜನೆಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ವಿಶ್ವನಾಥಪುರ ಗ್ರಾಮದಲ್ಲಿ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ: 23–07–2019ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ – 2019 (2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 16)ರ ಕಲಂ–10(ಎ)ರಡಿ ಮೂಲ ಕಾಯ್ದೆಯ ಅಧ್ಯಾಯ–II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸರ್ಕಾರದ ಸಂಖ್ಯೆ: ಆರ್.ಡಿ.ನಂ.140ಎ.ಕ್ಯೂ.ಬಿ.2025 ದಿನಾಂಕ: 23–09–2025ರ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಈ ಅಧಿಸೂಚನೆ ರಾಜ್ಯ ಪತ್ರದಲ್ಲಿ ದಿನಾಂಕ: 18–10–2025 ರಂದು ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ–12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ–11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ –15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿ–1, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

### ಅನುಸೂಚಿ

ಜಿಲ್ಲೆ : ಬೆಂಗಳೂರು ಗ್ರಾಮಾಂತರ | ತಾಲ್ಲೂಕು: ದೇವನಹಳ್ಳಿ | ಹೋಬಳಿ: ಕುಂದಾಣ | ಗ್ರಾಮ: ವಿಶ್ವನಾಥಪುರ (ಬ್ಲಾಕ್–2)

| ಕ್ರ. ಸಂ | ಪಹಣಿಯಂತೆ ಖಾತೆದಾರರ ಹೆಸರು | | ಸರ್ವೆ/ಖಾತಾ ನಂಬರ್ | ಸರ್ವೆ ಖಾತಾ ನಂಬರಿನಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತ್ತಾರ ಅನ್ವಯ) | | ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ | | ತರಹೆ | ಚಕ್ಕುಬಂದಿ /ಸರಹದ್ದು | | | | ಷರಾ |
|---|---|---|---|---|---|---|---|---|---|---|---|---|---|
| | ಭೂಮಾಲೀಕರು / ಹಿಡುವಳಿದಾರರ ಹೆಸರು | ಅನುಭವದಾರರ ಹೆಸರು | | ಕೃಷಿ / ಕೃಷಿಯೇತರ ಜಮೀನು (ಎ–ಗುಂ) | ಖರಾಬು (ಎ–ಗುಂ) | ಕೃಷಿ / ಕೃಷಿಯೇತರ ಜಮೀನು (ಎ–ಗುಂ) | ಖರಾಬು (ಎ–ಗುಂ) | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| 1 | ವಿನಯ್ ಕುಮಾರ್ ಬಿನ್ ಲೇಟ್ ಮಾರಪ್ಪ | ವಿನಯ್ ಕುಮಾರ್ ಬಿನ್ ಲೇಟ್ ಮಾರಪ್ಪ | 168/1 | 0–30 | 0–00 | 0–30 | 0–00 | ಖುಷ್ಕಿ | ರಸ್ತೆ | ಸ ನಂ.171 | ಸ ನಂ. 175 ಕೆರೆ | ಸ ನಂ. 168/2 | |
| 2 | ನಂಜೇಗೌಡ ಬಿನ್ ಲೇಟ್ ಮಾರಪ್ಪ | ನಂಜೇಗೌಡ ಬಿನ್ ಲೇಟ್ ಮಾರಪ್ಪ | 168/2 | 1–08 | 0–00 | 1–08 | 0–00 | ಖುಷ್ಕಿ | ರಸ್ತೆ | ಸ ನಂ.171 | ಸ ನಂ. 168/1 | ಸ ನಂ. 168/3 | |
| 3 | ನಂಜೇಗೌಡ ಬಿನ್ ಲೇಟ್ ಮಾರಪ್ಪ | ನಂಜೇಗೌಡ ಬಿನ್ ಲೇಟ್ ಮಾರಪ್ಪ | 168/3 | 0–29 | 0–00 | 0–29 | 0–00 | ಖುಷ್ಕಿ | ರಸ್ತೆ | ಸ ನಂ.171 | ಸ ನಂ. 168/2 | ಸ ನಂ. 168/4,5 | |
| 4 | ಮುನೇಗೌಡ ಎನ್ಲ. ಬಿನ್ ಲೇಟ್ ನಾರಾಯಣಪ್ಪ | ಮುನೇಗೌಡ ಎನ್ಲ. ಬಿನ್ ಲೇಟ್ ನಾರಾಯಣಪ್ಪ | 168/4 | 0–24 | 0–00 | 0–24 | 0–00 | ಖುಷ್ಕಿ | ಸ ನಂ. 168/5 | ಸ ನಂ.171 | ಸ ನಂ. 168/3 | ಸ ನಂ. 171 | |
| 5 | ಮುನಿರಾಜು ಎಸ್. ಆರ್. ಬಿನ್ ಲೇಟ್ ರಾಮಯ್ಯ | ಮುನಿರಾಜು ಎಸ್. ಆರ್. ಬಿನ್ ಲೇಟ್ ರಾಮಯ್ಯ | 168/5 | 0–24 | 0–00 | 0–24 | 0–00 | ಖುಷ್ಕಿ | ರಸ್ತೆ ಸ ನಂ. 169 | ಸ ನಂ. 168/4 | ಸ ನಂ. 168/3 | ಸ ನಂ. 171 | |
| 6 | ನಾರಾಯಣಪ್ಪ – ಬೈರಪ್ಪ | ನಾರಾಯಣಪ್ಪ – ಬೈರಪ್ಪ | 171 | 41–10 | 0–00 | 1–00 | 0–00 | ಖುಷ್ಕಿ | ಸ ನಂ. 226, 227, 228 | ಸ ನಂ. 174, 224 225 | ಸ ನಂ. 170, 133, 132 | ಗಡಿ | |
| | ಮುನಿರತ್ನಮ್ಮ ಕೋಂ ಲೇ ಎಂ ರಾಮಾಂಜಿನಪ್ಪ | ಮುನಿರತ್ನಮ್ಮ ಕೋಂ ಲೇ ಎಂ ರಾಮಾಂಜಿನಪ್ಪ | | | | 0–14 | | | | | | | |
| | ಬಿ ಸಿ ಶಿವರಾಜ್ ಬಿನ್ ಲೇ ಚಿಕ್ಕಣ್ಣ | ಬಿ ಸಿ ಶಿವರಾಜ್ ಬಿನ್ ಲೇ ಚಿಕ್ಕಣ್ಣ | | | | 0–26 | | | | | | | |
| | ಎಸ್. ಬಿ.ರಾಮಚಂದ್ರಪ್ಪ – ಬೈರಪ್ಪ | ಎಸ್. ಬಿ.ರಾಮಚಂದ್ರಪ್ಪ – ಬೈರಪ್ಪ | | | | 0–05 | | | | | | | |
| | ಎಸ್.ಆರ್.ಕೃಷ್ಣಮೂರ್ತಿ–ಎಸ್.ಪಿ. ರಾಮಚಂದ್ರಪ್ಪ | ಎಸ್.ಆರ್.ಕೃಷ್ಣಮೂರ್ತಿ–ಎಸ್.ಪಿ. ರಾಮಚಂದ್ರಪ್ಪ | | | | 0–03 | | | | | | | |
| | ನಾರಾಯಣಸ್ವಾಮಿ– ಎಸ್.ಬಿ.ರಾಮಚಂದ್ರಪ್ಪ | ನಾರಾಯಣಸ್ವಾಮಿ– ಎಸ್.ಬಿ.ರಾಮಚಂದ್ರಪ್ಪ | | | | 0–03 | | | | | | | |
| | ಎಸ್.ಆರ್.ಕೇಶವಮೂರ್ತಿ–ಎಸ್.ಬಿ.ರಾಮಚಂದ್ರಪ್ಪ | ಎಸ್.ಆರ್.ಕೇಶವಮೂರ್ತಿ–ಎಸ್.ಬಿ.ರಾಮಚಂದ್ರಪ್ಪ | | | | 1–03 | | | | | | | |
| | ಎಸ್.ಆರ್.ದೇವರಾಜು– ಎಸ್.ಬಿ.ರಾಮಚಂದ್ರಪ್ಪ | ಎಸ್.ಆರ್.ದೇವರಾಜು– ಎಸ್.ಬಿ.ರಾಮಚಂದ್ರಪ್ಪ | | | | 0–03 | | | | | | | |
| | ಎಸ್.ಎ. ಚಂದ್ರಪ್ಪ ಬಿನ್ ಆಂಜಿನಪ್ಪ | ಎಸ್.ಎ. ಚಂದ್ರಪ್ಪ ಬಿನ್ ಆಂಜಿನಪ್ಪ | | | | 1–10 | | | | | | | |
| | ಎಸ್.ಎ.ರಮೇಶ್ ಬಿನ್ ಆಂಜಿನಪ್ಪ | ಎಸ್.ಎ.ರಮೇಶ್ ಬಿನ್ ಆಂಜಿನಪ್ಪ | | | | 1–10 | | | | | | | |
| | ನಾಗಮ್ಮ ಕೋಂ ಲೇ ಮುನಿವೀರಪ್ಪ | ನಾಗಮ್ಮ ಕೋಂ ಲೇ ಮುನಿವೀರಪ್ಪ | | | | 3–00 | | | | | | | |
| | ಎಸ್.ಮುನಿವೀರಯ್ಯ – ದೊಡ್ಡನಂಜಪ್ಪ | ಎಸ್.ಮುನಿವೀರಯ್ಯ – ದೊಡ್ಡನಂಜಪ್ಪ | | | | 1–00 | | | | | | | |
| | ಶಾಂತಕುಮಾರ್ ಬಿನ್ ಎಸ್ ವೀರಪ್ಪ | ಶಾಂತಕುಮಾರ್ ಬಿನ್ ಎಸ್ ವೀರಪ್ಪ | | | | 0–14 | | | | | | | |
| | ರವಿಕುಮಾರ್ ಬಿನ್ ಎಸ್ ವೀರಣ್ಣ | ರವಿಕುಮಾರ್ ಬಿನ್ ಎಸ್ ವೀರಣ್ಣ | | | | 0–13 | | | | | | | |
| | ಸುನೀಲ್ ಕುಮಾರ್ ಬಿನ್ ಎಸ್ ವೀರಣ್ಣ | ಸುನೀಲ್ ಕುಮಾರ್ ಬಿನ್ ಎಸ್ ವೀರಣ್ಣ | | | | 0–13 | | | | | | | |
| | ನಾರಾಯಣಪ್ಪ – ಬೈರಪ್ಪ | ನಾರಾಯಣಪ್ಪ – ಬೈರಪ್ಪ | | | | 0–20 | | | | | | | |
| | ಆಂಜನಪ್ಪ– ರಾಮಯ್ಯ | ಆಂಜನಪ್ಪ– ರಾಮಯ್ಯ | | | | 1–20 | | | | | | | |
| | ಸರ್ಕಾರಿ ಗೋಮಾಳ | ಸರ್ಕಾರಿ ಗೋಮಾಳ | | | | 16–23 | | | | | | | |
| | ಎಸ್.ಟಿ.ನಾಗರಾಜು ಬಿನ್ ಮುನಿತಿಮ್ಮಣ್ಣ | ಎಸ್.ಟಿ.ನಾಗರಾಜು ಬಿನ್ ಮುನಿತಿಮ್ಮಣ್ಣ | | | | 0–12 | | | | | | | |
| | ನಾರಾಯಣಸ್ವಾಮಿ ಬಿನ್ ರಾಮಚಂದ್ರಪ್ಪ | ನಾರಾಯಣಸ್ವಾಮಿ ಬಿನ್ ರಾಮಚಂದ್ರಪ್ಪ | | | | 0–12 | | | | | | | |
| | ಕೃಷ್ಣಮ್ಮ ಕೋಂ ಎಸ್.ಆರ್.ಕೃಷ್ಣಮೂರ್ತಿ | ಕೃಷ್ಣಮ್ಮ ಕೋಂ ಎಸ್.ಆರ್.ಕೃಷ್ಣಮೂರ್ತಿ | | | | 0–15 | | | | | | | |
| | ಅಂಜುಳ ಕೋಂ ಲೇ ಎಸ್.ಆರ್. ಮುನಿರಾಜು | ಅಂಜುಳ ಕೋಂ ಲೇ ಎಸ್.ಆರ್. ಮುನಿರಾಜು | | | | 1–03 | | | | | | | |
| | ಮುನಿರಾಜು ಎಸ್ ಆರ್ ಬಿನ್ ಲೇ ರಾಮಯ್ಯ | ಮುನಿರಾಜು ಎಸ್ ಆರ್ ಬಿನ್ ಲೇ ರಾಮಯ್ಯ | | | | 0–05 | | | | | | | |
| | ಓ ಹನುಮಯ್ಯ ಬಿನ್ ತಿಮ್ಮರಾಯಪ್ಪ | ಓ ಹನುಮಯ್ಯ ಬಿನ್ ತಿಮ್ಮರಾಯಪ್ಪ | | | | 0–05 | | | | | | | |
| 7 | ಪಿ. ರಾಮಯ್ಯ | ಪಿ. ರಾಮಯ್ಯ | 172/1 | 1–10 | 0–00 | 1–10 | 0–00 | ಖುಷ್ಕಿ | ಸ ನಂ. 172/18, 10, 14 | ಚಿನ್ನ ಕೆಂಪನ ಹಳ್ಳಿ ಗಡಿ | ಸ ನಂ. 172/22 | ಕುಂದಾಣ ಗ್ರಾಮದ ಗಡಿ | |
| 8 | ರಾಧ ಕೋಂ ಶ್ರೀಧರ್ | ರಾಧ ಕೋಂ ಶ್ರೀಧರ್ | 172/2 | 0–17 | 0–00 | 0–17 | 0–00 | ಖುಷ್ಕಿ | ಸ ನಂ. 172/3 | ಸ ನಂ. 172/22 | ಸ ನಂ. 173/1,2 | ಸ ನಂ. 172/14 | |
| 9 | ರಾಧ ಕೋಂ ಶ್ರೀಧರ್ | ರಾಧ ಕೋಂ ಶ್ರೀಧರ್ | 172/3 | 1–06 | 0–00 | 1–06 | 0–00 | ಖುಷ್ಕಿ | ಸ ನಂ. 172/4 | ಸ ನಂ. 172/2 | ಸ ನಂ. 173/2 | ಸ ನಂ. 172/15 | |
| 10 | ರಾಧ ಕೋಂ ಶ್ರೀಧರ್ | ರಾಧ ಕೋಂ ಶ್ರೀಧರ್ | 172/4 | 0–22 | 0–00 | 0–22 | 0–00 | ಖುಷ್ಕಿ | ಸ ನಂ. 172/5 | ಸ ನಂ. 172/3 | ಸ ನಂ. 173/2 | ಸ ನಂ. 172/16 | |
| 11 | ರಾಧ ಕೋಂ ಶ್ರೀಧರ್ | ರಾಧ ಕೋಂ ಶ್ರೀಧರ್ | 172/5 | 0–23 | 0–00 | 0–23 | 0–00 | ಖುಷ್ಕಿ | ಸ ನಂ. 172/6, 172/2 | ಸ ನಂ. 172/4 | ಸ ನಂ. 173/2 | ಸ ನಂ. 172/17 | |
| 12 | ಜಯರಾಮಯ್ಯ ಬಿನ್ ಲೇ ಕೃಷ್ಣಪ್ಪ ಸುಧಾ ಕೋಂ ಲೇಟ್ ಗೋಪಾಲ್.ಎಸ್(ಮೇ.ಜಂಟಿ) | ಜಯರಾಮಯ್ಯ ಬಿನ್ ಲೇ ಕೃಷ್ಣಪ್ಪ ಸುಧಾ ಕೋಂ ಲೇಟ್ ಗೋಪಾಲ್.ಎಸ್(ಮೇ.ಜಂಟಿ) | 172/6 | 1–03 | 0–00 | 1–03 | 0–00 | ಖುಷ್ಕಿ | ಸ ನಂ. 172/7 | ಸ ನಂ. 172/5 | ಸ ನಂ. 172/23 | ಸ ನಂ. 172/24 | |
| 13 | PRAKASH P CHOUDHARY S/O G.POONARAM | PRAKASH P CHOUDHARY S/O G.POONARAM | 172/7 | 0–30 | 0–00 | 0–30 | 0–00 | ಖುಷ್ಕಿ | ಸ ನಂ. 224/1 | ಸ ನಂ. 172/6, 172/23 | ಸ ನಂ. 173/3 | ಸ ನಂ. 172/25 | |
| 14 | ಅಂಜುಳ ಕೋಂ ಲೇ ಎಸ್. ಆರ್. ಮುನಿರಾಜು | ಅಂಜುಳ ಕೋಂ ಲೇ ಎಸ್. ಆರ್. ಮುನಿರಾಜು | 172/8 | 1–02 | 0–00 | 1–02 | 0–00 | ಖುಷ್ಕಿ | ಸ ನಂ. 172/9 | ಸ ನಂ. 172/13 | ಸ ನಂ. 172/24 | ಕುಂದಾಣ ಗ್ರಾಮದ ಗಡಿ | |
| 15 | ತೇಜಸ್ವಿ ಪೂರ್ವ D/O ದಿವಾಕರ್ ಎಂ.ಡಿ. | ತೇಜಸ್ವಿ ಪೂರ್ವ D/O ದಿವಾಕರ್ ಎಂ.ಡಿ. | 172/9 | 1–03 | 0–00 | 1–03 | 0–00 | ಖುಷ್ಕಿ | ಸ ನಂ. 225/1,2 | ಸ ನಂ. 172/8, 172/24 | ಸ ನಂ. 172/25 | ಸ ನಂ. 156/1 | |
| 16 | ತೇಜಶ್ರೀ ಬಿನ್ ರಾಜಣ್ಣ | ತೇಜಶ್ರೀ ಬಿನ್ ರಾಜಣ್ಣ | 172/10 | 0–06 | 0–00 | 0–06 | 0–00 | ಖುಷ್ಕಿ | ಸ ನಂ. 172/11 | ಸ ನಂ. 172/1 | ಸ ನಂ. 172/14 | ಸ ನಂ. 172/18 | |
| 17 | ತೇಜಶ್ರೀ ಬಿನ್ ರಾಜಣ್ಣ | ತೇಜಶ್ರೀ ಬಿನ್ ರಾಜಣ್ಣ | 172/11 | 0–15 | 0–00 | 0–15 | 0–00 | ಖುಷ್ಕಿ | ಸ ನಂ. 172/12, 172/16 | ಸ ನಂ. 172/10, 172/14 | ಸ ನಂ. 172/15 | ಸ ನಂ. 172/19 | |
| 18 | ತೇಜಶ್ರೀ ಬಿನ್ ರಾಜಣ್ಣ | ತೇಜಶ್ರೀ ಬಿನ್ ರಾಜಣ್ಣ | 172/12 | 0–05 | 0–00 | 0–05 | 0–00 | ಖುಷ್ಕಿ | ಸ ನಂ. 172/13 | ಸ ನಂ. 172/11 | ಸ ನಂ. 172/16 | ಸ ನಂ. 172/20 | |
| 19 | ತೇಜಶ್ರೀ ಬಿನ್ ರಾಜಣ್ಣ | ತೇಜಶ್ರೀ ಬಿನ್ ರಾಜಣ್ಣ | 172/13 | 0–09 | 0–00 | 0–09 | 0–00 | ಖುಷ್ಕಿ | ಸ ನಂ. 172/8, 172/24 | ಸ ನಂ. 172/12 172/16 | ಸ ನಂ. 172/17 | ಸ ನಂ. 172/21 | |

| | | | | | | | | | | | | | |
|---|---|---|---|---|---|---|---|---|---|---|---|---|---|
| 20 | ತೇಜಶ್ರೀ ಬಿನ್ ರಾಜಣ್ಣ | ತೇಜಶ್ರೀ ಬಿನ್ ರಾಜಣ್ಣ | 172/14 | 0–10 | 0–00 | 0–10 | 0–00 | ಖುಷ್ಕಿ | ಸ ನಂ. 172/15, 172/11 | ಸ ನಂ. 172/1 | ಸ ನಂ. 172/2 | ಸ ನಂ. 172/10 | |
| 21 | ತೇಜಶ್ರೀ ಬಿನ್ ರಾಜಣ್ಣ | ತೇಜಶ್ರೀ ಬಿನ್ ರಾಜಣ್ಣ | 172/15 | 0–19 | 0–00 | 0–19 | 0–00 | ಖುಷ್ಕಿ | ಸ ನಂ. 172/16 | ಸ ನಂ. 172/14 | ಸ ನಂ. 172/3 | ಸ ನಂ. 172/11 | |
| 22 | ತೇಜಶ್ರೀ ಬಿನ್ ರಾಜಣ್ಣ | ತೇಜಶ್ರೀ ಬಿನ್ ರಾಜಣ್ಣ | 172/16 | 0–11 | 0–00 | 0–11 | 0–00 | ಖುಷ್ಕಿ | ಸ ನಂ. 172/17 172/13 | ಸ ನಂ. 172/15, 172/11 | ಸ ನಂ. 172/4 | ಸ ನಂ. 172/12 | |
| 23 | ತೇಜಶ್ರೀ ಬಿನ್ ರಾಜಣ್ಣ | ತೇಜಶ್ರೀ ಬಿನ್ ರಾಜಣ್ಣ | 172/17 | 0–10 | 0–00 | 0–10 | 0–00 | ಖುಷ್ಕಿ | ಸ ನಂ. 172/24 | ಸ ನಂ. 172/16 | ಸ ನಂ. 172/5 | ಸ ನಂ. 172/13 | |
| 24 | ಸೋನಿ ಎಂ.ಪಿ. ಬಿನ್ ಎಸ್. ಈ. ಮರಿಯಪ್ಪ | ಸೋನಿ ಎಂ.ಪಿ. ಬಿನ್ ಎಸ್. ಈ. ಮರಿಯಪ್ಪ | 172/18 | 0–09 | 0–00 | 0–09 | 0–00 | ಖುಷ್ಕಿ | ಸ ನಂ. 172/19 | ಸ ನಂ. 172/1 | ಸ ನಂ. 172/10 | ಕುಂದಾಣ ಗ್ರಾಮದ ಗಡಿ | |
| 25 | ನೀಲಕಂಠಗೌಡ ಕಲ್ಲನಗೌಡ ಗೌಡರ್<br>ಕಲ್ಲನಗೌಡ ಗೌಡರ್<br>ರೇಣುಕ ಹೆಚ್.ಎಂ ಕೋಂ ಶಿವಾನಂದ ಕಲ್ಲಕೇರಿ | ನೀಲಕಂಠಗೌಡ ಕಲ್ಲನಗೌಡ ಗೌಡರ್<br>ಕಲ್ಲನಗೌಡ ಗೌಡರ್<br>ರೇಣುಕ ಹೆಚ್.ಎಂ ಕೋಂ ಶಿವಾನಂದ ಕಲ್ಲಕೇರಿ | 172/19 | 0–20 | 0–00 | 0–20 | 0–00 | ಖುಷ್ಕಿ | ಸ ನಂ. 172/20 | ಸ ನಂ. 172/18 | ಸ ನಂ. 172/11 | ಕುಂದಾಣ ಗ್ರಾಮದ ಗಡಿ | |
| 26 | ಸೋನಿ.ಎಂ.ಪಿ. ಬಿನ್ ಎಸ್.ಜಿ. ಮರಿಯಪ್ಪ | ಸೋನಿ.ಎಂ.ಪಿ. ಬಿನ್ ಎಸ್.ಜಿ. ಮರಿಯಪ್ಪ | 172/20 | 0–10 | 0–00 | 0–10 | 0–00 | ಖುಷ್ಕಿ | ಸ ನಂ. 172/21 | ಸ ನಂ. 172/19 | ಸ ನಂ. 172/12 | ಕುಂದಾಣ ಗ್ರಾಮದ ಗಡಿ | |
| 27 | ಸೋನಿ.ಎಂ.ಪಿ. ಬಿನ್ ಎಸ್.ಜಿ. ಮರಿಯಪ್ಪ | ಸೋನಿ.ಎಂ.ಪಿ. ಬಿನ್ ಎಸ್.ಜಿ. ಮರಿಯಪ್ಪ | 172/21 | 0–06 | 0–00 | 0–06 | 0–00 | ಖುಷ್ಕಿ | ಸ ನಂ. 172/13 | ಸ ನಂ. 172/20 | ಸ ನಂ. 172/13 | ಕುಂದಾಣ ಗ್ರಾಮದ ಗಡಿ | |
| 28 | ರಾಜಮ್ಮ ಕೋಂ ಶಾಮಣ್ಣ | ರಾಜಮ್ಮ ಕೋಂ ಶಾಮಣ್ಣ | 172/22 | 1–10 | 0–00 | 1–10 | 0–00 | ಖುಷ್ಕಿ | ಸ ನಂ. 172/2 | ಚಿನ್ನಕೆಂಪೇನಹಳ್ಳಿ ಗ್ರಾಮದ ಗಡಿ | ಸ ನಂ. 173 | ಸ ನಂ. 172/1 | |
| 29 | ಗುರುಪ್ರಸಾಧ್ ಕೆ.ವಿ.<br>ಬಿನ್ ಲೇಟ್ ಸಿ ವೀರಭದ್ರಸ್ವಾಮಿ ಇವರ ಪರವಾಗಿ<br>ಜಿ.ಪಿ.ಎ. ಹೋಲ್ಡರ್ ಭ್ರಮರಾಂಬ ಕೋಂ<br>ಗುರುಪ್ರಸಾಧ್ ಕೆ.ಬಿ. | ಗುರುಪ್ರಸಾಧ್ ಕೆ.ವಿ.<br>ಬಿನ್ ಲೇಟ್ ಸಿ ವೀರಭದ್ರಸ್ವಾಮಿ ಇವರ ಪರವಾಗಿ<br>ಜಿ.ಪಿ.ಎ. ಹೋಲ್ಡರ್ ಭ್ರಮರಾಂಬ ಕೋಂ<br>ಗುರುಪ್ರಸಾಧ್ ಕೆ.ಬಿ. | 172/23 | 0–27 | 0–00 | 0–27 | 0–00 | ಖುಷ್ಕಿ | ಸ ನಂ. 172/7 | ಸ ನಂ. 172/5 | ಸ ನಂ. 173/2, 3 | ಸ ನಂ. 172/6 | |
| 30 | ಎಸ್.ಆರ್. ಕೇಶವಮೂರ್ತಿ ಬಿನ್ ಎಸ್. ಬಿ. ರಾಮಚಂದ್ರಪ್ಪ | ಎಸ್.ಆರ್. ಕೇಶವಮೂರ್ತಿ ಬಿನ್ ಎಸ್. ಬಿ. ರಾಮಚಂದ್ರಪ್ಪ | 172/24 | 1–02 | 0–00 | 1–02 | 0–00 | ಖುಷ್ಕಿ | ಸ ನಂ. 172/25 | ಸ ನಂ. 172/17, 172/13 | ಸ ನಂ. 172/6 | ಸ ನಂ. 172/8 | |
| 31 | ಗುರುಪ್ರಸಾಧ್ ಕೆ.ವಿ ಬಿನ್ ಲೇಟ್ ಸಿ.<br>ವೀರಭದ್ರಸ್ವಾಮಿ ಇವರ ಪರವಾಗಿ ಜಿ.ಪಿ.ಎ.<br>ಹೋಲ್ಡರ್ ಬ್ರಮರಾಂಬ<br>ಕೋಂ ಗುರುಪ್ರಸಾದ್ ಕೆ.ವಿ | ಗುರುಪ್ರಸಾಧ್ ಕೆ.ವಿ ಬಿನ್ ಲೇಟ್ ಸಿ.<br>ವೀರಭದ್ರಸ್ವಾಮಿ ಇವರ ಪರವಾಗಿ ಜಿ.ಪಿ.ಎ.<br>ಹೋಲ್ಡರ್ ಬ್ರಮರಾಂಬ<br>ಕೋಂ ಗುರುಪ್ರಸಾದ್ ಕೆ.ವಿ | 172/25 | 0–15 | 0–00 | 0–15 | 0–00 | ಖುಷ್ಕಿ | ಸ ನಂ. 224/2, 225/1 | ಸ ನಂ. 172/24 | ಸ ನಂ. 172/7 | ಸ ನಂ. 172/9 | |
| 32 | ಎಸ್ ವೀರಣ್ಣ ಬಿನ್ ಲೇ ಸುಬ್ಬಣ್ಣ | ಎಸ್ ವೀರಣ್ಣ ಬಿನ್ ಲೇ ಸುಬ್ಬಣ್ಣ | 173/1 | 1–10 | 0–00 | 1–10 | 0–00 | ಖುಷ್ಕಿ | ಸ ನಂ. 173/2 | ಚಿನ್ನಕೆಂಪೇನ ಹಳ್ಳಿ ಗ್ರಾಮದ ಗಡಿ | ಸ ನಂ. 176/3 | ಸ ನಂ. 172/22, 172/2 | |
| 33 | ನರಸಿಂಹಯ್ಯ ಬಿನ್ ಪಾಪಣ್ಣ | ನರಸಿಂಹಯ್ಯ ಬಿನ್ ಪಾಪಣ್ಣ | 173/2 | 2–04.08 | 0–02 | 2–02.08 | 0–02 | ಖುಷ್ಕಿ | ಸ ನಂ. 173/3 | ಸ ನಂ. 173/1 | ಸ ನಂ. 176/3, 175 ಕೆರೆ | ಸ ನಂ. 172/2, 3, 4, 5, 23 | |
| 34 | ಪಿ ರಾಮಯ್ಯ – ಪಿಳ್ಳಪ್ಪ | ಪಿ ರಾಮಯ್ಯ – ಪಿಳ್ಳಪ್ಪ | 173/3 | 2–02.08 | 0–00 | 2–02.08 | 0–00 | ಖುಷ್ಕಿ | ಸ ನಂ. 174/1 | ಸ ನಂ. 173/2 | ಸ ನಂ. 175 ಕೆರೆ | ಸ ನಂ. 172/23, 172/7 | |
| 35 | ಪಿ. ರಾಮಯ್ಯ – ಪಿಳ್ಳಪ್ಪ | ಪಿ. ರಾಮಯ್ಯ – ಪಿಳ್ಳಪ್ಪ | 174/1 | 0–10 | 0–00 | 0–10 | 0–00 | ಖುಷ್ಕಿ | ಸ ನಂ. 174/4 | ಸ ನಂ. 173/3 | ಸ ನಂ. 175 ಕೆರೆ | ಸ ನಂ. 224/1 | |
| 36 | ಸೋನಿ.ಎಂ.ಪಿ. ಬಿನ್ ಎಸ್.ಜಿ. ಮರಿಯಪ್ಪ | ಸೋನಿ.ಎಂ.ಪಿ. ಬಿನ್ ಎಸ್.ಜಿ. ಮರಿಯಪ್ಪ | 174/2 | 0–33 | 0–01 | 0–32 | 0–01 | ಖುಷ್ಕಿ | ಸ ನಂ. 174/3 | ಸ ನಂ. 174/4 | ಸ ನಂ. 175 ಕೆರೆ | ಸ ನಂ. 224/1 | |
| 37 | ಎಸ್. ಬಿ. ಶ್ರೀನಿವಾಸ್ ಬಿನ್ ಲೇ ಬೈರಣ್ಣ | ಎಸ್. ಬಿ. ಶ್ರೀನಿವಾಸ್ ಬಿನ್ ಲೇ ಬೈರಣ್ಣ | 174/3 | 0–33 | 0–00 | 0–33 | 0–00 | ಖುಷ್ಕಿ | ಸ ನಂ. 171/1 | ಸ ನಂ. 174/2 | ಸ ನಂ. 175 ಕೆರೆ | ಸ ನಂ. 224/1 | |
| 38 | ಚನ್ನಪ್ಪ ಬಿನ್ ಲೇ ಬೈರಣ್ಣ | ಎಸ್. ಬಿ. ಶ್ರೀನಿವಾಸ್ ಬಿನ್ ಲೇ ಬೈರಣ್ಣ | 174/4 | 1–16 | 0–00 | 1–16 | 0–00 | ಖುಷ್ಕಿ | ಸ ನಂ. 174/2 | ಸ ನಂ. 174/1 | ಸ ನಂ. 175 ಕೆರೆ | ಸ ನಂ. 224/1 | |
| 39 | ಸೋನಿ.ಎಂ.ಪಿ. ಬಿನ್ ಎಸ್.ಜಿ. ಮರಿಯಪ್ಪ | ಸೋನಿ.ಎಂ.ಪಿ. ಬಿನ್ ಎಸ್.ಜಿ. ಮರಿಯಪ್ಪ | 176/1 | 0–08 | 0–00 | 0–08 | 0–00 | ಖುಷ್ಕಿ | ಸ ನಂ. 175 ಕೆರೆ | ಸ. ನಂ. 176/4 | ಸ ನಂ. 177/1, 5 | ಸ ನಂ. 176/2 | |
| 40 | ಸೋನಿ.ಎಂ.ಪಿ. ಬಿನ್ ಎಸ್.ಜಿ. ಮರಿಯಪ್ಪ | ಸೋನಿ.ಎಂ.ಪಿ. ಬಿನ್ ಎಸ್.ಜಿ. ಮರಿಯಪ್ಪ | 176/2 | 0–26 | 0–04 | 0–22 | 0–00 | ಖುಷ್ಕಿ | ಸ ನಂ. 175 ಕೆರೆ | ಚಿನ್ನಕೆಂಪೇನ ಹಳ್ಳಿ ಗ್ರಾಮದ ಗಡಿ | ಸ ನಂ. 176/1 | ಸ ನಂ. 176/3 | |
| 41 | MAHIMA REDDY .C.R. D/O RAGHAVENDRA REDDY C.R. | MAHIMA REDDY .C.R. D/O RAGHAVENDRA REDDY C.R. | 176/3 | 1–10 | 0–00 | 1–10 | 0–00 | ಖುಷ್ಕಿ | ಸ ನಂ. 175 ಕೆರೆ | ಚಿನ್ನಕೆಂಪೇನ ಹಳ್ಳಿ ಗ್ರಾಮದ ಗಡಿ | ಸ ನಂ. 176/2 | ಸ ನಂ. 173/1, 173/2 | |
| 42 | ತಿಮ್ಮೇಗೌಡ ಬಿನ್ ಲೇ ನಂಜಪ್ಪ<br>ಹನುಮೇಗೌಡ ಬಿನ್ ಲೇ ನಂಜಪ್ಪ | ತಿಮ್ಮೇಗೌಡ ಬಿನ್ ಲೇ ನಂಜಪ್ಪ<br>ಹನುಮೇಗೌಡ ಬಿನ್ ಲೇ ನಂಜಪ್ಪ (ಜಂಟಿ ಖಾತೆ) | 176/4 | 0–08 | 0–00 | 0–08 ಮೇಲಿನ ಜಂಟಿ | 0–00 | ಖುಷ್ಕಿ | ಸ ನಂ. 176 | ಚಿನ್ನಕೆಂಪೇನ ಹಳ್ಳಿ ಗ್ರಾಮದ ಗಡಿ | ಸ ನಂ. 177 | ಸ ನಂ. 176/2 | |
| 43 | ತಿಮ್ಮೇಗೌಡ ಬಿನ್ ಲೇ ನಂಜಪ್ಪ<br>ಹನುಮೇಗೌಡ ಬಿನ್ ಲೇ ನಂಜಪ್ಪ (ಜಂಟಿ ಖಾತೆ) | ತಿಮ್ಮೇಗೌಡ ಬಿನ್ ಲೇ ನಂಜಪ್ಪ<br>ಹನುಮೇಗೌಡ ಬಿನ್ ಲೇ ನಂಜಪ್ಪ (ಜಂಟಿ ಖಾತೆ) | 177/1 | 2–17.08 | 0–01.08 | 2–16 ಮೇಲಿನ ಜಂಟಿ | 0–01.08 | ಖುಷ್ಕಿ | ಸ ನಂ. 177/5, 177/6 | ಚಿನ್ನಕೆಂಪೇನ ಹಳ್ಳಿ ಗ್ರಾಮದ ಗಡಿ | ಸ ನಂ. 177/4 | ಸ ನಂ. 176/1 | |
| 44 | G.K. SUMAN S/O KONAPPA REDDY T | G.K. SUMAN S/O KONAPPA REDDY T | 177/2 | 2–05.08 | 0–00.08 | 2–05 | 0–00.08 | ಖುಷ್ಕಿ | ಸ ನಂ. 177/3 | ಸ ನಂ. 177/5 | ಸ ನಂ. 178 | ಸ ನಂ. 175 ಕೆರೆ | |
| 45 | ಚನ್ನಪ್ಪ ಬಿನ್ ಲೇ ಬೈರಣ್ಣ | ಎಸ್. ಬಿ. ಶ್ರೀನಿವಾಸ್ ಬಿನ್ ಲೇ ಬೈರಣ್ಣ | 177/3 | 2–05.08 | 0–00.08 | 2–05 | 0–00.08 | ಖುಷ್ಕಿ | ಸ ನಂ. 178 | ಸ ನಂ. 172, 177/2 | ಸ ನಂ. 178 | ಸ ನಂ. 175 ಕೆರೆ | |
| 46 | ಮಹೇಶ್ ಡಿ.ಕೆ ಬಿನ್ ಡಿ. ಕೃಷ್ಣಪ್ಪ | ಮಹೇಶ್ ಡಿ.ಕೆ ಬಿನ್ ಡಿ. ಕೃಷ್ಣಪ್ಪ | 177/4 | 1–01 | 0–01 | 1–00 | 0–01 | ಖುಷ್ಕಿ | ಸ ನಂ. 177/5 | ಚಿನ್ನಕೆಂಪೇನ ಹಳ್ಳಿ ಗ್ರಾಮದ ಗಡಿ | ಸ ನಂ.78 | ಸ ನಂ. 177/1, 177/6 | |
| 47 | ಸೋನಿ.ಎಂ.ಪಿ. ಬಿನ್ ಎಸ್.ಜಿ. ಮರಿಯಪ್ಪ | ಸೋನಿ.ಎಂ.ಪಿ. ಬಿನ್ ಎಸ್.ಜಿ. ಮರಿಯಪ್ಪ | 177/5 | 1–23 | 0–01 | 1–22 | 0–01 | ಖುಷ್ಕಿ | ಸ ನಂ. 177/2 | ಸ ನಂ. 177/1, 6 | ಸ ನಂ. 177/6 178 | ಸ ನಂ. 176/6, 175 ಕೆರೆ | |
| 48 | G.K. SUMAN S/O KONAPPA REDDY T | G.K. SUMAN S/O KONAPPA REDDY T | 177/6 | 1–00.08 | 0–00.08 | 1–00 | 0–00.08 | ಖುಷ್ಕಿ | ಸ ನಂ. 177/5 | ಸ ನಂ. 177/1 | ಸ ನಂ. 177/5 177/4 | ಸ ನಂ. 177/5 | |
| 49 | ಅಶ್ವಥ್ ಬಿನ್ ತಮ್ಮಣ್ಣ | ಅಶ್ವಥ್ ಬಿನ್ ತಮ್ಮಣ್ಣ | 178 | 90–38 | 0–00 | 0–21.08 | 0–00 | ಖುಷ್ಕಿ | ಸ ನಂ. 181/1,2, 6,7 180/1 179/10, 14,15,16 | ಚಿನ್ನ ಕೆಂಪ ಮಾರನ ಹಳ್ಳಿ ಗಡಿ | ಎಸ್.ಟಿ. ಆರ್.ಆರ್. ರಸ್ತೆ ಮತ್ತು ಸರ್ವೆ ನಂ.184 ಗಡಿ | ಸ ನಂ. 177/4, 177/5 177/2 177/3 222/3 222/4 222/5 222/2 223 179/1 | |
| | ಮದನ್ ರಾಜ್ ಬಿನ್ ಲೇ ಲಾಲ್ ಚಂದ್ | ಮದನ್ ರಾಜ್ ಬಿನ್ ಲೇ ಲಾಲ್ ಚಂದ್ | | | | 0–30 | | | | | | | |
| | ಇ. ರಾಮಾಂಜನಪ್ಪ – ಈರಬಚ್ಚಪ್ಪ | ಇ. ರಾಮಾಂಜನಪ್ಪ – ಈರಬಚ್ಚಪ್ಪ | | | | 0–33 | | | | | | | |
| | ಮುನಿರಾಜು ಈರಬಚ್ಚಪ್ಪ | ಮುನಿರಾಜು ಈರಬಚ್ಚಪ್ಪ | | | | 0–34 | | | | | | | |
| | ನರಸಮ್ಮ ಬಿನ್ ಲೇ ರಂಗಪ್ಪ | ನರಸಮ್ಮ ಬಿನ್ ಲೇ ರಂಗಪ್ಪ | | | | 1–10 | | | | | | | |
| | ರಾಮಕೃಷ್ಣಪ್ಪ ಬಿನ್ ನಾರಾಯಣಪ್ಪ | ರಾಮಕೃಷ್ಣಪ್ಪ ಬಿನ್ ನಾರಾಯಣಪ್ಪ | | | | 1–10 | | | | | | | |
| | ಬಿ. ಉಮೇಶ್ ಬಿನ್ ಬಸಪ್ಪ | ಬಿ. ಉಮೇಶ್ ಬಿನ್ ಬಸಪ್ಪ | | | | 1–26 | | | | | | | |
| | ಎಸ್. ವೀರಣ್ಣ ಬಿನ್ ಲೇ ಸುಬ್ಬಣ್ಣ | ಎಸ್. ವೀರಣ್ಣ ಬಿನ್ ಲೇ ಸುಬ್ಬಣ್ಣ | | | | 1–26 | | | | | | | |
| | ಎಸ್.ವೀರಣ್ಣ ಬಿನ್ ಲೇ ಸುಬ್ಬಣ್ಣ | ಎಸ್.ವೀರಣ್ಣ ಬಿನ್ ಲೇ ಸುಬ್ಬಣ್ಣ | | | | 2–20 | | | | | | | |
| | ಬಸಪ್ಪ – ಚಿಕ್ಕಹನುಮಪ್ಪ | ಬಸಪ್ಪ – ಚಿಕ್ಕಹನುಮಪ್ಪ | | | | 1–13 | | | | | | | |
| | ವೀರಣ್ಣ – ಚಿಕ್ಕಹನುಮಪ್ಪ | ವೀರಣ್ಣ – ಚಿಕ್ಕಹನುಮಪ್ಪ (ಜಂಟಿ ಖಾತೆ) | | | | ಮೇಲಿನ ಜಂಟಿ | | | | | | | |
| | ನಂಜಪ್ಪ – ಚಿಕ್ಕಹನುಮಪ್ಪ | ನಂಜಪ್ಪ – ಚಿಕ್ಕಹನುಮಪ್ಪ (ಜಂಟಿ ಖಾತೆ) | | | | ಮೇಲಿನ ಜಂಟಿ | | | | | | | |
| | ಎಸ್.ಬಿ. ಮುನೇಗೌಡ – ಲೇ ಬಸಪ್ಪ | ಎಸ್.ಬಿ. ಮುನೇಗೌಡ – ಲೇ ಬಸಪ್ಪ | | | | 0–23 | | | | | | | |
| | ನಂಜಪ್ಪ – ಚಿಕ್ಕಹನುಮಪ್ಪ | ನಂಜಪ್ಪ – ಚಿಕ್ಕಹನುಮಪ್ಪ | | | | 0–26 | | | | | | | |
| | ಎಂ.ಆನಂದಮ್ಮ ಕೋಂ. ಇ. ರಾಮಾಂಜಿನಪ್ಪ | ಎಂ.ಆನಂದಮ್ಮ ಕೋಂ. ಇ. ರಾಮಾಂಜಿನಪ್ಪ | | | | 0–04 | | | | | | | |
| | ನಾರಾಯಣಸ್ವಾಮಿ ಬಿನ್ ಲೇ ಬಸಪ್ಪ | ನಾರಾಯಣಸ್ವಾಮಿ ಬಿನ್ ಲೇ ಬಸಪ್ಪ | | | | 0–27 | | | | | | | |
| | ಟಿ.ಎನ್. ಶ್ರೀನಿವಾಸ್ ಬಿನ್ ನಾರಾಯಣಸ್ವಾಮಿ | ಟಿ.ಎನ್. ಶ್ರೀನಿವಾಸ್ ಬಿನ್ ನಾರಾಯಣಸ್ವಾಮಿ | | | | 1–27 | | | | | | | |
| | ಎಸ್.ಟಿ. ಸುಬ್ಬಣ್ಣ – ಪುಟ್ಟಣ್ಣ | ಎಸ್.ಟಿ. ಸುಬ್ಬಣ್ಣ – ಪುಟ್ಟಣ್ಣ | | | | 1–10 | | | | | | | |
| | ಎಸ್. ರಾಜಣ್ಣ ಬಿನ್ ಸುಬ್ಬಣ್ಣ | ಎಸ್. ರಾಜಣ್ಣ ಬಿನ್ ಸುಬ್ಬಣ್ಣ | | | | 0–15 | | | | | | | |
| | ಸಿ. ಸುಜಾತ ಕೋಂ ಎಸ್. ಪಿ. ಸುಬ್ಬಣ್ಣ | ಸಿ. ಸುಜಾತ ಕೋಂ ಎಸ್. ಪಿ. ಸುಬ್ಬಣ್ಣ | | | | 0–10 | | | | | | | |
| | ಸಿ. ಸುಜಾತ ಕೋಂ ಎಸ್. ಪಿ. ಸುಬ್ಬಣ್ಣ | ಸಿ. ಸುಜಾತ ಕೋಂ ಎಸ್. ಪಿ. ಸುಬ್ಬಣ್ಣ | | | | 0–10 | | | | | | | |
| | ಎ. ದೇವರಾಜ ಬಿನ್ ಕೆ. ಮುನಿಶಾಮಯ್ಯ | ಎ. ದೇವರಾಜ ಬಿನ್ ಕೆ. ಮುನಿಶಾಮಯ್ಯ | | | | 0–38 | | | | | | | |



# ‘ಕಾಂಗ್ರೆಸ್ ಪಕ್ಷದ ಕಚೇರಿ ಕಟ್ಟಡ ನಿರ್ಮಿಸಲೇಬೇಕು’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪಕ್ಷದ ಕಚೇರಿಯನ್ನು ಕಡ್ಡಾಯವಾಗಿ ನಿರ್ಮಿಸಬೇಕು’ ಎಂದು ಪಕ್ಷದ ನಾಯಕರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದರು.

ಅರಮನೆ ಮೈದಾನದಲ್ಲಿ ಕೆಪಿಸಿಸಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಪಕ್ಷದ ನಾಯಕರು, ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರಿಂದ ನಿಧಿ ಸಂಗ್ರಹಿಸಿ, ಕಾರ್ಯಕರ್ತರಿಂದ ದೇಣಿಗೆ ಪಡೆದು ಕಚೇರಿ ಕಟ್ಟಡ ನಿರ್ಮಿಸಬೇಕು. ಕಟ್ಟಡದ ನಿರ್ಮಾಣ ಒಂದು ಹಂತಕ್ಕೆ ಬಂದ ನಂತರ ಕೆಪಿಸಿಸಿಯಿಂದ ಆರ್ಥಿಕ ನೆರವು ನೀಡಲಾಗುವುದು’ ಎಂದರು.

‘ಕೋನರಡ್ಡಿ, ಶರಣಪ್ರಕಾಶ್ ಪಾಟೀಲ, ಎಂ.ಸಿ. ಸುಧಾಕರ್, ಉದಯ್, ಸಿರಗುಪ್ಪ ನಾಗರಾಜ್ ಸೇರಿದಂತೆ 22 ಮಂದಿ ಕಾಂಗ್ರೆಸ್ ಭವನಕ್ಕೆ ಬೇಕಾದ ಜಾಗವನ್ನು ಪಕ್ಷದ ಹೆಸರಿಗೆ ಬರೆದುಕೊಟ್ಟಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ದಿನ ನೀಡಿದ ಬಳಿಕ ನೂತನ ಕಾಂಗ್ರೆಸ್ ಕಚೇರಿಗಳಿಗೆ ಬೆಂಗಳೂರಿನಿಂದ ವರ್ಚುವಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಲಾಗುವುದು’ ಎಂದರು.

**ಎಸ್‌ಐಆರ್ ಎಚ್ಚರ:** ‘ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಬೂತ್‌ಮಟ್ಟದ ಏಜೆಂಟರು ಮತದಾರರ ರಕ್ಷಣೆ ಮಾಡಲು ಎಚ್ಚರಿಕೆಯಿಂದ ಇರಬೇಕು’ ಎಂದರು.

**ಚುನಾವಣೆಗೆ ಸಿದ್ಧರಾಗಿ:** ‘ನಾಲ್ಕೈದು ತಿಂಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ತೀರ್ಮಾನಿಸಲಾಗಿದೆ. ಪಕ್ಷದ ಕಾರ್ಯಕರ್ತರು ಸಿದ್ಧರಾಗಬೇಕು’ ಎಂದೂ ತಿಳಿಸಿದರು.

# ಸೀಳು ತುಟಿ ಮಕ್ಕಳಿಗೆ ವಿಶೇಷ ಪೂರಕ ಆಹಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರಿ ಆಸ್ಪತ್ರೆಗಳಲ್ಲಿ ಜನಿಸಿದ ಸೀಳು ತುಟಿ ಹೊಂದಿರುವ 12 ತಿಂಗಳೊಳಗಿನ ಮಕ್ಕಳಿಗೆ ವಿಶೇಷ ಪೂರಕ ಆಹಾರ ಒದಗಿಸಲು ಆರೋಗ್ಯ ಇಲಾಖೆ ಅನುಮೋದನೆ ನೀಡಿ ಆದೇಶ ಹೊರಡಿಸಿದೆ.

ಆರೋಗ್ಯ ನಿರ್ವಹಣಾ ಮಾಹಿತಿ ವ್ಯವಸ್ಥೆ (ಎಚ್‌ಎಂಐಎಸ್) ಪ್ರಕಾರ, 2024–25ನೇ ಸಾಲಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ 4.69 ಲಕ್ಷ ಮಕ್ಕಳು ಜನಿಸಿದ್ದಾರೆ. ಜಾಗತಿಕವಾಗಿ 700 ಜೀವಂತ ಜನನಗಳಲ್ಲಿ ಸರಾಸರಿ ಒಂದು ಮಗು ಸೀಳು ತುಟಿ ಮತ್ತು ಅಂಗುಳಿನ ಸಮಸ್ಯೆಗೆ ಒಳಗಾಗುತ್ತಿದೆ. ಇದರನ್ವಯ ರಾಜ್ಯದಲ್ಲಿ ವಾರ್ಷಿಕ ಸುಮಾರು 671 ಮಕ್ಕಳಲ್ಲಿ ಈ ಸಮಸ್ಯೆ ಕಂಡುಬರುತ್ತಿದೆ ಎಂದು ಇಲಾಖೆ ತಿಳಿಸಿದೆ.

2025–26ನೇ ಸಾಲಿಗೆ 12 ವರ್ಷದೊಳಗಿನ 671 ಮಕ್ಕಳಿಗೆ ಪೂರಕ ಆಹಾರ ಒದಗಿಸಲು ₹ 1.52 ಕೋಟಿ ಅನುದಾನಕ್ಕೆ ಅಂದಾಜಿಸಲಾಗಿತ್ತು. ಇಷ್ಟು ಅನುದಾನಕ್ಕೆ ಅನುಮೋದನೆ ನೀಡಲಾಗಿದೆ.

# ಪರಿಣತರ ಸಮಿತಿ ರಚನೆಗೆ ತೀರ್ಮಾನ

ಪ್ರಜಾವಾಣಿ ವಾರ್ತೆ

**ಕಾಸರಗೋಡು:** ಮಲಯಾಳ ಭಾಷಾ ಕಲಿಕೆ ಕಡ್ಡಾಯ ಮಸೂದೆ ಕಾಯ್ದೆಯಾಗಿ ಜಾರಿಯಾದರೆ ಗಡಿನಾಡ ಕನ್ನಡಿಗರಿಗೆ ಆಗುವ ಅನ್ಯಾಯದ ಬಗ್ಗೆ ಜಾಗೃತಿ ಮೂಡಿಸಲು ಸ್ಥಳೀಯವಾಗಿ ಪರಿಣತರ ಸಮಿತಿ ರಚನೆಗೆ ತೀರ್ಮಾನ ಕೈಗೊಳ್ಳಲಾಗಿದೆ.

ಬೀರಂತಬೈಲಿನ ಕನ್ನಡ ಅಧ್ಯಾಪಕ ಭವನದಲ್ಲಿ ‘ಕರ್ನಾಟಕ ಸಮಿತಿ’ ನೇತೃತ್ವದಲ್ಲಿ ನಡೆದ ಕನ್ನಡಪರ ಸಂಘಟನೆಗಳ ಜಂಟಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ಶಿಕ್ಷಣ ಮತ್ತು ವಕೀಲರ ವಲಯಗಳ ಆಯ್ದ ಮಂದಿಯನ್ನು ಸೇರಿಸಿ ಈ ಸಮಿತಿ ರಚಿಸಲಾಗುವುದು. ಮಲಯಾಳಂ ಕಲಿಕೆ ಕಡ್ಡಾಯ ಕಾಯ್ದೆಯಿಂದ ಇಲ್ಲಿನ ಕನ್ನಡ ಮಾಧ್ಯಮ ಶಾಲೆಗಳನ್ನು ಹೊರಗಿಡುವಂತೆ ಕೇರಳ ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಲಾಯಿತು.

ಜಿಲ್ಲೆಯಾದ್ಯಂತ ಈ ಸಂಬಂಧ ಶೀಘ್ರವೇ ಪ್ರತಿಭಟನಾ ಸಭೆಗಳನ್ನು ನಡೆಸಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು. ‘ಕರ್ನಾಟಕ ಸಮಿತಿ’ ಅಧ್ಯಕ್ಷ ಕೆ.ಮುರಳೀಧರ ಬಳ್ಳುಕ್ಕರಾಯ ಅಧ್ಯಕ್ಷತೆ ವಹಿಸಿದ್ದರು. ವಿವಿಧ ಕನ್ನಡ ಪರ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

# ಉಕ್ರೇನ್ ಮೇಲೆ ರಷ್ಯಾ ದಾಳಿ: 4 ಸಾವು

**ಹಾರ್ಕಿವ್ (ಉಕ್ರೇನ್) (ಎಎಫ್‌ಪಿ):** ಉಕ್ರೇನ್ ಮೇಲೆ 20ಕ್ಕೂ ಅಧಿಕ ಕ್ಷಿಪಣಿಗಳು ಮತ್ತು ನೂರಾರು ಡ್ರೋನ್‌ಗಳ ಮೂಲಕ ರಷ್ಯಾ ಮಂಗಳವಾರ ದಾಳಿ ನಡೆಸಿದ್ದು, ನಾಲ್ಕು ಮಂದಿ ಮೃತಪಟ್ಟಿದ್ದಾರೆ.

ದಾಳಿಯಲ್ಲಿ ಉಕ್ರೇನ್‌ನ ವಿದ್ಯುತ್ ಸ್ಥಾವರವೊಂದು ಧ್ವಂಸವಾಗಿದ್ದು, ಈಗಾಗಲೇ ತೀವ್ರವಾಗಿ ಹದಗೆಟ್ಟಿರುವ ಇಂಧನ ವ್ಯವಸ್ಥೆಯು ಮತ್ತಷ್ಟು ಸಮಸ್ಯೆಗೆ ಸಿಲುಕಿದೆ.

‘ರಷ್ಯಾದ 25 ಕ್ಷಿಪಣಿಗಳು ಮತ್ತು 293 ಡ್ರೋನ್‌ಗಳು ದಾಳಿ ನಡೆಸಿವೆ’ ಎಂದು ಉಕ್ರೇನ್ ವಾಯುಪಡೆ ತಿಳಿಸಿದೆ.

## ಜಾತಿ, ಧರ್ಮದ ಹೆಸರಿನಲ್ಲಿ ಅಧಿಕಾರ ಸರಿಯಲ್ಲ: ಶಿಂದೆ

ಪ್ರಜಾವಾಣಿ ವಾರ್ತೆ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 'ಜಾತಿ, ಧರ್ಮದ ಹೆಸರಿನಲ್ಲಿ ಅಧಿಕಾರ ನಡೆಸಬಾರದು. ಎಲ್ಲರೂ ಒಂದಾಗಿ ಮುನ್ನಡೆದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ' ಎಂದು ಕೇಂದ್ರದ ಮಾಜಿ ಸಚಿವ ಸುಶೀಲ್‌ಕುಮಾರ ಶಿಂದೆ ಹೇಳಿದರು.

ಕೂಡಲಸಂಗಮದಲ್ಲಿ ಮಂಗಳವಾರ ನಡೆದ 39ನೇ ಶರಣ ಮೇಳದಲ್ಲಿ ಮಾತನಾಡಿದ ಅವರು, 'ಜಾತಿ, ಮತ, ಪಂಥಗಳನ್ನು ಅಳಿಸಿ ಹಾಕಲು ಬಸವಣ್ಣನವರ ತತ್ವಗಳ ಪ್ರತಿಪಾದನೆಗೆ ಹೆಚ್ಚಿನ ಒತ್ತು ಸಿಗಬೇಕಿದೆ' ಎಂದರು.

'ಪ್ರತ್ಯೇಕ ಲಿಂಗಾಯತ ಧರ್ಮ ಬೇಕು ಎನ್ನುವವರೊಂದಿಗೆ ನಾನಿದ್ದೇನೆ. ನಾನು ಕಕ್ಕಯ್ಯನ ಸಮಾಜಕ್ಕೆ ಸೇರಿದವನು. ಲಿಂಗಾಯತ ಧರ್ಮ ಬಿಟ್ಟು ಎಲ್ಲಿ ಹೋಗಲಿ' ಎಂದು ಪ್ರಶ್ನಿಸಿದರು.

ಸೋಮವಾರ ರಾತ್ರಿ ನಡೆದ ಮಠಾಧಿಪತಿಗಳ ಧರ್ಮ ಚಿಂತನಗೋಷ್ಠಿಯಲ್ಲಿ ಬಾಗಲಕೋಟೆ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಮಾತನಾಡಿ, 'ಕರುಣೆಯ ಧರ್ಮವೇ ಬಸವ ಧರ್ಮ. ಇದು ಜಗತ್ತನ್ನು ಆಳುವ ಏಕೈಕ ಧರ್ಮವಾಗಲಿದೆ' ಎಂದರು.

'ಚಾಮರಾಜaನಗರ ಜಿಲ್ಲೆ ಹರವೆ ವಿರಕ್ತ ಮಠದ ಸರ್ಪಭೂಷಣ ಸ್ವಾಮೀಜಿ ಮಾತನಾಡಿ, 'ಮಠಗಳು ಹಿಂದೆ ಮಾಡಿದ ಸೇವೆಯಿಂದಲೇ ಇಂದು ಜೀವಂತವಾಗಿವೆ. ಸಮಾಜಮುಖಿ ಕಾರ್ಯದಲ್ಲಿ ಎಲ್ಲ ಮಠಗಳು ತೊಡಗಬೇಕು' ಎಂದರು. ಗೋಷ್ಠಿಯಲ್ಲಿ 30ಕ್ಕೂ ಹೆಚ್ಚು ಸ್ವಾಮೀಜಿಗಳು ಭಾಗವಹಿಸಿದ್ದರು.

## ಮಕ್ಕಳ ಅಪಹರಣ: ಸ್ವಯಂಪ್ರೇರಿತ ದೂರು ದಾಖಲು

ಪ್ರಜಾವಾಣಿ ವಾರ್ತೆ

ಧಾರವಾಡ: ನಗರದ ಕಮಲಾಪುರದ ಸರ್ಕಾರಿ ಮಾದರಿ ಕನ್ನಡ ಪ್ರಾಥಮಿಕ ಶಾಲೆಯ ಇಬ್ಬರು ವಿದ್ಯಾರ್ಥಿಗಳನ್ನು ವ್ಯಕ್ತಿಯೊಬ್ಬರು ಅಪಹರಿಸಿದ್ದಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಮಂಗಳವಾರ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

'ಪ್ರಜಾವಾಣಿ'ಯ ವರದಿ (ಶಾಲೆಯಿಂದ ಇಬ್ಬರು ಮಕ್ಕಳ ಅಪಹರಣ) ಆಧರಿಸಿ ದೂರು ದಾಖಲಿಸಿಕೊಳ್ಳಲಾಗಿದೆ. ಆರೋಪಿ ಬಂಧನ ಕುರಿತು ಏಳು ದಿನಗಳೊಳಗೆ ಮಾಹಿತಿ ನೀಡುವಂತೆ ಹುಬ್ಬಳ್ಳಿ–ಧಾರವಾಡ ಮಹಾನಗರ ಪೊಲೀಸ್ ಕಮಿಷನರ್‌ಗೆ ನಿರ್ದೇಶನ ನೀಡಿದೆ.

ಶಾಲೆಗೆ ಭೇಟಿ ನೀಡಿ ವರದಿ ನೀಡುವಂತೆ ಶಾಲಾ ಶಿಕ್ಷಣ ಅಧಿಕಾರಿಗೆ, ಮಕ್ಕಳೊಂದಿಗೆ ಆಪ್ತ ಸಮಾಲೋಚನೆ ನಡೆಸಿ ವರದಿ ನೀಡುವಂತೆ ಆಯೋಗದ ಅಧ್ಯಕ್ಷ ಶಶಿಧರ ಎಸ್. ಕೋಸಂಬೆ ಅವರು ಸೂಚನೆ ನೀಡಿದ್ದಾರೆ.

'ಶಾಲೆಯಿಂದ ಮಕ್ಕಳನ್ನು ಅಪಹರಿಸಿದ್ದ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ. ಹುಬ್ಬಳ್ಳಿಯ 'ಕಿಮ್ಸ್'ನಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ಆತ ಗುಣಮುಖವಾದ ಬಳಿಕ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ಹೇಳಿದರು.

## 'ಉತ್ತರ'ದಲ್ಲಿ ವಾಕ್–ಶ್ರವಣ ಸಂಸ್ಥೆ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನ ವಾಕ್–ಶ್ರವಣ ಸಂಸ್ಥೆಯ ಘಟಕವನ್ನು ಉತ್ತರ ಕರ್ನಾಟಕದಲ್ಲಿ ಸ್ಥಾಪಿಸಲು ಅನುಮೋದನೆ ನೀಡಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರಿಗೆ ಮನವಿ ಮಾಡಿದರು.

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ (ಎಐಐಎಸ್‌ಎಚ್) ಸಭೆಯು ಜೆ.ಪಿ.ನಡ್ಡಾ ಅವರ ನೇತೃತ್ವದಲ್ಲಿ ಮಂಗಳವಾರ ನಡೆಯಿತು.

ದಿನೇಶ್ ಗುಂಡೂರಾವ್ ಅವರು ವರ್ಚುವಲ್ ಆಗಿ ಸಭೆಯಲ್ಲಿ ಭಾಗಿಯಾಗಿದ್ದರು. ಈ ವೇಳೆ, ಉತ್ತರ ಕರ್ನಾಟಕಕ್ಕೆ ವಾಕ್–ಶ್ರವಣ ಸಂಸ್ಥೆಯ ಅಗತ್ಯವಿದೆ. ಘಟಕ ಸ್ಥಾಪನೆಗೆ ಕೇಂದ್ರ ಅನುಮೋದನೆ ನೀಡಿದರೆ, ರಾಜ್ಯ ಅಗತ್ಯ ಭೂಮಿ ಮತ್ತು ಮೂಲಸೌಕರ್ಯ ಒದಗಿಸಲಿದೆ. ಕೇಂದ್ರವು ತಾಂತ್ರಿಕ ಘಟಕಗಳು ಮತ್ತು ನುರಿತ ತಜ್ಞರ ವಿಚಾರದಲ್ಲಿ ನೆರವು ಒದಗಿಸಬೇಕು. ಈ ಘಟಕವನ್ನು ತರಬೇತಿ, ಸೇವೆ ಮತ್ತು ಸಂಶೋಧನೆಗೆ ಬಳಸಿಕೊಳ್ಳಬಹುದು' ಎಂದು ಪ್ರಸ್ತಾಪಿಸಿದರು.

ಜತೆಗೆ, 'ಆರೋಗ್ಯ ಸಿಬ್ಬಂದಿಗೆ ಈ ವಿಚಾರದಲ್ಲಿ ತರಬೇತಿ ನೀಡುವ ಉದ್ದೇಶದಿಂದ 3–6 ತಿಂಗಳ ಅಲ್ಪಾವಧಿಯ ಕೋರ್ಸ್ ಆರಂಭಿಸಬಹುದಾಗಿದೆ. ಜಿಲ್ಲೆ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ವಾಕ್–ಶ್ರವಣ ಸಂಸ್ಥೆಯ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಬಹುದು. ಈ ಪ್ರಸ್ತಾಪಗಳಿಗೆ ಕೇಂದ್ರವು ಅನುಮೋದನೆ ನೀಡಬೇಕು' ಎಂದು ಕೋರಿದರು. ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ, 'ರಾಜ್ಯ ಸರ್ಕಾರ ಈ ಸಂಬಂಧ ಪ್ರಸ್ತಾಪವನ್ನು ಕಳುಹಿಸಲಿ. ಅದನ್ನು ಪರಿಶೀಲಿಸಿ, ಕ್ರಮ ತಗೆದುಕೊಳ್ಳುತ್ತೇವೆ' ಎಂದರು.

| | | | | | | | | | | | | | |
|---|---|---|---|---|---|---|---|---|---|---|---|---|---|
| | ಮಂಜುಳಮ್ಮ ಉ ಅಂಜು ಬಿನ್ ಕೆ. ಮುನಿಶಾಮಯ್ಯ | ಮಂಜುಳಮ್ಮ ಉ ಅಂಜು ಬಿನ್ ಕೆ. ಮುನಿಶಾಮಯ್ಯ | | | | 0–15 | | | | | | | |
| | ಶಾರದಮ್ಮ ಕೋಂ ಲೇ ಎಸ್. ಅಂಜಿನಪ್ಪ | ಶಾರದಮ್ಮ ಕೋಂ ಲೇ ಎಸ್. ಅಂಜಿನಪ್ಪ | | | | 1–02.08 | | | | | | | |
| | ಶಾರದಮ್ಮ ಕೋಂ ಲೇ ಎಸ್. ಅಂಜಿನಪ್ಪ | ಶಾರದಮ್ಮ ಕೋಂ ಲೇ ಎಸ್. ಅಂಜಿನಪ್ಪ | | | | 0–03.08 | | | | | | | |
| | ಶಾರದಮ್ಮ ಕೋಂ ಲೇ ಎಸ್. ಅಂಜಿನಪ್ಪ | ಶಾರದಮ್ಮ ಕೋಂ ಲೇ ಎಸ್. ಅಂಜಿನಪ್ಪ | | | | 0–10 | | | | | | | |
| | ನಾರಾಯಣಸ್ವಾಮಿ – ನಾರಾಯಣಪ್ಪ | ನಾರಾಯಣಸ್ವಾಮಿ – ನಾರಾಯಣಪ್ಪ | | | | 0–20 | | | | | | | |
| | ಇ. ರಾಮಾಂಜಿನಪ್ಪ ಬಿನ್ ಈರಬಚ್ಚಪ್ಪ | ಇ. ರಾಮಾಂಜಿನಪ್ಪ ಬಿನ್ ಈರಬಚ್ಚಪ್ಪ | | | | 0–22 | | | | | | | |
| | ಎಸ್.ಪಿ. ಸುಬ್ಬಣ್ಣ – ಪುಟ್ಟಣ್ಣ | ಎಸ್.ಪಿ. ಸುಬ್ಬಣ್ಣ – ಪುಟ್ಟಣ್ಣ | | | | 0–20 | | | | | | | |
| | ಆರ್. ಕರ್ಣಕುಮಾರ್ ಬಿನ್ ಇ. ರಾಮಾಂಜಿನಪ್ಪ | ಆರ್. ಕರ್ಣಕುಮಾರ್ ಬಿನ್ ಇ. ರಾಮಾಂಜಿನಪ್ಪ | | | | 2–00 | | | | | | | |
| | ಆರ್. ವೀರಣ್ಣ – ರಾಮಣ್ಣ | ಆರ್. ವೀರಣ್ಣ – ರಾಮಣ್ಣ | | | | 0–30 | | | | | | | |
| | ಮುನೇಗೌಡ – ನಾರಾಯಣಸ್ವಾಮಿ | ಮುನೇಗೌಡ – ನಾರಾಯಣಸ್ವಾಮಿ | | | | 0–20 | | | | | | | |
| | ಆಶಾ ಬಿನ್ ನಾಗರಾಜು | ಆಶಾ ಬಿನ್ ನಾಗರಾಜು | | | | 0–30 | | | | | | | |
| | ವೀಣಾವತಿ ಕೋಂ ರಮೇಶ್ | ವೀಣಾವತಿ ಕೋಂ ರಮೇಶ್ | | | | 1–10 | | | | | | | |
| | ರತ್ನಮ್ಮ ಕೋಂ ಗೋಪಾಲ್ | ರತ್ನಮ್ಮ ಕೋಂ ಗೋಪಾಲ್ | | | | 0–10 | | | | | | | |
| | ಲಕ್ಷ್ಮಣ ಬಿನ್ ಸುಬ್ಬಣ್ಣ | ಲಕ್ಷ್ಮಣ ಬಿನ್ ಸುಬ್ಬಣ್ಣ | | | | 1–20 | | | | | | | |
| | ಬೈರೇಗೌಡ ಬಿನ್ ಚನ್ನರಾಯಪ್ಪ | ಬೈರೇಗೌಡ ಬಿನ್ ಚನ್ನರಾಯಪ್ಪ | | | | 0–29 | | | | | | | |
| | ಹನುಮಕ್ಕ ಕೋಂ ಕೆಂಪಣ್ಣ | ಹನುಮಕ್ಕ ಕೋಂ ಕೆಂಪಣ್ಣ | | | | 0–07 | | | | | | | |
| | ರತ್ನಮ್ಮ ಕೋಂ ಗೋಪಾಲ್ | ರತ್ನಮ್ಮ ಕೋಂ ಗೋಪಾಲ್ | | | | 0–10 | | | | | | | |
| | ಅನುಸೂಯಮ್ಮ ಕೋಂ ಲೇ ರಾಜಣ್ಣ | ಅನುಸೂಯಮ್ಮ ಕೋಂ ಲೇ ರಾಜಣ್ಣ | | | | 0–10 | | | | | | | |
| | ವಿನಯ್ ಕುಮಾರ್ ಬಿನ್ ಲೇ ಮಾರಪ್ಪ | ವಿನಯ್ ಕುಮಾರ್ ಬಿನ್ ಲೇ ಮಾರಪ್ಪ | | | | 0–28 | | | | | | | |
| | ಆಂಜಿನಪ್ಪ ಬಿನ್ ಸುಬ್ಬಣ್ಣ | ಆಂಜಿನಪ್ಪ ಬಿನ್ ಸುಬ್ಬಣ್ಣ | | | | 0–13 | | | | | | | |
| | ಬಿ ದೇವರಾಜ್ ಬಿನ್ ಲೇ ಬಸಪ್ಪ | ಬಿ ದೇವರಾಜ್ ಬಿನ್ ಲೇ ಬಸಪ್ಪ | | | | 1–28 | | | | | | | |
| | ರತ್ನಮ್ಮ ಕೋಂ ಲೇ ಗೋಪಾಲ್ | ರತ್ನಮ್ಮ ಕೋಂ ಲೇ ಗೋಪಾಲ್ | | | | 0–33 | | | | | | | |
| | ತರನುಂ ತಲತ್ ಹಯಾತ್ ಕೋಂ ಕೆ ಫಾರೂಕ್ | ತರನುಂ ತಲತ್ ಹಯಾತ್ ಕೋಂ ಕೆ ಫಾರೂಕ್ | | | | 1–00 | | | | | | | |
| | ಈ ರಾಮಾಂಜುನಪ್ಪ ಬಿನ್ ಈರಬಚ್ಚಪ್ಪ | ಈ ರಾಮಾಂಜುನಪ್ಪ ಬಿನ್ ಈರಬಚ್ಚಪ್ಪ | | | | 1–10 | | | | | | | |
| 50 | ಚಂದ್ರಕಲಾ ಆರ್ ಕೋಂ ಲೇ ಪಿ ಸುಬ್ರಮಣ್ಯ | ಚಂದ್ರಕಲಾ ಆರ್ ಕೋಂ ಲೇ ಪಿ ಸುಬ್ರಮಣ್ಯ | 181/2 | 0–37.08 | 0–02.08 | 0–35 | 0–02.08 | ಖುಷ್ಕಿ | ಸ ನಂ. 181/5 | ಸ ನಂ. 178 | ಸ ನಂ. 181/1 181/3 | ಸ ನಂ. 181/6 | |
| 51 | ರಾಜಣ್ಣ– ಚನ್ನಪ್ಪ | ರಾಜಣ್ಣ– ಚನ್ನಪ್ಪ | 181/3 | 0–13 | 0–01 | 0–12 | 0–01 | ಖುಷ್ಕಿ | ಸ ನಂ. 110/1 | ಸ ನಂ. 181/1 | ಎಸ್.ಟಿ. ಆರ್.ಆರ್. ರಸ್ತೆ | ಸ ನಂ. 181/2, 181/5 | |
| 52 | ಚನ್ನಕೇಶವ ಬಿನ್ ಲೇಟ್ ಪುಟ್ಟಶಾಮಪ್ಪ | ಚನ್ನಕೇಶವ ಬಿನ್ ಲೇಟ್ ಪುಟ್ಟಶಾಮಪ್ಪ | 181/4 | 0–30 | 0–00 | 0–30 | 0–00 | ಖುಷ್ಕಿ | ಸ ನಂ. 110/1 | ಸ ನಂ. 181/7 | ಸ ನಂ. 181/6 | ಸ ನಂ. 151/6, 151/2 151/7 151/1 110/1 | |
| 53 | ರಾಜಣ್ಣ – ಚನ್ನಪ್ಪ | ರಾಜಣ್ಣ – ಚನ್ನಪ್ಪ | 181/5 | 0–17 | 0–00 | 0–17 | 0–00 | ಖುಷ್ಕಿ | ಸ ನಂ. 110/1 | ಸ ನಂ. 181/2 | ಸ ನಂ. 181/3 | ಸ ನಂ. 181/6 | |
| 54 | ಚಂದ್ರಪ್ರಕಾಶ – ಸುಬ್ಬಣ್ಣ | ಚಂದ್ರಪ್ರಕಾಶ – ಸುಬ್ಬಣ್ಣ | 181/6 | 2–04.04 | 0–05.04 | 1–39 | 0–05.04 | ಖುಷ್ಕಿ | ಸ ನಂ. 110/1 | ಸ ನಂ. 178 | ಸ ನಂ. 181/2 181/5 | ಸ ನಂ. 181/7 181/4 | |
| 55 | ರಾಜಣ್ಣ – ಚನ್ನಪ್ಪ | ರಾಜಣ್ಣ – ಚನ್ನಪ್ಪ | 181/7 | 1–15.04 | 0–05.04 | 1–10 | 0–05.04 | ಖುಷ್ಕಿ | ಸ ನಂ. 181/4 151/6 | ಸ ನಂ. 178 | ಸ ನಂ. 181/6 | ಸ ನಂ. 152/6 180/2 | |
| 56 | ನಾರಾಯಣಸ್ವಾಮಪ್ಪ | ನಾರಾಯಣಸ್ವಾಮಪ್ಪ | 222/1 | 0–08 | 0–00 | 0–08 | 0–00 | ಖುಷ್ಕಿ | ಸ ನಂ. 222/2 | ಸ ನಂ. 222/4 | ಸ ನಂ. 178 | ಸ ನಂ. 175 ಕೆರೆ | |
| 57 | ನಾರಾಯಣಸ್ವಾಮಪ್ಪ– ಆಂಜನಪ್ಪ | ನಾರಾಯಣಸ್ವಾಮಪ್ಪ– ಆಂಜನಪ್ಪ | 222/2 | 2–17 | 0–00 | 2–17 | 0–00 | ಖುಷ್ಕಿ | ಸ ನಂ. 223 | ಸ ನಂ. 222/1 | ಸ ನಂ. 178 | ಸ ನಂ. 175 ಕೆರೆ | |
| 58 | ಸುಬ್ರಮಣ್ಯಂ ಎಸ್ ಎ ಬಿನ್ ಎಂ ಆವಲಪ್ಪ<br>ರೇಣುಕುಮಾರ್ ಎ ಬಿನ್ ಎಂ ಆವಲಪ್ಪ | ಸುಬ್ರಮಣ್ಯಂ ಎಸ್ ಎ ಬಿನ್ ಎಂ ಆವಲಪ್ಪ<br>ರೇಣುಕುಮಾರ್ ಎ ಬಿನ್ ಎಂ ಆವಲಪ್ಪ | 222/3 | 0–38 | 0–00 | 0–38<br>ಮೇಲಿನ ಜಂಟಿ | 0–00 | ಖುಷ್ಕಿ | ಸ ನಂ. 222/5 | ಸ ನಂ. 178 | ಸ ನಂ. 178 | ಸ ನಂ. 175 ಕೆರೆ | |
| 59 | ದೇವೇಂದ್ರಪ್ಪ ಡಿ ಬಿನ್ ದಾಸರಪುಟ್ಟಪ್ಪ | ದೇವೇಂದ್ರಪ್ಪ ಡಿ ಬಿನ್ ದಾಸರಪುಟ್ಟಪ್ಪ | 222/4 | 0–38 | 0–00 | 0–38 | 0–00 | ಖುಷ್ಕಿ | ಸ ನಂ. 222/1 | ಸ ನಂ. 222/5 | ಸ ನಂ. 178 | ಸ ನಂ. 175 ಕೆರೆ | |
| 60 | ಜಿ.ಕೆ.ಸುಮನ್ ಬಿನ್ ಕೋನಪ್ಪ ರೆಡ್ಡಿ ಟಿ | ಜಿ.ಕೆ.ಸುಮನ್ ಬಿನ್ ಕೋನಪ್ಪ ರೆಡ್ಡಿ ಟಿ | 222/5 | 0–38 | 0–00 | 0–38 | 0–00 | ಖುಷ್ಕಿ | ಸ ನಂ. 222/4 | ಸ ನಂ. 222/3 | ಸ ನಂ. 178 | ಸ ನಂ. 175 ಕೆರೆ | |
| 61 | ಮುನಿಯಮ್ಮ – ನಂಜಪ್ಪ<br>ರಾಮಯ್ಯ – ಆಂಜನಪ್ಪ | ಮುನಿಯಮ್ಮ – ನಂಜಪ್ಪ<br>ರಾಮಯ್ಯ – ಆಂಜನಪ್ಪ | 223 | 5–02 | 0–01 | 5–01 | 0–01 | ಖುಷ್ಕಿ | ಸ ನಂ. 178 | ಸ ನಂ. 222/2 | ಸ ನಂ. 178 | ಸ ನಂ. 175 ಕೆರೆ | |
| 62 | ಎಸ್.ಕಶ್ಯಪ್ಪ – ಸುಬ್ಬಯ್ಯ ಉ ಮುನಿಸಿಬ್ಬಯ್ಯ | ಎಸ್.ಕಶ್ಯಪ್ಪ – ಸುಬ್ಬಯ್ಯ ಉ ಮುನಿಸಿಬ್ಬಯ್ಯ | 224/1 | 4–00 | 0–00 | 4–00 | 0–00 | ಖುಷ್ಕಿ | ಸ ನಂ. 171 | ಸ ನಂ. 172/7 | ಸ ನಂ. 174/1, 174/2 174/3 174/4 | ಸ ನಂ. 224/2 | |
| 63 | ಸೋನಿ ಎಂ ಪಿ ಬಿನ್ ಎಸ್ ಜಿ ಮರಿಯಪ್ಪ | ಸೋನಿ ಎಂ ಪಿ ಬಿನ್ ಎಸ್ ಜಿ ಮರಿಯಪ್ಪ | 224/2 | 0–18 | 0–00 | 0–18 | 0–00 | ಖುಷ್ಕಿ | ಸ ನಂ. 171 | ಸ ನಂ. 172/25 | ಸ ನಂ. 224/1 | ಸ ನಂ. 225/1 | |
| 64 | ಸೋನಿ ಎಂ ಪಿ ಬಿನ್ ಎಸ್ ಜಿ ಮರಿಯಪ್ಪ | ಸೋನಿ ಎಂ ಪಿ ಬಿನ್ ಎಸ್ ಜಿ ಮರಿಯಪ್ಪ | 225/1 | 1–36 | 0–00 | 1–36 | 0–00 | ಖುಷ್ಕಿ | ಸ ನಂ. 171 | ಸ ನಂ. 172/25 172/9 | ಸ ನಂ. 224/2 | ಸ ನಂ. 225/2 | |
| 65 | ಎನ್. ನಂಜೇಗೌಡ ಬಿನ್ ನಾರಾಯಣಸ್ವಾಮಿ | ಎನ್. ನಂಜೇಗೌಡ ಬಿನ್ ನಾರಾಯಣಸ್ವಾಮಿ | 225/2 | 2–13 | 0–00 | 2–13 | 0–00 | ಖುಷ್ಕಿ | ಸ ನಂ. 170/1 | ಸ ನಂ. 172/9 | ಸ ನಂ. 225/1 | ಚಿನ್ನ ಕೆಂಪ ಮಾರನ ಹಳ್ಳಿ ಗಡಿ | |
| 66 | ಹನುಮಯ್ಯ–ಮುನಂಜಪ್ಪ<br>ಮುನಿರಾಜು– ನಾರಾಯನಸ್ವಾಮಪ್ಪ<br>ಆಂಜಿನಪ್ಪ– ನಾರಾಯಣಸ್ವಾಮಪ್ಪ | ಹನುಮಯ್ಯ–ಮುನಂಜಪ್ಪ<br>ಮುನಿರಾಜು– ನಾರಾಯನಸ್ವಾಮಪ್ಪ<br>ಆಂಜಿನಪ್ಪ– ನಾರಾಯಣಸ್ವಾಮಪ್ಪ | 226 | 5–00 | 0–09 | 3–00<br>0–35.08<br>0–35.08 | 0–09 | ಖುಷ್ಕಿ | ಸ ನಂ. 171 | ಸ ನಂ. 171 | ಸ ನಂ. 171 | ಕುಂದಾಣ ಗ್ರಾಮದ ಗಡಿ | |
| 67 | ಬಿ.ಡಿ.ಸುಮಿತ್ರ ಕೋಂ ಬಿ.ಸಿ.ಶಿವರಾಜು | ಬಿ.ಡಿ.ಸುಮಿತ್ರ ಕೋಂ ಬಿ.ಸಿ.ಶಿವರಾಜು | 234/1 | 1–03 | 0–03 | 1–00 | 0–03 | ಖುಷ್ಕಿ | ಸ ನಂ. 171 | ಸ ನಂ. 228 | ಸ ನಂ. 228 | ಕುಂದಾಣ ಗ್ರಾಮದ ಗಡಿ | |
| 68 | ಸುನೀಲ್ ಕುಮಾರ್ ಬಿ ಎಸ್ ವೀರಣ್ಣ | ಸುನೀಲ್ ಕುಮಾರ್ ಬಿ ಎಸ್ ವೀರಣ್ಣ | 234/2 | 0–13 | 0–00 | 0–13 | 0–00 | ಖುಷ್ಕಿ | | | | | |
| 69 | ರವಿ ಕುಮಾರ್ ಬಿನ್ ಎಸ್ ವೀರಣ್ಣ | ರವಿ ಕುಮಾರ್ ಬಿನ್ ಎಸ್ ವೀರಣ್ಣ | 234/3 | 0–14.12 | 0–00.12 | 0–14 | 0–00.12 | ಖುಷ್ಕಿ | | | | | |
| 70 | ಶಾಂತಕುಮಾರ್ ಬಿನ್ ಎಸ್ ವೀರಣ್ಣ | ಶಾಂತಕುಮಾರ್ ಬಿನ್ ಎಸ್ ವೀರಣ್ಣ | 234/4 | 0–13.04 | 0–00.04 | 0–13 | 0–00.04 | ಖುಷ್ಕಿ | | | | | |
| 71 | ಆಂಜಿನಪ್ಪ ಬಿನ್ ರಾಮಯ್ಯ | ಆಂಜಿನಪ್ಪ ಬಿನ್ ರಾಮಯ್ಯ | 235 | 1–20 | 0–00 | 1–20 | 0–00 | ಖುಷ್ಕಿ | ಸೋಲೂರು ಗ್ರಾಮದ ಗಡಿ | ಸ ನಂ. 132 | ಸ ನಂ. 171 | ರಸ್ತೆ | |
| 72 | ಪಿ. ಮಂಜುನಾಥ ಬಿನ್ ದೇವೀರಮ್ಮ | ಪಿ. ಮಂಜುನಾಥ ಬಿನ್ ದೇವೀರಮ್ಮ | 236/1 | 0–20 | 0–00 | 0–20 | 0–00 | ಖುಷ್ಕಿ | ಸ ನಂ. 171 | ಸ ನಂ. 236/2 | ಸ ನಂ. 171 | ಸ ನಂ. 171 | |
| 73 | ಎಸ್.ಪಿ.ಶಿವಣ್ಣ ಬಿನ್ ದೇವೀರಮ್ಮ | ಎಸ್.ಪಿ.ಶಿವಣ್ಣ ಬಿನ್ ದೇವೀರಮ್ಮ | 236/2 | 0–20 | 0–00 | 0–20 | 0–00 | ಖುಷ್ಕಿ | ಸ ನಂ. 236/1 | ಸ ನಂ. 171 | ಸ ನಂ. 171 | ಸ ನಂ. 171 | |
| 74 | ವಿಕಾಸ್ ಬಿನ್ ಆಂಜಿನಪ್ಪ | ವಿಕಾಸ್ ಬಿನ್ ಆಂಜಿನಪ್ಪ | 237/1 | 0–12 | 0–00 | 0–12 | 0–00 | ಖುಷ್ಕಿ | ಸ ನಂ. 233 | ಸ ನಂ. 237/2 | ಸ ನಂ. 171 | ಸ ನಂ. 226 | |
| 75 | ಮುನಿರಾಜು ಬಿನ್ ಲೇ ನಾರಾಯಣಸ್ವಾಮಪ್ಪ | ಮುನಿರಾಜು ಬಿನ್ ಲೇ ನಾರಾಯಣಸ್ವಾಮಪ್ಪ | 237/2 | 0–20 | 0–00 | 0–20 | 0–00 | ಖುಷ್ಕಿ | ಸ ನಂ. 237/1 | ಸ ನಂ. 237/3, 171 | ಸ ನಂ. 171 | ಸ ನಂ. 226 | |
| 76 | ವಿಕಾಸ್ ಬಿನ್ ಆಂಜಿನಪ್ಪ | ವಿಕಾಸ್ ಬಿನ್ ಆಂಜಿನಪ್ಪ | 237/3 | 0–08 | 0–00 | 0–08 | 0–00 | ಖುಷ್ಕಿ | ಸ ನಂ. 237/2 | ಸ ನಂ. 171 | ಸ ನಂ. 171 | ಸ ನಂ. 237/2 | |
| 77 | ವಿನಯ್ ಕುಮಾರ್ ಬಿನ್ ಲೇಟ್ ಮಾರಪ್ಪ | ವಿನಯ್ ಕುಮಾರ್ ಬಿನ್ ಲೇಟ್ ಮಾರಪ್ಪ | 238 | 0–20 | 0–00 | 0–20 | 0–00 | ಖುಷ್ಕಿ | ಸ ನಂ. 226 | ಸ ನಂ. 226 | ಸ ನಂ. 171 | ಸ ನಂ. ಕುಂದಾಣ ಗ್ರಾಮದ ಗಡಿ | |
| 78 | ಸೋನಿ ಎಂ.ಪಿ. ಬಿನ್ ಎಸ್.ಜಿ.ಮರಿಯಪ್ಪ | ಸೋನಿ ಎಂ.ಪಿ. ಬಿನ್ ಎಸ್.ಜಿ.ಮರಿಯಪ್ಪ | 239 | 1–06 | 0–06 | 1–00 | 0–06 | ಖುಷ್ಕಿ | ಸ ನಂ. 171 | ಸ ನಂ. 171, 225 | ಸ ನಂ. 171, 224 | ಕುಂದಾಣ ಗ್ರಾಮದ ಗಡಿ | |

Page-3

ವಿಜಯ ರಾಘವೇಂದ್ರ

# ವಿಜಯ ರಾಘವೇಂದ್ರ ಫಸ್ಟ್‌ಲುಕ್ ಬಿಡುಗಡೆ

ವಿಜಯ ರಾಘವೇಂದ್ರ ನಾಯಕನಾಗಿ ನಟಿಸುತ್ತಿರುವ 'ಮಹಾನ್' ಚಿತ್ರದ ಫಸ್ಟ್‌ಲುಕ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪಿ.ಸಿ.ಶೇಖರ್ ನಿರ್ದೇಶನದ ಈ ಚಿತ್ರದಲ್ಲಿ ವಿಜಯ ರಾಘವೇಂದ್ರ ರೈತನಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

'ಸಂಕ್ರಾಂತಿಗೂ ರೈತರಿಗೂ ಅವಿನಾಭಾವ ಸಂಬಂಧ. ಈ ಹಬ್ಬವನ್ನು ಕೃಷಿಕರು ಸುಗ್ಗಿ ಹಬ್ಬ ಎಂದೇ ಆಚರಿಸುತ್ತಾರೆ. ಅಂಥ ರೈತರ ಕುರಿತಾದ ಕಥಾಹಂದರ ಹೊಂದಿರುವ ಚಿತ್ರವಿದು. ಹೀಗಾಗಿ ಈ ಸಂದರ್ಭದಲ್ಲಿ ಚಿತ್ರದ ಮೊದಲ ಪೋಸ್ಟರ್ ಬಿಡುಗಡೆ ಮಾಡಿದ್ದೇವೆ. ಇಲ್ಲಿ 'ಮಹಾನ್' ಎಂದರೆ ರೈತ. ಇದೊಂದು ರೈತರ ಬದುಕಿನ ಬವಣೆಗಳನ್ನು ತಿಳಿಸುವ ಕಥಾಹಂದರ ಹೊಂದಿರುವ ಚಿತ್ರ. ನಮಗೆ ದೇಶ ಕಾಯುವ ಸೈನಿಕರು ಎಷ್ಟು ಮುಖ್ಯವೊ, ಅದೇ ರೀತಿ ರೈತರು ಕೂಡ ಬಹುಮುಖ್ಯ. ಇಂತಹ ರೈತರ ಕಷ್ಟಗಳಿಗೆ ಸ್ಪಂದಿಸುವ ಹಾಗೂ ಅವರ ಪರ ಧ್ವನಿ ಎತ್ತುವ ಪಾತ್ರದಲ್ಲಿ ವಿಜಯ ರಾಘವೇಂದ್ರ ಕಾಣಿಸಿಕೊಂಡಿದ್ದಾರೆ' ಎನ್ನುತ್ತಾರೆ ನಿರ್ದೇಶಕ.

ಆಕಾಶ್ ಪಿಕ್ಚರ್ಸ್ ಲಾಂಛನದಲ್ಲಿ ಪ್ರಕಾಶ್ ಬುದ್ದೂರು ಬಂಡವಾಳ ಹೂಡಿದ್ದಾರೆ. ರಾಧಿಕಾ ನಾರಾಯಣ್, ಮಿತ್ರ, ನಮ್ರತಾ ಗೌಡ, ವರ್ಷ ಬೊಳ್ಳಮ್ಮ ಮುಂತಾದವರು ಈ ಚಿತ್ರದಲ್ಲಿದ್ದಾರೆ. ❖

# ಹೊರಬಂತು ಬಂಧಮುಕ್ತದ ಹಾಡು

ಐಶ್ವರ್ಯ ನಾಗರಾಜ್

ಪತ್ರಕರ್ತ ಹಾಗೂ ಲೇಖಕ ಕುಮಾರ ಬೇಂದ್ರೆ ನಿರ್ದೇಶನದ 'ಬಂಧಮುಕ್ತ' ಚಿತ್ರದ ಮೊದಲ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕಾರ್ಮಿಕ ಸಚಿವ ಸಂತೋಷ್ ಲಾಡ್ ಹಾಡು ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

'ಜೀವ ಬಯಸಿದ ಭಾವವೇ ಎದೆಯಲ್ಲರಳಿ ನಿಂತು..' ಎಂಬ ಈ ಗೀತೆಗೆ ನಿರ್ದೇಶಕರದ್ದೇ ಸಾಹಿತ್ಯವಿದ್ದು, ಸಿದ್ದೇಶ್ವರ ಕಟಕೋಳ ಸಂಗೀತ, ರಾಧಿಕಾ ಕುಲಕರ್ಣಿ ಅವರ ಧ್ವನಿಯಿದೆ.

'ಈ ಚಿತ್ರ ಮಹಿಳಾ ಸಬಲೀಕರಣದ ಆಶಯವನ್ನು ಹೊಂದಿದ್ದು, ಬಡ ಯುವತಿಯೊಬ್ಬಳು ವೈದ್ಯಕೀಯ ಶಿಕ್ಷಣ ಪಡೆಯುವುದಕ್ಕಾಗಿ ಮಾಡುವ ಹೋರಾಟದ ಕಥೆ ಇದರಲ್ಲಿದೆ. ಸಾಮಾಜಿಕ ಜವಾಬ್ದಾರಿಯನ್ನು ಹೊತ್ತ ಇಂತಹ ಸದಭಿರುಚಿಯ ಚಿತ್ರವನ್ನು ಪ್ರೇಕ್ಷಕರು ವೀಕ್ಷಿಸುವ ಮೂಲಕ ಅದರ ಉದ್ದೇಶವನ್ನು ಈಡೇರಿಸಬೇಕು' ಎಂದು ಲಾಡ್ ಹೇಳಿದರು.

ಶಿವಪುತ್ರಪ್ಪ ಆಶಿ ಬಂಡವಾಳ ಹೂಡಿದ್ದಾರೆ. ಐಶ್ವರ್ಯ ನಾಗರಾಜ್, ಸನತ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ವಿಘ್ನೇಶ್ ಮಲಚಮಿ ಛಾಯಾ-ಚಿತ್ರಗ್ರಹಣ, ಸತ್ಯಜಿತ್ ಸಂಕಲನ, ಬಹುರೂಪಿ ಹಿನ್ನೆಲೆ ಸಂಗೀತವಿದೆ. ಫೆಬ್ರುವರಿಯಲ್ಲಿ ಚಿತ್ರ ತೆರೆಗೆ ಬರಲಿದೆ ಎಂದು ಚಿತ್ರತಂಡ ಹೇಳಿದೆ. ❖

# ಸಿನಿಮಾ ಆಗುತ್ತಿದೆ ಅಮೃತಾಂಜನ್

ಕಿರುಚಿತ್ರಗಳ ಮೂಲಕವೇ ಖ್ಯಾತಿ ಪಡೆದಿರುವ ಪಾಯಲ್ ಚೆಂಗಪ್ಪ, ಕಾರ್ತಿಕ್ ರೆಡ್ಡಿ, ಗೌರವ್ ಶೆಟ್ಟಿ, ಸ್ಫೂರ್ತಿ ರಮಿತ, ಶ್ರೀ ಭವ್ಯ ಕೆವಿ, ಗಂಗಾಧರ್ ನಾಗತಿಹಳ್ಳಿ ಶೀಘ್ರದಲ್ಲೇ ಸಿನಿಮಾವೊಂದರ ಮೂಲಕ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ.

'ಅಮೃತಾಂಜನ್' ಎಂಬ ಕಿರುಚಿತ್ರವು ಇದೀಗ ಸಿನಿಮಾವಾಗಲಿದ್ದು, ಜ್ಯೋತಿ ರಾವ್ ಮೋಹಿತ್ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಸಿನಿಮಾ ಕುರಿತು ಮಾತನಾಡಿದ ಅವರು, 'ಅಮೃತಾಂಜನ್ ಕಿರುಚಿತ್ರಕ್ಕೂ ಸಿನಿಮಾಗೂ ಬಹಳ ವ್ಯತ್ಯಾಸವಿದೆ. ನಾನು ಇದಕ್ಕೂ ಮೊದಲು 'ಸೋಡಾಬುಡ್ಡಿ' ಎಂಬ ಸಿನಿಮಾ ಮಾಡಿದ್ದೆ. ಅದು ಗೆಲ್ಲಲಿಲ್ಲ. ಆಮೇಲೆ 'ಅಮೃತಾಂಜನ್' ಕಿರುಚಿತ್ರ ಮಾಡಿದೆ. ಅದು ಗೆದ್ದಿತು. ಬಳಿಕ ಇದನ್ನೇ ಸಿನಿಮಾ ರೂಪದಲ್ಲಿ ದೊಡ್ಡ ತೆರೆಗೆ ಮಾಡಲು ನಿರ್ಧರಿಸಿದೆವು. ಸಿನಿಮಾಗೆ ಏನೇನು ಬದಲಾವಣೆಗಳು ಬೇಕೋ ಅದನ್ನು ಮಾಡಿದ್ದೇವೆ. ಇದಕ್ಕಾಗಿ ಒಂದು ಗಟ್ಟಿಯಾದ ಕಥೆ ಸಿದ್ಧಪಡಿಸಿ, ಮೂರು ತಿಂಗಳು ಪೂರ್ವತಯಾರಿ ಮಾಡಿಕೊಂಡೇ ಚಿತ್ರೀಕರಣಕ್ಕೆ ಇಳಿದಿದ್ದೆವು. ಪ್ರತೀ ದೃಶ್ಯದಲ್ಲೂ ಹಾಸ್ಯಕ್ಕೆ ಒತ್ತು ನೀಡಿದ್ದೇವೆ. 'ನಾನು ಕುಡಿಯೋದು ಬಿಟ್ಟರೆ ನೀನು ಮೇಕಪ್ ಹಾಕೋದು ಬಿಡ್ತೀಯಾ' ಎಂಬ ಡೈಲಾಗ್ ಇಲ್ಲೂ ಮುಂದುವರಿಸಿದ್ದು, ಉಳಿದಂತೆ ಕಥೆ ಎಳೆ ಹೊಸದಾಗಿದೆ' ಎಂದರು.

'ಕಿರುಚಿತ್ರದ ರೀತಿ ಸಿನಿಮಾ ಮಾಡಿದರೆ ಯಾರೂ ಚಿತ್ರಮಂದಿರಕ್ಕೆ ಬರುವುದಿಲ್ಲ. ಹೀಗಾಗಿ ಸವಾಲು ಅಧಿಕವಾಗಿತ್ತು. ಸಿನಿಮಾಗೆ ಈಗಾಗಲೇ ಸೆನ್ಸಾರ್ ಆಗಿದೆ. ಫ್ಯಾಮಿಲಿ ಆಡಿಯನ್ಸ್ ಮತ್ತು ಯುವಜನತೆಗೆ ಇದೊಂದು ಮನರಂಜನೆಯ ಪ್ಯಾಕೇಜ್. ಭಾವನೆಗಳೂ ಇಲ್ಲಿ ಜಾಗವಿದೆ. ಬೆಂಗಳೂರು, ಮಂಗಳೂರು, ಉಡುಪಿ ಭಾಗದಲ್ಲಿ ಶೂಟ್ ಮಾಡಲಾಗಿದೆ' ಎಂದರು ಜ್ಯೋತಿ ರಾವ್ ಮೋಹಿತ್. ❖

ಚಿಕ್ಕಣ್ಣ

# ಗೋಧೂಳಿ ಲಗ್ನದಲ್ಲಿ ಲಕ್ಷ್ಮೀಪುತ್ರನ ಆಗಮನ

ನಟ ಚಿಕ್ಕಣ್ಣ ನಾಯಕರಾಗಿ ನಟಿಸಿರುವ ಲಕ್ಷ್ಮೀಪುತ್ರ ಸಿನಿಮಾದ ಫಸ್ಟ್ ಲುಕ್ ಜ.15ರಂದು ಸಂಜೆ 5.55ಕ್ಕೆ ಡಿಬೀಟ್ಸ್ ಮ್ಯೂಸಿಕ್ ವರ್ಲ್ಡ್‌ನಲ್ಲಿ ಬಿಡುಗಡೆಯಾಗಲಿದೆ.

ಇದು ಚಿಕ್ಕಣ್ಣ ನಾಯಕರಾಗಿ ನಟಿಸಿರುವ ಎರಡನೇ ಸಿನಿಮಾವಾಗಿದ್ದು, ನಾಯಕಿಯಾಗಿ ವಂದಿತಾ ಜೋಡಿಯಾಗಿದ್ದಾರೆ. ಸಿನಿಮಾವನ್ನು ನಿರ್ದೇಶಕ ಎ.ಪಿ.ಅರ್ಜುನ್ ನಿರ್ಮಾಣ ಮಾಡಿದ್ದು, ವಿಜಯ್ ಎಸ್.ಸ್ವಾಮಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ❖


| | | | | | | | | | | | | | |
|---|---|---|---|---|---|---|---|---|---|---|---|---|---|
| 79 | ಮುನೇಗೌಡ ಎನ್ ಬಿನ್ ಲೇ ನಾರಾಯಣಪ್ಪ | ಮುನೇಗೌಡ ಎನ್ ಬಿನ್ ಲೇ ನಾರಾಯಣಪ್ಪ | 240 | 0–17 | 0–00 | 0–17 | 0–00 | ಖುಷ್ಕಿ | ಸ ನಂ. 168 | ಸ ನಂ. 171 | ಸ ನಂ. 171 | ಸ ನಂ. 171 | |
| 80 | ಸರ್ಕಾರಿ ಗೋಮಾಳ | ಸರ್ಕಾರಿ ಗೋಮಾಳ | 241 | 0–05 | 0–05 | 0–00 | 0–00 | ಖುಷ್ಕಿ | ಸ ನಂ. 171 | ಸ ನಂ. 171 | ಸ ನಂ. 171 | ಸ ನಂ. 171 | |
| 81 | ಎಸ್.ಆರ್.ಕೃಷ್ಣಮೂರ್ತಿ– ಎಸ್.ಬಿ ರಾಮಚಂದ್ರಪ್ಪ | ಎಸ್.ಆರ್.ಕೃಷ್ಣಮೂರ್ತಿ– ಎಸ್.ಬಿ ರಾಮಚಂದ್ರಪ್ಪ | 242 | 1–30 | 0–06 | 1–24 | 0–06 | ಖುಷ್ಕಿ | ಸ ನಂ. 171 | ಸ ನಂ. 171 | ಸ ನಂ. 171 | ರಸ್ತೆ | |
| 82 | ರಘು ಎಸ್.ಎಂ. ಬಿನ್ ಎಸ್.ಮುನಿವೀರಯ್ಯ | ರಘು ಎಸ್.ಎಂ. ಬಿನ್ ಎಸ್.ಮುನಿವೀರಯ್ಯ | 243/1 | 1–07 | 0–00 | 1–07 | 0–00 | ಖುಷ್ಕಿ | ಸ ನಂ. 236 171 | ಸ ನಂ. 237 236 | ಸ ನಂ. 171 243/1 243/2 243/3 243/4 | ಸ ನಂ. 243/2 243/3 243/4 243/5 ಕುಂದಾಣ ಗ್ರಾಮದ ಗಡಿ | |
| 83 | ಎಸ್. ವೀರಣ್ಣ ಬಿನ್ ಲೇ ದೊಡ್ಡನಂಜಪ್ಪ | ಎಸ್. ವೀರಣ್ಣ ಬಿನ್ ಲೇ ದೊಡ್ಡನಂಜಪ್ಪ | 243/2 | 0–10 | 0–00 | 0–10 | 0–00 | ಖುಷ್ಕಿ | | | | | |
| 84 | ಸುನೀಲ್ ಕುಮಾರ್ ಬಿನ್ ಎಸ್ ವೀರಣ್ಣ | ಸುನೀಲ್ ಕುಮಾರ್ ಬಿನ್ ಎಸ್ ವೀರಣ್ಣ | 243/3 | 0–11 | 0–00 | 0–11 | 0–00 | ಖುಷ್ಕಿ | | | | | |
| 85 | ರವಿ ಕುಮಾರ್ ಬಿನ್ ಎಸ್ ವೀರಣ್ಣ | ರವಿ ಕುಮಾರ್ ಬಿನ್ ಎಸ್ ವೀರಣ್ಣ | 243/4 | 0–11 | 0–00 | 0–11 | 0–00 | ಖುಷ್ಕಿ | | | | | |
| 86 | ಶಾಂತಕುಮಾರ್ ಬಿನ್ ಎಸ್ ವೀರಣ್ಣ | ಶಾಂತಕುಮಾರ್ ಬಿನ್ ಎಸ್ ವೀರಣ್ಣ | 243/5 | 0–11 | 0–00 | 0–11 | 0–00 | ಖುಷ್ಕಿ | | | | | |
| 87 | ಎಂ.ಅವಲಪ್ಪ – ಮುನಿವೆಂಕಟಪ್ಪ | ಎಂ.ಅವಲಪ್ಪ – ಮುನಿವೆಂಕಟಪ್ಪ | 244 | 0–16 | 0–00 | 0–16 | 0–00 | ಖುಷ್ಕಿ | ಸ ನಂ. 222 | ಸ ನಂ. 178 | ಸ ನಂ. 178 | ಸ ನಂ. 175 ಕೆರೆ | |
| 88 | ಅನಿತ ಡಿ ಕೋಂ ಮಂಜುನಾಥ ಜಿ ವಿ | ಅನಿತ ಡಿ ಕೋಂ ಮಂಜುನಾಥ ಜಿ ವಿ | 245/1 | 0–25 | 0–00 | 0–25 | 0–00 | ಖುಷ್ಕಿ | ಸ ನಂ. 184 | ಸ ನಂ. 245/2 | ಸ ನಂ. 183/3 | ಸ ನಂ. 184 | |
| 89 | ಬಿಂದು ಲಕ್ಷ್ಮೀ ಡಿ ಕೋಂ ಎನ್ ಬಸವರಾಜು | ಬಿಂದು ಲಕ್ಷ್ಮೀ ಡಿ ಕೋಂ ಎನ್ ಬಸವರಾಜು | 245/2 | 0–15 | 0–00 | 0–15 | 0–00 | ಖುಷ್ಕಿ | ಸ ನಂ. 245/1 | ಸ ನಂ. 245/3 | ಸ ನಂ. 183/3 | ಸ ನಂ. 184 | |
| 90 | ಮೋಹನ್ ಡಿ ಬಿನ್ ದಾಸಪ್ಪ | ಮೋಹನ್ ಡಿ ಬಿನ್ ದಾಸಪ್ಪ | 245/3 | 1–00 | 0–00 | 1–00 | 0–00 | ಖುಷ್ಕಿ | ಸ ನಂ. 245/2 | ಸ ನಂ. 272 | ಸ ನಂ. 183/3 | ಸ ನಂ. 184 | |
| 91 | ಆಂಜಿನಯ್ಯ ಎಸ್ ಹೆಚ್ ಬಿನ್ ಲೇಟ್ ಹನುಮಂತಯ್ಯ | ಆಂಜಿನಯ್ಯ ಎಸ್ ಹೆಚ್ ಬಿನ್ ಲೇಟ್ ಹನುಮಂತಯ್ಯ | 249 | 0–16 | 0–00 | 0–16 | 0–00 | ಖುಷ್ಕಿ | ಸ ನಂ. 178 | ಸ ನಂ. 178 | ಎಸ್.ಟಿ. ಆರ್.ಆರ್. ರಸ್ತೆ | ಸ ನಂ. 178 | |
| 92 | ಬಿ ಉಮೇಶ್ ಬಿನ್ ಬಸಪ್ಪ<br>ಬಿ ಉಮೇಶ್ ಬಿನ್ ಬಸಪ್ಪ<br>ಎಸ್ ವೀರಣ್ಣ ಬಿನ್ ಲೇ ಸುಬ್ಬಣ್ಣ | ಬಿ ಉಮೇಶ್ ಬಿನ್ ಬಸಪ್ಪ<br>ಬಿ ಉಮೇಶ್ ಬಿನ್ ಬಸಪ್ಪ<br>ಎಸ್ ವೀರಣ್ಣ ಬಿನ್ ಲೇ ಸುಬ್ಬಣ್ಣ | 250 | 5–00 | 0–00 | 1–28<br>1–26<br>1–26 | 0–00 | ಖುಷ್ಕಿ | ಸ ನಂ. 178 | ಸ ನಂ. 178 | ಸ ನಂ. 251 | ಸ ನಂ. 178 | |
| 93 | ಲಕ್ಷ್ಮಣ ಬಿನ್ ಲೇ ಸುಬಣ್ಣ | ಲಕ್ಷ್ಮಣ ಬಿನ್ ಲೇ ಸುಬಣ್ಣ | 251 | 1–20 | 0–00 | 1–20 | 0–00 | ಖುಷ್ಕಿ | ಸ ನಂ. 178 | ಸ ನಂ. 178 | ಸ ನಂ. 253 | ಸ ನಂ. 250 | |
| 94 | ವೀರಣ್ಣ ಬಿನ್ ಸುಬ್ಬಣ್ಣ | ವೀರಣ್ಣ ಬಿನ್ ಸುಬ್ಬಣ್ಣ | 253 | 2–00 | 0–00 | 1–28.12 | 0–00 | ಖುಷ್ಕಿ | ಸ ನಂ. 178 | ಸ ನಂ. 178 | ಸ ನಂ. 178, ಎಸ್.ಟಿ. ಆರ್.ಆರ್. ರಸ್ತೆ | ಸ ನಂ. 251 | |
| 95 | ಅಶ್ವಥ ಬಿನ್ ತಮ್ಮಣ್ಣ – ಭೂ ಪ | ಅಶ್ವಥ ಬಿನ್ ತಮ್ಮಣ್ಣ – ಭೂ ಪ | 254/2 | 0–11.08 | 0–00 | 0–11.08 | 0–00 | ಖುಷ್ಕಿ | ಸ ನಂ. 256 | ಸ ನಂ. 255 | ಸ ನಂ. 254/1 | ಸ ನಂ. 255 | |
| 96 | ಜಯರಾಮಯ್ಯ ಬಿನ್ ಲೇ ಕೃಷ್ಣಪ್ಪ<br>ಸುಧಾ ಕೋಂ ಲೇ ಗೋಪಾಲ್ ಎಸ್ | ಜಯರಾಮಯ್ಯ ಬಿನ್ ಲೇ ಕೃಷ್ಣಪ್ಪ<br>ಸುಧಾ ಕೋಂ ಲೇ ಗೋಪಾಲ್ ಎಸ್ | 255/1 | 2–20 | 0–00 | 2–20 ಮೇಲಿನ ಜಂಟಿ | 0–00 | ಖುಷ್ಕಿ | ಸ ನಂ. 256 | ಸ ನಂ. 178 | ಸ ನಂ. 178 | ಸ ನಂ. 255/2 | |
| 97 | ಎಸ್ ವೀರಣ್ಣ ಬಿನ್ ಲೇ ಸುಬ್ಬಣ್ಣ<br>ಎಸ್ ವೀರಣ್ಣ ಬಿನ್ ಲೇ ಸುಬ್ಬಣ್ಣ – ಭೂ ಪ | ಎಸ್ ವೀರಣ್ಣ ಬಿನ್ ಲೇ ಸುಬ್ಬಣ್ಣ<br>ಎಸ್ ವೀರಣ್ಣ ಬಿನ್ ಲೇ ಸುಬ್ಬಣ್ಣ – ಭೂ ಪ | 255/2 | 2–20 | 0–00 | 2–00<br>0–20 | 0–00 | ಖುಷ್ಕಿ | ಸ ನಂ. 256 | ಸ ನಂ. 178 | ಸ ನಂ. 254/1,2 | ಸ ನಂ. 255/1 178 | |
| 98 | ಮದನ್ ರಾಜ್ ಲೇ ಲಾಲ್ ಚಂದ್ | ಮದನ್ ರಾಜ್ ಲೇ ಲಾಲ್ ಚಂದ್ | 256/2 | 1–21 | 0–00 | 1–21 | 0–00 | ಖುಷ್ಕಿ | ಸ ನಂ. 178 | ಸ ನಂ. 256/3 | ಸ ನಂ. 178 256/1 | ಸ ನಂ. 178 | |
| 99 | ಮದನ್ ರಾಜ್ ಲೇ ಲಾಲ್ ಚಂದ್ | ಮದನ್ ರಾಜ್ ಲೇ ಲಾಲ್ ಚಂದ್ | 256/3 | 1–22.04 | 0–00 | 1–22.04 | 0–00 | ಖುಷ್ಕಿ | ಸ ನಂ. 256/2 | ಸ ನಂ. 256/4 | ಸ ನಂ. 256/1 | ಸ ನಂ. 178 | |
| 100 | ಎಸ್ ವೀರಣ್ಣ ಬಿನ್ ಲೇ ಸುಬ್ಬಣ್ಣ | ಎಸ್ ವೀರಣ್ಣ ಬಿನ್ ಲೇ ಸುಬ್ಬಣ್ಣ | 256/4 | 1–27 | 0–00 | 1–27 | 0–00 | ಖುಷ್ಕಿ | ಸ ನಂ. 256/3 | ಸ ನಂ. 255 | ಸ ನಂ. 256/1 | ಸ ನಂ. 178 | |
| 101 | ಪಿಳ್ಳಮ್ಮ ಕೋಂ ಬಚ್ಚೇಗೌಡ | ಪಿಳ್ಳಮ್ಮ ಕೋಂ ಬಚ್ಚೇಗೌಡ | 257 | 0–37 | 0–00 | 0–37 | 0–00 | ಖುಷ್ಕಿ | ಸ ನಂ. 178 | ಚನ್ನಕೆಂಪನ ಹಳ್ಳಿ ಗ್ರಾಮದ ಗಡಿ | 178 | ಸ ನಂ. 178 | |
| | ಒಟ್ಟು | | | **163–38.04** | **01–03** | **162–35.04** | **01–03** | | | | | | |

ಘೋಷ್ವಾರೆ

| ಕ್ರ. ಸಂ | ಗ್ರಾಮಗಳು | ಒಟ್ಟು ವಿಸ್ತೀರ್ಣ ಎ–ಗು | | ಖರಾಬು ಎ–ಗು | | ಬಾಕಿ ವಿಸ್ತೀರ್ಣ ಎ–ಗು | |
|---|---|---|---|---|---|---|---|
| 1 | ವಿಶ್ವನಾಥಪುರ ಬ್ಲಾಕ್–2 | 163 | 38.04 | 01 | 03 | 162 | 35.04 |

ವಾಸಾಸಂಇ/ವಾಪ್ರ/ಜಿಎ/4998/2025–26

(ವಿ.ಸೂ: ಅಧಿಸೂಚನೆಯಲ್ಲಿ ತಿಳಿಸಿರುವಂತೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪಣಾ ಅರ್ಜಿಯಲ್ಲಿ ಅಂಚೆ ವಿಳಾಸ ಮತ್ತು ಮೊಬೈಲ್ ನಂಬರನ್ನು ತಪ್ಪದೇ ಸ್ಪಷ್ಟವಾಗಿ ನಮೂದಿಸಿ ಸಲ್ಲಿಸುವುದು)

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

Page-4


# ಮೋದಿ ಪದವಿ ಕುರಿತ ಟೀಕೆ: ಕೇಜ್ರಿವಾಲ್ ಮೇಲ್ಮನವಿ ವಜಾ

ಅಹಮದಾಬಾದ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಪದವಿ ವ್ಯಾಸಂಗ ಕುರಿತು ನೀಡಿದ ಹೇಳಿಕೆಗಾಗಿ ದಾಖಲಾದ ಮಾನನಷ್ಟ ಪ್ರಕರಣದ ವಿಚಾರಣೆಯನ್ನು ಪ್ರತ್ಯೇಕವಾಗಿ ನಡೆಸುವಂತೆ ಕೋರಿದ್ದ ಅರ್ಜಿ ವಿಚಾರಣೆಗೆ ನಿರಾಕರಿಸಿದ್ದ ಕೆಳನ್ಯಾಯಾಲಯಗಳ ಆದೇಶ ವನ್ನು ಪ್ರಶ್ನಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕರಾದ ಅರವಿಂದ ಕೇಜ್ರಿವಾಲ್ ಮತ್ತು ಸಂಜಯ್‌ಸಿಂಗ್ ಸಲ್ಲಿಸಿದ್ದ ಮೇಲ್ಮ-ನವಿಯನ್ನು ಗುಜರಾತ್ ಹೈಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ಮಾಜಿ ಮುಖ್ಯಮಂತ್ರಿ ಕೇಜ್ರಿವಾಲ್, ರಾಜ್ಯಸಭಾ ಸದಸ್ಯ ಸಂಜಯ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಗೆ ನ್ಯಾಯಮೂರ್ತಿ ಎಂ.ಆರ್. ಮೆಂಗಡೆ ಅವರ ಏಕಸದಸ್ಯ ಪೀಠ ನಿರಾಕರಿಸಿತು.

ಪ್ರಧಾನಿ ಮೋದಿ ಅವರ ಪದವಿ ವ್ಯಾಸಂಗಕ್ಕೆ ಸಂಬಂಧಿಸಿ ಎಎಪಿ ನಾಯಕರು ವಿಶ್ವವಿದ್ಯಾಲಯದ ಕುರಿತು ವ್ಯಂಗ್ಯ ಮತ್ತು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಗುಜರಾತ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಪೀಯೂಷ್ ಪಾಟೀಲ್ ಮಾನನಷ್ಟ ದೂರು ನೀಡಿದ್ದರು.

ತಮ್ಮ ವಿರುದ್ಧದ ಆರೋಪಗಳು ವಿಭಿನ್ನ ವಾಗಿವೆ ಮತ್ತು ಘಟನೆ ನಡೆದ ದಿನಾಂಕಗಳು ಬೇರೆ ಬೇರೆಯಾಗಿವೆ ಎನ್ನುವುದೂ ಸೇರಿದಂತೆ ವಿವಿಧ ವಿಚಾರಗಳ ಆಧಾರದಲ್ಲಿ ಇಬ್ಬರ ವಿಚಾರಣೆಯನ್ನು ಪ್ರತ್ಯೇಕವಾಗಿ ನಡೆಸಬೇಕು ಎಂದು ಕೇಜ್ರಿವಾಲ್ ಮತ್ತು ಸಂಜಯ್ ಕೋರಿ ದ್ದರು. ಅವರಿಬ್ಬರ ಮನವಿಯನ್ನು ನಗರ ಮತ್ತು ಸೆಷನ್ಸ್ ನ್ಯಾಯಾಲಯಗಳು ತಿರಸ್ಕರಿಸಿದ್ದವು.

ಇಬ್ಬರ ವಿರುದ್ಧದ ಪ್ರಕರಣಗಳು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 500ರ ವ್ಯಾಪ್ತಿಗೆ ಬರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ನ್ಯಾಯಾಲಯ ಇಬ್ಬರಿಗೂ ಸಮನ್ಸ್ ಜಾರಿಗೊಳಿಸಿದೆ.

# ಶಬರಿಮಲೆ ಮಕರವಿಳಕ್ಕು ಉತ್ಸವ: ಭದ್ರತೆ

ಪತ್ತನಂತಿಟ್ಟ (ಕೇರಳ) (ಪಿಟಿಐ): ಶಬರಿಮಲೆ ಅಯ್ಯಪ್ಪ ದೇವಾಲಯದ ವಾರ್ಷಿಕ ಮಕರವಿಳಕ್ಕು ಉತ್ಸವ ಬುಧವಾರ ನಡೆಯಲಿದ್ದು, ಪೂರ್ವಭಾವಿಯಾಗಿ ವ್ಯಾಪಕ ಭದ್ರತೆ ಕೈಗೊಳ್ಳಲಾಗಿದೆ.

ಹಬ್ಬದ ದಿನ ದೇವಾಲಯದಲ್ಲಿ ಸುಮಾರು 2000 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುವುದು ಎಂದು ದೇವಾಲಯವನ್ನು ನಿರ್ವಹಿಸುವ ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಮಂಗಳವಾರ ಹೇಳಿದೆ.

'ಹೈಕೋರ್ಟ್ ಆದೇಶದಂತೆ, ಮಕರ ವಿಳಕ್ಕು ದಿನದಂದು ಸನ್ನಿಧಾನಂ (ದೇವಾಲಯ ಸಂಕೀರ್ಣ) ಪ್ರವೇಶವನ್ನು ವರ್ಚುವಲ್ ಕ್ಯೂ ವ್ಯವಸ್ಥೆಯ ಮೂಲಕ 30,000 ಯಾತ್ರಾರ್ಥಿ ಗಳಿಗೆ ಮತ್ತು ಸ್ಪಾಟ್ ಬುಕಿಂಗ್ ಮೂಲಕ 5000 ಯಾತ್ರಾರ್ಥಿಗಳಿಗೆ ಮಾತ್ರ ಅವಕಾಶ ನೀಡಲಾಗುತ್ತದೆ' ಎಂದು ಅದು ಹೇಳಿದೆ.

ಸನ್ನಿಧಾನಂ, ಪಂಪಾ ಮತ್ತು ಇತರ ಸೂಕ್ಷ್ಮ ಸ್ಥಳಗಳಲ್ಲಿ ಅಗ್ನಿಶಾಮಕ, ಆಂಬುಲೆನ್ಸ್‌ಗಳು ಮತ್ತು ಇತರ ರಕ್ಷಣಾ ಸೇವೆಗಳ ಘಟಕಗಳ ತಂಡಗಳನ್ನು 31 ವಾಹನಗಳೊಂದಿಗೆನಿಯೋಜಿಸಲಾಗಿದೆ.

ಬುಧವಾರ • ಜನವರಿ 14, 2026
ಪ್ರಜಾವಾಣಿ

ಚಿಟಿಕೆ ಸುದ್ದಿ

## ಭೀಮಣ್ಣ ಖಂಡ್ರೆ ಮತ್ತಷ್ಟು ಚೇತರಿಕೆ

ಭಾಲ್ಕಿ (ಬೀದರ್ ಜಿಲ್ಲೆ): ವಯೋಸಹಜ ಅನಾರೋಗ್ಯದಿಂದ ಬಳಲುತ್ತಿರುವ ಮಾಜಿ ಸಚಿವ ಭೀಮಣ್ಣ ಖಂಡ್ರೆ ಅವರ ಆರೋಗ್ಯದಲ್ಲಿ ಮಂಗಳವಾರ ಮತ್ತಷ್ಟು ಚೇತರಿಕೆ ಕಂಡುಬಂದಿದೆ.

'ಮನೆಯಲ್ಲಿಯೇ ಉಪಚಾರ ಮಾಡಲಾಗುತ್ತಿದೆ. ಸೋಮವಾರಕ್ಕೆ ಹೋಲಿಸಿದರೆ ಮಂಗಳವಾರ ಅವರ ಆರೋಗ್ಯದಲ್ಲಿ ಸುಧಾರಣೆ ಆಗಿದೆ' ಎಂದು ವೈದ್ಯರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಸಾಮಾಜಿಕ ಜಾಲತಾಣಗಳಲ್ಲಿ ತಂದೆಯವರ ಕುರಿತು ವದಂತಿ ಹರಡಲಾಗುತ್ತಿದೆ. ಯಾರೂ ಕಿವಿಗೊಡಬಾರದು' ಎಂದು ಪುತ್ರ, ಸಚಿವ ಈಶ್ವರ ಬಿ. ಖಂಡ್ರೆ ಅವರು ಕೋರಿದ್ದಾರೆ.

## ₹1.26 ಲಕ್ಷ ಮೌಲ್ಯದ ಗೋವಾ ಮದ್ಯ ವಶ

ಕಾರವಾರ: ಜೀಪ್‌ನಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ₹1.26ಲಕ್ಷ ಮೌಲ್ಯದ ಗೋವಾ ಮದ್ಯವನ್ನು ತಾಲ್ಲೂಕಿನ ಚೆಂಡಿಯಾದ ಐಸ್ ಫ್ಯಾಕ್ಟರಿ ಸಮೀಪ ಸೋಮವಾರ ರಾತ್ರಿ ಚಿತ್ತಾಕುಲ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಗೋವಾದಿಂದ ಅಕ್ರಮವಾಗಿ ವಾಹನದಲ್ಲಿ ಸಾಗಿಸುತ್ತಿದ್ದ ವಿವಿಧ ಬ್ರ್ಯಾಂಡುಗಳ ಮದ್ಯ ದಾಸ್ತಾನನ್ನು ವಶಕ್ಕೆ ಪಡೆಯಲಾಗಿದೆ. ಸಾಗಾಟ ಮಾಡುತ್ತಿದ್ದ ಹುಬ್ಬಳ್ಳಿಯ ನೆಹರು ನಗರದ ನಾರಾಯಣ ಗಜಾನನ ದಲಬಂಜನ್ (30) ಎಂಬಾತನನ್ನು ಬಂಧಿಸಲಾಗಿದೆ. ಆತ ಸಾಗಾಟಕ್ಕೆ ಬಳಸಿದ್ದ ವಾಹನ ಮತ್ತು ಮದ್ಯ ದಾಸ್ತಾನನ್ನು ವಶಕ್ಕೆ ಪಡೆದಿದ್ದೇವೆ' ಎಂದು ಪೊಲೀಸರು ತಿಳಿಸಿದ್ದಾರೆ.

## ವೀರಪ್ಪನ್–ಸಂತ್ರಸ್ತರ ಪರಿಹಾರ ಬಾಕಿ: ನೋಟಿಸ್

ಬೆಂಗಳೂರು: 'ಕಾಡುಗಳ್ಳ ವೀರಪ್ಪನ್ ಸೆರೆಹಿಡಿಯುವ ಕಾರ್ಯಾಚರಣೆ ವೇಳೆ ಕರ್ನಾಟಕ-ತಮಿಳುನಾಡು ಜಂಟಿ ವಿಶೇಷ ಕಾರ್ಯಪಡೆಯ (ಜೆಎಸ್‌ಟಿಎಫ್) ಕಿರುಕುಳಕ್ಕೆ ಒಳಗಾದ 89 ಸಂತ್ರಸ್ತರಿಗೆ ನೀಡಬೇಕಿರುವ ಬಾಕಿ ಪರಿಹಾರ ಮೊತ್ತವನ್ನು ಬಿಡುಗಡೆ ಮಾಡಲು ಕರ್ನಾಟಕ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂಬ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸಂತ್ರಸ್ತರ ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿರುವ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ಕೊಳತ್ತೂರು ವ್ಯಾಪ್ತಿಯಲ್ಲಿರುವ ಚಿನ್ನತಾಂಡದ 'ವಿಡಿಯಾಳ್ ಪೀಪಲ್ ವೆಲ್ಫೇರ್ ಫೌಂಡೇಷನ್' ವ್ಯವಸ್ಥಾಪಕ ನಿರ್ದೇಶಕ ಮುರುಗೇಶನ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ. ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ಪ್ರತಿವಾದಿ ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಲು ನಿರ್ದೇಶಿಸಿ ವಿಚಾರಣೆಯನ್ನು ಫೆಬ್ರವರಿ 11ಕ್ಕೆ ಮುಂದೂಡಲಾಗಿದೆ.

## ಶಾಸಕ ಸತೀಶ್ ಸೈಲ್ ಜಾಮೀನು: ಏಮ್ಸ್‌ಗೆ ನಿರ್ದೇಶನ

ಬೆಂಗಳೂರು: 'ಅಕ್ರಮವಾಗಿ ಅದಿರು ಸಾಗಣೆ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಆಸ್ಪತ್ರೆಯಲ್ಲಿರುವ ಅಗತ್ಯವಿದೆಯೇ ಅಥವಾ ಅವರಿಗೆ ಕಸ್ಟಡಿಯಲ್ಲೇ ಚಿಕಿತ್ಸೆ ನೀಡಬಹುದೇ ಎಂಬ ಬಗ್ಗೆ ವರದಿ ನೀಡಿ' ಎಂದು ಹೈಕೋರ್ಟ್, ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ (ಏಮ್ಸ್) ನಿರ್ದೇಶಿಸಿದೆ.



ಈ ಸಂಬಂಧ ಸತೀಶ್ ಸೈಲ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸತೀಶ್ ಸೈಲ್ ಪರ ವಕೀಲರು, ಏಮ್ಸ್ ವೈದ್ಯರು ಇದೇ 21ರಂದು ವೈದ್ಯಕೀಯ ತಪಾಸಣೆಗೆ ಒಳಗಾಗಲು ಅರ್ಜಿದಾರರಿಗೆ ಸೂಚಿಸಿದ್ದಾರೆ' ಎಂದು ನ್ಯಾಯಪೀಠಕ್ಕೆ ಅರುಹಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ ಈಗಾಗಲೇ ಮಂಜೂರು ಮಾಡಲಾಗಿರುವ ವೈದ್ಯಕೀಯ ಮಧ್ಯಂತರ ಜಾಮೀನನ್ನು ವಿಸ್ತರಿಸಿ ಆದೇಶಿಸಿತು.

**ಕೋರಿಕೆ ಏನು?:** 'ಅಕ್ರಮ ಹಣ ವರ್ಗಾವಣೆ ಆರೋಪದಡಿ ಇ.ಡಿ ದಾಖಲಿಸಿರುವ ಇಸಿಐಆರ್‌ಗೆ (ಜಾರಿ ನಿರ್ದೇಶನಾಲಯ ಪ್ರಕರಣದ ಮಾಹಿತಿ ವರದಿ) ಸಂಬಂಧಿಸಿದಂತೆ ನೀಡಲಾಗಿದ್ದ ಮಧ್ಯಂತರ ವೈದ್ಯಕೀಯ ಜಾಮೀನನ್ನು ಜನಪ್ರತಿನಿಧಿಗಳ ಸೆಷೆನ್ಸ್ ನ್ಯಾಯಾಲಯ ರದ್ದುಪಡಿಸಿದೆ ಹಾಗೂ ಜಾಮೀನು ರಹಿತ ಬಂಧನದ ವಾರಂಟ್ ಹೊರಡಿಸಿದೆ. ನಾನು ಜಠರ ಮತ್ತು ಕರುಳಿಗೆ ಸಂಬಂಧಿಸಿದ ಕಾಯಿಲೆಯಿಂದ ಬಳಲುತ್ತಿದ್ದು ಹೆಚ್ಚಿನ ಚಿಕಿತ್ಸೆಗಾಗಿ ನಿಯಮಿತ (ರೆಗ್ಯುಲರ್) ಜಾಮೀನು ನೀಡಬೇಕು' ಎಂದು ಸೈಲ್ ಕೋರಿದ್ದಾರೆ.

# ನರೇಗಾ: 4 ತಿಂಗಳಿಂದ ಸಿಗದ ವೇತನ

### ಕೇಂದ್ರ–ರಾಜ್ಯದ ಹಗ್ಗಜಗ್ಗಾಟ; ಗುತ್ತಿಗೆಯಡಿ ನೇಮಕವಾದ 5,400 ಸಿಬ್ಬಂದಿಗೆ ಆತಂಕ

• ಪ್ರಮೋದ ಕುಲಕರ್ಣಿ

**ಮುಖ್ಯಾಂಶಗಳು**

- 2,400 ಗ್ರಾಮ ಕಾಯಕ-ಮಿತ್ರರಿಗೂ ಗೌರವಧನ ಬಾಕಿ
- ನಾಲ್ಕು ತಿಂಗಳಿಂದ ಬಾರದ ವೇತನ
- ಒಂದು ವರ್ಷದಿಂದ ಬಾಕಿ ಉಳಿದ ಪ್ರವಾಸ ಭತ್ಯೆ

ಕೊಪ್ಪಳ: ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಕಾಯ್ದೆಯ ಹೆಸರು, ಸ್ವರೂಪ ಬದಲಾವಣೆ ಬಳಿಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ತಿಕ್ಕಾಟ ನಡೆಯುತ್ತಿದ್ದರೆ, ಇನ್ನೊಂದೆಡೆ ಈ ಯೋಜನೆಯಡಿ ಕೆಲಸ ಮಾಡುತ್ತಿರುವ ರಾಜ್ಯದ 5,400ಕ್ಕೂ ಹೆಚ್ಚು ಅಧಿಕಾರಿಗಳು, ಸಿಬ್ಬಂದಿ ನಾಲ್ಕು ತಿಂಗಳಿಂದ ವೇತನ ವಿಲ್ಲದೆ ಪರದಾಡುತ್ತಿದ್ದಾರೆ.



ರಾಜ್ಯ ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳ ನಡುವೆ ಹೊಂದಾಣಿಕೆ ಕೊರತೆ, ನಿಗದಿತ ಸಮಯದಲ್ಲಿ ಸರಿಯಾಗಿ ಪತ್ರ ವ್ಯವಹಾರ ನಡೆಯದ್ದರಿಂದ ಈ ಸಮಸ್ಯೆಯು ನಿರಂತರವಾಗಿದೆ ಎಂದು ಸಿಬ್ಬಂದಿ ಅಳಲು ತೋಡಿಕೊಂಡಿದ್ದಾರೆ. ಕಳೆದ ಒಂದು ವರ್ಷದಿಂದ ಪ್ರಯಾಣ ಭತ್ಯೆ ಕೂಡಾ ಪಾವತಿಯಾಗದ ಕಾರಣ ಸಿಬ್ಬಂದಿಯು ನಿತ್ಯ ಕಚೇರಿ ಮತ್ತು ಕ್ಷೇತ್ರ ಭೇಟಿ ಮಾಡಲೂ ಸಮಸ್ಯೆ ಎದುರಿಸುತ್ತಿದ್ದಾರೆ.

ಗ್ರಾಮೀಣಾಭಿವೃದ್ಧಿಯಲ್ಲಿ ಉದ್ಯೋಗ ಖಾತರಿ ಯೋಜನೆಯು ಮಹತ್ತರ ಪಾತ್ರ ವಹಿಸಿದೆ. ಕೂಲಿಕಾರರಿಗೆ ನರೇಗಾ ಕೆಲಸ ಕೊಡಿಸುವುದು, ಯೋಜನೆಯಡಿ ಶಾಲಾ ಅಭಿವೃದ್ಧಿ ಕಾಮಗಾರಿಗಳು ಹಾಗೂ ಹಳ್ಳಿಗಳಲ್ಲಿ ಆಸ್ತಿ ಸೃಜನೆಗಳಲ್ಲಿ ನರೇಗಾ ನೌಕರರು ಪ್ರಮುಖ ಪಾತ್ರ ನಿರ್ವಹಿಸಿದರೂ ಅವರ ಬೇಡಿಕೆಗಳು ಈಡೇರುತ್ತಿಲ್ಲ.

> ಕೇಂದ್ರ ಸರ್ಕಾರ ನರೇಗಾ ಯೋಜನೆಯಡಿ ರಾಜ್ಯಕ್ಕೆ ₹16,000 ಕೋಟಿ ಬಾಕಿ ಕೊಡಬೇಕು. ಎರಡು ಬಾರಿ ಪತ್ರ ಬರೆದಿದ್ದೇನೆ. ಪ್ರತಿಕ್ರಿಯಿಸಿಲ್ಲ. ಕೇಂದ್ರದಿಂದ ಬಾಕಿ ಬಂದರೆ ಸಿಬ್ಬಂದಿ ವೇತನ ಕೊಡಬಹುದು
>
> **ಪ್ರಿಯಾಂಕ್ ಖರ್ಗೆ,** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

ಯೋಜನೆಯಡಿ ರಾಜ್ಯದಲ್ಲಿ 28 ಸಹಾಯಕ ಜಿಲ್ಲಾ ಕಾರ್ಯಕ್ರಮ ಸಂಯೋಜಕರು, ಐಇಸಿ ಸಂಯೋಜಕರು, 27 ಡಿಎಂಐಎಸ್, 27 ಜಿಲ್ಲಾ ಲೆಕ್ಕದ ವ್ಯವಸ್ಥಾಪಕರು, ಡಿಇಒ, ತಾಲ್ಲೂಕು ಹಂತದಲ್ಲಿ 209 ತಾಂತ್ರಿಕ ಸಂಯೋಜಕರು, 152 ಆಡಳಿತ ಸಹಾಯಕರು, ಸಿವಿಲ್, ತೋಟಗಾರಿಕೆ, ರೇಷ್ಮೆ, ಅರಣ್ಯ ಹಾಗೂ ಕೃಷಿ ಹೀಗೆ ವಿವಿಧೆಡೆ 1,799 ತಾಂತ್ರಿಕ ಸಹಾಯಕರು ಕೆಲಸ ಮಾಡುತ್ತಿದ್ದಾರೆ. ಅಲ್ಲದೆ, ಗ್ರಾಮ ಪಂಚಾಯಿತಿಗಳಲ್ಲಿ ನರೇಗಾ ಯೋಜನೆಯಡಿ ಗೌರವಧನದ ಆಧಾರದ 2,400 ಗ್ರಾಮ ಕಾಯಕ ಮಿತ್ರರಿಗೂ ಗೌರವಧನ ಪಾವತಿಯಾಗಿಲ್ಲ.

ಇದೇ ಕಾಯಕ ನಂಬಿಕೊಂಡಿರುವ ಸಿಬ್ಬಂದಿಗೆ ಕುಟುಂಬ ನಿರ್ವಹಣೆ, ಮಕ್ಕಳ ವಿದ್ಯಾಭ್ಯಾಸ, ಆಸ್ಪತ್ರೆ ಖರ್ಚು ವೆಚ್ಚಗಳು, ಇಎಂಐ ಪಾವತಿಗೆ ತೊಡಕು ಅಲ್ಲದೆ, ನಿತ್ಯ ಕಚೇರಿಗೆ ಹೋಗಿ ಬರಲು ಪರದಾಡುವಂತಾಗಿದೆ.

> ವೇತನವಿಲ್ಲದೆ ನರೇಗಾ ಗುತ್ತಿಗೆ ನೌಕರರು, ಸಿಬ್ಬಂದಿ ಬದುಕು ನರಕವಾಗಿದೆ. ದಿನ ಕಳೆಯುವುದೂ ಕಷ್ಟವಾಗಿದೆ. ವೇತನ ಬಿಡುಗಡೆ, ನೌಕರರ ಭವಿಷ್ಯ ಕುರಿತು ತೀರ್ಮಾನಿಸಲಿ
>
> **ಸುರೇಶ ಬಾಳಿಕಾಯಿ,** ಉಪಾಧ್ಯಕ್ಷ, ರಾಜ್ಯ ನರೇಗಾ ನೌಕರರ ಕ್ಷೇಮಾಭಿವೃದ್ಧಿ ಸಂಘ

'ನಾಲ್ಕು ತಿಂಗಳಿಂದ ವೇತನ, ಒಂದು ವರ್ಷದಿಂದ ಪ್ರವಾಸ ಭತ್ಯೆ ಕೊಟ್ಟಿಲ್ಲ. ಕೆಲಸದ ಒತ್ತಡವೂ ಹೆಚ್ಚಿದೆ. ಸಾಲ ಮಾಡಿ ಜೀವನ ನಡೆಸುತ್ತಿದ್ದೇವೆ' ಎಂಬುದು ಹೆಸರು ಹೇಳಬಯಸದ ಸಿಬ್ಬಂದಿಯೊಬ್ಬರ ಅಳಲು.

'ನರೇಗಾ ಬದಲಿಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಬಿ-ಜಿ ರಾಮ್ ಜಿ ಕಾಯ್ದೆಯ ಬಗ್ಗೆ ಚರ್ಚಿಸಲು ಬುಧವಾರ ಸಂಪುಟದ ವಿಶೇಷ ತುರ್ತುಸಭೆ ನಡೆಯಲಿದ್ದು, ಸಿಬ್ಬಂದಿಗೆ ವೇತನ ಪಾವತಿ ಆಗದಿರುವ ಕುರಿತು ಅಲ್ಲಿ ಚರ್ಚಿಸಿ, ಸಿಬ್ಬಂದಿಯ ಭವಿಷ್ಯ ಕುರಿತೂ ಸರ್ಕಾರ ಸ್ಪಷ್ಟಪಡಿಸಲಿ' ಎಂದೂ ಕೋರಿದರು.

## ದಾಖಲೆಯಲ್ಲಿ ರೈತನ 'ಸಾವು' ಅಧಿಕಾರಿಗಳ ಮೇಲೆ ಕೇಸ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ರೈತ ಬದುಕಿದ್ದಾಗಲೇ ಸತ್ತಿರುವುದಾಗಿ ಎಂದು ದಾಖಲೆ ಸೃಷ್ಟಿಸಿ, ದೃಢೀಕರಿಸಿದ ಆರೋಪದಡಿ ನಾಲ್ವರು ಅಧಿಕಾರಿಗಳ ವಿರುದ್ಧ ಲೋಕಾಯುಕ್ತರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.

ಜಿಲ್ಲೆಯ ಸವದತ್ತಿ ತಾಲ್ಲೂಕಿನ ಸುತಗಟ್ಟಿ ಗ್ರಾಮದ ರೈತ ಈರಪ್ಪ ನಾಗಪ್ಪ ಅಬ್ಬಾಯಿ ಎಂಬುವರು ಇನ್ನೂ ಬದುಕಿದ್ದಾರೆ. ಆದರೆ, 2021ರಲ್ಲೇ ಅವರು ಸತ್ತಿದ್ದಾರೆ ಎಂದು ಅವರ ದಾಖಲೆಗಳಲ್ಲಿ ದೃಢೀಕರಿಸಲಾಗಿದೆ. ಕಳೆದ ಐದು ವರ್ಷಗಳಿಂದ ರೈತನಿಗೆ ಈ ವಿಷಯ ಗೊತ್ತಿಲ್ಲದೇ ಸರ್ಕಾರಿ ಯೋಜನೆಗಳಿಂದ ವಂಚಿತರಾಗಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಯ ಬುಧವಾರದ ಸಂಚಿಕೆಯಲ್ಲಿ 'ದಾಖಲೆಯಲ್ಲೂ 'ಬದುಕಲು' ರೈತನ ಹೋರಾಟ' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ಇದನ್ನು ಆಧರಿಸಿ ದೂರು ದಾಖಲಿಸಿ ಕೊಂಡಿರುವುದಾಗಿ ಉಪ ಲೋಕಾಯುಕ್ತ ನ್ಯಾಯಮೂರ್ತಿ ವೀರಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲೋಪ ಎಸಗಿದ ಸುತಗಟ್ಟಿ ಗ್ರಾಮ ಆಡಳಿತಾಧಿಕಾರಿ ನೀಲಾ ಮುರಗೋಡ, ಮುರಗೋಡ ವೃತ್ತದ ಕಂದಾಯ ನಿರೀಕ್ಷಕ ಆರ್.ಎಸ್. ಪಾಟೀಲ, ಸವದತ್ತಿ ತಹಶೀಲ್ದಾರ ಮಲ್ಲಿಕಾರ್ಜುನ ಹೆಗ್ಗನ್ನವರ, ಬೈಲಹೊಂಗಲ ಉಪವಿಭಾಗಾಧಿಕಾರಿ ಪ್ರವೀಣ ಜೈನ್ ಅವರ ಮೇಲೆ ದೂರು ದಾಖಲಿಸಿಕೊಂಡು, ವಿಚಾರಣೆ ಮುಂದುವರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

### ಜ.26ರಂದು ಸನ್ಮಾನ, ಅಂದೇ ನೆರವು ವಿವರ ಪ್ರಕಟ: ಸಚಿವ ಎಚ್‌.ಕೆ.ಪಾಟೀಲ

# ನಿಧಿ ಒಪ್ಪಿಸಿದ ಕುಟುಂಬಕ್ಕೆ ಅಗತ್ಯ ನೆರವು

ಪ್ರಜಾವಾಣಿ ವಾರ್ತೆ

ಗದಗ: 'ರಿತ್ತಿ ಅವರ ಜಾಗದಲ್ಲಿ ಸಿಕ್ಕ ನಿಧಿಯಲ್ಲಿ 466 ಗ್ರಾಂ ತೂಕದಷ್ಟು ಚಿನ್ನಾಭರಣ ಇದ್ದವು. ಅವು ಜಿಲ್ಲಾಡಳಿತದ ವಶದಲ್ಲಿವೆ. ಇದು ಬೆಳಕಿಗೆ ಬರಲು ಕಾರಣನಾದ 14 ವರ್ಷದ ಪ್ರಜ್ವಲ್ ರಿತ್ತಿ ಪ್ರಾಮಾಣಿಕತೆ ಅನುಕರಣೀಯ' ಎಂದು ಸಚಿವ ಎಚ್.ಕೆ.ಪಾಟೀಲ ಮಂಗಳವಾರ ಇಲ್ಲಿ ಹೇಳಿದರು.

ನಿಧಿಗೆ ಸಂಬಂಧಿಸಿ ಲಕ್ಕುಂಡಿಯ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ವಿಷಯ ಮುಖ್ಯಮಂತ್ರಿ ಅವರ ಗಮನಕ್ಕೆ ಬಂದಾಗ, ನಿಧಿ ಎಷ್ಟೇ ಇರಲಿ. ಪ್ರಾಮಾಣಿಕವಾಗಿ ಅದನ್ನು ಸರ್ಕಾರಕ್ಕೆ ಒಪ್ಪಿಸಿದ ಬಾಲಕನ ನಡೆ ನಿಧಿಗಿಂತಲೂ ದೊಡ್ಡದೆಂದು ಶ್ಲಾಘಿಸಿದರು' ಎಂದರು.

'ಜ.26ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ರಿತ್ತಿ ಕುಟುಂಬದವರನ್ನು ಜಿಲ್ಲಾಡಳಿತ ಸನ್ಮಾನಿಸಲಿದೆ. ನೆರವು ನೀಡುವ ಕುರಿತು ಸಂಪುಟ ಸಭೆಯಲ್ಲಿ ಚರ್ಚಿಸಲಿದ್ದು, ಈ ಮಾಹಿತಿಯನ್ನು ಅಂದೇ ಪ್ರಕಟಿಸಲಾಗುವುದು' ಎಂದರು.

ನಿಧಿ ಒಪ್ಪಿಸಿದ ಪ್ರಜ್ವಲ್ ರಿತ್ತಿ, ತಾಯಿ ಗಂಗವ್ವ ಬಸವರಾಜ ರಿತ್ತಿ ಮತ್ತು ಅವರ ಅಜ್ಜಿಯನ್ನು ಸಚಿವ ಎಚ್‌.ಕೆ.ಪಾಟೀಲ ಮಂಗಳವಾರ ಲಕ್ಕುಂಡಿಯಲ್ಲಿ ಸನ್ಮಾನಿಸಿದರು

'ರಾಷ್ಟ್ರಕೂಟರು, ಚಾಲುಕ್ಯರು ಆಳ್ವಿಕೆಯ ಐತಿಹಾಸಿಕ ಹಿನ್ನೆಲೆಯುಳ್ಳ ಲಕ್ಕುಂಡಿ ವಿಶಿಷ್ಟ ಸ್ಥಳ. ಈಗ ಸಿಕ್ಕಿರುವ ನಿಧಿಯನ್ನು ವಸ್ತುಸಂಗ್ರಹಾಲಯದಲ್ಲಿ ಇಡಲಾಗುವುದು. ಲಕ್ಕುಂಡಿಯ ಪ್ರಾಚ್ಯಾವಶೇಷ ಸಂಗ್ರಹ ಅಭಿಯಾನ ನಡೆಸಿದಾಗ ಗ್ರಾಮಸ್ಥರು ಈಗಾಗಲೇ 1,100ಕ್ಕೂ ಹೆಚ್ಚು ಪ್ರಾಚ್ಯವಸ್ತುಗಳನ್ನು ಒಪ್ಪಿಸಿದ್ದಾರೆ' ಎಂದರು.

> ರಿತ್ತಿ ಅವರ ಕುಟುಂಬಕ್ಕೆ ಎಷ್ಟು ಗೌರವ ಸಲ್ಲಿಸಿದರೂ ಕಡಿಮೆ. ಅವರಾಗಿ ಏನೂ ಕೇಳಿಲ್ಲ. ಅವರಿಗೆ ಮನೆ ಕಟ್ಟಿಕೊಡುವ ಹಾಗೂ ತಾಯಿ ಕಸ್ತೂರವ್ವಗೆ ಕೆಲಸ ಕೊಡುವ ಬಗ್ಗೆ ಚರ್ಚಿಸುತ್ತೇವೆ
>
> **ಎಚ್.ಕೆ.ಪಾಟೀಲ,** ಜಿಲ್ಲಾ ಉಸ್ತುವಾರಿ ಸಚಿವ

ನಿಧಿ ಒಪ್ಪಿಸಿದ ಪ್ರಜ್ವಲ್ ರಿತ್ತಿ, ತಾಯಿ ಗಂಗವ್ವ ಬಸವರಾಜ ರಿತ್ತಿ ಹಾಗೂ ಅಜ್ಜಿಗೆ ಜಿಲ್ಲಾಡಳಿತದಿಂದ ಸನ್ಮಾನಿಸಲಾಯಿತು. ಲಕ್ಕುಂಡಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ, ಸದಸ್ಯ ಸಿದ್ದು ಪಾಟೀಲ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಭಾರತೀಯ ಪುರಾತತ್ವ ಇಲಾಖೆಯ ಅಧಿಕಾರಿ ರಮೇಶ ಮೂಲಿಮನಿ ಇದ್ದರು.

# ವಿಜಯೇಂದ್ರ ಸ್ಥಾನ ಸದ್ಯ ಅಭಾಧಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಇದೇ 20ರಂದು ಚುನಾವಣೆ ನಡೆಯಲಿದ್ದು, ರಾಷ್ಟ್ರೀಯ ಕಾರ್ಯಾಧ್ಯಕ್ಷ ನಿತಿನ್ ನಬಿನ್ ಅವರು ನೂತನ ಅಧ್ಯಕ್ಷರಾಗಲು ವೇದಿಕೆ ಸಿದ್ಧವಾಗಿದೆ.

ರಾಷ್ಟ್ರೀಯ ಅಧ್ಯಕ್ಷರ ಚುನಾವಣೆಗೆ ಮುನ್ನ ಪ್ರಮುಖ ರಾಜ್ಯಗಳಾದ ಉತ್ತರ ಪ್ರದೇಶ, ಬಿಹಾರ, ಗುಜರಾತ್, ಮಧ್ಯಪ್ರದೇಶ ಸೇರಿದಂತೆ 30 ರಾಜ್ಯಗಳಲ್ಲಿ ರಾಜ್ಯ ಘಟಕಕ್ಕೆ ನೂತನ ಸಾರಥಿಗಳ ನೇಮಕವಾಗಿದೆ. ಪ್ರಮುಖ ರಾಜ್ಯಗಳ ಪೈಕಿ ಕರ್ನಾಟಕವಷ್ಟೇ ಉಳಿದಿದೆ. 19ಕ್ಕೆ ಮುನ್ನ ರಾಜ್ಯ ಘಟಕಕ್ಕೆ ಚುನಾವಣೆ ನಡೆಯುವ ಸಾಧ್ಯತೆ ಕಡಿಮೆ. ಅಧ್ಯಕ್ಷರಾಗಿ ಎರಡು ವರ್ಷ ಪೂರ್ಣಗೊಳಿಸಿರುವ ಬಿ.ವೈ. ವಿಜಯೇಂದ್ರ ಅವರನ್ನು ಇನ್ನಷ್ಟು ಸಮಯ ಮುಂದುವರಿಸಲು ವರಿಷ್ಠರು ಒಲವು ತೋರಿದ್ದಾರೆ.



ವಿಜಯೇಂದ್ರ

'ವಿಜಯೇಂದ್ರ ಸಾಧನೆ ನೋಡಿಕೊಂಡು 2028ರ ವಿಧಾನಸಭಾ ಚುನಾವಣೆಗೆ ಮುನ್ನ ವರಿಷ್ಠರು ನಾಯಕತ್ವದ ಬಗ್ಗೆ ನಿರ್ಧಾರ ತೆಗೆದು ಕೊಳ್ಳಲಿದ್ದಾರೆ' ಎಂದು ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದರು.

'ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂಬುದು ವಿಜಯೇಂದ್ರ ಅವರ ಬಗೆಗೆ ಇದ್ದ ಪ್ರಮುಖ ಆರೋಪ. ಈಚಿನ ದಿನಗಳಲ್ಲಿ ಹಿರಿಯರು ಹಾಗೂ ವಿಜಯೇಂದ್ರ ಜತೆಗೂಡಿ ಕೆಲಸ ಮಾಡುತ್ತಿದ್ದಾರೆ. ಆಂತರಿಕ ಕಲಹ ಬಹುತೇಕ ಶಮನವಾಗಿದೆ. ಇಂತಹ ಸಮಯದಲ್ಲಿ ಚುನಾವಣೆ ನಡೆಸಿದರೆ ಗೊಂದಲ ಸೃಷ್ಟಿಯಾಗಲಿದೆ' ಎಂದು ಅವರು ಹೇಳಿದರು.

ವಿಜಯೇಂದ್ರ ಬದಲಾವಣೆಗೆ ಒತ್ತಾಯಿಸಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದಲ್ಲಿ ಬಿಜೆಪಿ ಭಿನ್ನಮತೀಯರು ಹೋರಾಟ ನಡೆಸಿದ್ದರು. ಪಕ್ಷದಿಂದ ಯತ್ನಾಳ ಅವರನ್ನು ಕಳೆದ ವರ್ಷ ಉಚ್ಚಾಟಿಸಲಾಗಿತ್ತು. ಆ ಬಳಿಕ ಭಿನ್ನಮತೀಯರು ಸ್ವಲ್ಪ ತಣ್ಣಗಾಗಿದ್ದರು. 'ಅಧ್ಯಕ್ಷರಾಗಿ ವಿಜಯೇಂದ್ರ ಎರಡು ವರ್ಷ ಪೂರ್ಣಗೊಳಿಸಿದ್ದಾರೆ. ಅವರು ಮತ್ತೊಂದು ವರ್ಷ ಮುಂದುವರಿಯುವುದಕ್ಕೆ ನಮ್ಮ ಆಕ್ಷೇಪ ಇಲ್ಲ. ಆದರೆ, 2028ರ ಚುನಾವಣೆಗೆ ಮುನ್ನ ನಾಯಕತ್ವ ಬದಲಾವಣೆ ಆಗಬೇಕು' ಎಂದು ಭಿನ್ನರು ದಾಳ ಉರುಳಿಸಿದ್ದರು. ಕೇಂದ್ರ ನಾಯಕರ ಗಮನಕ್ಕೂ ಈ ವಿಷಯವನ್ನು ತಂದಿದ್ದರು. ಇನ್ನೊಂದೆಡೆ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಮೂರು ಸಲ ಭೇಟಿ ಮಾಡಿ ತಮ್ಮನ್ನು ಅಧ್ಯಕ್ಷ ಸ್ಥಾನಕ್ಕೆ ಪರಿಗಣಿಸುವಂತೆ ಮನವಿ ಮಾಡಿಕೊಂಡಿದ್ದರು.

ಬಿಹಾರದ ಐದು ಬಾರಿಯ ಶಾಸಕ ನಬಿನ್ ಅವರನ್ನು ರಾಷ್ಟ್ರೀಯ ಕಾರ್ಯಾಧ್ಯಕ್ಷರನ್ನಾಗಿ ಡಿಸೆಂಬರ್ 14ರಂದು ನೇಮಕ ಮಾಡಲಾಗಿತ್ತು. ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಇದೇ 19ರಂದು ನಾಮಪತ್ರ ಸಲ್ಲಿಸಲಿದ್ದಾರೆ. 20ರಂದು ಚುನಾವಣೆ ನಡೆಯಲಿದೆ.

ಬಿಜೆಪಿ ಆಡಳಿತವಿರುವ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು, ಬಿಜೆಪಿ ರಾಜ್ಯ ಘಟಕಗಳ ಅಧ್ಯಕ್ಷರು, ಕೇಂದ್ರ ಸಚಿವರು, ಪಕ್ಷದ ರಾಷ್ಟ್ರೀಯ ಪದಾಧಿಕಾರಿಗಳು ಹಾಗೂ ಹಿರಿಯ ನಾಯಕರು ದೆಹಲಿಯಲ್ಲಿ ಹಾಜರಿರುವಂತೆ ತಿಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಏತನ್ಮಧ್ಯೆ, ಬಿಜೆಪಿ ಅಧ್ಯಕ್ಷರ ಚುನಾವಣೆಗೆ ಸಿದ್ಧತೆಗಳ ಕುರಿತು ಹಾಲಿ ಅಧ್ಯಕ್ಷ ಜೆ.ಪಿ. ನಡ್ಡಾ ಅಧ್ಯಕ್ಷತೆಯಲ್ಲಿ ಪ್ರಮುಖರ ಸಭೆ ಮಂಗಳವಾರ ಇಲ್ಲಿ ನಡೆಯಿತು.

# ಹೋರಾಟಗಾರರಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ವಿಜಯಪುರ: ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ (ಪಿಪಿಪಿ) ವೈದ್ಯಕೀಯ ಕಾಲೇಜು ಸ್ಥಾಪನೆ ವಿರೋಧಿಸಿ ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಆಗ್ರಹಿಸಿ ನಡೆದ ಹೋರಾಟದಲ್ಲಿ ಬಂಧಿತರಾಗಿದ್ದ ಆರು ಮಂದಿ ಹೋರಾಟಗಾರರಿಗೆ ಮಂಗಳವಾರ ಜಿಲ್ಲಾ ಸೆಷನ್ಸ್ ಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಜನವರಿ 1ರಂದು ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರ ಗೃಹ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ನಡೆದ ತಳ್ಳಾಟದಲ್ಲಿ ಪೊಲೀಸರ ಮೇಲೆ ಹಲ್ಲೆ ಮಾಡಿದ ಆರೋಪದಡಿ ಅನಿಲ ಹೊಸಮನಿ, ಅರವಿಂದ ಕುಲಕರ್ಣಿ, ಬಿ.ಭಗವಾನ್‌ರೆಡ್ಡಿ, ಭೋಗೇಶ ಸೋಲಾಪುರ, ಸಿದ್ದರಾಮ ಹಳ್ಳೂರ ಹಾಗೂ ಹುಳಶ್ಯಾಳದ ಸಂಗನ ಬಸವ ಸ್ವಾಮೀಜಿ ಅವರು ಬಂಧಿತರಾಗಿ ಜೈಲು ಪಾಲಾಗಿದ್ದರು.

ಇದೇ ಪ್ರಕರಣದಲ್ಲಿ ಇನ್ನೂ 21 ಜನ ಹೋರಾಟಗಾರರ ವಿರುದ್ಧ ಕೊಲೆ ಯತ್ನ, ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ, ಜೀವ ಬೆದರಿಕೆ ಪ್ರಕರಣ ದಾಖಲಾಗಿತ್ತು. ಹೋರಾಟಗಾರರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ ಜಿಲ್ಲಾ ಪೊಲೀಸ್ ಹಾಗೂ ಸರ್ಕಾರದ ವಿರುದ್ಧ ವ್ಯಾಪಕ ವಿರೋಧ, ಟೀಕೆ ವ್ಯಕ್ತವಾಗಿತ್ತು.

ಹೋರಾಟ ಹಿನ್ನೆಲೆಯಲ್ಲಿ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ವಿಜಯಪುರಕ್ಕೆ ಜನವರಿ 9ರಂದು ಭೇಟಿ ನೀಡಿ, ವಿಜಯಪುರಕ್ಕೆ ಸರ್ಕಾರಿ ವೈದ್ಯಕೀಯ ಕಾಲೇಜು ಮಂಜೂರು ಮತ್ತು ಪಿಪಿಪಿ ಕೈಬಿಟ್ಟಿರುವುದಾಗಿ ಘೋಷಣೆ ಮಾಡಿದ್ದರು.

**ವಿಜಯೋತ್ಸವ ಇಂದು**

'ಜಾಮೀನು ನೀಡಿದ ಆದೇಶ ಪ್ರತಿ ಮಂಗಳವಾರ ಲಭಿಸದ ಕಾರಣ ಬಿಡುಗಡೆ ಸಾಧ್ಯವಾಗಿಲ್ಲ. ಜ. 14ರಂದು ಬಿಡುಗಡೆಯಾಗುವ ಸಾಧ್ಯತೆ ಇದೆ. ದರ್ಗಾ ಜೈಲಿನಿಂದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ವರೆಗೆ ಮೆರವಣಿಗೆ ಮಾಡಿ, ವಿಜಯೋತ್ಸವ ಆಚರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ವಿಜಯಪುರ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನಾ ಹೋರಾಟ ಸಮಿತಿ ಸದಸ್ಯ ಎಚ್.ಟಿ.ಭರತ್‌ಕುಮಾರ್ ತಿಳಿಸಿದ್ದಾರೆ.

## ಸಿಬ್ಬಂದಿಗೆ ವೇತನ: ಪತ್ರ ಬರೆದ ಕಸಾಪ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ (ಕಸಾಪ) ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ವೇತನ ಪಾವತಿಗೆ ಸಂಬಂಧಿಸಿದಂತೆ ಸೂಕ್ತ ಮಾರ್ಗದರ್ಶನಕ್ಕಾಗಿ ಕಸಾಪ ಆಡಳಿತಾಧಿಕಾರಿ ಕೆ.ಎಂ.ಗಾಯಿತ್ರಿ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಪರಿಷತ್ತಿನಲ್ಲಿ ಒಟ್ಟು 46 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಅಕ್ಟೋಬರ್ ತಿಂಗಳಿನಿಂದ ವೇತನ ಪಾವತಿಯಾಗಿಲ್ಲ. ಈ ಬಗ್ಗೆ ಗಾಯಿತ್ರಿ ಅವರು 2025ರ ನವೆಂಬರ್‌ನಲ್ಲಿಯೂ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ಸೂಕ್ತ ನಿರ್ದೇಶನ ದೊರೆಯದ ಕಾರಣ ಮತ್ತೊಮ್ಮೆ ಪತ್ರ ಬರೆದಿದ್ದಾರೆ.

'ಸಿಬ್ಬಂದಿಯಲ್ಲಿ ಇಬ್ಬರು ಮಾತ್ರ ಕಾಯಂ ನೌಕರರಾಗಿದ್ದು, ಅವರಿಗೆ ಸರ್ಕಾರದ ನಿಯಮಾನುಸಾರ ವೇತನ ನೀಡಲಾಗಿದೆ' ಎಂದು ಪತ್ರದಲ್ಲಿ ತಿಳಿಸಿರುವ ಆಡಳಿತಾಧಿಕಾರಿ, ಹಲವರನ್ನು ಸರ್ಕಾರದ ಅನುಮತಿ ಪಡೆಯದೆ ಭರ್ತಿ ಮಾಡಿಕೊಂಡಿರುವ ಬಗ್ಗೆ ಉಲ್ಲೇಖಿಸಿದ್ದಾರೆ.

ನಿಯಮದ ಪ್ರಕಾರ ಸರ್ಕಾರದ ಅನುಮತಿ ಪಡೆದೇ ನೇಮಕ ಮಾಡಿಕೊಳ್ಳಬೇಕಾದ ಕಾರಣ, ಪರಿಷತ್ತಿನಲ್ಲಿ ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ವೇತನ ಪಾವತಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ಕೋರಿದ್ದಾರೆ.

# ಜರ್ಮನ್ ಕಂಪನಿಗಳ ಜತೆ ಚರ್ಚೆ

ಬೆಂಗಳೂರಿಗೆ ಮಂಗಳವಾರ ಆಗಮಿಸಿದ ಜರ್ಮನಿಯ ಚಾನ್ಸೆಲರ್ ಫ್ರೆಡ್ರಿಕ್ ಮೆರ್ಜ್ ಅವರನ್ನು ಸರ್ಕಾರದ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತಾ ಸ್ವಾಗತಿಸಿದರು. ಸಚಿವ ಎಂ.ಬಿ.ಪಾಟೀಲ ಉಪಸ್ಥಿತರಿದ್ದರು.

ಬೆಂಗಳೂರು: ಜರ್ಮನಿಯ ಚಾನ್ಸೆಲರ್ ಫ್ರೆಡ್ರಿಕ್ ಮೆರ್ಜ್ ಅವರು ಬೆಂಗಳೂರಿನಲ್ಲಿರುವ ಬಾಷ್ ಸೇರಿದಂತೆ ವಿವಿಧ ಕಂಪನಿಗಳ ಮುಖ್ಯಸ್ಥರ ಜತೆ ಚರ್ಚೆ ನಡೆಸಿದರು.

ನಿಯೋಗದ ಜತೆ ಮಂಗಳವಾರ ಬೆಳಿಗ್ಗೆ 10.30ಕ್ಕೆ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದ ಅವರನ್ನು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಸ್ವಾಗತಿಸಿದರು.

ಆಟೋಮೋಟಿವ್, ಎಂಜಿನಿಯರಿಂಗ್, ಸಾಫ್ಟ್‌ವೇರ್ ಮತ್ತು ಎಲೆಕ್ಟ್ರಾನಿಕ್ಸ್ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಾಷ್, ಎಸ್‌ಎಪಿ, ಸೀಮೆನ್ಸ್, ಬಿಎಂಡಬ್ಲ್ಯೂ, ಮರ್ಸಿಡಿಸ್ ಬೆಂಜ್‌ನಂತಹ ದೊಡ್ಡ ಜರ್ಮನ್ ಕಂಪನಿಗಳು ಬೆಂಗಳೂರಿನಲ್ಲಿವೆ. ಕಾರ್ಲ್ ಜೈಸ್, ಡಿಎಂಜಿ ಮೋರಿ, ಕ್ರೋನೆಸ್ ನಂತಹ ಕಂಪನಿಗಳೂ ವಿವಿಧ ಕೈಗಾರಿಕಾ ಅಗತ್ಯಗಳನ್ನು ಪೂರೈಸುತ್ತಿವೆ.

ವಿವಿಧ ಕಂಪನಿಗಳ ಮುಖ್ಯಸ್ಥರ ಜತೆ ಚರ್ಚಿಸಿದ ನಂತರ ಮಧ್ಯಾಹ್ನ 3.25ಕ್ಕೆ ಅವರು ತೆರಳಿದರು. ಸಚಿವ ಎಂ.ಬಿ.ಪಾಟೀಲ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್‌ಗುಪ್ತಾ ಮತ್ತವರ ತಂಡದ ಸದಸ್ಯರು ಬೀಳ್ಕೊಟ್ಟರು.

## ಚಾನ್ಸಲರ್ ಸ್ವಾಗತಿಸದೇ ಸಿ.ಎಂ ಲೋಪ: ಅಶೋಕ

ಆರ್.ಅಶೋಕ

ಬೆಂಗಳೂರಿಗೆ ಬಂದಿದ್ದ ಜರ್ಮನಿಯ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಅವರನ್ನು ಸ್ವಾಗತಿಸಲು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಹಾಜರಾಗದೇ ಲೋಪ ಎಸಗಿದ್ದಾರೆ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

'ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕತೆಯ ಮತ್ತು ಪ್ರಭಾವಿ ದೇಶವೊಂದರ ಮುಖ್ಯಸ್ಥ ಬಂದಾಗ ಸ್ವತಃ ಮುಖ್ಯಮಂತ್ರಿ ಸ್ವಾಗತಿಸಲು ಹೋಗಬೇಕಿತ್ತು' ಎಂದು ಅಶೋಕ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಹಿಂದೆಲ್ಲ ಮುಖ್ಯಮಂತ್ರಿಯಾಗಿದ್ದವರು ನಮ್ಮ ರಾಜ್ಯದ ಹೂಡಿಕೆ, ಉದ್ಯೋಗ ಸೃಷ್ಟಿ ಮತ್ತು ಕೈಗಾರಿಕಾ ಅಭಿವೃದ್ಧಿಯನ್ನು ವೃದ್ಧಿಸಿಕೊಳ್ಳಲು ಸಿಕ್ಕಿರುವ ಒಂದು ಸುವರ್ಣ ಅವಕಾಶ ಎಂದು ಜಾಗತಿಕ ನಾಯಕರ ಭೇಟಿಯನ್ನು ಗಂಭೀರವಾಗಿ ಪರಿಗಣಿಸುತ್ತಿದ್ದರು. ಆದರೆ, ಸಿದ್ದರಾಮಯ್ಯ ಎಡವಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಒಂದು ಕಡೆ ಜರ್ಮನಿಯ ಚಾನ್ಸಲರ್ ಬೆಂಗಳೂರಿಗೆ ಬಂದರೆ, ಮತ್ತೊಂದೆಡೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ತಮಿಳುನಾಡಿಗೆ ಹೋಗುವ ದಾರಿಯಲ್ಲಿ ಮೈಸೂರಿಗೆ ಬಂದಿದ್ದ ರಾಹುಲ್‌ಗಾಂಧಿಯನ್ನು ಸ್ವಾಗತಿಸಲು ಸಾಲುಗಟ್ಟಿ ನಿಂತಿದ್ದರು. ಇದು ಕೇವಲ ಶಿಷ್ಟಾಚಾರದ ಲೋಪವಲ್ಲ, ಕರ್ನಾಟಕದ ಹಿತಾಸಕ್ತಿಗೆ ಮಾಡಿದ ದ್ರೋಹ. ಗುಲಾಮಗಿರಿಯ ಪರಾಕಾಷ್ಠೆ' ಎಂದು ಟೀಕಿಸಿದ್ದಾರೆ.

## ಬೆಟ್ಟಿಂಗ್ ಆ್ಯಪ್ ಅಕ್ರಮ: ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಮಹಾದೇವ್ ಬೆಟ್ಟಿಂಗ್ ಆ್ಯಪ್‌ನ ಪ್ರಮುಖ ಪ್ರವರ್ತಕರಲ್ಲಿ ಒಬ್ಬರಾಗಿದ್ದ ರವಿ ಉಪ್ಪಲ್ ಸೇರಿದಂತೆ ಇತರ ಆರೋಪಿಗಳಿಗೆ ಸಂಬಂಧಿಸಿದ ಒಟ್ಟು ₹21 ಕೋಟಿ ಆಸ್ತಿಯನ್ನು ಮತ್ತೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯ(ಇ.ಡಿ) ಮಂಗಳವಾರ ಹೇಳಿದೆ.

# ಹಲ್ಲೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ರತೀಶ್ ದಾಸ್

ಸಾಗರ್

ಧನುಷ್

ಮಂಗಳೂರು: ಕೂಲಿ ಕೆಲಸಕ್ಕಾಗಿ ಜಾರ್ಖಂಡ್‌ದಿಂದ ಮಂಗಳೂರಿಗೆ ಬಂದಿದ್ದ ಕಾರ್ಮಿಕ ದಿಲ್‌ಜಾನ್ ಅನ್ಸಾರಿ ಎಂಬುವವರ ಮೇಲೆ ಹಲ್ಲೆ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮಂಗಳೂರು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಕೂಳೂರು ನಾರಾಯಣ ಗುರು ಭಜನಾ ಮಂದಿರ ಸಮೀಪದ ನಿವಾಸಿಗಳಾದ ರತೀಶ್ ದಾಸ್ ಅಲಿಯಾಸ್ ಲಾಲು (32), ಧನುಷ್ (24) ಹಾಗೂ ಕೂಳೂರು ರಾಯಕಟ್ಟೆಯ ಸಾಗರ್ (24) ಬಂಧಿತರು. ಮೋಹನ್ ಎಂಬಾತ ತಲೆಮರೆಸಿಕೊಂಡಿದ್ದಾನೆ ಎಂದು ಮಾಹಿತಿ ನೀಡಿದ್ದಾರೆ.

'ಕಾರ್ಮಿಕ ದಿಲ್‌ಜಾನ್ ಅವರನ್ನು ಕೂಳೂರಿನಲ್ಲಿ ಭಾನುವಾರ ಸಂಜೆ ಅಡ್ಡಗಟ್ಟಿ ಅವಾಚ್ಯವಾಗಿ ಬೈದಿದ್ದ ಆರೋಪಿಗಳು, 'ನೀನು ಬಾಂಗ್ಲಾದೇಶದವ. ಹಿಂದೂನಾ, ಮುಸ್ಲಿಮಾ? ನಿನ್ನಲ್ಲಿರುವ ದಾಖಲೆ ತೋರಿಸು' ಎಂದು ಪ್ರಶ್ನಿಸಿ, ಆತನ ಮೇಲೆ ಹಲ್ಲೆ ಮಾಡಿದ್ದರು ಎಂದು ಪ್ರಕರಣ ದಾಖಲಾಗಿತ್ತು.

## ಶಿಕ್ಷಣ ತಜ್ಞ ಎಸ್.ಎ.ಪುಣೇಕರ ನಿಧನ

ಪ್ರಜಾವಾಣಿ ವಾರ್ತೆ

ವಿಜಯಪುರ: ವಿಜಯಪುರದ ಪ್ರತಿಷ್ಠಿತ ಸಿಕ್ಯಾಬ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ, ಶಿಕ್ಷಣ ತಜ್ಞ ಎಸ್.ಎ. ಪುಣೇಕರ (90) ಮಂಗಳವಾರ ಇಲ್ಲಿ ನಿಧನರಾದರು. ಅವರಿಗೆ ಪತ್ನಿ, ನಾಲ್ವರು ಪುತ್ರರು, ಒಬ್ಬ ಪುತ್ರಿ ಇದ್ದಾರೆ.



ಮಹಾರಾಷ್ಟ್ರದ ಪುಣೆಯಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ ಬಳಿಕ ಮುಂಬೈ ಮಹಾನಗರ ಪಾಲಿಕೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ವೃತ್ತಿಜೀವನ ಆರಂಭಿಸಿದರು. ನಂತರ ಮಧ್ಯಪ್ರದೇಶದಲ್ಲಿ ಬಿಲಾಹಿ ಉಕ್ಕು ಸ್ಥಾವರದಲ್ಲಿ ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸಿ, ಹೆಸರು ಮಾಡಿದ್ದರು.

1968ರಲ್ಲಿ 'ಸರ್ಕಾರಿ ಮತ್ತು ಅರೆ ಸರ್ಕಾರಿ ಗೃಹ ನಿರ್ಮಾಣ ಸಹಕಾರಿ ಸಂಘ' ಸ್ಥಾಪಿಸಿ 800ಕ್ಕೂ ಅಧಿಕ ಜನರಿಗೆ ಕಡಿಮೆ ಬೆಲೆಯಲ್ಲಿ ಉತ್ತಮ ನಿವೇಶನಗಳು ಸಿಗುವಂತೆ ಮಾಡಿದರು. 1969ರಲ್ಲಿ ವಿಜಯಪುರಕ್ಕೇ ಮರಳಿದ್ದು, 'ಸಿಕ್ಯಾಬ್' ಶಿಕ್ಷಣ ಸಂಸ್ಥೆ ಆರಂಭಿಸಿದರು. ಈಗ ಸಂಸ್ಥೆಯಡಿ 28ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳಿವೆ. ಅಖಂಡ ವಿಜಯಪುರ ಜಿಲ್ಲೆಯಲ್ಲಿ ಮೊದಲ ಮಹಿಳಾ ಪದವಿ ಕಾಲೇಜು ಸ್ಥಾಪಿಸಿದರು.

ಪುಣೇಕರ ಅವರಿಗೆ ಅಲಿಘಡ್ ಮುಸ್ಲಿಂ ವಿಶ್ವವಿದ್ಯಾಲಯವು 'ಮೊಹಸೀನ್-ಎ-ಮಿಲ್ಲತ್' ಪ್ರಶಸ್ತಿ (2019), ಅಸೋಸಿಯನ್ ಆಫ್ ಮುಸ್ಲಿಂ ಪ್ರೊಫೆಷನಲ್ ಮುಂಬೈ ನೀಡುವ ಜೀವಮಾನ ಸಾಧನೆ ಪ್ರಶಸ್ತಿ (2022), ಕಲಬುರಗಿಯ ಬಹುಮನಿ ಪ್ರತಿಷ್ಠಾನದ ಜೀವಮಾನ ಸಾಧನೆ ಪ್ರಶಸ್ತಿ (2023) ಲಭಿಸಿದೆ. ಬೆಳಗಾವಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯವು ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ.

### ಜೀವನದಿಗಳ ಒಡಲು ಸೇರುತ್ತಿರುವ ವಸತಿ ಪ್ರದೇಶ ಮತ್ತು ಕೈಗಾರಿಕೆಗಳ ತ್ಯಾಜ್ಯ

# ರಾಜ್ಯದ 12 ನದಿಗಳು ಕಲುಷಿತ

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ನಗರಸಭೆ, ಪುರಸಭೆ, ಹಳ್ಳಿಗಳ ಜನವಸತಿ ಪ್ರದೇಶಗಳಿಂದ ಉತ್ಪತ್ತಿಯಾಗುವ ಗೃಹತ್ಯಾಜ್ಯ ಮತ್ತು ಕೈಗಾರಿಕೆಗಳ ಕೊಳಚೆ ನೀರು ಸೇರ್ಪಡೆಯಿಂದಾಗಿ ರಾಜ್ಯದ 12 ಪ್ರಮುಖ ನದಿಗಳು ಕಲುಷಿತಗೊಂಡಿವೆ.

ಕಾವೇರಿ, ಕಬಿನಿ, ಅರ್ಕಾವತಿ, ಲಕ್ಷ್ಮಣತೀರ್ಥ, ತುಂಗಭದ್ರಾ, ಭದ್ರಾ, ತುಂಗಾ, ಕಾಗಿನ, ಕೃಷ್ಣಾ, ಶಿಂಷಾ, ಭೀಮಾ, ನೇತ್ರಾವತಿ ನದಿಗಳಿಗೆ ಒಳಚರಂಡಿ, ಕೊಳಚೆ ನೀರು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸೇರ್ಪಡೆಯಾಗಿ ಜಲಚರಗಳಿಗೆ ಆಪತ್ತು ಎದುರಾಗಿದೆ. ಸುಮಾರು 700 ಕಿ.ಮೀ.ನಷ್ಟು ನದಿಯ ನೀರು ಮಲಿನಗೊಂಡಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ (ಸಿ.ಪಿ.ಸಿ.ಬಿ) 2018ರ ವರದಿಯಲ್ಲಿ ಮೊದಲಿಗೆ 17 ನದಿಗಳು ಮಲಿನವಾಗಿದೆ ಎಂದು ಗುರುತಿಸಲಾಗಿತ್ತು. 2023ರ ನಂತರ ಅಘನಾಶಿನಿ, ಶರಾವತಿ ಮತ್ತು ಗಂಗಾವಳಿ ನದಿಗಳು ಮಲಿನಗೊಳ್ಳದಿರುವುದರಿಂದ ಪಟ್ಟಿಯಿಂದ ಕೈಬಿಡಲು ರಾಜ್ಯ ಮಂಡಳಿಯು ಕೇಂದ್ರಕ್ಕೆ ಪತ್ರ ಬರೆದಿತ್ತು. ಈ ಮೂರು ನದಿಗಳು ಹಾಗೂ ಘಟಪ್ರಭಾ, ದಕ್ಷಿಣ ಪಿನಾಕಿನಿ ನದಿಗಳನ್ನೂ ಪರಿಷ್ಕೃತ ಪಟ್ಟಿಯಿಂದ ಕೈಬಿಡಲಾಗಿದೆ.

**ಸಂಸ್ಕರಣೆಯಾಗದ ಕೊಳಚೆ ನೀರು:** 'ರಾಜ್ಯದಲ್ಲಿ ಒಟ್ಟು (ಬಿ.ಬಿ.ಎಂ.ಪಿ ಒಳಗೊಂಡಂತೆ) 184 ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು (ಎಸ್.ಟಿ.ಪಿ) ಇವೆ. ನಿತ್ಯ 4,158 ಎಂ.ಎಲ್.ಡಿ (ದಿನಕ್ಕೆ ಮಿಲಿಯನ್ ಲೀಟರ್‌ಗಳು) ಕೊಳಚೆ ನೀರು ಉತ್ಪತ್ತಿಯಾಗುತ್ತಿದೆ. 2,370 ಎಂ.ಎಲ್.ಡಿ.ಯಷ್ಟು ಸಂಸ್ಕರಿಸಲಾಗುತ್ತಿದೆ. ಆದರೆ, 1,788 ಎಂ.ಎಲ್.ಡಿ. ಕೊಳಚೆ ನೀರು ಸಂಸ್ಕರಣೆಯಾಗುತ್ತಿಲ್ಲ' ಎಂಬುದನ್ನು ಮಾಲಿನ್ಯ ನಿಯಂತ್ರಣ ಮಂಡಳಿಯ ಅಂಕಿಅಂಶಗಳು ತಿಳಿಸುತ್ತವೆ.

**ಕ್ರಿಮಿನಲ್ ಪ್ರಕರಣ:** 'ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ 2018ರ ಆದೇಶದ ಪರಿಪಾಲನೆಗಾಗಿ ಮಂಡಳಿಯು 12 ನದಿಗಳ ದಂಡೆಯ ಮೇಲಿರುವ ನಗರಸಭೆ ಮತ್ತು ಪುರಸಭೆಗಳ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಿಸಿದೆ. ನಿಯಮಿತವಾಗಿ ಉಳಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರಣ ಕೇಳಿ ನೋಟಿಸ್ ನೀಡಲಾಗುತ್ತಿದೆ. ಎಸ್‌ಟಿಪಿ ಅಳವಡಿಕೆಗೆ ನಿರ್ದೇಶನ ನೀಡುತ್ತಿದೆ' ಎಂದು ಪರಿಸರ ಸಚಿವ ಈಶ್ವರ ಖಂಡ್ರೆ ಮಾಹಿತಿ ನೀಡಿದ್ದಾರೆ.

'ಈಗಾಗಲೇ ಮೈಸೂರು, ನಂಜನಗೂಡು, ಹುಣಸೂರು, ತಿ.ನರಸೀಪುರ, ಕನಕಪುರ ನಗರ ಸ್ಥಳೀಯ ಸಂಸ್ಥೆಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

**ಕುಡಿಯುವ ನೀರು ಕಲುಷಿತ**

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ ಕೊಳಚೆ ನೀರನ್ನು ನೇರವಾಗಿ ಸುಮಾರು 200 ವರ್ಷಗಳಿಂದ ಕಾವೇರಿ ನದಿಗೆ ಬಿಡುತ್ತಿರುವುದರಿಂದ ಮಂಡ್ಯ, ಪಾಂಡವಪುರ ಮತ್ತು ಬೆಂಗಳೂರು ನಗರ ಪ್ರದೇಶಗಳಿಗೆ ಪೂರೈಕೆಯಾಗುತ್ತಿರುವ ಕುಡಿಯುವ ನೀರು ಕೂಡ ಕಲುಷಿತಗೊಂಡಿರುವ ಆತಂಕ ಎದುರಾಗಿದೆ.

ಈ ಬಗ್ಗೆ ಸಾರ್ವಜನಿಕರಿಂದ ದೂರು ಕೇಳಿಬಂದ ಮೇರೆಗೆ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಪುರಸಭೆ ಮುಖ್ಯಾಧಿಕಾರಿ ಸೇರಿ 8 ಅಧಿಕಾರಿಗಳ ವಿರುದ್ಧ ಸುಮೋಟೊ ಪ್ರಕರಣ ದಾಖಲಿಸಿಕೊಂಡು, ವರದಿ ನೀಡಲು ಸೂಚಿಸಿದ್ದಾರೆ.

ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಬ್ರಿಡ್ಜ್ ಬಳಿ ಕಾವೇರಿ ನದಿಯ ಒಡಲು ಸೇರುತ್ತಿರುವ ಒಳಚರಂಡಿಯ ಕೊಳಚೆ ನೀರು (ಸಂಗ್ರಹ ಚಿತ್ರ)

> ನದಿಗಳ ಮಾಲಿನ್ಯ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳುತ್ತಿದ್ದೇವೆ. ಸಾರ್ವಜನಿಕರ ಸಹಕಾರ ಮತ್ತು ವಿವಿಧ ಇಲಾಖೆಗಳ ಸಹಭಾಗಿತ್ವ ಮಂಡಳಿಗೆ ಅಗತ್ಯವಾಗಿದೆ
>
> **ಪಿ.ಎಂ.ನರೇಂದ್ರಸ್ವಾಮಿ,** ಅಧ್ಯಕ್ಷ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

नवीन एवं नवीकरणीय ऊर्जा मंत्रालय
MINISTRY OF NEW AND RENEWABLE ENERGY
सत्यमेव जयते
25 ಲಕ್ಷ ಮನೆಗಳು
ಈಗ ಪಿಎಂ ಸೂರ್ಯಘರ್
ಆಗಿ ಪರಿವರ್ತನೆಗೊಂಡಿವೆ
ಇದೀಗ ನಿಮ್ಮ ಸರದಿ,
ನಿಮ್ಮ ಮನೆಯ ರೂಫ್‌ಟಾಪ್‌ನಲ್ಲಿ ಸೋಲಾರ್ ಪ್ಯಾನೆಲ್‌ಗಳನ್ನು ಅಳವಡಿಸಿರಿ
ಮತ್ತು ಲಾಭವನ್ನು ಪಡೆಯಿರಿ
ರೂ. 78,000 ವರೆಗೆ ಸಬ್ಸಿಡಿ
ಹೆಚ್ಚುವರಿ ವಿದ್ಯುತ್ ಮಾರಾಟದ ಮೂಲಕ ಹಣ ಗಳಿಸುವ ಅವಕಾಶ
ಪ್ರತಿ ತಿಂಗಳು 300 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್
ಪಿಎಂ ಸೂರ್ಯ ಘರ್
ಉಚಿತ ವಿದ್ಯುತ್ ಯೋಜನೆ
ಪ್ರತಿ ಮನೆಯೂ ಸೂರ್ಯ ಘರ್
ಪಿಎಂ ಸೂರ್ಯ ಘರ್: ಉಚಿತ ವಿದ್ಯುತ್ ಯೋಜನೆಯಿಂದ ದೇಶಕ್ಕೆ ಗಮನಾರ್ಹ ಪ್ರಯೋಜನವಾಗುತ್ತಿದೆ. ಇಂದಿನ ಯೋಜನೆಯೊಂದು ಭವಿಷ್ಯವನ್ನು ಹೇಗೆ ಗಣನೀಯವಾಗಿ ಪರವರ್ತಿಸಬಲ್ಲದು ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ.
– ನರೇಂದ್ರ ಮೋದಿ
ಸ್ಕ್ಯಾನ್ ಮಾಡಿ ಅರ್ಜಿ ಸಲ್ಲಿಸಿ
ಹೆಚ್ಚಿನ ವಿವರಗಳಿಗಾಗಿ ಭೇಟಿ ಕೊಡಿ: pmsuryaghar.gov.in | ಕಾಲ್ ಟೋಲ್‌ಫ್ರೀ ನಂಬರ್ 15555
CBC 28101/13/0015/2526

# ವಾಹನಗಳೂ ಮಾತನಾಡುತ್ತವೆ!

• ಕೃಷ್ಣಭಟ್

ಬೆಂಗಳೂರಿನ ರಸ್ತೆಯಲ್ಲಿ ಕಾರಿನಲ್ಲೋ ಬೈಕಿನಲ್ಲೋ ಹೋಗುವಾಗ ಹಿಂದಿನವನು/ಳು ಅರ್ಜೆಂಟಿನಲ್ಲಿ ಬಂದು ಕಿವಿತಮಟೆ ಒಡೆದು ಹೋಗುವ ಹಾಗೆ ಹಾರ್ನನ್ನು ಬಾರಿಸಿ, 'ದಾರಿ ಕೊಡೋ' ಎನ್ನುವುದೂ, ಅಷ್ಟಾದರೂ ದಾರಿ ಕೊಡದಿದ್ದರೆ, ಸಮೀಪ ಬಂದು ಕೆಟ್ಟ ಪದ ಬಳಸಿ ಬೈದು 'ಸೈಡಿಗ್ಹೋಕ್ಕಾಗಲ್ವಾ?' ಎಂದು ರೇಗುವುದೂ ಅತ್ಯಂತ ಸಾಮಾನ್ಯ.

30-40 ಕಿ.ಮೀ. ವೇಗದಲ್ಲಷ್ಟೇ ಹೋಗಬಹುದಾದ ನಗರದ ರಸ್ತೆಗಳಲ್ಲಿ ಹೀಗಾದರೆ, ಹೆದ್ದಾರಿಗಳದ್ದು ಇನ್ನೊಂದು ಸಮಸ್ಯೆ. ನೀವು ನಿಮ್ಮ ಪಾಡಿಗೆ 70-80 ಕಿ.ಮೀ. ವೇಗದಲ್ಲಿ ಒಂದು ಲೇನ್‌ನಲ್ಲಿ ಹೋಗುತ್ತಿರುತ್ತೀರಿ. ರಸ್ತೆ ಸ್ವಲ್ಪ ಏರುಗತಿಯಲ್ಲಿದ್ದರೆ ಮೈತುಂಬಾ ಭಾರ ಹೊತ್ತ ಲಾರಿಯೊಂದು ನಿಮಗಿಂತ ನಿಧಾನವಾಗಿ 40-50ರಲ್ಲಿ ಹೋಗುತ್ತಿರುತ್ತದೆ. ಹಗಲಿಗಾದರೆ, ಹಿಂದಿನಿಂದ ವಾಹನ ಬರುತ್ತಿದೆಯೋ ಇಲ್ಲವೋ ಎಂದು ನೋಡಿಕೊಂಡು, ಹಿಂದೆ ವಾಹನಗಳು ಬರುತ್ತಿದ್ದರೆ ಅವುಗಳ ವೇಗವನ್ನು ನೋಡಿಕೊಂಡು ಲೇನ್ ಬದಲಿಸಿಕೊಂಡು ಹೋಗುತ್ತೇವೆ. ಆದರೆ, ರಾತ್ರಿ ಸಮಯದಲ್ಲಿ ಸಮಸ್ಯೆ ಇನ್ನೂ ಸಂಕೀರ್ಣವಾಗುತ್ತದೆ. ಹಿಂದೆ ಬರುವ ವಾಹನದ ಹೆಡ್‌ಲೈಟ್‌ನಿಂದಲೇ ಅದು ಎಷ್ಟು ವೇಗದಲ್ಲಿದೆ ಅಂದಾಜು ಮಾಡುವುದು ಬಹುತೇಕ ಸಮಯದಲ್ಲಿ ಕಷ್ಟ. ಹಿಂದೆ ಬರುತ್ತಿರುವವನು 'ನನ್ನಷ್ಟೇ ವೇಗದಲ್ಲಿ ಬರುತ್ತಿದ್ದಾನೆ' ಎಂದುಕೊಂಡು ನೀವು ಲೇನ್ ಚೇಂಜ್ ಮಾಡುವ ಇಂಡಿಕೇಟರ್ ಹಾಕುವಷ್ಟರಲ್ಲೇ ಧುತ್ತೆಂದು ನಿಮ್ಮ ಹಿಂದೆ ಬಂದು 'ಡಿಮ್ ಅ್ಯಂಡ್ ಡಿಪ್' ಮಾಡಿ ಗುದ್ದೇ ಬಿಡುವ ಹಾಗೆ ಹೆದರಿಸುತ್ತಾನೆ.

ಇಂಥ ಸಂದರ್ಭದಲ್ಲಿ ನಮ್ಮ ಹಿಂದಿನ ವಾಹನದ ವೇಗ ಎಷ್ಟಿದೆ, ಅದು ಕಾರಾ? ಟ್ರಕ್ಕಾ? - ಎಂದು ಈಗಿನ ಡಿಜಿಟಲ್ ವ್ಯವಸ್ಥೆಯಲ್ಲಿ ಗೊತ್ತು ಮಾಡಿಕೊಳ್ಳುವ ಹಾಗಿದ್ದರೆ ಹೇಗಿರುತ್ತದೆ?

ಇಂಥದ್ದೊಂದು ತಂತ್ರಜ್ಞಾನವನ್ನು ವರ್ಷಾಂತ್ಯದೊಳಗೆ ಭಾರತದಲ್ಲಿ ಜಾರಿಗೆ ತರುವುದಕ್ಕೆ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಹೊರಟಿದೆ. ಇದನ್ನು 'ವೆಹಿಕಲ್ ಟು ವೆಹಿಕಲ್ ಕಮ್ಯೂನಿಕೇಶನ್ ಟೆಕ್ನಾಲಜಿ' ಎಂದು ಕರೆಯಲಾಗುತ್ತದೆ. ಕೆಲವು ದೇಶಗಳಲ್ಲಿ ಈ ತಂತ್ರಜ್ಞಾನ ಈಗಲೇ ಚಾಲ್ತಿಯಲ್ಲಿದೆ. ಅಷ್ಟೇ ಅಲ್ಲ, ಕೆಲವು ದುಬಾರಿ ಕಾರುಗಳಲ್ಲಿ ಸುಮಾರು ಇದೇ ಮಾಹಿತಿ ನೀಡುವ ತಂತ್ರಜ್ಞಾನಗಳಿವೆ. ಆದರೆ, ಅದಕ್ಕೆ ಆ ಕಾರುಗಳು ಬಳಸುವುದು ಸೆನ್ಸರ್‌ಗಳನ್ನು. ಅಪಘಾತವನ್ನು ತಡೆಯುವ ವಿಷಯದಲ್ಲಿ ಈ ತಂತ್ರಜ್ಞಾನ ಬಹಳ ಸಹಾಯಕಾರಿ.

## ಹೇಗೆ ಕೆಲಸ ಮಾಡುತ್ತದೆ?

ಎರಡು ಮೊಬೈಲ್‌ಗಳು ಹೇಗೆ ಸಂಕೇತಗಳನ್ನು ಕಳುಹಿಸುವ ಮೂಲಕ ಸಂವಹನವನ್ನು ನಡೆಸುತ್ತವೆಯೋ ಹಾಗೆಯೇ ಎರಡು ವಾಹನಗಳು ಇಲ್ಲಿ ಸಂಕೇತಗಳನ್ನು ಕಳುಹಿಸುತ್ತವೆ. ಪ್ರತಿ ವಾಹನಕ್ಕೂ ಪ್ರತ್ಯೇಕ ಸಾಧನವನ್ನು ಅಳವಡಿಸಬೇಕಿರುತ್ತದೆ. ಪ್ರತಿ ವಾಹನಕ್ಕೂ ಸಿಮ್ ಕಾರ್ಡ್‌ನ ರೀತಿಯ ಗುರುತಿನ ಸಾಧನವೊಂದಿರುತ್ತದೆ. ಅದು ವಾಹನದ ಗುರುತನ್ನು ಹೇಳಿದರೆ, ಒಂದು ನಿರ್ದಿಷ್ಟ ಫ್ರೀಕ್ವೆನ್ಸಿಯಲ್ಲಿ ಈ ವಾಹನದ ಸಂಕೇತಗಳು ಅನಿಯಂತ್ರಿತವಾಗಿ ಪ್ರಸಾರವಾಗುತ್ತಿರುತ್ತವೆ. ಅಂದರೆ, ಚಾಲಕ ತನ್ನ ವಾಹನದಿಂದ ಹೊರಡುವ ಸಂಕೇತಗಳನ್ನು ನಿಯಂತ್ರಿಸಲಾಗುವುದಿಲ್ಲ. ಈ ಸಂಕೇತಗಳಿಗೆಂದೇ ಪ್ರತ್ಯೇಕ ತರಂಗಾಂತರಗಳನ್ನು ಸರ್ಕಾರ ನಿಗದಿ ಮಾಡಲಿದ್ದು, ಇದರ ಡೇಟಾ ಎಲ್ಲವೂ ಈ ತರಂಗಾಂತರದ ಮೂಲಕವೇ ಸಾಗಲಿವೆ.

## ಹೇಗೆ ಅನುಷ್ಠಾನ?

ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿರುವಂತೆ, 2026ರ ವರ್ಷಾಂತ್ಯದಲ್ಲಿ ಇದನ್ನು ಜಾರಿಗೆ ತರುವ ಯೋಜನೆಯಿದ್ದು, ಆಗಿನಿಂದ ಎಲ್ಲ ಹೊಸ ವಾಹನಗಳಿಗೆ ಈ ತಂತ್ರಜ್ಞಾನ ಅಳವಡಿಕೆ ಕಡ್ಡಾಯವಾಗಲಿದೆ. ಆ ನಂತರದ ಹಂತದಲ್ಲಿ ಹಳೆಯ ವಾಹನಗಳೂ ಕಡ್ಡಾಯವಾಗಿ ಇದನ್ನು ಅಳವಡಿಸಿಕೊಳ್ಳಬೇಕು ಎಂಬ ನಿಯಮ ಜಾರಿಗೆ ತರಲಾಗುತ್ತದೆ. ಈ ಹಿಂದೆ 'ಫಾಸ್ಟ್ಯಾಗ್' ಜಾರಿಗೆ ಬಂದಾಗ ಇದ್ದ ಹಾಗೆ, ಹಳೆಯ ವಾಹನಗಳಿಗೆ ವಾಹನಮಾಲೀಕರೇ ಇದರ ವೆಚ್ಚ ಭರಿಸಬೇಕಿರುತ್ತದೆ. ಈ ಸಾಧನಕ್ಕೆ ವೆಚ್ಚ ಎಷ್ಟಾಗಬಹುದು ಎಂಬ ಅಂದಾಜು ಇನ್ನೂ ಲಭ್ಯವಿಲ್ಲ.

## ಹೇಗೆ ಅನುಕೂಲ?

ಈ ತಂತ್ರಜ್ಞಾನ ರಸ್ತೆ ಸುರಕ್ಷತೆಯ ವಿಷಯದಲ್ಲಿ ಅತ್ಯಂತ ಮಹತ್ವದ್ದು. ಹಲವು ಸನ್ನಿವೇಶಗಳಲ್ಲಿ ಇದು ಸಹಾಯಕ. ಮಂಜು ಕವಿದ ಸಮಯದಲ್ಲಿ ನೂರು ಮೀಟರಿಗಿಂತ ಕಡಿಮೆ ದೂರದಲ್ಲಿರುವ ವಾಹನಗಳೂ ಕಾಣಿಸುತ್ತಿರುವುದಿಲ್ಲ. ಆಗ ಈ ತಂತ್ರಜ್ಞಾನದಿಂದ ನಮ್ಮ ಮುಂದೆ ಎಷ್ಟು ದೂರದಲ್ಲಿ ವಾಹನಗಳಿವೆ ಎಂಬ ಮಾಹಿತಿ ಡಿಜಿಟಲ್ ರೂಪದಲ್ಲಿ ತಕ್ಷಣ ಒದಗಿಸುತ್ತಿರುತ್ತದೆ. ಅಲ್ಲದೆ, ಮುಂದಿನ ವಾಹನದ ವೇಗ ಎಷ್ಟು ಎಂಬುದೂ ಗೊತ್ತಾಗುವುದರಿಂದ, ಮುಂದಿನ ವಾಹನ ಹಠಾತ್ ಬ್ರೇಕ್ ಹಾಕಿದರೆ, ತಕ್ಷಣವೇ ಅದರ ಮಾಹಿತಿ ಸಿಗುತ್ತಿರುವುದರಿಂದ ಅಪಘಾತವನ್ನು ತಪ್ಪಿಸಬಹುದು. ಹಿಂದೆ ಮತ್ತು ಮುಂದೆ ಬರುತ್ತಿರುವ ವಾಹನವಷ್ಟೇ ಅಲ್ಲ, ಅಕ್ಕಪಕ್ಕದ ವಾಹನಗಳ ಮಾಹಿತಿಯನ್ನೂ ಇದು ಒದಗಿಸುತ್ತದೆ.

## ಯಾವ ಮಾಹಿತಿ ಲಭ್ಯ?

ನಿರ್ದಿಷ್ಟ ದೂರದಲ್ಲಿರುವ ಎಲ್ಲ ವಾಹನಗಳ ವೇಗ, ಅವು ಯಾವ ದಿಕ್ಕಿಗೆ ಸಾಗುತ್ತಿವೆ, ವಾಹನ ಚಾಲಕ ಬ್ರೇಕ್ ಒತ್ತಿದರೆ ಅದರ ಮಾಹಿತಿ, ಅವು ಎಷ್ಟು ಹತ್ತಿರದಲ್ಲಿವೆ ಎಂಬ ಮಾಹಿತಿಯೆಲ್ಲವೂ ತಕ್ಷಣವೇ ಸಿಗುತ್ತವೆ.

## ಅತ್ಯಾಧುನಿಕ ADAS

ಇದು ಈಗಾಗಲೇ ಬಹುತೇಕ ದುಬಾರಿ ಕಾರುಗಳಲ್ಲಿರುವ 'ADAS', ಎಂದರೆ 'ಅಡ್ವಾನ್ಸ್‌ಡ್ ಡ್ರೈವರ್ ಅಸಿಸ್ಟೆನ್ಸ್ ಸಿಸ್ಟಮ್ಸ್'ಗೆ ಹೋಲಿಸಿದರೆ ಇನ್ನಷ್ಟು ನಿಖರವಾಗಿರುತ್ತವೆ. ಅಲ್ಲದೆ, ಈ ADASಗೆ ಪೂರಕವಾಗಿಯೂ ಇವು ಕೆಲಸ ಮಾಡುತ್ತವೆ. ADASನಲ್ಲಿಯೂ ಈ ಎಲ್ಲ ಮಾಹಿತಿ ಲಭ್ಯವಿದ್ದರೂ, ಅವು ಸೆನ್ಸರ್ ಆಧರಿಸಿ ಕೆಲಸ ಮಾಡುತ್ತಿರುತ್ತವೆ. ಆದರೆ, ಈ 'V2V' ವ್ಯವಸ್ಥೆಯಲ್ಲಿ ರಿಯಲ್‌ಟೈಮ್ ಡೇಟಾ ವರ್ಗಾವಣೆ ವಿಧಾನ ಬಳಕೆಯಾಗುತ್ತದೆ. ಹೀಗಾಗಿ, V2V ಕಾರು ಇರುವವರಿಗೂ ಹೊಸ ವ್ಯವಸ್ಥೆಗೆ ಬೇಕಾದ ಸಾಧನ ಅಳವಡಿಸಿಕೊಳ್ಳುವುದು ಅನಿವಾರ್ಯವಾಗಲಿದೆ. ಆದರೆ, ಈ ತಂತ್ರಜ್ಞಾನ ಅಳವಡಿಕೆಯಾದ ನಂತರ ADAS ಇನ್ನಷ್ಟು ನಿಖರವಾಗಿ ಕೆಲಸ ಮಾಡಲಿದೆ.

## ಸುರಕ್ಷತೆಗೆ ಆದ್ಯತೆ

ರಸ್ತೆಜಾಲ ವಿಸ್ತಾರವಾಗುತ್ತಿದ್ದ ಹಾಗೆ ಅಪಘಾತಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಪ್ರತಿ ವರ್ಷ ಅಪಘಾತಗಳ ಸಂಖ್ಯೆ ಶೇ 4.18ರಷ್ಟು ಹೆಚ್ಚಳವಾಗುತ್ತಿದೆ. ಇನ್ನೊಂದೆಡೆ, ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ. 2023ರಲ್ಲಿ ನಾಲ್ಕು ಲಕ್ಷಕ್ಕಿಂತ ಹೆಚ್ಚು ಸಾವಿರ ರಸ್ತೆ ಅಪಘಾತಗಳಾಗಿದ್ದು, 1.70 ಲಕ್ಷ ಜನರು ಈ ಅಪಘಾತಗಳಲ್ಲಿ ಸಾವನ್ನಪ್ಪಿದ್ದಾರೆ ಎಂದು ಡೇಟಾ ಹೇಳುತ್ತದೆ. ಈ ಹಿನ್ನೆಲೆಯಲ್ಲಿ, ನಾವು ರಸ್ತೆಸುರಕ್ಷತೆಯ ವಿಷಯದಲ್ಲಿ ಇಂತಹ ಇನ್ನಷ್ಟು ಆಧುನಿಕ ವಿಧಾನಗಳನ್ನು ಬಳಸುವುದು ಅತ್ಯಂತ ಅಗತ್ಯವಾಗಿದೆ.

❖

# ಬಂದ ಬಂದ 'ರೋಬೋ ಸಣ್ತಮ್ಮಣ್ಣ'



• ಕ್ಷಮಾ.ವಿ.ಭಾನುಪ್ರಕಾಶ್

**ರಾಜ್‌ಕುಮಾರ್** ಅವರ ಹಳೆಯ ಬಾಂಡ್ ಸಿನೆಮಾಗಳನ್ನೋ, 70-80ರ ದಶಕದ ಪತ್ತೇದಾರಿ ಸಿನೆಮಾಗಳನ್ನೋ ನೋಡುವಾಗ ಎಳೆಯರಾಗಿದ್ದ ನಾವೆಲ್ಲ ಅದೆಷ್ಟು ವಿಸ್ಮಿತರಾಗುತ್ತಿದ್ದೆವಲ್ಲ? ಒಂದು ಬಟನ್ ಒತ್ತಿದರೆ, ಅಲ್ಲೆಲ್ಲೋ ಮಿಣಮಿಣ ಬೆಳಕು ಮೂಡಿ, ತಿರುಗುವ ಕುರ್ಚಿ ಬಂದು, ಮತ್ತೆಲ್ಲೋ ಅಡಗಿದ್ದ ಬಾಗಿಲು ತೆರೆದುಕೊಂಡು, ಇನ್ನೆಲ್ಲೋ ಅಡಗಿದ್ದ ಗನ್ ಹೊರಬಂದು - ಹೀಗೆ ಅಸಾಧ್ಯವೆನ್ನುವುದನ್ನು ಸಾಧ್ಯವೆನಿಸುವಂತೆ ತೋರಿಸಲಾಗುತ್ತಿತ್ತು; ತಂತ್ರಜ್ಞಾನ ಕ್ಷೇತ್ರವು ಮುಂದುವರಿದು, ಅಂದಿನ ಅಚ್ಚರಿ ಇಂದಿನ ನಿತ್ಯ ಸತ್ಯವಾಗಿದೆ.

ಇಂದು ಬೆರಳತುದಿಯಲ್ಲಿ ಜಗದಗಲದ ಸುದ್ದಿಯಿದೆ; ಕೃತಕ ಬುದ್ಧಿಮತ್ತೆಯ ಮುಲಾಜಿದೆ; ಅಂಗೈಯಲ್ಲಿ ಅಡಗಿದ ಫೋನಿನಲ್ಲಿ ಇರುವ ಸಾವಿರಾರು ಬಗೆಯ 'ಆ್ಯಪ್'ಗಳು ಅಲ್ಲೆಲ್ಲೋ ಇರುವ ಉಪಗ್ರಹದ ಚಲನೆಯನ್ನು ನಿಖರವಾಗಿ ತಿಳಿಸುತ್ತವೆ; ಹಳ್ಳಿಯ ಬ್ಯಾಂಕಿನಿಂದ ಹೊರದೇಶದ ಬ್ಯಾಂಕಿಗೆ ಹಣ ಕಳಿಸುತ್ತದೆ; ಎಲ್ಲಿಗೋ ದೂರದ ದೇಶಕ್ಕೆ ವಿಮಾನವನ್ನು ಬುಕ್ ಮಾಡಬಹುದು; ಎಲ್ಲಿಂದಲೋ ತಿಂಡಿ ನಮ್ಮ ಮನೆ ಬಾಗಿಲಿಗೆ ಬರಬಹುದು - ಒಂದೇ 'ಕ್ಲಿಕ್'ನಿಂದ! ಈಗಾಗಲೇ ಮನೆಮನೆಗೂ ನೆಲವನ್ನು ಒರೆಸಲು ರೋಬೋ ಬಂದಾಗಿದೆ. ಇನ್ನು ರೋಬೋಗಳೆಂದರೆ ಅದೇನೋ ಹೊಸ ವಿಷಯವೆನ್ನುವಂತೆ ಹಿರಿಯರ ಹುಬ್ಬು ಹಾರಿಸುತ್ತಿಲ್ಲ; ಕಿರಿಯರಿಗಂತೂ, ಅವು ತಮ್ಮ ಫ್ರೆಂಡ್ ಸರ್ಕಲ್ಲಿನ ಒಂದು ಭಾಗವೆಂಬಂತಾಗಿದೆ; ಅಂತಹ ರೋಬೋಗಳ ಕ್ಷೇತ್ರದಲ್ಲಿ ಹೊಸದೊಂದು ಬೆಳವಣಿಗೆಯಾಗಿದೆ; ನಮ್ಮ ಒಳಹೊರಗೂ ಇರುವ ಪುಟಾಣಿ ಸೂಕ್ಷ್ಮಾಣುಜೀವಿಗಳಿವೆಯಲ್ಲ? ಅಷ್ಟೇ ಪುಟ್ಟದಾದ ರೋಬೋಟ್ ಈಗ ತಯಾರಾಗಿದೆ ಗೊತ್ತಾ?! 'ಅದರಲ್ಲೇನು ದೊಡ್ಡ ವಿಷಯ? ದೊಡ್ಡ ಪುತ್ಥಳಿ ನಿರ್ಮಾಣ ಮಾಡಿದಂತೆಯೇ ಪುಟ್ಟ ಪುತ್ಥಳಿಯನ್ನು ಮಾಡಿದರಾಯ್ತು; ದೊಡ್ಡ ಪ್ರಮಾಣದಲ್ಲಿ ಅಡುಗೆ ಮಾಡಿದಂತೆಯೇ ಅಲ್ಪಪ್ರಮಾಣದಲ್ಲೂ ಮಾಡಬಹುದಲ್ಲಾ?' ಎಂದುಕೊಳ್ಳಬೇಡಿ ಮತ್ತೆ! ಇದು ಸೂಕ್ಷ್ಮ ರೋಬೋಗಳ ಸೂಕ್ಷ್ಮವಿಷಯ! ಅಮೆರಿಕದ ಪೆನ್ಸಿಲ್ವೇನಿಯಾ ಮತ್ತು ಮಿಶಿಗನ್ ವಿಶ್ವವಿದ್ಯಾಲಯದ ಸಂಶೋಧಕರು ತಯಾರಿಸಿರುವ ಈ ಪುಟಾಣಿ ರೋಬೋಗಳ ಗಾತ್ರ, ಒಂದು ದೂಳಿನ ಕಣಕ್ಕೆ ಸಮ! 'ಹೇ, ರೋಬೋ ಚಿಕ್ಕದಿರಬಹುದು, ತೀರ ಅಷ್ಟು ಚಿಕ್ಕದು ಸಾಧ್ಯವೇ?' ಎಂದು ಸಂದೇಹ ಪಡಬೇಡಿ ಮತ್ತೆ! ಇದು ಖಂಡಿತ ಅತಿಶಯೋಕ್ತಿಯಲ್ಲ. ಈ ಸೂಕ್ಷ್ಮ ರೋಬೋಗಳ ನಿಜವಾದ ಗಾತ್ರ 200 x 300 x 50 ಮೈಕ್ರೋಮೀಟರ್. ಒಂದು ಮಿಲೀಮೀಟರ್‌ನ ಸಾವಿರದ ಒಂದು ಭಾಗವೇ ಒಂದು ಮೈಕ್ರೋಮೀಟರ್; ಹಾಗಿದ್ದ ಮೇಲೆ ಈ ರೋಬೋಗಳು ಬರಿಕಣ್ಣಿಗೇ ಕಾಣುವುದು ಸಾಧ್ಯವೇ? ಅದನ್ನು ಒಂದು ಸ್ವತಂತ್ರವಾಗಿ ಚಲಿಸಬಲ್ಲ, ಅನೇಕ ನಿಖರವಾದ ಕೆಲಸಗಳನ್ನು ನಿರ್ವಹಿಸಬಲ್ಲ ರೋಬೋಟನ್ನಾಗಿ ಮಾಡುವುದು ಅದೆಂತಹ ಸವಾಲು ಎಂಬುದನ್ನು ಊಹಿಸಿ.

ಅಷ್ಟು ಪುಟ್ಟ ವಸ್ತುವಿನಲ್ಲಿ ಅದೆಷ್ಟು ಮಾಹಿತಿಯನ್ನು ಅಡಗಿಸಬೇಕು, ಸೆನ್ಸರ್‌ಗಳನ್ನು ಲಗತ್ತಿಸಬೇಕು, ವಿದ್ಯುನ್ಮಾನ ವಿವರಗಳನ್ನು ಅಳವಡಿಸಬೇಕು; ಜೊತೆಗೆ ತನ್ನ ಪಾಡಿಗೆ ತಾನು ಚಲಿಸಲು, ಚಾರ್ಜ್ ಆಗಲು, ಮಾಹಿತಿ ಕಲೆಹಾಕಲು ಸಾಧ್ಯವಾಗುವಂತೆ ಆ ಪುಟಾಣಿ ರೋಬೋ ಸಮರ್ಥವಾಗಿರಬೇಕು - ಇವೆಲ್ಲವನ್ನೂ ಯೋಚಿಸಿದಾಗ, ತಂತ್ರಜ್ಞಾನ ಕ್ಷೇತ್ರದಲ್ಲಿ ಇದೆಂತಹ ಮೈಲಿಗಲ್ಲು ಎಂಬುದು ಅರ್ಥವಾಗಬಹುದು. ಈ ಸೂಕ್ಷ್ಮ ರೋಬೋಗಳು ಬೆಳಕನ್ನು ಉಪಯೋಗಿಸಿಕೊಂಡು ಸ್ವತಂತ್ರವಾಗಿ ಚಾರ್ಜ್ ಆಗುತ್ತವೆ; ಎಲ್.ಇ.ಡಿ. ಬಲ್ಬ್‌ನ ಬೆಳಕೇ ಇವಕ್ಕೆ ಆಹಾರ. ಆದರೆ ಇಷ್ಟು ಪುಟ್ಟ 'ಸೋಲಾರ್ ಪ್ಯಾನೆಲ್'ಗಳು ಕೇವಲ 75 ನ್ಯಾನೋ ವ್ಯಾಟ್‌ಗಳಷ್ಟು ಮಾತ್ರ ವಿದ್ಯುತ್ ಉತ್ಪಾದಿಸಬಹುದು; ಹಾಗಾಗಿ ಇಲ್ಲಿ ಮಿಶಿಗನ್ ವಿಶ್ವವಿದ್ಯಾಲಯದ ಸಂಶೋಧಕರು ವಿಶೇಷವಾಗಿ ತಯಾರಿಸಿದ ಸರ್ಕ್ಯೂಟ್'ಗಳನ್ನು ಬಳಸಿದ್ದಾರೆ; ಅದು ಅತ್ಯಂತ ಕಡಿಮೆ ವೋಲ್ಟೇಜಿನಲ್ಲಿ ಕಾರ್ಯವಹಿಸುವಂತೆ ಮಾಡಿ, ಒಂದು ಸಾವಿರ ಪಟ್ಟು ಕಡಿಮೆ ವಿದ್ಯುತ್ ಬಳಸುವಂತೆ ಮಾಡಲಾಗಿದೆ. ಹಾಗಾಗಿ, ವಿದ್ಯುತ್ ಉತ್ಪಾದನೆ ಕದಿಮೆಯಿದ್ದರೂ, ಬೇಡಿಕೆಯೂ ಕಡಿಮೆಯಾಗಿ, ರೋಬೋ ಸೂಕ್ತವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ.

ಇನ್ನು, ಈ ಪುಟಾಣಿ ರೋಬೋಗಳು ನೀರಿನಂತಹ ದ್ರವಗಳಲ್ಲಿ ಈಜುತ್ತಾ ಚಲಿಸಬೇಕಾದಾಗ, ಇವಕ್ಕೆ ಈಜಲು ಕೈಕಾಲುಗಳನ್ನೋ, ಮೀನಿನಂತೆ ರೆಕ್ಕೆಯನ್ನೋ ನೀಡಲು ಸಾಧ್ಯವೇ? ಅಷ್ಟು ಪುಟ್ಟ ಚಲಿಸುವ ಅಂಗಗಳು ಗಟ್ಟಿಯಾಗಿ, ಮುರಿಯದಂತೆ ಇರಲು ಯಾಂತ್ರಿಕವಾಗಿ ಕಷ್ಟಸಾಧ್ಯ. ಹಾಗಾಗಿ, ನೀರನ್ನು ಹಿಂದಕ್ಕೆ ತಳ್ಳುತ್ತಾ, ಈಜುತ್ತಾ ಮುಂದಕ್ಕೆ ಚಲಿಸುವುದು ದೂರದ ಮಾತು ಎಂದರಿತ ಸಂಶೋಧಕರು, ಇಲ್ಲಿ ಹೊಸ ಬಗೆಯ ಈಜನ್ನು ಈ ಸೂಕ್ಷ್ಮ ರೋಬೋಗಳಿಗೆ ಕಲಿಸಿದರು! ಭೌತಿಕ ಬಲವಿಲ್ಲದಿದ್ದರೇನು? ತನ್ನ ವಿದ್ಯುತ್ ಕ್ಷೇತ್ರವನ್ನು ಬಳಸಿ, ನೀರಿನಲ್ಲಿರುವ ಇತರ 'ಅಯಾನು'ಗಳನ್ನು ದೂರತಳ್ಳುತ್ತದೆ ಈ ಸೂಕ್ಷ್ಮ ರೋಬೋ! ಆ ಅಯಾನುಗಳು ತನ್ನ ಜೊತೆಗೆ ನೀರಿನ ಅಣುವನ್ನೂ ದೂರಕ್ಕೆ ಎಳೆದುಕೊಳ್ಳುತ್ತದೆ, ಆಗ ಈ ರೋಬೋ ಮುಂದಕ್ಕೆ ಚಲಿಸುತ್ತದೆ! ಹೀಗೆ ತನ್ನದೇ ವಿದ್ಯುತ್ ಕ್ಷೇತ್ರದಿಂದ, ನೀರಿನ ಹರಿವನ್ನು ನಿರ್ದೇಶಿಸುತ್ತವೆ, ಈ ಪುಟಾಣಿ ರೋಬೋಗಳು. ಲಕ್ಷ್ಮಣ ರಾಯರ ಪದ್ಯದ 'ಸಣ್ತಮ್ಮಣ್ಣ'ನಂತೆ ಈ ರೋಬೋ ಸಣ್ತಮ್ಮಣ್ಣ, ಠೀವಿಯಿಂದ ನೀರಿನ ಅಣುಗಳನ್ನು ಹಿಂದಕ್ಕಿಡುತ್ತಾ, ಮುಂದೆ ಚಲಿಸುತ್ತದೆ ಮತ್ತು ತನಗೆ ನೀಡಲಾದ ಕಾರ್ಯವನ್ನು ನಿರ್ವಹಿಸುತ್ತದೆ.

ಈ ಸೂಕ್ಷ್ಮ ರೋಬೋಗಳಲ್ಲಿ ಅಡಗಿದ 'ತಾಪಮಾನ ಮಾಪಕ'ಗಳು ತಮ್ಮ ಸುತ್ತಲಿನ ತಾಪಮಾನವನ್ನು ಅತ್ಯಂತ ನಿಖರವಾಗಿ ಗುರುತಿಸಿದ ನಂತರ, ಅದರ ಬಗ್ಗೆ ಮಾಹಿತಿಯನ್ನು ಹೇಗೆ ತಿಳಿಸುತ್ತವೆ ಗೊತ್ತೇ? ನೃತ್ಯದ ಮೂಲಕ! ಹೌದು, ಈಜನ್ನು ಕಲಿಸಿದ ವಿಜ್ಞಾನಿಗಳೇ ಈ ರೋಬೋಗಳಿಗೆ ನೃತ್ಯವನ್ನೂ ಕಲಿಸಿದ್ದಾರೆ! ಜೇನುಹುಳಗಳನ್ನೂ ಒಳಗೊಂಡಂತೆ ಅನೇಕ ಕೀಟಗಳು ತಮ್ಮ ನಿರ್ದಿಷ್ಟವಾದ ಶೈಲಿಯ ನೃತ್ಯದ ಮೂಲಕ, ತಮ್ಮತಮ್ಮಲೇ ಅನೇಕ ಮಾಹಿತಿಯನ್ನು ರವಾನಿಸಿಕೊಳ್ಳುವುದು ನಿಮಗೆ ಗೊತ್ತಿರಬಹುದು; ಅದೇ ರೀತಿ, ತಾಪಮಾನ ಎಷ್ಟಿದೆ ಎಂಬ ಮಾಹಿತಿಯನ್ನು ಈ ಪುಟ್ಟ ರೋಬೋಗಳು ನಿರ್ದಿಷ್ಟ ಬಗೆಯಲ್ಲಿ ಅಲುಗಾಡಿ, ಮಿಸುಕಾಡಿ ಸಂಖ್ಯೆಯನ್ನು ಸೂಚಿಸುತ್ತವೆ. ಅದಕ್ಕಾಗಿಯೇ ಅತ್ಯಂತ ಸಮರ್ಥವಾದ, ಆದರೆ ಚಿಕ್ಕದಾದ ಪ್ರೋಗ್ರಾಂಗಳನ್ನೂ ಬರೆದು ಈ ರೋಬೋಗಳಲ್ಲಿ ಸೇರಿಸಬೇಕಾಗಿದ್ದುದು ಸಂಶೋಧಕರಿಗಿದ್ದ ಮತ್ತೊಂದು ಸವಾಲು; ಅದನ್ನೂ ಗೆದ್ದು ತಯಾರಾದ ಈ ನೃತ್ಯಪಟು, ಈಜುಪಟು ಸೂಕ್ಷ್ಮಾಣು ರೋಬೋ, ತನ್ನ ಇಂತಹ ವೈಶಿಷ್ಟ್ಯಗಳಿಂದಲೇ ವೈದ್ಯಕೀಯ ಕ್ಷೇತ್ರದಲ್ಲಿ, ರಕ್ಷಣಾಕ್ಷೇತ್ರದಲ್ಲಿ ಅನೇಕ ಅದ್ವಿತೀಯ ಆನ್ವಯಿಕೆಗಳಿಗೆ ಕಾರಣವಾಗುತ್ತದೆ ಎಂಬುದು ಸಂಶೋಧಕರ ನಂಬಿಕೆ.

❖

## ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

## ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

## ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

### ವಿಜ್ಞಾನ

**ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–**

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

**1) ವಿದ್ಯುತ್ ಮಂಡಲದಲ್ಲಿ ಉಪಯೋಗಿಸುವ ಕೆಳಗಿನ ಘಟಕಗಳ ಚಿಹ್ನೆಗಳನ್ನು ಬರೆಯಿರಿ**

**1) ಪರಿವರ್ತಿತ ರೋಧ (ರಿಯೋಸ್ಟ್ಯಾಟ್)**

**2) ತಂತಿಗಳು ಸೇರುವ ಸ್ಥಳ**

**ಉತ್ತರ:–**

i) ii)



**2) ಒಂದು ದ್ರವರೂಪದ ಅಲೋಹವನ್ನು ಹೆಸರಿಸಿ**

**ಉತ್ತರ:–** ಬ್ರೋಮಿನ್

**3) ಒಂದು ದ್ರವರೂಪದ ಲೋಹವನ್ನು ಹೆಸರಿಸಿ**

**ಉತ್ತರ:–** ಪಾದರಸ

**4) ಕಾಯಜ ಸಂತಾನೋತ್ಪತ್ತಿ ಎಲ್ಲಿ ಬಳಸಲಾಗುತ್ತದೆ?**

**ಉತ್ತರ:–** ಕಾಯಜ ಸಂತಾನೋತ್ಪತ್ತಿಯ ಈ ಲಕ್ಷಣವನ್ನು ಲೇಯರಿಂಗ್ ಅಥವಾ ಕಸಿಮಾಡುವಿಕೆಯಂತಹ ವಿಧಾನಗಳಲ್ಲಿ ಕೃಷಿಯ ಉದ್ದೇಶಕ್ಕಾಗಿ ಕಬ್ಬು, ಗುಲಾಬಿ ಅಥವಾ ದ್ರಾಕ್ಷಿಗಳಂಥ ಅನೇಕ ಸಸ್ಯಗಳನ್ನು ಬೆಳೆಸಲು ಬಳಸಲಾಗುತ್ತದೆ.

**5) ಕೆಳಗಿನ ಕೊಟ್ಟಿರುವ ಮೂರು ಬೇರೆ ಬೇರೆ ಪ್ರಾಣಿಗಳ ಹೃದಯವನ್ನು ಪ್ರತಿನಿಧಿಸುತ್ತವೆ. ಅವುಗಳನ್ನು ಗಮನಿಸಿ ಮತ್ತು ಪ್ರಶ್ನೆಗಳಿಗೆ ಉತ್ತರಿಸಿ.**

**ಇವುಗಳಲ್ಲಿ ಯಾವ ಹೃದಯವು ಅಧಿಕ ಶಕ್ತಿ ಇರುವ ಪ್ರಾಣಿಗಳಿಗೆ ಉಪಯುಕ್ತ? ಮತ್ತು ಏಕೆ?**

**ಉತ್ತರ:–** ಅಧಿಕ ಶಕ್ತಿ ಇರುವ ಪ್ರಾಣಿಗಳಿಗೆ 2ನೇ ಹೃದಯವು ಉಪಯುಕ್ತವಾಗಿದೆ. ಯಾಕೆಂದರೆ ಇವುಗಳಲ್ಲಿ ಆಮ್ಲಜನಕಯುಕ್ತ ರಕ್ತ ಹಾಗೂ ಆಮ್ಲಜನಕ ರಹಿತ ರಕ್ತವು ಮಿಶ್ರಿತವಾಗುವುದಿಲ್ಲ, ಇಂತಹ ಹೃದಯವು ಸಮರ್ಥ ಆಮ್ಲಜನಕದ ಪೂರೈಕೆಗೆ ಹಾಗೂ ದೇಹದಲ್ಲಿ ಉಷ್ಣತೆ ಕಾಪಾಡಿಕೊಳ್ಳಲು ಸಹಕಾರಿಯಾಗಿದೆ

**6) ಮಾನವನಲ್ಲಿ ಆಲೋಚನೆ ಮಾಡಲು ಸಹಾಯ ಮಾಡುತ್ತದೆ. ವಿವಿಧ ಭಾಗಗಳಿಂದ ಸಂವೇದನಾ ಆವೇಗಗಳನ್ನು ಸ್ವೀಕರಿಸುತ್ತದೆ. ಈ ಪ್ರದೇಶ ಶ್ರವಣ, ವಾಸನೆ, ದೃಷ್ಟಿ ಮತ್ತಿತ್ತರ ಕಾರ್ಯ ನಡೆಸಲು ಅನುಕೂಲವಾಗಿದೆ.**

**ಇದು ಯಾವುದಕ್ಕೆ ಸಂಬಂಧಿಸಿದ ವಿವರಣೆಯಾಗಿದೆ?**

**ಉತ್ತರ:–** ಮುಮ್ಮೆದುಳು

**7) ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಏನನ್ನು ಸಂಯೋಜಿಸುತ್ತದೆ?**

**ಉತ್ತರ:–** ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ವಿಭಿನ್ನ ಜೀವಿಗಳ ಡಿಎನ್‌ಎ ಅಣುಗಳ ಸೇರುವಿಕೆ ಪ್ರಕ್ರಿಯೆಯನ್ನು ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಸಂಯೋಜಿಸುತ್ತದೆ.

**8) ಬಿಳಿಯ ಬೆಳಕಿನ ರೋಹಿತ ಎಂದರೇನು?**

**ಉತ್ತರ:–** ಬಿಳಿಯ ಬೆಳಕಿನ ಕಿರಣದ ವರ್ಣಮಯ ಘಟಕಗಳ ಪಟ್ಟಿಯನ್ನು ಬಿಳಿಯ ಬೆಳಕಿನ ರೋಹಿತ ಎಂದು ಕರೆಯುತ್ತೇವೆ

**9) ಏಕಲಿಂಗಿ ಹೂವು ಯಾವುದು?**

**ಉತ್ತರ:–** ಒಂದು ಹೂವು ಕೇವಲ ಕೇಸರಗಳನ್ನೋ ಅಥವಾ ಶಲಾಕಗಳನ್ನೋ ಹೊಂದಿದ್ದರೆ ಅದು ಏಕಲಿಂಗಿ ಹೂವು ಎನ್ನುವರು

ಉದಾ:– ಪಪಾಯ, ಕಲ್ಲಂಗಡಿ

**10) ಕಣ್ಣನ್ನು ಪ್ರವೇಶಿಸುವ ಬೆಳಕಿನ ಕಿರಣಗಳ ಹೆಚ್ಚಿನ ವಕ್ರೀಭವನವು ಎಲ್ಲಿ ಉಂಟಾಗುತ್ತದೆ?**

**ಉತ್ತರ:–** ಕಣ್ಣನ್ನು ಪ್ರವೇಶಿಸುವ ಬೆಳಕಿನ ಕಿರಣಗಳ ಹೆಚ್ಚಿನ ವಕ್ರೀಭವನವು ಕಾರ್ನಿಯಾದ ಹೊರ ಮೇಲ್ಮೈನಲ್ಲಿ ಉಂಟಾಗುತ್ತದೆ

**11) ಓಮ್ ನಿಯಮವನ್ನು ಬರೆಯಿರಿ**

**ಉತ್ತರ:-** ಸ್ಥಿರವಾದ ತಾಪಮಾನದಲ್ಲಿ ವಿದ್ಯುತ್ ಮಂಡಲದಲ್ಲಿನ ಲೋಹದ ತಂತಿಯ ನಡುವಿನ ವಿಭವಾಂತರ V ಯು ಅದರ ಮೂಲಕ ಹರಿಯುವ ವಿದ್ಯುತ್ ಪ್ರವಾಹಕ್ಕೆ ನೇರ ಅನುಪಾತದಲ್ಲಿರುತ್ತದೆ. ಇದನ್ನು ಓಮ್‌ನ ನಿಯಮ ಎಂದು ಕರೆಯುವರು.

**12) ವಿದ್ಯುತ್ ಪ್ರವಾಹದ ಏಕಮಾನವನ್ನು ವ್ಯಾಖ್ಯಾನಿಸಿ**

**ಉತ್ತರ:–** ವಿದ್ಯುತ್ ಪ್ರವಾಹದ ಏಕಮಾನ ಆಂಪೀಯರ್(A) ಒಂದು ಅಂಪಿಯರ್ ವಿದ್ಯುತ್ ಪ್ರವಾಹದ ರಚನೆಯು ಪ್ರತಿ ಸೆಕೆಂಡಿಗೆ ಒಂದು ಕೂಲಂಬ್ ಆವೇಶದ ಪ್ರವಾಹವಾಗಿದೆ.

**13) ಒಂದೊಂದು ಉದಾಹರಣೆಯೊಂದಿಗೆ ಇವುಗಳನ್ನು ವಿವರಿಸಿ**

**ಅ) ನಶಿಸುವಿಕೆ ಬ) ಕಮಟುವಿಕೆ**

**ಉತ್ತರ:–**

**ನಶಿಸುವಿಕೆ:–** ಲೋಹಗಳು ತಮ್ಮ ಸುತ್ತಲಿನ ತೇವಾಂಶ, ಆಮ್ಲಗಳ ಪರಿಣಾಮ ತಮ್ಮ ಹೊಳಪನ್ನು ಕಳೆದುಕೊಂಡು ಕ್ರಮೇಣ ನಾಶವಾಗಲು ಆರಂಭಿಸುತ್ತವೆ ಈ ಪ್ರಕ್ರಿಯೆಗೆ ನಶಿಸುವಿಕೆ ಎನ್ನುವರು. ಉದಾ:– ಕಬ್ಬಿಣ ತುಕ್ಕು ಹಿಡಿಯುವುದು

**ಕಮಟುವಿಕೆ:–** ಕೊಬ್ಬು ಮತ್ತು ಎಣ್ಣೆ ಪದಾರ್ಥಗಳು ಉತ್ಕರ್ಷಣೆಗೆ ಒಳಗಾಗಿ ವಾಸನೆ ಮತ್ತು ರುಚಿಯಲ್ಲಿ ಬದಲಾವಣೆ ಹೊಂದುವುದನ್ನು ಕಮಟುವಿಕೆ ಎನ್ನುವರು. ಉದಾ:– ಹಲವು ದಿನಗಳಿಂದ ಸಂಗ್ರಹಿಸಿಟ್ಟ ಎಣ್ಣೆಯಿಂದ ತಯಾರಿಸಿದ ಪದಾರ್ಥಗಳು ಕಮಟುವಿಕೆಗೆ ಒಳಗಾಗಿ ತನ್ನ ಮೂಲ ರುಚಿ ಹಾಗೂ ವಾಸನೆಯನ್ನು ಕಳೆದುಕೊಂಡು ತಿನ್ನಲು ಯೋಗ್ಯವಲ್ಲದವುಗಳಾಗಿ ಬದಲಾಗುತ್ತದೆ

**14) ಗೋಳೀಯ ದರ್ಪಣದ ವಕ್ರತಾ ಕೇಂದ್ರ ಎಂದರೇನು?**

**ಉತ್ತರ:–** ಗೋಳೀಯ ದರ್ಪಣದ ಪ್ರತಿಫಲಿಸುವ ಮೇಲ್ಮೈ ಗೋಳದ ಒಂದು ಭಾಗವನ್ನು ರೂಪಿಸುತ್ತದೆ. ಈ ಗೋಳದ ಕೇಂದ್ರವನ್ನು ವಕ್ರತಾ ಕೇಂದ್ರ ಎನ್ನುವರು.

**15) ಪ್ರಭೇದಿಕರಣಕ್ಕೆ ಕಾರಣವಾಗುವ ಅಂಶಗಳನ್ನು ಹೆಸರಿಸಿ**

**ಉತ್ತರ:–** ಭಿನ್ನತೆಗಳು, ಭೌಗೋಳಿಕ ಬೇರ್ಪಡಿವಿಕೆ.

**16) ಕೊಟ್ಟಿರುವ ಚಿತ್ರವನ್ನು ಗಮನಿಸಿ ಚಿತ್ರವು ಸೂಚಿಸುವ ದೃಷ್ಟಿ ದೋಷವನ್ನು ಹೆಸರಿಸಿ. ಮತ್ತು ಆ ದೃಷ್ಟಿ ದೋಷವನ್ನು ಸರಿಪಡಿಸಲು ಉಪಯೋಗಿಸುವ ಮಸೂರವನ್ನು ತಿಳಿಸಿ**



**ಉತ್ತರ:–** * ಸಮೀಪ ದೃಷ್ಟಿದೋಷ(ಮಯೊಪಿಯಾ)
* ನಿಮ್ನ ಮಸೂರ

**17) ಕಾರಣ ಕೊಡಿ**

**ಎ) ವಿದ್ಯುತ್ ದೀಪಗಳ ತಂತುಗಳಲ್ಲಿ ಟಂಗ್‌ಸ್ಟನ್ ಅನ್ನು ಬಳಸಲಾಗುತ್ತದೆ?**

**ಬಿ) ಗೃಹಬಳಕೆ ವಿದ್ಯುತ್ ಮಂಡಲಗಳಲ್ಲಿ ವಿದ್ಯುತ್ ಉಪಕರಣಗಳನ್ನು ಸರಣಿಕ್ರಮದಲ್ಲಿ ಜೋಡಿಸುವುದಿಲ್ಲ**

**ಅಥವಾ**

(ಮುಂದುವರಿಯುವುದು)

### CHEMISTRY

**REVISION : MODEL QUESTIONS**

**Fill in the blanks by choosing the appropriate word from those given in the brackets: (phosgene, tin, hydrogen, molecularity, zinc, cellulose acetate)**

**(.......Contd)**

4. The poisonous gas formed when chloroform is exposed to air and lightis ________.

Ans:- **phosgene**

5. Solubility of ethylamine in water is due to formation of ________bonding with water

Ans:- **hydrogen**

***II. Answer ALL of the following:-***

**1. Define the term 'Molarity'.**

**Ans:-** Number of moles of solute in one $dm^2$ of solution is called molarity.

**2. Mention the enthalpy of mixing ($\Delta_{mix}H$) value to form an ideal solution.**

**Ans:-** The enthalpy of mixing (($\Delta_{mix}H$) value to form an ideal solution is Zero.

**3. What is a secondary ccell?**

**Ans:-** The cells which are recharged repeatedly are called secondary cell.

**4. For the reaction $2HI \rightarrow H_2 + I_2$ write its molecularity.**

**Ans:-** The molecularity of the reaction is 2.

**5. Write the catalyst used in the decomposition of potassium chlorate to get potassium chloride and oxygen.**

**Ans:-** Manganese dioxide.

**6. Name the refining method used to produce semiconductors.**

**Ans:-** Zone refining.

**7. Give a reason for chemical inertness of Nobel gases.**

**Ans:-** They have octate electronic configuration ($ns^2np^6$) in the valence shell.

**8. $H_3C - Br + AgF \rightarrow H_3C - F + AgBr$.**

**Name the reaction.**

**Ans:-** Swart's reaction.

**9. Mention the hybridized state of carbonyl carbon atom.**

**Ans:-** $sp^2$ hybridized.

**10. Which is the nitrogenous base present only in RNA but not in DNA?**

**Ans:-** Uracil

**11. Aluminium crystallizes in an FCC structure. Atomic radius of the metal is 125pm. Calculate the edge length of unit cell of the metal.**

**Ans:-** $a = 2\sqrt{2} \times r$

$= 2\sqrt{2} \times 125$

$= 353.5$ pm

***III. Answer any five of the following:-***

**12. What is molar conductivity? How is it related to the conductivity of a solution whose concentration is $Cmolm^{-3}$?**

**Ans:-** The conductance due to all the ions in a solution containing one mole of the electrolyte. The relation between the conductivity of a solution whose concentration is $Cmolm^{-3}$ is

$$\ddot{E}_m = \frac{k}{C}$$

**13. Define the collision frequency. Given an example for Pseudo-first order reaction.**

**Ans:-** It is the number of collisions per second per unit volume of the reaction mixture Acid hydrolysis of an ester.

**14. What is Lanthanoid contraction? Mention one of its consequences.**

**Ans:-** Decrease in atomic radii from lanthanum to Lutetium.

Radii of 3rd row transition series elements are almost similar to that of 2nd row transition series elements.

**15. Complete the following reactions:**

$$\text{i) } R-CH_2-OH \xrightarrow[573K]{Cu} \ldots\ldots\ldots\ldots$$

$$\text{ii) } CH_3-CH=CH_2+H_2O \xrightleftharpoons{H^+} \ldots\ldots\ldots\ldots$$

Ans :– i) $R-CHO + H_2$, ii) $CH_3-CH(OH)-CH_3$

**16. Explain Rosenmund's reduction of benzoyal chloride.**

**Ans:-** When benzoyl chloride are treated with hydrogen gas through boiling xylene in the presence of palladium catalyst supported over barium sulphate they get reduced to benzaldehyde. This reaction is called Rosenmund's reduction.




**17. What are food preservatives? Give an example.**

**Ans:-** Food preservatives are chemicals which prevent spoilage of food due to microbial growth.

**18. Mention a drug which can act, both as an analgesic as well as an antipyretic. Name an artificial sweetening agent.**

**Ans:-** The drug which can act both as an analgesic as well as an antipyretic is aspirin. An artificial sweetening agent is saccharin.

(Contd.........)

# ‘ಆಪರೇಷನ್ ಸಿಂಧೂರ ಚಾಲ್ತಿಯಲ್ಲಿದೆ’

## ದುಸ್ಸಾಹಸ ತೋರಿದರೆ ತಕ್ಕ ತಿರುಗೇಟು : ಸೇನಾ ಮುಖ್ಯಸ್ಥ ದ್ವಿವೇದಿ ಎಚ್ಚರಿಕೆ

ಉಪೇಂದ್ರ ದ್ವಿವೇದಿ

ನವದೆಹಲಿ (ಪಿಟಿಐ): ಆಪರೇಷನ್ ಸಿಂಧೂರ ಇನ್ನೂ ಜಾರಿಯಲ್ಲಿಯೇ ಇದೆ. ಎದುರಾಳಿಗಳು ದುಸ್ಸಾಹಸ ತೋರಿದರೆ ಅದಕ್ಕೆ ತಕ್ಕ ತಿರುಗೇಟು ನೀಡಲಾಗುತ್ತದೆ ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಮಂಗಳವಾರ ಹೇಳಿದ್ದಾರೆ. ಈ ಮೂಲಕ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿರುವ ದ್ವಿವೇದಿ,‘ಆಪರೇಷನ್ ಸಿಂಧೂರದ ಮೂಲಕ ಭಯೋತ್ಪಾದಕ ನೆಲೆಗಳನ್ನು ಧ್ವಂಸಗೊಳಿಸಿ, ಅಣ್ವಸ್ತ್ರದ ಬಗ್ಗೆ ಇಸ್ಲಾಮಾಬಾದ್‌ಗೆ ಇದ್ದ ಒಣಪ್ರತಿಷ್ಠೆಯನ್ನು ಮಣ್ಣುಪಾಲು ಮಾಡಿದ್ದೇವೆ. ಇದರಿಂದ ಕಾರ್ಯತಂತ್ರದ ವ್ಯಾಖ್ಯಾನದ ಬಗೆಗೆ ಇದ್ದ ದೃಷ್ಟಿಕೋನ ಬದಲಿಸಲು ಸಾಧ್ಯವಾಗಿದೆ. ಗಡಿಯಾಚೆಗಿನ ಭಯೋತ್ಪಾದನೆ ವಿರುದ್ಧದ ಭಾರತದ ದಿಟ್ಟ ಪ್ರತಿಕ್ರಿಯೆ, ಕಾರ್ಯತಂತ್ರದ ಸ್ಪಷ್ಟತೆಯನ್ನು ಇದು ಪ್ರದರ್ಶಿಸುತ್ತದೆ’ ಎಂದಿದ್ದಾರೆ.

ಇದೇ ವೇಳೆ ಭಾರತ–ಚೀನಾ ನಡುವಿನ ವಾಸ್ತವ ಗಡಿ ನಿಯಂತ್ರಣ ರೇಖೆ (ಎಲ್‌ಎಸಿ) ಕುರಿತು ಮಾಹಿತಿ ನೀಡಿ, ‘ಎಲ್‌ಎಸಿ ಬಳಿ ಪರಿಸ್ಥಿತಿ ಸ್ಥಿರವಾಗಿದೆ. ಆದಾಗ್ಯೂ, ನಿರಂತರ ಮೇಲ್ವಿಚಾರಣೆ ನಡೆಸುವ ಅಗತ್ಯವಿದೆ. ಒಪ್ಪಂದಗಳ ನವೀಕರಣ ಹಾಗೂ ವಿಶ್ವಾಸ ವೃದ್ಧಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳು ಪರಿಸ್ಥಿತಿ ಸಹಜವಾಗಿರಲು ಸಹಕಾರಿಯಾಗಿವೆ’ ಎಂದೂ ತಿಳಿಸಿದ್ದಾರೆ.

ಜತೆಗೆ ಜಮ್ಮು–ಕಾಶ್ಮೀರದಲ್ಲಿ ಪರಿಸ್ಥಿತಿ ಸೂಕ್ಷ್ಮವಾಗಿಯೇ ಇದ್ದರೂ ನಿಯಂತ್ರಣದಲ್ಲಿದೆ ಎಂದೂ ಅವರು ಹೇಳಿದ್ದಾರೆ.

### ಶೋಧ: ಗುಂಡಿನ ಮೊರೆತದ ಸದ್ದು

ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ಕಠುವಾ ಜಿಲ್ಲೆಯ ಕುಗ್ರಾಮಗಳಲ್ಲಿ ಭಯೋತ್ಪಾದಕರು ಅಡಗಿರುವ ಬಗ್ಗೆ ಶಂಕೆ ವ್ಯಕ್ತವಾಗುತ್ತಿದ್ದಂತೆಯೇ ಭದ್ರತಾ ಪಡೆಗಳು ಮಂಗಳವಾರ ಶೋಧ ಕಾರ್ಯಾಚರಣೆ ಆರಂಭಿಸಿವೆ. ಇದಾಗುತ್ತಿದ್ದಂತೆಯೇ ಗುಂಡಿನ ಮೊರೆತದ ಸದ್ದು ಕೇಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಲಾವರದ ನಜೋತೆ ಅರಣ್ಯ ಪ್ರದೇಶದಲ್ಲಿ ಗುಂಡಿನ ಮೊರೆತ ಕೇಳಿಸಿದೆ. ಈ ಪ್ರದೇಶವು ಜನವರಿ 7ರಂದು ಭದ್ರತಾ ಸಿಬ್ಬಂದಿ ಹಾಗೂ ಉಗ್ರರ ನಡುವೆ ಗುಂಡಿನ ಚಕಮಕಿ ನಡೆದಿದ್ದ ಕಹೋಗ್ ಅರಣ್ಯ ಪ್ರದೇಶದಿಂದ 10 ಕಿ.ಮೀ. ದೂರದಲ್ಲಿದೆ ಎಂದೂ ಮಾಹಿತಿ ನೀಡಿದ್ದಾರೆ.

ಭದ್ರತಾ ಸಿಬ್ಬಂದಿ ಶೋಧ ನಡೆಸುತ್ತಿರುವುದನ್ನ ತಿಳಿದು, ಶಂಕಿತ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದಾರೆ. ಜ.7ರಂದು ನಡೆದಿದ್ದ ಕಾರ್ಯಾಚರಣೆಯಲ್ಲಿ ಕತ್ತಲೆಯಿದ್ದ ಪರಿಣಾಮ ಭಯೋತ್ಪಾದಕರು ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರು ಎಂದೂ ಅಧಿಕಾರಿಗಳು ಹೇಳಿದ್ದಾರೆ.

### ಐವರು ಉದ್ಯೋಗಿಗಳ ವಜಾ


ಮನೋಜ್ ಸಿನ್ಹಾ

ಶ್ರೀನಗರ: ನಿಷೇಧಿತ ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಬಂಧ ಹೊಂದಿದ್ದ ಆರೋಪದ ಮೇಲೆ ಐವರು ಸರ್ಕಾರಿ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಿ ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಆದೇಶಿಸಿದ್ದಾರೆ.

ಈ ಮೂಲಕ, ಸರ್ಕಾರಿ ವ್ಯವಸ್ಥೆಯ ಒಳಗಿದ್ದುಕೊಂಡು ಭಯೋತ್ಪಾದಕ ಜಾಲಕ್ಕೆ ಬೆಂಬಲ ನೀಡುವವರ ವಿರುದ್ಧದ ಅಭಿಯಾನವನ್ನು ಚುರುಕುಗೊಳಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂವಿಧಾನದ 311(2)(ಸಿ) ಪರಿಚ್ಛೇದದಡಿ ಈ ಕ್ರಮ ಕೈಗೊಳ್ಳಲಾಗಿದೆ. ಈ ಪರಿಚ್ಛೇದವು ಇಲಾಖಾ ತನಿಖೆ ಇಲ್ಲದೇ ಸರ್ಕಾರಿ ಉದ್ಯೋಗಿಗಳ ವಜಾಕ್ಕೆ ಅವಕಾಶ ನೀಡುತ್ತದೆ.

‘ಕೆಲವು ಸರ್ಕಾರಿ ಉದ್ಯೋಗಿಗಳು ನಿಷೇಧಿತ ಲಷ್ಕರ್–ಎ–ತಯಬಾ ಮತ್ತು ಹಿಜ್ಬುಲ್ ಮುಜಾಹಿದೀನ್ ಜೊತೆ ಸಂಪರ್ಕ ಹೊಂದಿರುವ ಬಗ್ಗೆ ಗುಪ್ತಚರ ಮತ್ತು ತನಿಖಾ ಸಂಸ್ಥೆಗಳು ಮಾಹಿತಿ ನೀಡಿದ್ದವು’ ಎಂದು ಅವರು ತಿಳಿಸಿದರು.

ಲೆಫ್ಟಿನೆಂಟ್ ಗವರ್ನರ್ ಕಚೇರಿಯು 2021ರಿಂದ ಭಯೋತ್ಪಾದನೆ ಜಾಲಗಳ ವಿರುದ್ಧ ಕಾರ್ಯಾಚರಣೆ ನಡೆಸುತ್ತಿದೆ. ಉಗ್ರ ಜಾಲದೊಂದಿಗೆ ಸಂಪರ್ಕ ಹೊಂದಿದ ಆರೋಪದ ಮೇಲೆ ಪ್ರಮುಖ ಸರ್ಕಾರಿ ಉದ್ಯೋಗಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಂಡಿದೆ ಎಂದು ಹೇಳಿದರು.

# ಶಕ್ಸ್‌ಗಾಮ್ ಮಾತ್ರವಲ್ಲ, ಪಿಒಕೆಯೂ ನಮ್ಮದೇ: ಕವಿಂದರ್ ಗುಪ್ತಾ

ಜಮ್ಮು(ಪಿಟಿಐ): ಶಕ್ಸ್‌ಗಾಮ್ ಕಣಿವೆಯು ತನ್ನ ಭೂಭಾಗವಾಗಿದೆ ಎಂಬ ಚೀನಾ ದೇಶದ ವಾದವನ್ನು ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ಕವಿಂದರ್ ಗುಪ್ತಾ ಬಲವಾಗಿ ತಿರಸ್ಕರಿಸಿದ್ದಾರೆ.

ಶಕ್ಸ್‌ಗಾಮ್ ಕಣಿವೆ ತನ್ನ ಭೂಭಾಗವಾಗಿದೆ ಎಂದು ಸೋಮವಾರ ಚೀನಾ ಪ್ರತಿಪಾದಿಸಿದಕ್ಕೆ ಪ್ರತಿಕ್ರಿಯಿಸಿರುವ ಅವರು, ‘ಪಾಕ್ ಆಕ್ರಮಿತ ಕಾಶ್ಮೀರದ(ಪಿಒಕೆ) ಅಷ್ಟೂ ಪ್ರದೇಶ ಕೂಡ ಭಾರತಕ್ಕೆ ಸೇರಿದೆ’ ಎಂದು ಪ್ರಪಾದಿಸಿದರು.

‘ಈ ಪ್ರದೇಶದಲ್ಲಿ ಯಾರೇ ಭೂ ವಿಸ್ತರಣೆ ಮಾಡುವ ಪ್ರಯತ್ನವನ್ನು ಸಹಿಸಲಾಗುವುದಿಲ್ಲ’ ಎಂದು ಅವರು ಇದೇ ಸಂದರ್ಭದಲ್ಲಿ ಎಚ್ಚರಿಸಿದರು. ‘ಶಕ್ಸ್‌ಗಾವ್ ಪ್ರದೇಶದಲ್ಲಿ ಚೀನಾ ಕೈಗೊಂಡಿರುವ ಮೂಲಸೌಕರ್ಯ ಯೋಜನೆಗಳು ಖಂಡನೀಯ’ ಎಂದು ಒತ್ತಿ ಹೇಳಿದರು.

‘ಇಡೀ ಕಾಶ್ಮೀರವೇ(ಪಿಒಕೆ) ನಮ್ಮದು. ಪಾಕಿಸ್ತಾನವು ಚೀನಾದೊಂದಿಗೆ ಯಾವ ರೀತಿಯ ವ್ಯವಹಾರ ನಡೆಸಿದೆ ಎಂದು ನಮಗೆ ಗೊತ್ತಿಲ್ಲ. ಇಂಥ ವಿಸ್ತರಣಾವಾದಿ ನೀತಿಯಿಂದ ಏನನ್ನೂ ಸಾಧಿಸಲಾಗುವುದಿಲ್ಲ ಎಂಬುದನ್ನು ಚೀನಾ ಅರ್ಥ ಮಾಡಿಕೊಳ್ಳಬೇಕು’ ಎಂದು ಕವಿಂದರ್ ತಿಳಿಸಿದರು.

‘ಇಂಥವನ್ನು ಎದುರಿಸಲು ಭಾರತ ಸಮರ್ಥವಾಗಿದೆ. ಇದು 1962ರ ಭಾರತವಲ್ಲ, 2026ರ ಭಾರತ. ಇಂತಹ ಯಾವುದೇ ಪ್ರಯತ್ನಗಳನ್ನು ವಿಫಲಗೊಳಿಸುತ್ತೇವೆ. ಇದನ್ನೆಲ್ಲ ವಿದೇಶಾಂಗ ಸಚಿವಾಲಯ ಗಮನಿಸುತ್ತಿದೆ’ ಎಂದು ಅವರು ಎಚ್ಚರಿಸಿದರು.

**ಮುಖ್ಯಾಂಶಗಳು**

- ಚೀನಾದ ಪ್ರತಿಪಾದನೆಗೆ ತಿರುಗೇಟು ನೀಡಿದ ಭಾರತ
- ಈ ಪ್ರದೇಶದಲ್ಲಿ ಭೂ ವಿಸ್ತರಣೆ ಪ್ರಯತ್ನವನ್ನು ಸಹಿಸೆವು: ಎಚ್ಚರಿಕೆ
- ‘ಭಾರತ ಬಹಳ ಬಲಿಷ್ಠವಾಗಿದೆ ಎಂಬುದನ್ನು ಚೀನಾ ಅರಿತುಕೊಳ್ಳಲಿ’

‘ಚೀನಾ ಈ ಹಿಂದೆ ಅರುಣಾಚಲ ಪ್ರದೇಶದ ಕೆಲವು ಭಾಗಗಳ ಮೇಲೆ ಹಕ್ಕು ಸಾಧಿಸಿತ್ತು. ಇನ್ನು ಇಂಥ ಯಾವುದೇ ಕೃತ್ಯವನ್ನು ನಾವು ಸಹಿಸುವುದಿಲ್ಲ. ಭಾರತ ಹಿಂದೆ ಇದ್ದುದಕ್ಕಿಂತ ಈಗ ಬಹಳ ಬಲಿಷ್ಠವಾಗಿದೆ ಎಂಬುದನ್ನು ಚೀನಾ ಅರಿತುಕೊಳ್ಳಬೇಕು’ ಎಂದು ಗುಪ್ತಾ ಹೇಳಿದರು.

ಪಾಕಿಸ್ತಾನದ ವಿರುದ್ಧ ಹರಿಹಾಯ್ದ ಗುಪ್ತಾ ಅವರು, ‘ಪಾಕಿಸ್ತಾನ ಮಾರಾಟಕ್ಕಿರುವ ದೇಶವಾಗಿದೆ. ತನ್ನ ಸಾರ್ವಭೌಮತ್ವ ಅಥವಾ ತನ್ನ ಜನರ ಬಗ್ಗೆ ಯಾವುದೇ ಕಾಳಜಿ ಇಲ್ಲದ ರಾಷ್ಟ್ರವಾಗಿದೆ. ಬಲೂಚಿಸ್ತಾನ, ಸಿಂಧ್ ಮತ್ತು ಕರಾಚಿಯಲ್ಲಿ, ಪಾಕ್ ಸೇನೆಯಿಂದ ದೌರ್ಜನ್ಯ ನಡೆಯುತ್ತಿದೆ ಎಂಬ ಕೂಗು ಕೇಳಿಬರುತ್ತಿದೆ.ಆ ಎಲ್ಲ ಪ್ರದೇಶಗಳನ್ನು ಪರೋಕ್ಷವಾಗಿ ಸೇನೆಯೇ ನಡೆಸುತ್ತಿದೆ’ ಎಂದರು.

**ಚಿಟಿಕೆ ಸುದ್ದಿ**

### ಕಚ್ಚಿದ್ದ ಹಾವನ್ನು ಜೇಬಿನಲ್ಲಿ ಇಟ್ಟುಕೊಂಡು ಬಂದ

ಮಥುರಾ (ಉತ್ತರ ಪ್ರದೇಶ): ತನಗೆ ಕಚ್ಚಿದ 1.5 ಅಡಿ ಉದ್ದದ ಹಾವನ್ನು ಜೇಬಿನಲ್ಲಿ ಇಟ್ಟುಕೊಂಡು ಆಟೊ ಚಾಲಕರೊಬ್ಬರು ಮಥುರಾದ ಜಿಲ್ಲಾ ಆಸ್ಪತ್ರೆಗೆ ಬಂದಿದ್ದಾರೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ದೀಪಕ್ (39) ಅವರಿಗೆ ಸೋಮವಾರ ಹಾವು ಕಚ್ಚಿದ್ದು, ವಿಷ ನಿರೋಧಕ ಚುಚ್ಚುಮದ್ದಿಗಾಗಿ ಆಸ್ಪತ್ರೆಗೆ ಬಂದಿದ್ದರು. ಅವರಿಗೆ ಕಚ್ಚಿದ ಹಾವಿನ ಬಗ್ಗೆ ಕೇಳಿದಾಗ, ಜೇಬಿನಿಂದ ಹಾವು ತೆಗೆದು ತೋರಿಸಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

30 ನಿಮಿಷಗಳ ಹಿಂದೆಯೇ ಆಸ್ಪತ್ರೆಗೆ ಬಂದಿದ್ದು, ಆಸ್ಪತ್ರೆಯಲ್ಲಿ ಯಾವುದೇ ಸೌಲಭ್ಯವಿಲ್ಲ ಎಂದು ದೀಪಕ್ ಆರೋಪಿಸಿದ್ದಾರೆ.

ಇತರ ರೋಗಿಗಳಿಗೆ ತೊಂದರೆಯಾಗಬಾರದು ಎಂದು ಹಾವನ್ನು ಹೊರಗೆ ಬಿಡಲು ದೀಪಕ್ ಅವರಿಗೆ ತಿಳಿಸಲಾಯಿತು. ಬಳಿಕ ಹಾವನ್ನು ಪೊಲೀಸರು ರಕ್ಷಿಸಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

### ಅಬ್ಬಾಸ್ ಅನ್ಸಾರಿ ಮಧ್ಯಂತರ ಜಾಮೀನು ದೃಢ

ಅಬ್ಬಾಸ್ ಅನ್ಸಾರಿ

ನವದೆಹಲಿ (ಪಿಟಿಐ): ಮಾಜಿ ಗ್ಯಾಂಗ್‌ಸ್ಟರ್ ಮುಖ್ತಾರ್ ಅನ್ಸಾರಿ ಅವರ ಪುತ್ರ ಉತ್ತರ ಪ್ರದೇಶದ ಮಾಜಿ ಶಾಸಕ ಅಬ್ಬಾಸ್ ಅನ್ಸಾರಿ ಅವರಿಗೆ ಗ್ಯಾಂಗ್‌ಸ್ಟರ್ ಕಾಯ್ದೆ ಪ್ರಕರಣದಲ್ಲಿ ನೀಡಲಾಗಿದ್ದ ಮಧ್ಯಂತರ ಜಾಮೀನನ್ನು ಸುಪ್ರೀಂ ಕೋರ್ಟ್ ಮಂಗಳವಾರ ದೃಢಪಡಿಸಿದೆ.

ಹಲ್ಲೆ ಮತ್ತು ಸುಲಿಗೆ ಪ್ರಕರಣದಲ್ಲಿ ಅನ್ಸಾರಿಗೆ ಸುಪ್ರೀಂ ಕೋರ್ಟ್ 2025 ಮಾರ್ಚ್ 7ರಂದು ಆರು ವಾರಗಳ ಮಧ್ಯಂತರ ಜಾಮೀನು ನೀಡಿತ್ತು. ಅನ್ಸಾರಿ ಪರ ವಕೀಲರಾದ ಕಪಿಲ್ ಸಿಬಲ್ ಮತ್ತು ನಿಜಾಮ್ ಪಾಷಾ ಅವರ ವಾದಗಳನ್ನು ಪರಿಗಣಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್ ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು ಅನ್ಸಾರಿಗೆ ನೀಡಲಾಗಿದ್ದ ಮಧ್ಯಂತರ ಜಾಮೀನನ್ನು ಪೂರ್ಣಪ್ರಮಾಣದಲ್ಲಿ ಮಂಜೂರುಗೊಳಿಸಿತು.

ಇತರ ಪ್ರಕರಣಗಳಲ್ಲಿ ಜಾಮೀನು ಪಡೆದಿದ್ದ ಅನ್ಸಾರಿಗೆ ಗ್ಯಾಂಗ್‌ಸ್ಟರ್ ಕಾಯ್ದೆ ಪ್ರಕರಣದಲ್ಲೂ ಮಧ್ಯಂತರ ಜಾಮೀನು ದೊರೆತ ಕಾರಣ ಅವರೂ ಕಳೆದ ಮಾರ್ಚ್‌ನಲ್ಲಿ ಜೈಲಿನಿಂದ ಬಿಡುಗಡೆಗೊಂಡಿದ್ದರು.

ಇತರ ಪ್ರಕರಣಗಳಿಗೆ ಸಂಬಂಧಿಸಿ 2022ರಲ್ಲಿ ಕಸ್ಟಡಿಗೆ ಪಡೆಯಲಾಗಿದ್ದ ಅನ್ಸಾರಿ ಅವರನ್ನು 2024ರಲ್ಲಿ ಬಂಧಿಸಲಾಗಿತ್ತು.

# ‘ಮೃತ’ ಮತದಾರರು ರ‍್ಯಾಲಿಗೆ ಬಂದರು

ಕೂಚ್ ಬಿಹಾರ್ (ಪಶ್ಚಿಮ ಬಂಗಾಳ) (ಪಿಟಿಐ): ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಹೆಸರಿನಲ್ಲಿ ನಾಗರಿಕರ ಮತದಾನದ ಹಕ್ಕನ್ನು ಕಸಿದುಕೊಳ್ಳುತ್ತಿದೆ ಎಂದು ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಆರೋಪಿಸಿದರು.

ಕೂಚ್ ಬಿಹಾರ್‌ನಲ್ಲಿ ಮಂಗಳವಾರ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರಸ್ತೆ, ವಸತಿ ಅಥವಾ ನೀರಾವರಿಗೆ ಸಂಬಂಧಿಸಿದ ಅನುದಾನ ಮಾತ್ರವಲ್ಲ, ಮತದಾನದ ಹಕ್ಕನ್ನು ಕಸಿದುಕೊಳ್ಳಲು ಮುಂದಾಗಿದೆ’ ಎಂದು ದೂರಿದರು.

ಚುನಾವಣಾ ಆಯೋಗವು ‘ಸತ್ತಿದ್ದಾರೆ’ ಎಂಬ ಕಾರಣ ನೀಡಿ ಕರಡು ಮತದಾರರ ಪಟ್ಟಿಯಿಂದ ಕೈಬಿಟ್ಟಿರುವ ಹತ್ತು ಮಂದಿಯನ್ನು ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಅಭಿಷೇಕ್ ಅವರು ರ‍್ಯಾಲಿಗೆ ಕರೆತಂದರು.

10 ಮಂದಿಯನ್ನು ವೇದಿಕೆಯ ಮೇಲೆ ಕರೆಸಿದ ಅವರು, ‘ಇವರೆಲ್ಲರೂ ಕೂಚ್ ಬಿಹಾರ್‌ನಲ್ಲಿ ಹುಟ್ಟಿ ಬೆಳೆದವರು. ಆದರೆ ಬಿಜೆಪಿಯ ಕೈಗೊಂಬೆಯಾಗಿ ಕೆಲಸ ಮಾಡುತ್ತಿರುವ ಚುನಾವಣಾ ಆಯೋಗವು ಎಲ್ಲರನ್ನೂ ‘ಸತ್ತಿದ್ದಾರೆ’ ಎಂದು ಘೋಷಿಸಿದೆ. ಈ ಹತ್ತು ಮಂದಿಯ ಹೆಸರನ್ನು ಮತದಾರರ ಕರಡು ಪಟ್ಟಿಯಿಂದ ಕೈಬಿಡಲಾಗಿದೆ’ ಎಂದು ಹೇಳಿದರು.


ಅಭಿಷೇಕ್ ಬ್ಯಾನರ್ಜಿ ಅವರು ಕೂಚ್ ಬಿಹಾರ್‌ನಲ್ಲಿ ಮಂಗಳವಾರ ರ‍್ಯಾಲಿಯಲ್ಲಿ ಮಾತನಾಡಿದರು —ಪಿಟಿಐ ಚಿತ್ರ

ಈ ತಿಂಗಳ ಆರಂಭದಲ್ಲಿ ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ನಡೆದ ರ‍್ಯಾಲಿಯಲ್ಲೂ ಅವರು ಆಯೋಗವು ‘ಸತ್ತಿದ್ದಾರೆ’ ಎಂದು ಘೋಷಿಸಿರುವ ತಲಾ ಇಬ್ಬರು ಪುರುಷರು ಮತ್ತು ಮಹಿಳೆಯನ್ನು ವೇದಿಕೆಗೆ ಕರೆಸಿದ್ದರು.

‘ಎಸ್‌ಐಆರ್ ಸಂಬಂಧಿತ ವಿಚಾರಣೆಗೆ ಹಾಜರಾಗುವಂತೆ ಕೂಚ್ ಬಿಹಾರ್ ಜಿಲ್ಲೆಯ ಸುಮಾರು 3.5 ಲಕ್ಷ ಜನರಿಗೆ ಚುನಾವಣಾ ಆಯೋಗವು ನೋಟಿಸ್ ನೀಡಿದೆ. ಈ ಎಲ್ಲ ಜನರ ಹೆಸರುಗಳು ಮತದಾರರ ಅಂತಿಮ ಪಟ್ಟಿಯಲ್ಲಿರುವಂತೆ ನೋಡಿಕೊಳ್ಳಬೇಕು’ ಎಂದು ಟಿಎಂಸಿ ಕಾರ್ಯಕರ್ತರಿಗೆ ಸೂಚಿಸಿದರು.

ಎಸ್‌ಐಆರ್ ಪ್ರಕ್ರಿಯೆ ವೇಳೆ ಆತಂಕಕ್ಕೆ ಒಳಗಾಗಿ ಬಂಗಾಳದಲ್ಲಿ ಸುಮಾರು 78 ಜನರು ಮೃತಪಟ್ಟಿದ್ದಾರೆ ಎಂದು ಅವರು ಆರೋಪಿಸಿದರು.

ಕೂಚ್ ಬಿಹಾರ್ ಜಿಲ್ಲೆಯ ಎಲ್ಲ ಒಂಬತ್ತು ವಿಧಾನಸಭಾ ಕ್ಷೇತ್ರಗಳಲ್ಲೂ ಟಿಎಂಸಿ ಅಭ್ಯರ್ಥಿಗಳು ಗೆಲ್ಲುವಂತೆ ನೋಡಿಕೊಳ್ಳಬೇಕು ಎಂದು ಮತದಾರರಿಗೆ ಮನವಿ ಮಾಡಿದರು.

### ‘54 ಲಕ್ಷ ಮತದಾರರ ಹೆಸರು ರದ್ದು’

ಕೋಲ್ಕತ್ತ (ಪಿಟಿಐ): ‘ರಾಜ್ಯದಲ್ಲಿ ಎಸ್‌ಐಆರ್ ನಡೆದ ವೇಳೆ ಚುನಾವಣಾ ನೋಂದಣಿ ಅಧಿಕಾರಿಗಳು (ಇಆರ್‌ಒ) ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು, ಏಕಪಕ್ಷೀಯವಾಗಿ 54 ಲಕ್ಷ ಮಂದಿ ನೈಜ ಮತದಾರರ ಹೆಸರನ್ನು ಕರಡು ಮತದಾರರ ಪಟ್ಟಿಯಿಂದ ತೆಗೆದುಹಾಕಿದ್ದಾರೆ’ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಂಗಳವಾರ ಆರೋಪಿಸಿದ್ದಾರೆ.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕಣೆ (ಎಸ್‌ಐಆರ್) ವೇಳೆ ಈ ರೀತಿ ಪಟ್ಟಿಯಿಂದ ತೆಗೆದುಹಾಕಲ್ಪಟ್ಟ ಮತದಾರರಿಗೆ ತಮ್ಮನ್ನು ತಾವು ನಿರೂಪಿಸಿಕೊಳ್ಳಲು ಅವಕಾಶವನ್ನೂ ನೀಡಿಲ್ಲ. ಜತೆಗೆ ಅವರ ಹೆಸರನ್ನು ಏಕೆ ತೆಗೆದುಹಾಕಲಾಗಿದೆ ಎಂಬ ಕಾರಣವನ್ನೂ ತಿಳಿಸಿಲ್ಲ ಎಂದೂ ಮಮತಾ ದೂರಿದ್ದಾರೆ.

## ಸೆಕ್ಷನ್ 17ಎ: ಭಿನ್ನಮತದ ತೀರ್ಪು ಪ್ರಕಟಿಸಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಭ್ರಷ್ಟಾಚಾರ ತಡೆ (ತಿದ್ದುಪಡಿ) ಕಾಯ್ದೆ–2018ರ ಸಾಂವಿಧಾನಿಕ ಸಿಂಧುತ್ವ ಕುರಿತಂತೆ ಸುಪ್ರೀಂ ಕೋರ್ಟ್ ಮಂಗಳವಾರ ಭಿನ್ನಮತದ ತೀರ್ಪು ಪ್ರಕಟಿಸಿದೆ.

ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು, ‘ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 17ಎ ಅಸಾಂವಿಧಾನಿಕ. ಅದನ್ನು ತೆಗೆದುಹಾಕಬೇಕಿದೆ’ ಎಂದರು.

ನ್ಯಾಯಮೂರ್ತಿ ಕೆ.ವಿ. ವಿಶ್ವನಾಥನ್ ಅವರು, ‘ಆ ಸೆಕ್ಷನ್‌ನ ಸಾಂವಿಧಾನಿಕ ಮಾನ್ಯತೆಯನ್ನು ಎತ್ತಿಹಿಡಿದು, ಪ್ರಾಮಾಣಿಕ ಅಧಿಕಾರಿಗಳನ್ನು ರಕ್ಷಿಸಬೇಕಿದೆ’ ಎಂದು ಒತ್ತಿ ಹೇಳಿದರು.

ಸಕ್ಷಮ ಪ್ರಾಧಿಕಾರದ ಅನುಮತಿಯ ಅಗತ್ಯವು ಭ್ರಷ್ಟಾಚಾರ ತಡೆ ಕಾಯ್ದೆಗೆ ವಿರುದ್ಧವಾಗಿದೆ. ಇದು ಭ್ರಷ್ಟರನ್ನು ರಕ್ಷಿಸುತ್ತದೆ ಎಂದು ನ್ಯಾಯಮೂರ್ತಿ ನಾಗರತ್ನ ಅಭಿಪ್ರಾಯಪಟ್ಟರು.

ನ್ಯಾಯಮೂರ್ತಿ ವಿಶ್ವನಾಥನ್ ಅವರು, ‘ಸೆಕ್ಷನ್ 17ಎ ಕೈಬಿಡುವುದು, ಸ್ನಾನದ ನೀರಿನ ಜೊತೆಗೆ ಮಗುವನ್ನೂ ಎಸೆದಂತೆ. ಚಿಕಿತ್ಸೆಯೇ ಕಾಯಿಲೆಗಿಂತಲೂ ಭಯಾನಕ ಎಂದು ಹೇಳಿದ ಹಾಗಾಗುತ್ತದೆ’ ಎಂದರು.

ಪ್ರಕರಣದ ಕುರಿತ ಅಂತಿಮ ನಿರ್ಣಯಕ್ಕಾಗಿ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ವಿಸ್ತೃತ ನ್ಯಾಯಪೀಠ ರಚಿಸಲಿದ್ದಾರೆ.

ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಸೆಕ್ಷನ್ 17ಎ ಪ್ರಕಾರ, ಈ ಕಾಯ್ದೆಯಡಿ ಜನಪ್ರತಿನಿಧಿಗಳು ಸಾರ್ವಜನಿಕ ಸೇವೆ/ಕರ್ತವ್ಯದಲ್ಲಿದ್ದ ಸಂದರ್ಭದಲ್ಲಿ ಮಾಡಿರುವ ಯಾವುದೇ ಶಿಫಾರಸುಗಳು ಮತ್ತು ನಿರ್ಧಾರಗಳ ಕುರಿತ ಆರೋಪಗಳ ಮೇಲೆ ತನಿಖೆ ಅಥವಾ ವಿಚಾರಣೆ ಮಾಡುವ ಮೊದಲು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯುವುದು ಕಡ್ಡಾಯ.

# ಹೊಸಬಾಳೆ ಭೇಟಿ ಮಾಡಿದ ಚೀನಾ ನಿಯೋಗ


ದತ್ತಾತ್ರೇಯ ಹೊಸಬಾಳೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರನ್ನು ಚೀನಾ ಕಮ್ಯುನಿಸ್ಟ್ ಪಕ್ಷದ ನಿಯೋಗವೊಂದು ದೆಹಲಿಯಲ್ಲಿ ಮಂಗಳವಾರ ಭೇಟಿ ಮಾಡಿದೆ.

ಹೊಸಬಾಳೆ ಅವರೊಂದಿಗೆ ನಿಯೋಗ ಒಂದು ಗಂಟೆ ಚರ್ಚೆ ನಡೆಸಿದ್ದು, ಚೀನಾದ ಮನವಿ ಮೇರೆಗೆ ಈ ಸಭೆಯನ್ನು ನಡೆಸಲಾಯಿತು ಎಂದು ಮೂಲಗಳು ತಿಳಿಸಿವೆ.

ಚೀನಾ ಕಮ್ಯುನಿಸ್ಟ್ ಪಕ್ಷದ ಅಂತರರಾಷ್ಟ್ರೀಯ ವಿಭಾಗದ ಉಪ ಸಚಿವ ಸನ್ ಹಯಾನ್ ನೇತೃತ್ವದ ನಿಯೋಗ ದೆಹಲಿಯ ಬಿಜೆಪಿ ಪ್ರಧಾನ ಕಚೇರಿಗೆ ಸೋಮವಾರ ಭೇಟಿ ನೀಡಿತ್ತು. ನಿಯೋಗದೊಂದಿಗೆ ಭಾರತದಲ್ಲಿರುವ ಚೀನಾದ ರಾಯಭಾರಿ ಶು ಫೀಹಾಂಗ್ ಅವರು ಇದ್ದರು.

ಈ ಸಭೆಯಲ್ಲಿ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ನೇತೃತ್ವದ ಬಿಜೆಪಿ ನಿಯೋಗವು, ಬಿಜೆಪಿ ಮತ್ತು ಸಿಪಿಸಿ ನಡುವಿನ ಸಂವಹನ ವೃದ್ಧಿಗೊಳಿಸುವ ಕುರಿತು ಚರ್ಚಿಸಿತು.

> ಭಾರತದ ಬಹುತೇಕ ಭೂಪ್ರದೇಶ ಆಕ್ರಮಿಸಿ, ಆಪರೇಷನ್ ಸಿಂಧೂರದ ವೇಳೆ ಪಾಕಿಸ್ತಾನವನ್ನು ಮುಕ್ತವಾಗಿ ಬೆಂಬಲಿಸಿದ ಚೀನಾದ ಕಮ್ಯುನಿಸ್ಟ್ ಪಕ್ಷವನ್ನು ಬಿಜೆಪಿ ತನ್ನ ಕೇಂದ್ರ ಕಚೇರಿಗೆ ಸ್ವಾಗತಿಸಿದೆ
>
> **ಸಾಗರಿಕಾ ಘೋಷ್**, ತೃಣಮೂಲ ಕಾಂಗ್ರೆಸ್ ನಾಯಕಿ

### ಇದು ಮುಕ್ತ ಸಭೆ: ಬಿಜೆಪಿ

ಭಾರತ ಮತ್ತು ಚೀನಾ ನಡುವಿನ ಸಂಬಂಧ ವೃದ್ಧಿಸಲು ಚೀನಾ ನಿಯೋಗದೊಂದಿಗೆ ಮುಕ್ತವಾಗಿಯೇ ಔಪಚಾರಿಕ ಸಭೆ ನಡೆಸಲಾಗಿದೆ ಎಂದು ಬಿಜೆಪಿ ಮಂಗಳವಾರ ತಿಳಿಸಿದೆ.

‘ಚೀನಾ ಜತೆಗಿನ ವ್ಯವಹಾರಗಳಲ್ಲಿ ಬಿಜೆಪಿ ಬೂಟಾಟಿಕೆ ಪ್ರದರ್ಶಿಸುತ್ತಿದೆ. ಚೀನಾದೊಂದಿಗಿನ ವ್ಯವಹಾರ ನೀತಿಗಳಲ್ಲಿ ಸರ್ಕಾರವು ಮುಕ್ತ ಮತ್ತು ಪಾರದರ್ಶಕವಾಗಿರಬೇಕು’ ಎಂದು ಕಾಂಗ್ರೆಸ್‌ನ ಮಾಧ್ಯಮ ಮತ್ತು ಸಾರ್ವಜನಿಕ ಇಲಾಖೆಯ ಮುಖ್ಯಸ್ಥ ಪವನ್ ಖೇರಾ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿ ರಾಷ್ಟ್ರೀಯ ವಕ್ತಾರ ತುಹೀನ್ ಸಿನ್ಹಾ, ‘ಚೀನಾದೊಂದಿಗೆ ಔಪಚಾರಿಕವಾಗಿ ಬಹಳ ಮುಕ್ತವಾಗಿ ಸಭೆ ನಡೆಸಿದ್ದೇವೆ. ವರ್ಷಗಳ ಕಾಲ ಬಹಿರಂಗಪಡಿಸಲು ಸಾಧ್ಯವಾಗದಂತಹ ರಹಸ್ಯ ಒಪ್ಪಂದವನ್ನೇನೂ ನಾವು ಮಾಡಿಕೊಂಡಿಲ್ಲ’ ಎಂದಿದ್ದಾರೆ.

## ‘ಚರ್ಚೆಗಾಗಿ ದೆಹಲಿಗೆ ಬನ್ನಿ’

ಎರಡನೇ ಮುಖಪುಟದಿಂದ...

ರಾಹುಲ್ ಭೇಟಿ ಬಳಿಕ ಸಿದ್ದರಾಮಯ್ಯ ತಮ್ಮ ನಿವಾಸಕ್ಕೆ ತೆರಳಿದರೆ, ಶಿವಕುಮಾರ್ ಹೋಟೆಲ್‌ನಲ್ಲಿ ವಿಶ್ರಾಂತಿ ಪಡೆದರು. ಸಂಜೆ ರಾಹುಲ್‌ರನ್ನು ಬೀಳ್ಕೊಟ್ಟ ಬಳಿಕ ಒಂದೇ ವಿಮಾನದಲ್ಲಿ ಇಬ್ಬರೂ ಬೆಂಗಳೂರಿಗೆ ವಾಪಸಾದರು. ಮಧ್ಯಾಹ್ನ 2 ಗಂಟೆ ಸುಮಾರಿಗೆ ಇಲ್ಲಿನ ಮಂಡಕಳ್ಳಿಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ರಾಹುಲ್ ಗಾಂಧಿಯವರನ್ನು ಪುಷ್ಪಗುಚ್ಛದೊಂದಿಗೆ ಸ್ವಾಗತಿಸಿದ ಮುಖ್ಯಮಂತ್ರಿ ಮೈಸೂರು ಅರಮನೆ ಮಾದರಿಯನ್ನು ಉಡುಗೊರೆ ಯಾಗಿ ನೀಡಿದರು. ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ, ಕೆ.ಜೆ. ಜಾರ್ಜ್, ಕೆ. ವೆಂಕಟೇಶ್ ಜೊತೆಗಿದ್ದರು.

ಬಳಿಕ ರಾಹುಲ್ ಗಾಂಧಿ ಹೆಲಿಕಾಪ್ಟರ್ ಮೂಲಕ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಗೂಡ್ಲೂರಿಗೆ ತೆರಳಿದರು. ಸಂಜೆ ಅದೇ ಹೆಲಿಕಾಪ್ಟರ್‌ನಲ್ಲಿ ಮೈಸೂರು ವಿಮಾನ ನಿಲ್ದಾಣಕ್ಕೆ ವಾಪಸಾಗಿ ದೆಹಲಿಗೆ ಪಯಣಿಸಿದರು.

### ‘ರಾಜಕೀಯ ಚರ್ಚೆ ನಡೆದಿಲ್ಲ’

ಎರಡನೇ ಮುಖಪುಟದಿಂದ...

ಅಧಿಕಾರ ಹಂಚಿಕೆಯ ಬಗೆಗಿನ ಗೊಂದಲಗಳ ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ‘ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ. ಅದೆಲ್ಲ ಮಾಧ್ಯಮಗಳ ಸೃಷ್ಟಿ’ ಎಂದು ಪುನರುಚ್ಚರಿಸಿದರು.

ಶಾಸಕರೇ ಹೇಳಿಕೆ ನೀಡುತ್ತಿದ್ದಾರಲ್ಲ ಎಂಬ ಪ್ರಶ್ನೆಗೆ, ‘ಅವರಿಗೆ ಈ ಕುರಿತು ತಿಳಿದಿರುವುದಿಲ್ಲ. ನಾನು ಅಥವಾ ಡಿ.ಕೆ ಶಿವಕುಮಾರ್ ಮಾತನಾಡಬೇಕು’ ಎಂದು ಹೇಳಿದರು.

## ‘ಸಲೇಂಗೆ 2 ದಿನ ಪೆರೋಲ್ ನೀಡಬಹುದು’

ಅಬು ಸಲೇಂ

ಮುಂಬೈ (ಪಿಟಿಐ): 1993ರ ಮುಂಬೈ ಸರಣಿ ಸ್ಫೋಟ ಪ್ರಕರಣದ ಅಪರಾಧಿ ಗ್ಯಾಂಗ್‌ಸ್ಟರ್ ಅಬು ಸಲೇಂಗೆ ಪೊಲೀಸರ ಬೆಂಗಾವಲಿನೊಂದಿಗೆ ಕೇವಲ ಎರಡು ದಿನಗಳ ತುರ್ತು ಪೆರೋಲ್ ನೀಡಬಹುದು ಎಂದು ಮಹಾರಾಷ್ಟ್ರ ಸರ್ಕಾರ ಬಾಂಬೆ ಹೈಕೋರ್ಟ್‌ಗೆ ಮಂಗಳವಾರ ತಿಳಿಸಿದೆ.

ಮೃತಪಟ್ಟ ತನ್ನ ಅಣ್ಣನ ಅಂತಿಮ ವಿಧಿ–ವಿಧಾನದಲ್ಲಿ ಭಾಗಿಯಾಗಲು ಸಲೇಂ 14 ದಿನ ತುರ್ತು ಪೆರೋಲ್ ನೀಡುವಂತೆ ಮನವಿ ಮಾಡಿದ್ದರು.

‘ಅಂತರರಾಷ್ಟ್ರೀಯ ಅಪರಾಧಿಯಾಗಿರುವ ಕಾರಣ ಸಲೇಂಗೆ 14 ದಿನ ಪೆರೋಲ್ ನೀಡಲು ಸಾಧ್ಯವಿಲ್ಲ. ಹೀಗಾಗಿ ಜೈಲು ಅಧಿಕಾರಿಗಳು, ಪೊಲೀಸರ ಬೆಂಗಾವಲಿನೊಂದಿಗೆ ಸಲೇಂಗೆ ಕೇವಲ ಎರಡು ದಿನ ಪೆರೋಲ್ ನೀಡಬಹುದು. ಅದರ ವೆಚ್ಚವನ್ನು ಆತನೇ ಭರಿಸಬೇಕು’ ಎಂದು ಸರ್ಕಾರದ ಪರ ವಕೀಲರಾದ ಮಂಕುವಾರ್ ದೇಶಮುಖ್ ಅವರು ಪೀಠಕ್ಕೆ ತಿಳಿಸಿದರು.

‘ಉತ್ತರ ಪ್ರದೇಶದ ಆಜಮ್‌ಗಢಕ್ಕೆ ಪ್ರಯಾಣಿಸ ಬೇಕಾಗಿರುವುದರಿಂದ ಎರಡು ದಿನ ಸಾಕಾಗುವುದಿಲ್ಲ. ಸಲೇಂಗೆ ಯಾವುದೇ ಪೊಲೀಸರ ಬೆಂಗಾವಲಿನ ಅವಶ್ಯಕತೆಯಿಲ್ಲ. ಆತ ಕೂಡ ಭಾರತೀಯ ಪ್ರಜೆ. 20 ವರ್ಷದಿಂದ ಜೈಲಿನಲ್ಲಿದ್ದಾರೆ. ಈಗ ತುರ್ತು ಪೆರೋಲ್ ಕೇಳುತ್ತಿದ್ದಾರೆ’ ಎಂದು ಸಲೇಂ ಪರ ವಕೀಲರು ತಿಳಿಸಿದ್ದಾರೆ.

ಸಲೇಂಗೆ 14 ದಿನ ಪೆರೋಲ್ ನೀಡದಿರಲು ಕಾರಣವನ್ನು ತಿಳಿಸುವ ಅಫಿಡವಿಟ್ ಸಲ್ಲಿಸುವಂತೆ ಸರ್ಕಾರಕ್ಕೆ ತಿಳಿಸಿದ ನ್ಯಾಯಮೂರ್ತಿ ಅಜಯ್ ಗಡ್ಕರಿ ಮತ್ತು ಶ್ಯಾಮ್ ಚಂದಕ್ ಅವರ ಪೀಠವು ವಿಚಾರಣೆಯನ್ನು ಮುಂದಿನ ವಾರಕ್ಕೆ ಮುಂದೂಡಿದೆ.

## ‘ಸನಾತನ ಧರ್ಮ ಅಳಿಸಿಹಾಕುವುದು ಸುಲಭವಲ್ಲ’


ಅಮಿತ್ ಶಾ

ಅಹಮದಾಬಾದ್ (ಪಿಟಿಐ): ಶತಮಾನಗಳಿಂದ ಸೋಮನಾಥ ದೇಗುಲದ ಮೇಲೆ ಪದೇ ಪದೇ ದಾಳಿಗಳು ನಡೆದರೂ ಅದು ಪುನರ್‌ನಿರ್ಮಾಣಗೊಂಡಿರುವುದನ್ನು ಉಲ್ಲೇಖಿಸಿ ಮಂಗಳವಾರ ಮಾತನಾಡಿದ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು, ‘ಸನಾತನ ಧರ್ಮ, ಸಂಸ್ಕೃತಿ ಮತ್ತು ಜನರ ನಂಬಿಕೆಯನ್ನು ಅಳಿಸಿಹಾಕುವುದು ಸುಲಭವಲ್ಲ’ ಎಂದು ಹೇಳಿದರು.

ಗುಜರಾತ್‌ನ ಗಾಂಧಿನಗರ ಜಿಲ್ಲೆಯಲ್ಲಿ ₹267 ಕೋಟಿ ವೆಚ್ಚದ ವಿವಿಧ ಯೋಜನೆಗಳ ಲೋಕಾರ್ಪಣೆ ಮತ್ತು ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ‘ದೇಗುಲವನ್ನು ನಾಶಮಾಡುವ ಸಲುವಾಗಿ ಹಲವಾರು ಮಂದಿ ದಾಳಿಗಳನ್ನು ಮಾಡಿದ್ದಾರೆ. ಆದರೆ ದೇಗುಲವು ಇಂದಿಗೂ ಅದೇ ಸ್ಥಳದಲ್ಲಿ ತಲೆಎತ್ತಿ ನಿಂತಿದೆ’ ಎಂದರು.

‘ಮೊಹಮ್ಮದ್ ಘಜ್ನಿಯು ಸೋಮನಾಥ ದೇಗುಲದ ಮೇಲೆ ದಾಳಿ ಮಾಡಿ ಒಂದು ಸಾವಿರ ವರ್ಷ ಪೂರ್ಣಗೊಂಡಿದ್ದು, ಆ ಕರಾಳ ದಿನದ ನೆನಪಿಗಾಗಿ ಆಚರಿಸಲಾಗುವ ‘ಸೋಮನಾಥ ಸ್ವಾಭಿಮಾನ ಪರ್ವ’ವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಜನವರಿ 11ರಂದು ಉದ್ಘಾಟಿಸಿದ್ದಾರೆ. ಒಂದು ಸಾವಿರ ವರ್ಷಗಳಲ್ಲಿ 16 ಬಾರಿ ಸೋಮನಾಥ ದೇಗುಲ ಧ್ವಂಸಗೊಂಡರೂ, ಅದರ ಪತಾಕೆ ಇಂದಿಗೂ ಹಾರುತ್ತಿದೆ’ ಎಂದು ಹೇಳಿದರು.

ಮೋದಿ ನಾಯಕತ್ವದಲ್ಲಿ ಸೋಮನಾಥ ಕಾರಿಡಾರ್ ನಿರ್ಮಾಣ ಮಾಡುವುದಾಗಿ ಅಮಿತ್ ಶಾ ಘೋಷಿಸಿದರು.

## ಅಕ್ಷತಾ ಕಾರ್ಯಕ್ರಮ

ಪ್ರಜಾವಾಣಿ ಚಿತ್ರ:

ಮಹಾರಾಷ್ಟ್ರದ ಸೋಲಾಪುರದ ಸಿದ್ಧೇಶ್ವರ ಮಂದಿರ ಆವರಣದ ಸಮ್ಮತಿ ಕಟ್ಟೆಯಲ್ಲಿ ಮಂಗಳವಾರ ನಡೆದ ಶಿವಯೋಗಿ ಸಿದ್ಧೇಶ್ವರರ ಅಕ್ಷತಾ ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು

### ಕಾಶ್ಮೀರ: ಕಂದಾಯ ಇಲಾಖೆಯ ಗ್ರಾಮಗಳ ಹಂತದ ಅಧಿಕಾರಿಗಳಿಗೆ ಹೊಣೆ

# ಮಸೀದಿ, ಮದರಸ ಮಾಹಿತಿ ಸಂಗ್ರಹ

ಶ್ರೀನಗರ (ಪಿಟಿಐ): ಮಸೀದಿ, ಮದರಸಗಳು ಹಾಗೂ ಅವುಗಳ ಮೇಲ್ವಿಚಾರಕರ ಮಾಹಿತಿಗಳನ್ನು ಸಂಗ್ರಹಿಸಿ ದಾಖಲೆಗಳನ್ನು ರೂಪಿಸುವ ಪ್ರಕ್ರಿಯೆಯನ್ನು ಆಡಳಿತಾಧಿಕಾರಿಗಳು ಕಾಶ್ಮೀರದಲ್ಲಿ ಆರಂಭಿಸಿದ್ದಾರೆ.

‘ವೈಟ್ ಕಾಲರ್’ ಭಯೋತ್ಪಾದಕ ಜಾಲವನ್ನು ಭೇದಿಸುವ ವೇಳೆ ಮದರಸ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಕೆಲವು ಶಂಕಿತರು ತೀವ್ರಗಾಮಿಗಳಾಗಿ ಬದಲಾಗಿರುವುದು ತಿಳಿದುಬಂದಿತ್ತು. ಬೆನ್ನಲ್ಲೇ ಈ ಬೆಳವಣಿಗೆ ನಡೆಯುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಸೀದಿ, ಮದರಸಗಳ ಇಮಾಮ್‌ಗಳು, ಶಿಕ್ಷಕರು ಹಾಗೂ ನಿರ್ವಹಣಾ ಸಮಿತಿಯ ಸದಸ್ಯರ ಮಾಹಿತಿಗಳನ್ನು ಸಂಗ್ರಹಿಸಿ ದಾಖಲೆ ರೂಪಿಸುವ ಜವಾಬ್ದಾರಿಯನ್ನು ಕಂದಾಯ ಇಲಾಖೆಯ ಗ್ರಾಮಗಳ ಹಂತದ ಅಧಿಕಾರಿಗಳಿಗೆ ವಹಿಸಲಾಗಿದೆ.

ಮಸೀದಿ–ಮದರಸದ ಹಣಕಾಸು ವ್ಯವಹಾರ, ಅವುಗಳ ನಿರ್ಮಾಣ ಹಾಗೂ ಸಭೆಗಳಿಗಾಗಿ ಬಳಸುವ ನಿಧಿಯ ಮೂಲ, ದಿನಂಪ್ರತಿಯ ವೆಚ್ಚದ ಕುರಿತ ಮಾಹಿತಿಯನ್ನು ಅಧಿಕಾರಿಗಳು ಸಂಗ್ರಹಿಸಲಿದ್ದಾರೆ ಎಂದೂ ತಿಳಿಸಿದ್ದಾರೆ.

ಸಾಮಾನ್ಯ ಮಾಹಿತಿಯ ಹೊರತಾಗಿ ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ವಿವರ, ಆಸ್ತಿ ವಿವರ, ಸಾಮಾಜಿಕ ಜಾಲತಾಣಗಳ ಖಾತೆಗಳು, ಪಾಸ್‌ಪೋರ್ಟ್, ಎಟಿಎಂ ಕಾರ್ಡ್, ಪಡಿತರ ಚೀಟಿ, ಚಾಲನಾ ಪರವಾನಗಿ, ಸಿಮ್ ಕಾರ್ಡ್ ಮತ್ತು ಮೊಬೈಲ್ ಫೋನ್‌ಗಳ ಐಎಂಇಐ ನಂಬರ್ ಹಾಗೂ ಮಾಡಲ್‌ಗಳ ಬಗ್ಗೆಯೂ ಮದರಸಗಳ ಶಿಕ್ಷಕರು ಮತ್ತು ಇಮಾಮ್‌ಗಳು ಮಾಹಿತಿ ನೀಡಬೇಕಾಗಬಹುದು ಎನ್ನಲಾಗಿದೆ.

ಇದಲ್ಲದೇ, ಕಾಶ್ಮೀರದಲ್ಲಿ ಹೆಚ್ಚಾಗಿ ಅನುಸರಿಸುವ ಸೂಫಿ ಪಂಥವನ್ನು ಬದಿಗೆ ಸರಿಸುವ ಮುಸ್ಲಿಂ ಮೂಲಭೂತ ಪಂಗಡಗಳು ಉದಯಿಸುತ್ತಿರುವುದರಿಂದ ಕಣಿವೆಯಲ್ಲಿ ಯುವಜನರು ತೀವ್ರಗಾಮಿಗಳಾಗುತ್ತಿದ್ದಾರೆ ಎನ್ನುವ ಅಂಶವನ್ನೂ ಗಣನೆಗೆ ತೆಗೆದುಕೊಳ್ಳಲಾಗಿದೆ.

ಹೀಗಾಗಿ ಮಸೀದಿ ಅಥವಾ ಮದರಸಗಳು ಅನುಸರಿಸುತ್ತಿರುವ ಮುಸ್ಲಿಂ ಪಂಗಡಗಳು ಯಾವುದು ಎಂಬುದನ್ನೂ ಪ್ರಶ್ನಿಸಿ, ಮಾಹಿತಿ ದಾಖಲಿಸಲಾಗುತ್ತದೆ ಎಂದೂ ಅಧಿಕಾರಿ ಹೇಳಿದ್ದಾರೆ.

ಇಮಾಮ್‌ಗಳು ಮತ್ತು ಶಿಕ್ಷಕರು ಈ ಹಿಂದೆ ಯಾವುದಾದರೂ ವಿಧ್ವಂಸಕ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರೆ? ನ್ಯಾಯಾಲಯಗಳಲ್ಲಿ ಯಾವುದಾದರೂ ಪ್ರಕರಣ ಬಾಕಿ ಇದೆಯೇ? ಶಿಕ್ಷೆಗೆ ಒಳಪಟ್ಟಿದ್ದರೆ? ಎನ್ನುವಂಥ ವಿವರಗಳನ್ನೂ ಕೇಳಲಾಗುತ್ತದೆ ಎಂದೂ ಅಧಿಕಾರಿ ತಿಳಿಸಿದ್ದಾರೆ.

# ಹೆದ್ದಾರಿ ಕ್ರಿಯಾಯೋಜನೆಗೆ ಕೇಂದ್ರ ತಡೆ

ಎರಡನೇ ಮುಖಪುಟದಿಂದ...

ಹೆದ್ದಾರಿ ಸಚಿವಾಲಯಕ್ಕೆ ಲೋಕೋಪಯೋಗಿ ಇಲಾಖೆಯು ನಾಲ್ಕು ಸಲ ಪತ್ರ ಬರೆದಿತ್ತು. ಆದರೆ, ಹೆದ್ದಾರಿ ಸಚಿವಾಲಯವು ತನ್ನ ನಿಲುವು ಬದಲಿಸಿಲ್ಲ.

‘ರಾಜ್ಯದಲ್ಲಿ ಭೂಸ್ವಾಧೀನ ಹಾಗೂ ಅರಣ್ಯ ಭೂಮಿ ತೀರುವಳಿ ಪ್ರಕ್ರಿಯೆ ಆಮೆಗತಿಯಲ್ಲಿ ಸಾಗುತ್ತಿದೆ. ದೇಶದಲ್ಲಿ ಅತ್ಯಂತ ನಿಧಾನವಾಗಿ ಭೂಸ್ವಾಧೀನ ನಡೆಯುವುದೇ ಕರ್ನಾಟಕದಲ್ಲಿ. ಈ ಬಗ್ಗೆ ರಾಜ್ಯಕ್ಕೆ ಹಲವು ಸಲ ಎಚ್ಚರಿಕೆ ನೀಡಲಾಗಿತ್ತು. ಆದರೂ, ಪರಿಸ್ಥಿತಿ ಸುಧಾರಣೆ ಆಗಿಲ್ಲ. ಹೀಗಾಗಿ, ಕ್ರಿಯಾ ಯೋಜನೆಗೆ ಅನುಮೋದನೆ ನೀಡಿಲ್ಲ. ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ತಡೆ ಒಡ್ಡಿಲ್ಲ’ ಎಂದು ಹೆದ್ದಾರಿ ಸಚಿವಾಲಯದ ಮೂಲಗಳು ಸ್ಪಷ್ಟಪಡಿಸಿವೆ.

**ಗಡ್ಕರಿ ತವರಿಗೆ ಯೋಜನೆಗಳ ಮಹಾಪೂರ:** ನೆರೆಯ ಮಹಾರಾಷ್ಟ್ರದಲ್ಲಿ ಕಳೆದೊಂದು ದಶಕದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆ ಮೂರು ಪಟ್ಟು ಹೆಚ್ಚಾಗಿದೆ. ಇದಕ್ಕೆ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರ ತವರು ರಾಜ್ಯದ ಮೇಲಿನ ಅತಿ ಪ್ರೀತಿಯೇ ಕಾರಣ.

ಮಹಾರಾಷ್ಟ್ರದಲ್ಲಿ 2005ರಲ್ಲಿ 4,176 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಇದ್ದರೆ, 2014ರಲ್ಲಿ 6,249 ಕಿ.ಮೀ.ಗೆ ಏರಿತ್ತು. 2024ರ ವೇಳೆಗೆ ಹೆದ್ದಾರಿ 18,462 ಕಿ.ಮೀ.ಗೆ ಜಿಗಿದಿದೆ. ಆದರೆ, ಕರ್ನಾಟಕದಲ್ಲಿ 2005ರಲ್ಲಿ 3,843 ಕಿ.ಮೀ. ಹೆದ್ದಾರಿ ಇತ್ತು. 2024ರಲ್ಲಿ 8,191 ಕಿ.ಮೀ.ಗೆ ಏರಿದೆ. ಹೆದ್ದಾರಿ ಸಚಿವಾಲಯದ ಅಂಕಿ ಅಂಶಗಳ ಪ್ರಕಾರ, ರಾಜ್ಯದಲ್ಲಿ ಎನ್‌ಡಿಎ ಅವಧಿಗಿಂತ ಯುಪಿಎ ಅವಧಿಯಲ್ಲೇ ಹೆಚ್ಚು ಯೋಜನೆಗಳು ಕಾರ್ಯಗತವಾಗಿವೆ.

**ಪ್ರಮುಖ ರಾಜ್ಯಗಳಲ್ಲಿ ರಾಷ್ಟ್ರೀಯ ಹೆದ್ದಾರಿ (ಕಿ.ಮೀ.ಗಳಲ್ಲಿ)**

| ರಾಜ್ಯ | 2005 | 2010 | 2014 | 2019 | 2024 |
|---|---|---|---|---|---|
| ಕರ್ನಾಟಕ | 3,843 | 4,396 | 6,177 | 7,335 | 8,191 |
| ಮಹಾರಾಷ್ಟ್ರ | 4,176 | 4,191 | 6,249 | 17,757 | 18,462 |
| ಗುಜರಾತ್ | 2,871 | 3,245 | 4,694 | 6,635 | 8,111 |
| ಆಂಧ್ರ ಪ್ರದೇಶ | 4,472 | 4,537 | 6,590 | 6,914 | 8,683 |
| ಉತ್ತರ ಪ್ರದೇಶ | 5,599 | 6,774 | 7,986 | 11,737 | 12,123 |

ಮಾಹಿತಿ: ಕೇಂದ್ರ ಭೂಸಾರಿಗೆ ಸಚಿವಾಲಯ

## ‘ದಲಿತರ ತುಳಿದರೆ ‘ಬುಲ್ಡೋಜರ್’ ಕದಲಲ್ಲ’

ನವದೆಹಲಿ: ‘ಮೀರಟ್‌ನಲ್ಲಿ ದಲಿತ ಮಹಿಳೆಯೊಬ್ಬರನ್ನು ಹತ್ಯೆ ಮಾಡಿ, ಅವರ ಮಗಳನ್ನು ಅಪಹರಿಸಲಾಗಿದೆ. ದಲಿತರು, ಬುಡಕಟ್ಟು ಜನರು ಮತ್ತು ಹಿಂದುಳಿದ ವರ್ಗದವರು ಅಪರಾಧಿಗಳಾಗಿದ್ದರೆ ಮಾತ್ರವೇ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ‘ಬುಲ್ಡೋಜರ್’ ಕೆಲಸ ಮಾಡುತ್ತದೆ’ ಎಂದು ಕಾಂಗ್ರೆಸ್ ಆರೋಪಿಸಿದೆ.

ಕಾಂಗ್ರೆಸ್‌ನ ಪರಿಶಿಷ್ಟ ಜಾತಿ ವಿಭಾಗದ ಮುಖ್ಯಸ್ಥ ರಾಜೇಂದ್ರ ಪಾಲ್ ಗೌತಮ್ ಅವರು ಸೋಮವಾರ ಉತ್ತರ ಪ್ರದೇಶದ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ‘ಜಾತಿ, ಧರ್ಮದ ಆಧಾರದಲ್ಲಿ ಆದಿತ್ಯನಾಥ ಅವರ ‘ಬುಲ್ಡೋಜರ್’ ಕಾರ್ಯನಿರ್ವಹಿಸುತ್ತದೆ. ದಲಿತರು ತುಳಿತಕ್ಕೆ ಒಳಗಾದರೆ, ‘ಬುಲ್ಡೋಜರ್’ ಕದಲದು’ ಎಂದರು.




**ಎನ್‌ಎಸ್‌ಇ ನಿಫ್ಟಿ**
ಹಿಂದಿನ ಅಂತ್ಯ: 25,790
ಇಂದಿನ ಅಂತ್ಯ: 25,732
ದಿನದ ಕನಿಷ್ಠ: 25,603
57

**ಮೊಟ್ಟೆ ಧಾರಣೆ** (ಎನ್‌ಇಸಿಸಿ)
ಬೆಂಗಳೂರು 100 ಕ್ಕೆ ₹605; 12 ಕ್ಕೆ ₹90
ಮೈಸೂರು: 100 ಕ್ಕೆ ₹605

**ರಾಮನಗರ ರೇಷ್ಮೆಗೂಡು**
ಮಿಶ್ರತಳಿ(ಸಿ.ಬಿ) ₹375-746
ದ್ವಿತಳಿ (ಬಿ.ವಿ) ₹322-900

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹183
ಆರ್‌ಎಸ್‌ಎಸ್-5 ₹178
ಗುಡ್ ಲಾಟ್ ₹166.50

**ಮುದ್ರೆ-ಮನೆ ಕಾಫಿ** (50 ಕೆಜಿಗೆ)
ಎಪಿ ₹26,250
ಎಸಿ ₹14,420
ಆರ್‌ಪಿ ₹17,000
ಆರ್‌ಸಿ ₹10,150

# ಯುಸಿಬಿ: ಸಲಹೆ ಆಹ್ವಾನಿಸಿದ ಆರ್‌ಬಿಐ

## ಎರಡು ದಶಕಗಳಿಂದ ನಗರ ಸಹಕಾರಿ ಬ್ಯಾಂಕ್‌ಗಳ ಆರಂಭಕ್ಕೆ ಪರವಾನಗಿ ಇಲ್ಲ

**ಮುಖ್ಯಾಂಶಗಳು**
- ಸಮಾಲೋಚನಾ ಪತ್ರ ಹೊರಡಿಸುವ ಬಗ್ಗೆ ಹೇಳಿಕೆ ನೀಡಿದ್ದ ಆರ್‌ಬಿಐ ಗವರ್ನರ್
- ದೇಶದಲ್ಲಿ ಈಗ ಇವೆ 1,457 ನಗರ ಸಹಕಾರಿ ಬ್ಯಾಂಕ್‌ಗಳು

ಮುಂಬೈ (ಪಿಟಿಐ): ನಗರ ಸಹಕಾರಿ ಬ್ಯಾಂಕ್‌ಗಳ (ಯುಸಿಬಿ) ಆರಂಭಕ್ಕೆ ಪರವಾನಗಿ ನೀಡುವುದನ್ನು ಮತ್ತೆ ಶುರು ಮಾಡುವ ಪ್ರಸ್ತಾವನೆಯನ್ನು ಆರ್‌ಬಿಐ ಸಿದ್ಧಪಡಿಸಿದೆ. ಇದು ಕಾರ್ಯರೂಪಕ್ಕೆ ಬಂದಲ್ಲಿ, ಎರಡು ದಶಕಕ್ಕೂ ಹೆಚ್ಚಿನ ಅವಧಿಯ ನಂತರದಲ್ಲಿ ಹೊಸ ನಗರ ಸಹಕಾರಿ ಬ್ಯಾಂಕ್‌ಗಳ ಆರಂಭಕ್ಕೆ ಅವಕಾಶ ಸಿಗಲಿದೆ.

ನಗರ ಸಹಕಾರಿ ಬ್ಯಾಂಕ್‌ಗಳನ್ನು ಆರಂಭಿಸಲು 2004ರ ನಂತರದಲ್ಲಿ ಪರವಾನಗಿ ನೀಡುತ್ತಿಲ್ಲ. ಹೊಸದಾಗಿ ಪರವಾನಗಿ ಪಡೆದಿದ್ದ ಹಲವು ಬ್ಯಾಂಕ್‌ಗಳು ಬಹಳ ಕಡಿಮೆ ಅವಧಿಯಲ್ಲಿ ಹಣಕಾಸಿನ ಸಂಕಷ್ಟಕ್ಕೆ ಸಿಲುಕಿದ ಕಾರಣಕ್ಕೆ ಆರ್‌ಬಿಐ ಹೊಸದಾಗಿ ಪರವಾನಗಿ ನೀಡದಿರಲು ತೀರ್ಮಾನಿಸಿತ್ತು.

ಕಳೆದ ಎರಡು ದಶಕಗಳಲ್ಲಿ ಈ ವಲಯದಲ್ಲಿ ಕಂಡುಬಂದಿರುವ ಧನಾತ್ಮಕ ಬೆಳವಣಿಗೆಗಳನ್ನು ಪರಿಗಣಿಸಿ, ಸಂಬಂಧಪಟ್ಟವರಿಂದ ಬಂದಿರುವ ಬೇಡಿಕೆಯನ್ನು ಗಮನಿಸಿ, ನಗರ ಸಹಕಾರಿ ಬ್ಯಾಂಕ್‌ಗಳಿಗೆ ಹೊಸದಾಗಿ ಪರವಾನಗಿ ನೀಡುವ ಬಗ್ಗೆ ಸಾರ್ವಜನಿಕ ಸಮಾಲೋಚನಾ ಪತ್ರವನ್ನು ಪ್ರಕಟಿಸಲಾಗುತ್ತದೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಈಚೆಗೆ ಹೇಳಿದ್ದರು.

ಈಗ ಈ ವಿಚಾರವಾಗಿ ಮುಂದಡಿ ಇರಿಸಿರುವ ಆರ್‌ಬಿಐ, 'ನಗರ ಸಹಕಾರಿ ಬ್ಯಾಂಕ್‌ಗಳಿಗೆ ಪರವಾನಗಿ ನೀಡುವುದು' ಹೆಸರಿನ ಸಮಾಲೋಚನಾ ಪತ್ರವನ್ನು ಮಂಗಳವಾರ ಬಿಡುಗಡೆ ಮಾಡಿದೆ. ಇದಕ್ಕೆ ಸಾರ್ವಜನಿಕರು ಫೆಬ್ರುವರಿ 13ಕ್ಕೆ ಮೊದಲು ಸಲಹೆಗಳನ್ನು ನೀಡಬೇಕಿದೆ.

ಆರ್‌ಬಿಐ ರಚಿಸಿದ ಹಲವು ಉನ್ನತ ಮಟ್ಟದ ಸಮಿತಿಗಳು, ನಗರ ಸಹಕಾರಿ ಬ್ಯಾಂಕ್‌ಗಳಿಗೆ ಮತ್ತೆ ಪರವಾನಗಿ ನೀಡುವ ವಿಚಾರದ ಬಗ್ಗೆ ಪರಿಶೀಲನೆ ನಡೆಸಿವೆ, ಹಲವು ಶಿಫಾರಸುಗಳನ್ನು ನೀಡಿವೆ ಎಂದು ಸಮಾಲೋಚನಾ ಪತ್ರವು ಹೇಳಿದೆ.

ಹೊಸದಾಗಿ ನಗರ ಸಹಕಾರಿ ಬ್ಯಾಂಕ್ ಆರಂಭಕ್ಕೆ ಪರವಾನಗಿ ನೀಡಲು ಇದು ಸರಿಯಾದ ಸಮಯವೇ, ಪರವಾನಗಿ ನೀಡಲು ಈಗ ಮುಂದಾಗಬೇಕು ಎಂದಾದರೆ ಅರ್ಹತಾ ಮಾನದಂಡಗಳು ಏನಿರಬೇಕು ಎಂಬ ಬಗ್ಗೆ ಆರ್‌ಬಿಐ ಸಲಹೆ ಕೇಳಿದೆ.

ವಿಫಲಗೊಂಡ ನಗರ ಸಹಕಾರಿ ಬ್ಯಾಂಕ್‌ಗಳ ಪೈಕಿ ಹೆಚ್ಚಿನವು ಸಣ್ಣ ಗಾತ್ರದವು ಆಗಿದ್ದವು. ಹೀಗಾಗಿ, ಈಗ ಪರವಾನಗಿ ನೀಡುವುದನ್ನು ಆರಂಭಿಸುವುದಾದಲ್ಲಿ ದೊಡ್ಡ ಗಾತ್ರದ ಪತ್ತಿನ ಸಹಕಾರ ಸಂಘಗಳಿಗೆ ಮಾತ್ರ ಅಂತಹ ಪರವಾನಗಿ ನೀಡುವುದು ವಿವೇಕದ ಕ್ರಮವಾಗಬಹುದು ಎಂಬ ಅಂಶವನ್ನೂ ಸಮಾಲೋಚನಾ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಪತ್ತಿನ ಸಹಕಾರ ಸಂಘವೊಂದು ನಗರ ಸಹಕಾರಿ ಬ್ಯಾಂಕ್ ಆಗಿ ಪರಿವರ್ತನೆ ಕಾಣಲು ಪರವಾನಗಿಗೆ ಅರ್ಜಿ ಸಲ್ಲಿಸಬೇಕು ಎಂದಾದರೆ ಅದು ಕನಿಷ್ಠ ₹300 ಕೋಟಿ ಬಂಡವಾಳ ಹೊಂದಿರಬೇಕು ಎಂದು ಉಲ್ಲೇಖ ಮಾಡಲಾಗಿದೆ.

ಸಂಘವು ಕಳೆದ 10 ವರ್ಷಗಳಿಂದ ಸಕ್ರಿಯವಾಗಿ ಕಾರ್ಯಾಚರಣೆ ನಡೆಸುತ್ತಿರಬೇಕು, ಐದು ವರ್ಷಗಳಿಂದ ಒಳ್ಳೆಯ ಹಣಕಾಸಿನ ಸ್ಥಿತಿ ಹೊಂದಿರಬೇಕು ಎಂದು ಹೇಳಲಾಗಿದೆ. 2025ರ ಮಾರ್ಚ್ 31ರ ಹೊತ್ತಿಗೆ ದೇಶದಲ್ಲಿ ಒಟ್ಟು 1,457 ನಗರ ಸಹಕಾರಿ ಬ್ಯಾಂಕ್‌ಗಳು ಇದ್ದವು.

## ಪ್ರಶ್ನೋತ್ತರ

**ಪ್ರಮೋದ ಶ್ರೀಕಾಂತ ದೈತೋಟ**
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

**ಗುರು,** ಊರು ತಿಳಿಸಿಲ್ಲ

- **ಪ್ರಶ್ನೆ: ನನಗೆ 25 ವರ್ಷ ವಯಸ್ಸು. ನಾವು 2024ರಲ್ಲಿ ಸ್ವಂತ ಮನೆ ನಿರ್ಮಿಸಿ ಅಲ್ಲಿಗೆ ಸ್ಥಳಾಂತರಗೊಂಡಿದ್ದೇವೆ. ಈ ಮನೆ ನಿರ್ಮಾಣಕ್ಕಾಗಿ 'ಕ್ಯಾನ್ಫಿನ್ ಹೋಮ್ಸ್'ನಿಂದ ವಾರ್ಷಿಕ ಶೇ 10.1ರ ಬಡ್ಡಿ ದರದಲ್ಲಿ ಗೃಹಸಾಲ ಪಡೆದಿದ್ದೇವೆ. ಒಟ್ಟು ₹57 ಲಕ್ಷ ಮೊತ್ತದ ಸಾಲವನ್ನು 25 ವರ್ಷಗಳ ಅವಧಿಗೆ ತೆಗೆದುಕೊಂಡಿದ್ದು, ಪ್ರಸ್ತುತ ತಿಂಗಳಿಗೆ ₹51,946 ಇಎಂಐ ಪಾವತಿಸುತ್ತಿದ್ದೇನೆ. ಈ ಸಾಲವನ್ನು ಎರಡು ಹಂತಗಳಲ್ಲಿ, ಅಂದರೆ ₹45 ಲಕ್ಷ ಮತ್ತು ₹12 ಲಕ್ಷದ ಕಂತುಗಳಲ್ಲಿ ಪಡೆದುಕೊಳ್ಳಲಾಗಿದೆ.**

**ಈ ಹೊಸ ಆಸ್ತಿ ಅಲ್ಲದೆ, ನಮ್ಮ ಬಳಿ ಬೆಂಗಳೂರಿನಲ್ಲಿ ಸುಮಾರು ₹42 ಲಕ್ಷ ಮೌಲ್ಯದ ಮತ್ತೊಂದು ಆಸ್ತಿ ಇದೆ. ಆ ಆಸ್ತಿಯನ್ನು ಮಾರಾಟ ಮಾಡಿ, ನಮ್ಮ ಪ್ರಸ್ತುತ ನಿವಾಸದ ಸಮೀಪದಲ್ಲೇ ಮತ್ತೊಂದು ಆಸ್ತಿಯನ್ನು ಖರೀದಿಸುವ ಚಿಂತನೆ ನಡೆಸುತ್ತಿದ್ದೇವೆ. ಆಸ್ತಿ ಮಾರಾಟ ಮಾಡಿ ಹೊಸ ಆಸ್ತಿ ಖರೀದಿಸುವುದು ಆರ್ಥಿಕವಾಗಿ ಸೂಕ್ತವೇ ಅಥವಾ ಮಾರಾಟದಿಂದ ಬಂದ ಮೊತ್ತವನ್ನು ಬಳಸಿ ನಮ್ಮ ಗೃಹ ಸಾಲವನ್ನು ಭಾಗಶಃ ಅಥವಾ ಪೂರ್ಣವಾಗಿ ತೀರಿಸುವುದು ಉತ್ತಮವೇ? ಈ ಕುರಿತು ಮಾರ್ಗದರ್ಶನ ಅಗತ್ಯವಿದೆ.**

**ನಾನು ಮತ್ತು ನನ್ನ ತಾಯಿ ಉದ್ಯೋಗದಲ್ಲಿದ್ದೇವೆ, ಒಟ್ಟಾರೆ ತಿಂಗಳಿಗೆ ಸುಮಾರು ₹90,000 ಆದಾಯವಿದೆ. ಮುಂದಿನ ಯೋಜನೆಯಾಗಿ, ₹45 ಲಕ್ಷದ ಸಾಲವನ್ನು ತೀರಿಸಿದ ನಂತರ ಚಿನ್ನದಲ್ಲಿ ಅಥವಾ ಮ್ಯೂಚುವಲ್ ಫಂಡ್‌ಗಳಲ್ಲಿ ಉಳಿತಾಯ ಮತ್ತು ಹೂಡಿಕೆ ಮಾಡುವ ಉದ್ದೇಶವಿದೆ. ನಂತರ, ನನ್ನ ವಯಸ್ಸು 30 ವರ್ಷ ಮೀರಿದಾಗ ಮತ್ತೊಂದು ಆಸ್ತಿ ಖರೀದಿಸುವುದನ್ನು ಪರಿಗಣಿಸುತ್ತಿದ್ದೇನೆ.**

**ಇನ್ನೊಂದು ಮಹತ್ವದ ಅಂಶವೆಂದರೆ, ನನ್ನ ತಂದೆಯವರಿಗೆ ಇನ್ನು ಎರಡು ವರ್ಷಗಳಲ್ಲಿ 60 ವರ್ಷ ವಯಸ್ಸಾಗಲಿದ್ದು, ಅವರಿಗೆ ಯಾವುದೇ ನಿಯಮಿತ ಆದಾಯ ಅಥವಾ ಪಿಂಚಣಿ ಇಲ್ಲ. ಆದ್ದರಿಂದ, ಮುಂದಿನ ದಿನಗಳಲ್ಲಿ ಅವರ ಆರ್ಥಿಕ ಜವಾಬ್ದಾರಿಯನ್ನು ನಾನು ವಹಿಸಿಕೊಳ್ಳಬೇಕಾಗಿದೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ, ನಮ್ಮ ಕುಟುಂಬದ ಆರ್ಥಿಕ ಭದ್ರತೆ ಮತ್ತು ದೀರ್ಘಕಾಲೀನ ಲಾಭದ ದೃಷ್ಟಿಯಿಂದ ಯಾವ ನಿರ್ಧಾರ ಸೂಕ್ತ ಎಂಬ ಬಗ್ಗೆ ಮಾಹಿತಿ ನೀಡಿ.**

**ಉತ್ತರ:** ನಿಮ್ಮ ವಯಸ್ಸು, ಕುಟುಂಬದ ಆದಾಯ, ಹೊಣೆಗಾರಿಕೆ ಮತ್ತು ಈಗಾಗಲೇ ತೆಗೆದುಕೊಂಡಿರುವ ಗೃಹಸಾಲದ ಹಿನ್ನೆಲೆ ಗಮನಿಸಿದರೆ, ಈ ವಿಚಾರವನ್ನು ಕೇವಲ 'ಆಸ್ತಿ ಮಾರಾಟ ಮಾಡಲೇಬೇಕೆ ಅಥವಾ ಸಾಲ ತೀರಿಸಲೇಬೇಕೆ' ಎಂಬ ಎರಡು ಆಯ್ಕೆಗಳಿಗೆ ಸೀಮಿತ ಮಾಡಿ ನೋಡದೇ, ಒಟ್ಟು ಹಣಕಾಸು ವೆಚ್ಚ, ಆಸ್ತಿಯ ಮಾರಾಟದಿಂದ ಬರುವ ಲಾಭ, ತೆರಿಗೆ ಇತ್ಯಾದಿ ದೃಷ್ಟಿಯಿಂದಲೂ ಪರಿಶೀಲಿಸುವುದು ಅಗತ್ಯ. ನೀವು 'ಕ್ಯಾನ್ಫಿನ್' ಮೂಲಕ ₹57 ಲಕ್ಷ ಗೃಹಸಾಲವನ್ನು ಶೇ 10.1ರ ಬಡ್ಡಿದರದಲ್ಲಿ 25 ವರ್ಷಗಳಿಗೆ ಪಡೆದಿದ್ದು, ತಿಂಗಳಿಗೆ ಸುಮಾರು ₹51,946 ಇಎಂಐ ಪಾವತಿಸುತ್ತಿದ್ದೀರಿ. ದೀರ್ಘಾವಧಿಯಲ್ಲಿ ಈ ಸಾಲದ ಮೇಲೆ ನೀವು ಪಾವತಿಸುವ ಒಟ್ಟು ಬಡ್ಡಿ ಮೊತ್ತವು ಸಾಲದ ಮೂಲ ಮೊತ್ತಕ್ಕಿಂತ ಬಹಳ ಹೆಚ್ಚಾಗುತ್ತದೆ. ಹೀಗಾಗಿ, ಬಡ್ಡಿ ಹೊರೆ ಕಡಿಮೆ ಮಾಡಿಕೊಳ್ಳುವುದು ಮೊದಲ ಆದ್ಯತೆಯಾಗಬೇಕು.

ಬೆಂಗಳೂರಿನಲ್ಲಿರುವ ₹42 ಲಕ್ಷ ಮೌಲ್ಯದ ಆಸ್ತಿಯನ್ನು ಮಾರಾಟ ಮಾಡುವ ಮೊದಲು, ಸಂಭಾವ್ಯ ಆದಾಯ ತೆರಿಗೆ ಪರಿಣಾಮವನ್ನು ಲೆಕ್ಕಹಾಕಿ. ಜೊತೆಗೆ, ಈಗಾಗಲೇ ಹೊಂದಿರುವ ಗೃಹಸಾಲದ ಒಪ್ಪಂದದಲ್ಲಿ ಹೇಳಲಾದ ಷರತ್ತುಗಳನ್ನು ಗಮನಿಸಿ. ಸಾಮಾನ್ಯವಾಗಿ ಸಾಲ ವರ್ಗಾವಣೆ ಆಗಿರದ ಅಥವಾ ಸ್ವಂತ ಹಣವನ್ನು ಗೃಹ ಸಾಲ ಮರುಪಾವತಿಗೆ ಉಪಯೋಗಿಸಿದ ಸಂದರ್ಭದಲ್ಲಿ ಮರುಪಾವತಿ ಮೇಲೆ ಯಾವುದೇ ಪೂರ್ವ ಪಾವತಿ ಶುಲ್ಕ ಇರುವುದಿಲ್ಲ. ಹೀಗಾಗಿ, ನಿಮ್ಮ ಆದ್ಯತೆ ಪ್ರಸ್ತುತ ಇರುವ ಸಾಲ ಮರುಪಾವತಿಗೆ ಇರಲಿ.

ಹಣಕಾಸಿನ ದೃಷ್ಟಿಯಿಂದ ನೋಡಿದರೆ, ನಿಮಗೆ ಗೃಹ ಸಾಲದ ಹೊರತಾಗಿ ಯಾವುದೇ ಇತರ ಆರ್ಥಿಕ ಬಾಧ್ಯತೆಗಳಿಲ್ಲದಿದ್ದರೆ, ಸಾಲ ಮರುಪಾವತಿಸಿ. ನಿಮ್ಮ ಪ್ರಸ್ತುತ ಆದಾಯದಲ್ಲಿ ನಿಮ್ಮ ತಂದೆ - ತಾಯಿ ಹಾಗೂ ನಿಮ್ಮ ಆರೋಗ್ಯಕ್ಕೆ ಸಂಬಂಧಿಸಿ ಒಂದಷ್ಟು ತುರ್ತು ನಿಧಿ ಕೂಡಿಡಿ. ಉಳಿದ ಹಣವನ್ನು ಬಳಸಿಕೊಳ್ಳಿ. ಈಗಾಗಲೇ ನೀವು ಹೊಸ ಮನೆ ಹೊಂದಿರುವುದರಿಂದ, ಯಾವುದೇ ಸಂದರ್ಭದಲ್ಲಿ ಹೆಚ್ಚುವರಿ ಹಣ ಇದ್ದಾಗ ಸಾಲದ ಪ್ರಮುಖ ಭಾಗವನ್ನು ಮುಂಚಿತವಾಗಿ ತೀರಿಸುವುದು, ಹೊಸ ಆಸ್ತಿ ಖರೀದಿಗಿಂತ ಹೆಚ್ಚು ಲಾಭಕರವಾಗಬಹುದು. ಇದರಿಂದ ಸಾಲದ ಅವಧಿ ಕಡಿಮೆಗೊಂಡು ಮುಂದಿನ ವರ್ಷಗಳಲ್ಲಿ ಲಕ್ಷಾಂತರ ರೂಪಾಯಿ ಬಡ್ಡಿ ಉಳಿತಾಯ ಸಾಧ್ಯ. ಈ ಉಳಿತಾಯ ಪರೋಕ್ಷವಾಗಿ ನಿಮ್ಮಲ್ಲೇ ಇರುತ್ತದೆ. ಪ್ರಸ್ತುತ ಕುಟುಂಬದ ಆದಾಯದ ಶೇ 50ರಿಂದ 60ರಷ್ಟು ಮೊತ್ತವನ್ನು ನೀವು ಸಾಲ ಮರುಪಾವತಿಗೆ ಬಳಸುತ್ತಿದ್ದೀರಿ. ಸಾಲದ ಅವಧಿಪೂರ್ವ ಪಾವತಿಯಿಂದ ನಗದು ಹರಿವು ಸುಧಾರಣೆಯಾಗಿ ಕುಟುಂಬದ ಭದ್ರತೆ ಹೆಚ್ಚಾಗುತ್ತದೆ.

ಸಾಲದ ಹೊರೆ ಕಡಿಮೆಯಾದ ನಂತರ, ಉಳಿದ ಆದಾಯವನ್ನು ಮ್ಯೂಚುವಲ್ ಫಂಡ್‌ಗಳಂತಹ ದೀರ್ಘಾವಧಿ ಹೂಡಿಕೆಗಳಲ್ಲಿ ಅಥವಾ ಅಗತ್ಯವಿದ್ದರೆ ಚಿನ್ನದಲ್ಲಿ ಹಂತ ಹಂತವಾಗಿ ಹೂಡಿಕೆ ಮಾಡಬಹುದು. ಇವೆಲ್ಲ ದ್ರವ್ಯ ಹೂಡಿಕೆಗಳಾಗಿರುವುದರಿಂದ ಮುಂದೆ ನಿಮ್ಮ ಅಪೇಕ್ಷೆಯಂತೆ ಐದು ವರ್ಷಗಳ ನಂತರ ಮತ್ತೊಂದು ಆಸ್ತಿ ಖರೀದಿಸುವ ನಿರ್ಧಾರವನ್ನು ಆ ಸಮಯದ ಆದಾಯ ಮತ್ತು ಈ ಹೂಡಿಕೆಗಳ ಮಾರುಕಟ್ಟೆ ಮೌಲ್ಯ ಪರಿಗಣಿಸಿ ತೆಗೆದುಕೊಳ್ಳುವುದು ಹೆಚ್ಚು ಸುರಕ್ಷಿತ. ಹಾಗೂ ಲಾಭದಾಯಕವಾಗಿರುತ್ತದೆ. ಈ ಲಾಭದ ಮರುಹೂಡಿಕೆಯನ್ನು ಮುಂದೆ ನಿಮ್ಮ ನಿರೀಕ್ಷೆಯಂತೆ ಇನ್ನೊಂದು ಮನೆಯಲ್ಲಿ ಮಾಡಿ ತೆರಿಗೆ ಲಾಭ ಪಡೆಯಬಹುದು. ನಿಮ್ಮ ಆಸ್ತಿ ಮಾರಾಟಕ್ಕೆ ಸಂಬಂಧಿಸಿ ತೆರಿಗೆ ಅನ್ವಯಿಸಬಹುದು. ಅದಕ್ಕಾಗಿ ಅಗತ್ಯ ಮಾರ್ಗದರ್ಶನ ಪಡೆದುಕೊಳ್ಳಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

**ಅಡಿಕೆ ಧಾರಣೆ**

| ಚಿತ್ರದುರ್ಗ | | ಶಿವಮೊಗ್ಗ | | | |
|---|---|---|---|---|---|
| ಅಪಿ | 54119-54529 | ಸರಕು/ಹಸ | 61100-98306 | ಬೆಟ್ಟೆ | 34599-53699 |
| ಬೆಟ್ಟೆ | 38549-38969 | ಬೆಟ್ಟೆ | 50069-68009 | ಬಿಳಿಗೋಟು | 23400-42678 |
| ಕೆಂಪುಗೋಟು | 32000-32400 | ಗೊರಬಲು | 19009-41700 | ಚಾಲಿ | 47099-51691 |
| ರಾಶಿ | 53649-54099 | ರಾಶಿಇಡಿ | 41199-56789 | ಕೆಂಪುಗೋಟು | 24899-38699 |
| **ಪುತ್ತೂರು** | | **ಸಿದ್ದಾಪುರ** | | ರಾಶಿ | 53099-58010 |
| ಕೋಕ | 20000-35500 | ಬಿಳಿಗೋಟು | 16699-41109 | **ಯಲ್ಲಾಪುರ** | |
| ಹೊಸತು | 26000-46000 | ಚಾಲಿ | 42368-49139 | ಅಪಿ | 64899-74755 |
| **ಸಾಗರ** | | ಕೋಕ | 11499-34569 | ಬಿಳಿಗೋಟು | 16899-34899 |
| ಬಿಳಿಗೋಟು | 23269-30866 | ಹೊಸಚಾಲಿ | 38617-43609 | ಕೋಕ | 16000-30699 |
| ಚಾಲಿ | 35299-45000 | ಕೆಂಪುಗೋಟು | 16812-37699 | ಹಳೆಚಾಲಿ | 38695-51561 |
| ಕೋಕ | 23269-23269 | ರಾಶಿ | 33700-55809 | ಹೊಸಚಾಲಿ | 37899-44444 |
| ಕೆಂಪುಗೋಟು | 33989-35991 | ತಟ್ಟಿಬೆಟ್ಟೆ | 38111-45599 | ಕೆಂಪುಗೋಟು | 24899-40200 |
| ರಾಶಿ | 45299-55099 | **ಶಿರಸಿ** | | ರಾಶಿ | 51145-64668 |
| | | | | ತಟ್ಟಿಬೆಟ್ಟೆ | 37901-55009 |

**ಮುಂಬೈ ಖಾದ್ಯ ತೈಲ** (ಆವರಣದಲ್ಲಿ ಹಿಂದಿನ ದಿನದ ದರ) (10 ಕೆ.ಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1630 (1630) |
| ಸೋಯಾ (ರಿಫೈನ್ಡ್) | ₹1335 (1315) |
| ಸೂರ್ಯಕಾಂತಿ (ರಿಫೈನ್ಡ್) | ₹1560 (1545) |
| ಪಾಮೋಲಿನ್ | ₹1275 (1265) |

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)
ಬೆಂಗಳೂರು ₹31000-43000
ದಾವಣಗೆರೆ ₹11800-11800

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

18ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಪಿ.ಬಿ.ಜಗದೀಶ್
(ಕೋನಪ್ಪನ ಅಗ್ರಹಾರ ಗ್ರಾಮ ಪಂಚಾಯಿತಿ)
ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು, ಪರಪ್ಪನ ಅಗ್ರಹಾರ
ನಿಧನ: 14.01.2008
ಸದಾ ನಿಮ್ಮನ್ನು ಸ್ಮರಿಸುವ ಹಾಗೂ ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ.
ತಾಯಿ, ಪತ್ನಿ, ಮಕ್ಕಳು, ಸಹೋದರ, ಸಹೋದರಿಯರು ಹಾಗೂ ಕುಟುಂಬವರ್ಗದವರು ಮತ್ತು ಸ್ನೇಹಿತರು ಹಾಗೂ ಗ್ರಾಮಸ್ಥರು

# ಶೇ 25ರಷ್ಟು ಸುಂಕ: ಟ್ರಂಪ್ ಎಚ್ಚರಿಕೆ

**ಒಂದನೇ ಪುಟದಿಂದ...**

ಇರಾನ್, ತೈಲ ಉತ್ಪಾದಿಸುವ ರಾಷ್ಟ್ರಗಳ ಗುಂಪು 'ಒಪೆಕ್'ನ ಸದಸ್ಯ ದೇಶ. ತೈಲ ರಫ್ತು ಮಾಡುವ ಪ್ರಮುಖ ರಾಷ್ಟ್ರವೂ ಆಗಿದೆ. ಇರಾನ್‌ನಿಂದ ತೈಲ ಖರೀದಿಸುವ ಪ್ರಮುಖ ದೇಶಗಳಲ್ಲಿ ಭಾರತ, ಚೀನಾ, ಬ್ರೆಜಿಲ್, ಟರ್ಕಿ, ಯುಎಇ ಹಾಗೂ ರಷ್ಯಾ ಸೇರಿವೆ.

**ಅಧಿಕೃತ ಮಾಹಿತಿ ಇಲ್ಲ:** ಸುಂಕಕ್ಕೆ ಸಂಬಂಧಿಸಿ ಟ್ರಂಪ್ ಅವರ ಈ ಘೋಷಣೆ ಕುರಿತಂತೆ ಶ್ವೇತಭವನ ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂದು ರಾಯಿಟರ್ಸ್ ವರದಿ ಮಾಡಿದೆ.

ಈ ಕುರಿತು ಶ್ವೇತಭವನದ ವೆಬ್‌ಸೈಟ್‌ನಲ್ಲಿ ಯಾವುದೇ ಅಧಿಕೃತ ಮಾಹಿತಿ ಇಲ್ಲ. ಅಲ್ಲದೇ, ಯಾವ ಕಾನೂನಿನ ಅನ್ವಯ ಈ ಸುಂಕ ವಿಧಿಸಲು ಟ್ರಂಪ್ ಮುಂದಾಗಿದ್ದಾರೆ ಅಥವಾ ಇರಾನ್ ಜೊತೆ ವ್ಯಾಪಾರ ನಡೆಸುವ ಎಲ್ಲ ದೇಶಗಳಿಗೂ ಈ ಸುಂಕ ವಿಧಿಸಲಾಗುತ್ತದೆಯೇ ಎಂಬ ಬಗ್ಗೆಯೂ ಮಾಹಿತಿ ಇಲ್ಲ ಎಂದೂ ಸಂಸ್ಥೆ ವರದಿ ಮಾಡಿದೆ.

### 'ಭಾರತದ ಮೇಲೆ ಪರಿಣಾಮ'

**ಒಂದನೇ ಪುಟದಿಂದ...**

'ಇರಾನ್ ಮೇಲಿನ ನಿರ್ಬಂಧಗಳಿಗೆ ಸಂಬಂಧಿಸಿ ವಿದೇಶ ಸ್ವತ್ತುಗಳ ನಿಯಂತ್ರಣ ಕಚೇರಿ(ಒಎಫ್‌ಎಸಿ) ನೀಡಿರುವ ಆದೇಶಗಳನ್ನು ಭಾರತದ ಕಂಪನಿಗಳು ಹಾಗೂ ಬ್ಯಾಂಕುಗಳು ಸಂಪೂರ್ಣವಾಗಿ ಪಾಲನೆ ಮಾಡುತ್ತಿವೆ. ಪ್ರಮುಖವಾಗಿ ಆಹಾರ ಮತ್ತು ಔಷಧಗಳು ಸೇರಿದಂತೆ ಮಾನವೀಯ ಆಧಾರದಲ್ಲಿ ನಡೆಸಬಹುದಾದ ವ್ಯಾಪಾರಕ್ಕೆ ಒಎಫ್‌ಎಸಿ ಅನುಮತಿ ನೀಡಿದೆ' ಎಂದು ಹೇಳಿದ್ದಾರೆ.

ಇನ್ನೊಂದೆಡೆ, ಇರಾನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಗಳಿಂದಾಗಿ. ಆ ರಾಷ್ಟ್ರಕ್ಕೆ ಬಾಸ್ಮತಿ ಅಕ್ಕಿ ರಫ್ತು ಮಾಡುವ ಭಾರತದ ಉದ್ದಿಮೆಗಳ ಮೇಲೂ ಪರಿಣಾಮ ಉಂಟಾಗಲಿದೆ ಎಂದು ಮೂಲಗಳು ಹೇಳಿವೆ.

'ದೇಶೀಯ ಮಾರುಕಟ್ಟೆಯಲ್ಲಿ ಬಾಸ್ಮತಿ ಅಕ್ಕಿ ದರದಲ್ಲಿ ಭಾರಿ ಇಳಿಕೆಯಾಗುವುದು. ಮತ್ತೊಂದೆಡೆ, ಅಕ್ಕಿ ಪೂರೈಕೆಗೆ ಸಂಬಂಧಿಸಿದ ಹಣದ ಪಾವತಿಯಲ್ಲಿ ಮತ್ತಷ್ಟು ವಿಳಂಬವಾಗಲಿದೆ' ಎಂದು ರಫ್ತುದಾರರ ಸಂಘಟನೆ ಹೇಳಿದೆ.

ಕಳೆದ ವರ್ಷ ಮೊದಲ 10 ತಿಂಗಳಲ್ಲಿ ಭಾರತ ಮತ್ತು ಇರಾನ್‌ನ ದ್ವಿಪಕ್ಷೀಯ ವ್ಯಾಪಾರ ₹12 ಸಾವಿರ ಕೋಟಿಯಷ್ಟಿತ್ತು.

ಬಾಸ್ಮತಿ ಅಕ್ಕಿ, ಹಣ್ಣುಗಳು, ತರಕಾರಿಗಳು, ಔಷಧಗಳು ಇರಾನ್‌ಗೆ ಭಾರತ ರಫ್ತು ಮಾಡುವ ಪ್ರಮುಖ ಉತ್ಪನ್ನಗಳಾಗಿವೆ ಎಂದು ಭಾರತದ ವಾಣಿಜ್ಯ ಸಚಿವಾಲಯ ತಿಳಿಸಿದೆ.

# ₹5 ಸಾವಿರ ಕೋಟಿ ಠೇವಣಿ ಸಂಗ್ರಹದತ್ತ ಬೀರೇಶ್ವರ ಸಂಸ್ಥೆ

ಪ್ರಜಾವಾಣಿ ವಾರ್ತೆ

**ಚಿಕ್ಕೋಡಿ (ಬೆಳಗಾವಿ ಜಿಲ್ಲೆ):** ತಾಲ್ಲೂಕಿನ ಯಕ್ಸಂಬಾದಲ್ಲಿ ಕೇಂದ್ರ ಸ್ಥಾನ ಹೊಂದಿರುವ ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸೈಟಿ ಈಗ 35 ವರ್ಷಗಳನ್ನು ಪೂರೈಸಿದೆ.

₹4,857 ಕೋಟಿ ಠೇವಣಿ ಸಂಗ್ರಹ ಹೊಂದಿದ್ದು, ₹5 ಸಾವಿರ ಕೋಟಿ ಸಂಗ್ರಹಿಸುವತ್ತ ಮುನ್ನಡೆದಿದೆ. ಕರ್ನಾಟಕ, ಮಹಾರಾಷ್ಟ್ರ, ಗೋವಾ ರಾಜ್ಯದಲ್ಲಿ 231 ಶಾಖೆಗಳನ್ನು ಹೊಂದಿದೆ.

ಚಿಕ್ಕೋಡಿ ತಾಲ್ಲೂಕಿನ ಯಕ್ಸಂಬಾದಲ್ಲಿ ಇರುವ ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸೈಟಿಯ ಮುಖ್ಯ ಕಚೇರಿ

ಜೊಲ್ಲೆ ಗ್ರೂಪ್ ಸಂಸ್ಥಾಪಕ, ಮಾಜಿ ಸಂಸದರೂ ಆದ ಅಣ್ಣಾಸಾಹೇಬ ಜೊಲ್ಲೆ ಮತ್ತು ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಅವರು ಯಕ್ಸಂಬಾ ಪಟ್ಟಣದ ಗ್ರಾಮದೇವತೆ ಬೀರೇಶ್ವರ ದೇವರ ಹೆಸರಿನಲ್ಲಿ 1991ರ ಜನವರಿ 11ರಂದು ಈ ಸಂಸ್ಥೆ ಸ್ಥಾಪಿಸಿದರು. ಇದೀಗ 4.31 ಲಕ್ಷ ಸದಸ್ಯರನ್ನು ಹೊಂದಿದ್ದು, ₹3,611 ಕೋಟಿ ಸಾಲ ವಿತರಿಸಿದೆ. ಕರ್ನಾಟಕದಲ್ಲಿ 178, ಮಹಾರಾಷ್ಟ್ರದಲ್ಲಿ 48 ಮತ್ತು ಗೋವಾದಲ್ಲಿ 5 ಶಾಖೆಗಳನ್ನು ಹೊಂದಿದೆ.

ಸಹಕಾರ, ಕೃಷಿ, ಹಣಕಾಸು, ಶಿಕ್ಷಣ, ಹೈನುಗಾರಿಕೆ, ವ್ಯಾಪಾರ ಸೇರಿ ವಿವಿಧ ಕ್ಷೇತ್ರಗಳಲ್ಲಿ ಜೊಲ್ಲೆ ಗ್ರೂಪ್ ಕ್ರಿಯಾಶೀಲವಾಗಿದೆ. ಹಸಿರು ಶಕ್ತಿ ಉತ್ಪಾದನೆ, ಗ್ಲಾಸ್ ಪ್ರೊಸೆಸಿಂಗ್, ಕಟ್ಟಡ ನಿರ್ಮಾಣ, ಮನರಂಜನೆ, ಆರೋಗ್ಯ ಕ್ಷೇತ್ರದ ಸೌಕರ್ಯ, ಐಟಿಸಿ ಸಹಭಾಗಿತ್ವದಲ್ಲಿ 'ವೆಲ್‌ಕಮ್' ಎಂಬ ಫೈವ್‌ಸ್ಟಾರ್ ಹೋಟೆಲ್ ಸ್ಥಾಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# '10 ನಿಮಿಷದ ಡೆಲಿವರಿ'ಗೆ ಕೊಕ್

**ಎರಡನೇ ಮುಖಪುಟದಿಂದ...**

ಉತ್ಪನ್ನಗಳನ್ನು 10 ನಿಮಿಷಗಳಲ್ಲಿ ಮನೆ ಬಾಗಿಲಿಗೆ ತಲುಪಿಸಲಾಗುತ್ತದೆ ಎಂಬ ಭರವಸೆಯನ್ನು ವಿರೋಧಿಸಿ ಗಿಗ್ ಕಾರ್ಮಿಕರು ಹೊಸ ವರ್ಷದ ಸಂದರ್ಭದಲ್ಲಿ ದೇಶದಾದ್ಯಂತ ಮುಷ್ಕರಕ್ಕೆ ಕರೆ ನೀಡಿದ್ದರು. ಈ ಮುಷ್ಕರವು ಅವರ ಆರೋಗ್ಯ, ಸುರಕ್ಷತೆ ಹಾಗೂ ಆದಾಯದ ಬಗ್ಗೆ ಚರ್ಚೆ ಹುಟ್ಟುಹಾಕಿತ್ತು.

ಎಟರ್ನಲ್ ಕಂಪನಿಯ ಸಿಇಒ ದೀಪಿಂದರ್ ಗೋಯಲ್ ಅವರು, '10 ನಿಮಿಷಗಳಲ್ಲಿ ಉತ್ಪನ್ನಗಳನ್ನು ತಲುಪಿಸುವ ಭರವಸೆಯು ಗಿಗ್ ಕಾರ್ಮಿಕರ ಮೇಲೆ ಒತ್ತಡ ಹೇರುವುದಿಲ್ಲ, ಅವರು ಅಸುರಕ್ಷಿತವಾಗಿ ವಾಹನ ಚಾಲನೆ ಮಾಡುವುದಕ್ಕೆ ಕಾರಣವಾಗುವುದಿಲ್ಲ. ಏಕೆಂದರೆ ಅವರಿಗೆ ಆ್ಯಪ್‌ನಲ್ಲಿ 10 ನಿಮಿಷಗಳ ಗಡುವನ್ನು ತೋರಿಸುವುದಿಲ್ಲ' ಎಂದು ಈಚೆಗೆ 'ಎಕ್ಸ್' ಮೂಲಕ ಹೇಳಿದ್ದರು.

'ನಮ್ಮ ಮಳಿಗೆಗಳು ಗ್ರಾಹಕರ ಮನೆಗೆ ಹತ್ತಿರದಲ್ಲಿ ಇರುವ ಕಾರಣದಿಂದಾಗಿ 10 ನಿಮಿಷಗಳಲ್ಲಿ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸಲು ಆಗುತ್ತದೆಯೇ ವಿನಾ ರಸ್ತೆಯಲ್ಲಿ ಹೆಚ್ಚು ವೇಗವಾಗಿ ವಾಹನ ಚಾಲನೆ ಮಾಡುವುದರಿಂದ ಅಲ್ಲ' ಎಂದು ಅವರು ವಿವರಿಸಿದ್ದರು.

**ಮುಂಬೈ ಧಾರಣೆ (ಶೇಂಗಾ)**
13-01-2026

| | |
|---|---|
| ಜಾವಾ 70/80(ಹೊಸ) | 11000-11100 |
| ಜಾವಾ 80/90(ಹೊಸ) | 10300-10400 |
| ದಪ್ಪ ಮಧ್ಯಪ್ರದೇಶ (ಹೊಸ) | 8000-8100 |
| ದಪ್ಪ ಗುಜರಾತ್ (ಹೊಸ) | 9300-9400 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1640 (1640) |
| ಒಂದು ವಾರದ ಡೆಲಿವರಿ | 1635 (1635) |
| ಪಾಮ್ ವಾರದ ಡೆಲಿವರಿ | 1273 (1263) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1475 (1470) |
| **ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 1,40,700 (1,40,250) |
| ಬೆಳ್ಳಿ ಕೆ.ಜಿಗೆ | 2,67,000 (2,60,000) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕ್ಲಾಸಿಫೈಡ್ಸ್
ADMISSION CORNER

BMS Educational Trust
BMS ACADEMY FOR PROFESSIONAL COURSES
In Association with
Sri Chaitanya ACADEMY
Coaching Classes for JEE, NEET & KCET with PUC/10+2
JEE (Advance + Mains)
NEET (Medical Aspirants)
KCET (Engineering Aspirants)
FEATURES
-PUC Classes @ BMSCW (PU) Campus
-Experience Faculties for PUC & JEE / NEET / KCET
-Daily Practice Papers (DDPs) & Regular Assignments
-Weekly Tests & Monthly Grand Tests with Detailed Analysis

Contact us at:
BMS Academy for Professional Courses
BMS College of Engineering Campus,
Bull Temple Rd, Basavanagudi, Bengaluru-19
89717 36008 | 90365 10011
bmsiasacademy@gmail.com www.bmsacademy.org.in
LIMITED SEATS - ENROLL NOW!
Your success is our commitment.

# ನಾಯ್ಡು ವಿರುದ್ಧದ ಪ್ರಕರಣ ಮುಕ್ತಾಯಗೊಳಿಸಿದ ಸಿಐಡಿ

ಹೈದರಾಬಾದ್ (ಪಿಟಿಐ): ರಾಜ್ಯದ ಖಜಾನೆಗೆ ₹300 ಕೋಟಿಗೂ ಹೆಚ್ಚಿನ ನಷ್ಟ ಉಂಟು ಮಾಡಿದ 'ಕೌಶಲ ಅಭಿವೃದ್ಧಿ ಹಗರಣ'ಕ್ಕೆ ಸಂಬಂಧಿಸಿದಂತೆ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ಇತರೆ ಆರೋಪಿಗಳ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಮುಕ್ತಾಯಗೊಳಿಸಲು ಸಿಐಡಿ ಸಲ್ಲಿಸಿದ್ದ ಮನವಿಯನ್ನು ವಿಜಯವಾಡದ 'ಎಸಿಬಿ' ಕೋರ್ಟ್ ಮಂಗಳವಾರ ಅನುಮೋದಿಸಿದೆ.

ವೈ ಎ ಸ್ ಆ ರ್ ಸಿ ಪಿ ಅವಧಿಯಲ್ಲಿ ವಿರೋಧ ಪಕ್ಷದ ಮುಖಂಡರಾಗಿದ್ದ ನಾಯ್ಡು ಅವರನ್ನು 'ಕೌಶಲ ಅಭಿವೃದ್ಧಿ ಹಗರಣದಲ್ಲಿ ಆರೋಪಿಯನ್ನಾಗಿ ಮಾಡಿ, 2023ರ ಸೆಪ್ಟೆಂಬರ್ 9ರಂದು ಬಂಧಿಸಲಾಗಿತ್ತು. 50 ದಿನ ಜೈಲಿನಲ್ಲಿ ಕಳೆದ ಅವರು 2023ರ ಅಕ್ಟೋಬರ್ 31ರಂದು ಜಾಮೀನು ಪಡೆದು ಹೊರಬಂದಿದ್ದರು.

ಒಟ್ಟು ₹3,300 ಕೋಟಿ ಮೊತ್ತದಲ್ಲಿ ಕ್ಲಸ್ಟರ್ ಮಟ್ಟದ ಶ್ರೇಷ್ಠತಾ ಕೇಂದ್ರಗಳನ್ನು ತೆರೆಯುವ (ಸಿಒಇಎಸ್) ಯೋಜನೆ ಇದಾಗಿತ್ತು. ಇದರಲ್ಲಿ ನಾಯ್ಡು ಮತ್ತು ಸಹ ಆರೋಪಿಗಳು ಸೇರಿಕೊಂಡು ₹300 ಕೋಟಿಗೂ ಹೆಚ್ಚಿನ ಮೊತ್ತವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿತ್ತು. ಆದರೆ, ಸಿಐಡಿ ಸೋಮವಾರ ಎಸಿಬಿ ಕೋರ್ಟ್‌ಗೆ ಸಲ್ಲಿಸಿದ ವರದಿಯಲ್ಲಿ ಇದು 'ತಪ್ಪು ಗ್ರಹಿಕೆ' ಪ್ರಕರಣವಾಗಿದ್ದು, ಮುಕ್ತಾಯಗೊಳಿಸಲು ಅನುಮತಿ ನೀಡಬೇಕಾಗಿ ಕೋರಿತ್ತು.

# ರಷ್ಯಾದಿಂದ ತೈಲ ಆಮದು ಇಳಿಕೆ

ನವದೆಹಲಿ (ಪಿಟಿಐ): ರಷ್ಯಾದಿಂದ ಕಚ್ಚಾ ತೈಲವನ್ನು ಖರೀದಿಸುವ ದೇಶಗಳ ಸಾಲಿನಲ್ಲಿ ಭಾರತವು ಡಿಸೆಂಬರ್‌ನಲ್ಲಿ ಮೂರನೆಯ ಸ್ಥಾನಕ್ಕೆ ಇಳಿದಿದೆ ಎಂದು ಯುರೋಪಿನ 'ಇಂಧನ ಮತ್ತು ಶುದ್ಧ ಗಾಳಿ ಕುರಿತ ಸಂಶೋಧನಾ ಕೇಂದ್ರ' (ಸಿಆರ್‌ಇಎ) ಹೇಳಿದೆ.

ಸಿಆರ್‌ಇಎ ಅಂದಾಜಿನ ಪ್ರಕಾರ ಡಿಸೆಂಬರ್‌ನಲ್ಲಿ ಭಾರತವು ರಷ್ಯಾದಿಂದ ಆಮದು ಮಾಡಿಕೊಂಡ ಕಚ್ಚಾ ತೈಲ, ಕಲ್ಲಿದ್ದಲಿನ ಮೊತ್ತವು 2.3 ಬಿಲಿಯನ್ ಯೂರೊ (ಸರಿಸುಮಾರು ₹24 ಸಾವಿರ ಕೋಟಿ) ಆಗಿದೆ. ನವೆಂಬರ್ ತಿಂಗಳಲ್ಲಿ ಇದು 3.3 ಬಿಲಿಯನ್ ಯೂರೊ (ಸರಿಸುಮಾರು ₹34 ಸಾವಿರ ಕೋಟಿ) ಆಗಿತ್ತು.

ಎರಡನೆಯ ಸ್ಥಾನಕ್ಕೆ ಟರ್ಕಿ ದೇಶ ಬಂದಿದೆ ಎಂದು ಅದು ಹೇಳಿದೆ. ಮೊದಲ ಸ್ಥಾನದಲ್ಲಿ ಚೀನಾ ಮುಂದುವರಿದಿದೆ.

ಅಮೆರಿಕವು ರಷ್ಯಾದ ರೊಸ್ನೆಫ್ಟ್ ಮತ್ತು ಲುಕಾಯಿಲ್ ಕಂಪನಿಗಳ ಮೇಲೆ ನಿರ್ಬಂಧ ಹೇರಿದೆ. ಇವೆರಡು ರಷ್ಯಾದ ಅತಿದೊಡ್ಡ ತೈಲ ಉತ್ಪಾದನಾ ಕಂಪನಿಗಳಾಗಿವೆ. ಈ ನಿರ್ಬಂಧದ ಕಾರಣದಿಂದಾಗಿ ರಿಲಯನ್ಸ್ ಇಂಡಸ್ಟ್ರೀಸ್, ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್, ಎಚ್‌ಪಿಸಿಎಲ್-ಮಿತ್ತಲ್ ಎನರ್ಜಿ ಲಿ. ಮತ್ತು ಎಂಆರ್‌ಪಿಎಲ್ ಲಿಮಿಟೆಡ್ ರಷ್ಯಾದಿಂದ ಕಚ್ಚಾ ತೈಲ ಆಮದುಮಾಡಿಕೊಳ್ಳುವುದನ್ನು ಒಂದೋ ನಿಲ್ಲಿಸಿವೆ ಅಥವಾ ಆಮದು ಪ್ರಮಾಣವನ್ನು ತಗ್ಗಿಸಿವೆ.

# ಮರುಪಾವತಿ ಸಾಧ್ಯವೇ ಇಲ್ಲ: ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎಪಿ): ವಿವಿಧ ದೇಶಗಳ ಮೇಲೆ ಸುಂಕ ವಿಧಿಸಿ ಹೊರಡಿಸಲಾಗಿರುವ ಆದೇಶವನ್ನು ಒಂದು ವೇಳೆ ಸುಪ್ರೀಂ ಕೋರ್ಟ್ ರದ್ದು ಮಾಡಿದಲ್ಲಿ, ಅಮೆರಿಕದ ಮೇಲೆ ಭಾರಿ ಪರಿಣಾಮ ಉಂಟಾಗಲಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ.

'ಹಲವು ದೇಶಗಳ ಮೇಲೆ ಭಾರಿ ಪ್ರಮಾಣದಲ್ಲಿ ಸುಂಕ ವಿಧಿಸಿ, ಸಂಗ್ರಹಿಸಿರುವ ಹಣವನ್ನು ಮರಳಿ ಕೊಡಲು ಕಷ್ಟವಾಗಲಿದೆ' ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

'ನ್ಯಾಯಾಲಯದ ತೀರ್ಪು ವ್ಯತಿರಿಕ್ತವಾಗಿ ಬಂದರೆ ನಾವು ಗೊಂದಲಕ್ಕೆ ಒಳಗಾಗಬೇಕಾಗುತ್ತದೆ. ಭಾರಿ ಮೊತ್ತವನ್ನು ಮರುಪಾವತಿ ಮಾಡಬೇಕಾಗುತ್ತದೆ. ನಾವು ಯಾರಿಗೆ, ಯಾವಾಗ, ಎಷ್ಟು ಪಾವತಿಸಬೇಕಾಗುತ್ತದೆ ಎಂಬುವುದನ್ನು ಲೆಕ್ಕ ಹಾಕಲು ಎಷ್ಟೋ ವರ್ಷಗಳು ಬೇಕಾಗುತ್ತವೆ' ಎಂದೂ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

Electrical Technicians having experience in hotel background (3 or 5 star ), are required for software company maintenance in Bangalore, 35000/- salary along with PF, ESI, bonus and accommodation. Candidates with ITI/Diploma pls Contact: 9886987898, 9900816937, 9845080989

General

ಬೆಂಗಳೂರಿನ ಮನೆಗಳಲ್ಲಿ ಚಿಕ್ಕಮಕ್ಕಳನ್ನು / ವಯಸ್ಕರನ್ನು ನೋಡಿಕೊಳ್ಳಲು / ಮನೆಕೆಲಸ ಮಾಡಲು ಮಹಿಳೆಯರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ 13000-20000 ಉಚಿತ ಆಹಾರ, ವಸತಿ ನೀಡಲಾಗುತ್ತದೆ. 8197566700, 7259450815.

Part-Time Jobs

ಮನೆಯಿಂದಲೇ ಕೆಲಸಗಳಿಗೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಕರ್ನಾಟಕದಾದ್ಯಂತ ಕಂಪನಿಗಳಿಗೆ ಆದ್ಯತೆ. 20,000/- 35,000/- ಸಂಪಾದಿಸಿ, ಕೊರಿಯರ್ ಸೌಲಭ್ಯವಿದೆ. 9964311522, 9742133993

Wanted

ಕರ್ನಾಟಕದಾದ್ಯಂತ ಕಂಪನಿಗಳಿಗೆ work form Home ಕೆಲಸಕ್ಕೆ ಯುವಕರು ಯುವತಿಯರು ಬೇಕಾಗಿದ್ದಾರೆ. 19000-25000. ಏಳನೇ, ಹತ್ತನೇ ವಿದ್ಯಾರ್ಹತೆಯಿಲ್ಲದವರಿಗೂ. 7996021216

ವೈಯಕ್ತಿಕ

Change of Name

I, ANJANA R D/o Rashin Chandran R/o 163 2nd FLR Chenna Keshava Nilaya, Sai Nagara Bangalore- 560097 shall be Known as Anjana R Nair for all Purpose.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

### ಇರಾನ್ ಸರ್ಕಾರಿ ಒಡೆತನದ ಸುದ್ದಿವಾಹಿನಿಯಿಂದ ಮೊದಲ ಬಾರಿಗೆ ಮಾಹಿತಿ

# 'ಪ್ರತಿಭಟನೆಯಿಂದ ಭಾರಿ ಸಂಖ್ಯೆಯ ಸಾವು'

ಜಿನೀವಾ/ಪ್ಯಾರಿಸ್(ರಾಯಿಟರ್ಸ್): ಆಡಳಿತ ವಿರೋಧಿ ಪ್ರತಿಭಟನಕಾರರ ಮೇಲೆ ಇರಾನ್ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳು ಹಾಗೂ ವರದಿಯಾಗುತ್ತಿರುವ ಹಿಂಸಾಚಾರ ಕುರಿತು ವ್ಯಾಪಕ ಆತಂಕ ವ್ಯಕ್ತವಾಗುತ್ತಿದೆ. ಈ ವೇಳೆ ಮೃತಪಟ್ಟವರ ಸಂಖ್ಯೆಯ ಬಗ್ಗೆ ನಿಖರ ಮಾಹಿತಿ ಸಿಗುತ್ತಿಲ್ಲ.

ಇದೇ ಮೊದಲ ಬಾರಿಗೆ ಈ ಕುರಿತು ಮಾಹಿತಿ ಪ್ರಸಾರ ಮಾಡಿರುವ ಸರ್ಕಾರಿ ಒಡಾತನದ ಸುದ್ದಿವಾಹಿನಿ,'ಪ್ರತಿಭಟನಕಾರರ ವಿರುದ್ಧ ಕ್ರಮ ಕೈಗೊಂಡ ವೇಳೆ ಭಾರಿ ಸಂಖ್ಯೆಯಲ್ಲಿ ಸಾವು ಸಂಭವಿಸಿವೆ' ಎಂದು ಮಂಗಳವಾರ ಹೇಳಿದೆ.

'ಸಶಸ್ತ್ರ ಹಾಗೂ ಭಯೋತ್ಪಾದಕರ ಗುಂಪುಗಳು ತಾವು ನಡೆಸಿದ ಸಂಘರ್ಷದಿಂದ ದೇವರಿಗೆ ದೊಡ್ಡ ಸಂಖ್ಯೆಯಲ್ಲಿ ಹುತಾತ್ಮರನ್ನು ಸಮರ್ಪಣೆ ಮಾಡಿವೆ' ಎಂದು 'ಮಾರ್ಟರ್ಸ್ ಫೌಂಡೇಷನ್' ಮುಖ್ಯಸ್ಥ ಅಹ್ಮದ್ ಮೌಸವಿ ಹೇಳಿಕೆಯನ್ನು ಸುದ್ದಿವಾಹಿನಿ ಉಲ್ಲೇಖಿಸಿದೆ.

ಇರಾನ್‌ನಲ್ಲಿ ಸರ್ಕಾರದ ವಿರುದ್ಧ ನಡೆಯುತ್ತಿರುವ ಪ್ರತಿಭಟನೆ ಬೆಂಬಲಿಸಿ ದಿ ಹೇಗ್‌ನಲ್ಲಿರುವ ಇರಾನ್ ರಾಯಭಾರ ಕಚೇರಿ ಎದುರು ಜನರು ಮಂಗಳವಾರ ಪ್ರದರ್ಶನ ನಡೆಸಿದರು ಎಎಫ್‌ಪಿ ಚಿತ್ರ

ಪ್ರತಿಭಟನೆ ವೇಳೆ 648 ಜನರು ಮೃತಪಟ್ಟಿರುವುದು ದೃಢಪಟ್ಟಿದೆ ಎಂದು ನಾರ್ವೆ ಮೂಲದ ಎನ್‌ಜಿಒ ಇರಾನ್ ಹ್ಯೂಮನ್ ರೈಟ್ಸ್ (ಐಎಚ್‌ಆರ್) ಹೇಳಿದೆ.

'ಸಾವಿನ ಸಂಖ್ಯೆ ಇನ್ನೂ ಹೆಚ್ಚು ಇರುವ ಸಾಧ್ಯತೆ ಇದೆ. ಕೆಲ ಅಂದಾಜುಗಳ ಪ್ರಕಾರ 6 ಸಾವಿರಕ್ಕೂ ಹೆಚ್ಚು ಜನರು ಮೃತಪಟ್ಟಿರಬಹುದು ಹಾಗೂ 10 ಸಾವಿರ ಜನರನ್ನು ಬಂಧಿಸಿರುವ ಸಾಧ್ಯತೆ. ಇರಾನ್‌ನಲ್ಲಿ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸಿರುವ ಕಾರಣ, ಸಾವು-ನೋವು ಕುರಿತ ವರದಿಗಳನ್ನು ಸ್ವತಂತ್ರವಾಗಿ ಖಚಿತಪಡಿಸಿಕೊಳ್ಳುವುದು ಕಷ್ಟವಾಗಿದೆ' ಎಂದೂ ಹೇಳಿದೆ.

ಇನ್ನೊಂದೆಡೆ, ಇರಾನ್‌ನಲ್ಲಿ ಪ್ರತಿಭಟನೆ ವೇಳೆ 2,003 ಜನರು ಮೃತಪಟ್ಟಿದ್ದಾಗಿ ಅಮೆರಿಕ ಮೂಲದ ಮಾನವ ಹಕ್ಕುಗಳ ಗುಂಪು ಎಚ್‌ಆರ್‌ಎಎನ್‌ಎ ಹೇಳಿದೆ.

ಮೃತರಲ್ಲಿ 1,850 ಪ್ರತಿಭಟನಕಾರರು, 135 ಮಂದಿ ಸರ್ಕಾರದ ಸಿಬ್ಬಂದಿ, 9 ಮಂದಿ ಅಪ್ರಾಪ್ತ ವಯಸ್ಕರು ಹಾಗೂ 9 ಮಂದಿ ನಾಗರಿಕರು ಸೇರಿದ್ದಾರೆ ಎಂದು ಹೇಳಿದೆ.

ದೇಶದಲ್ಲಿ ನಡೆಯುತ್ತಿರುವ ಪ್ರತಿ ಭಟನೆಗಳು ಹಾಗೂ ಹಿಂಸಾಚಾರಕ್ಕೆ 'ಭಯೋತ್ಪಾದಕರೇ' ಕಾರಣ ಎಂದು ಇರಾನ್ ಅಧಿಕಾರಿಗಳು ಹೇಳಿದ್ದಾರೆ.

**'ಅಹವಾಲು ಆಲಿಸಿ':** 'ಇರಾನ್ ಜನರು ನ್ಯಾಯ, ಸಮಾನತೆ ಬೇಡಿಕೆ ಮುಂದಿಟ್ಟು ಹೋರಾಡುತ್ತಿದ್ದು, ಅವರ ಅಹವಾಲು ಆಲಿಸಬೇಕು' ಎಂದು ವಿಶ್ವಸಂಸ್ಥೆ ಮಾನವ ಹಕ್ಕುಗಳ ಹೈ ಕಮಿಷನರ್ ವೋಕರ್ ಟರ್ಕ್ ಆಗ್ರಹಿಸಿದ್ದಾರೆ.

### ಕೆಲ ನಿರ್ಬಂಧ ಸಡಿಲಿಕೆ

ದುಬೈ(ಎಪಿ): ಆಡಳಿತ ವಿರೋಧಿ ಪ್ರತಿಭಟನೆಗಳನ್ನು ಹತ್ತಿಕ್ಕುವ ಸಂಬಂಧ ವಿಧಿಸಲಾಗಿದ್ದ ಹಲವು ನಿರ್ಬಂಧಗಳನ್ನು ಇರಾನ್ ಸರ್ಕಾರ ಮಂಗಳವಾರ ಸಡಿಲಿಸಿದೆ. ಆದರೆ, ಇಂಟರ್‌ನೆಟ್ ಮೇಲಿನ ನಿರ್ಬಂಧ ಮುಂದುವರಿಸಲಾಗಿದೆ.

ಜನರು ತಮ್ಮ ಮೊಬೈಲ್ ಫೋನ್ ಬಳಸಿ ವಿದೇಶಗಳಿಗೆ ಕರೆ ಮಾಡಲು ಅವಕಾಶ ನೀಡಲಾಗಿದೆ. ಆದರೆ, ಹೊರ ದೇಶಗಳಲ್ಲಿ ಇರುವವರು ಇರಾನ್‌ನಲ್ಲಿರುವ ತಮ್ಮವರೊಂದಿಗೆ ಮಾತನಾಡಲು ಅವಕಾಶ ಇಲ್ಲ.

'ಎಸ್‌ಎಂಎಸ್ ಸೇವೆ ಕೂಡ ನಿಧಾನವಾಗಿದೆ. ಸರ್ಕಾರ ಅನುಮತಿಸಿರುವ ವೆಬ್‌ಸೈಟ್ ಮಾತ್ರ ಬಳಕೆ ಸಾಧ್ಯ ವಾಗುತ್ತಿದೆ' ಎಂದು ಜನರು ತಿಳಿಸಿದ್ದಾರೆ.

# ಭಾರತಕ್ಕೆ ಸರಣಿ ಗೆಲ್ಲುವ ತವಕ

## ನ್ಯೂಜಿಲೆಂಡ್ ವಿರುದ್ಧ ಎರಡನೇ ಏಕದಿನ ಪಂದ್ಯ ಇಂದು

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಭಾರತ ತಂಡದ ವಿರಾಟ್ ಕೊಹ್ಲಿ ಎಎಫ್‌ಪಿ ಚಿತ್ರ

ರಾಜಕೋಟ್ (ಪಿಟಿಐ): ಅನುಭವಿ ಬ್ಯಾಟರ್ ವಿರಾಟ್ ಕೊಹ್ಲಿ ಅತ್ಯುತ್ತಮ ಲಯದಲ್ಲಿ ಆಡುತ್ತಿರುವ ಕಾರಣ ಭಾರತ ತಂಡ ಎದುರಿಸುತ್ತಿರುವ ಗಾಯಾಳುಗಳ ಸಮಸ್ಯೆ ಎದ್ದುಕಾಣುತ್ತಿಲ್ಲ. ಉತ್ತಮ ಆರಂಭ ಪಡೆದಿರುವ ಆತಿಥೇಯ ತಂಡ ಬುಧವಾರ ನ್ಯೂಜಿಲೆಂಡ್ ವಿರುದ್ಧ ನಡೆಯಲಿರುವ ಎರಡನೇ ಏಕದಿನ ಪಂದ್ಯವನ್ನು ಗೆದ್ದು ಸರಣಿಯನ್ನು ಕೈವಶ ಮಾಡಿಕೊಳ್ಳುವ ತವಕದಲ್ಲಿದೆ.

ವಡೋದರದಲ್ಲಿ ನಡೆದ ಸರಣಿಯ ಮೊದಲ ಪಂದ್ಯವನ್ನು ಭಾರತ ತಂಡ ನಾಲ್ಕು ವಿಕೆಟ್‌ಗಳಿಂದ ಗೆದ್ದುಕೊಂಡಿತ್ತು. ಆ ಪಂದ್ಯದಲ್ಲಿ ಪಕ್ಕೆನೋವಿಗೆ ಒಳಗಾದ ವಾಷಿಂಗ್ಟನ್ ಸುಂದರ್ ಸರಣಿಯಿಂದ ಹೊರಬಿದ್ದಿದ್ದಾರೆ. ಆಯ್ಕೆಗಾರರು ಅವರ ಸ್ಥಾನದಲ್ಲಿ ದೆಹಲಿಯ ಆಯುಷ್ ಬಡೋನಿ ಅವರಿಗೆ ಅವಕಾಶ ಕೊಟ್ಟಿದ್ದಾರೆ.

ಆದರೆ ಕೋಚ್ ಗೌತಮ್ ಗಂಭೀರ್ ಅವರು ಬಹುಕೌಶಲದ ಆಟಗಾರರಿಗೆ ಒಲವು ತೋರುವ ಕಾರಣ ನಿತೀಶ್ ಕುಮಾರ್ ರೆಡ್ಡಿ ಅವರು ನಿರಂಜನ್ ಶಾ ಕ್ರೀಡಾಂಗಣದಲ್ಲಿ ನಡೆಯುವ ಎರಡನೇ ಪಂದ್ಯದಲ್ಲಿ ಆಡುವ ಸಾಧ್ಯತೆಯಿದೆ. ಮೊದಲ ಪಂದ್ಯಕ್ಕೆ ಮುನ್ನಾದಿನ ರಿಷಭ್ ಪಂತ್ ಅವರು ಥ್ರೋಡೌನ್ ಎದುರಿಸುವ ಸಂದರ್ಭದಲ್ಲಿ ಸೊಂಟದ ಮೇಲ್ಭಾಗಕ್ಕೆ ಚೆಂಡುಬಡಿದು ಗಾಯಾಳಾಗಿದ್ದರು. ಇದರಿಂದಾಗಿ ಧ್ರುವ್ ಜುರೇಲ್ ಅವರು ತಂಡಕ್ಕೆ ಸೇರ್ಪಡೆಯಾದರು.

ಆದರೆ ದಿಗ್ಗಜ ಆಟಗಾರರಾದ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಮೇಲೆಯೇ ಹೆಚ್ಚಿನ ಗಮನ ನೆಟ್ಟಿರುವುದರಿಂದ ಗಾಯಾಳುಗಳ ಸಮಸ್ಯೆ ತೆರೆಮರೆಗೆ ಸರಿದಿದೆ.

ಮೊದಲ ಪಂದ್ಯದಲ್ಲಿ ನಾಯಕ ಶುಭಮನ್ ಗಿಲ್ (56) ಅರ್ಧ ಶತಕ ಬಾರಿಸಿದ್ದರು. ವಿರಾಟ್ ಕೊಹ್ಲಿ ಅವರು ನಿರೀಕ್ಷೆಯ ಭಾರದ ನಡುವೆ ಸಮಯೋಚಿತ ಆಟವಾಡಿ 93 ರನ್ (91ಎ) ಹೊಡೆದಿದ್ದರು. ಗೆಲುವಿಗೆ ಪ್ರಮುಖ ಕಾಣಿಕೆ ನೀಡಿದ್ದರು. ರೋಹಿತ್ ಲಗುಬಗನೇ 26 ರನ್ ಗಳಿಸಿದ್ದರು.

ಪ್ರವಾಸಿ ನ್ಯೂಜಿಲೆಂಡ್ ತಂಡ ಕೆಲವು ಅನುಭವಿ ಬ್ಯಾಟರ್‌ಗಳನ್ನು ಹೊಂದಿದ್ದರೂ, ಬೌಲಿಂಗ್‌ನಲ್ಲಿ ಅದೇ ಮಾತು ಹೇಳುವಂತಿಲ್ಲ. ಸೋಲಿನ ಹೊರತಾಗಿಯೂ ಮೊದಲ ಪಂದ್ಯದಲ್ಲಿ ಭಾರತಕ್ಕೆ ಪೈಪೋಟಿ ನೀಡುವಲ್ಲಿ ಮೈಕೆಲ್ ಬ್ರೇಸ್‌ವೆಲ್ ಪಡೆ ಯಶಸ್ವಿಯಾಗಿತ್ತು. ವೇಗದ ಬೌಲರ್ ಕೈಲ್ ಜೇಮಿಸನ್ 4 ವಿಕೆಟ್ ಪಡೆದು ಹೋರಾಟಕ್ಕೆ ಕಾರಣರಾಗಿದ್ದರು.

ಆದರೆ ಕೊನೆಯ ಹಂತದಲ್ಲಿ ಕೈಬಿಟ್ಟ ಕ್ಯಾಚುಗಳು ತಂಡಕ್ಕೆ ದುಬಾರಿಯಾದವು. ಡೆವಾನ್ ಕಾನ್ವೆ (56) ಮತ್ತು ಹೆನ್ರಿ ನಿಕೋಲ್ಸ್ (62) ಅವರು ಮೊದಲ ವಿಕೆಟ್‌ಗೆ 117 ರನ್ ಸೇರಿಸಿ ಉತ್ತಮ ಆರಂಭ ನೀಡಿದರೂ, ಅದರ ಲಾಭವನ್ನು ಮಧ್ಯಮ ಕ್ರಮಾಂಕದ ಆಟಗಾರರು ದೊಡ್ಡದಾಗಿ ಬಳಸಿಕೊಳ್ಳಲಿಲ್ಲ. ಮೂರನೇ ಕ್ರಮಾಂಕದ ಬ್ಯಾಟರ್ ಡೆರಿಲ್ ಮಿಚೆಲ್ ಗಳಿಸಿದ 84 ರನ್‌ಗಳಿಂದಾಗಿ ತಂಡ 300ರ ಗಡಿ ತಲುಪಿತ್ತು.

ಭಾರತ ತಂಡದ ನಾಯಕ ಶುಭಮನ್ ಗಿಲ್ –ಪಿಟಿಐ ಚಿತ್ರ

### ತಂಡಗಳು

**ಭಾರತ:** ಶುಭಮನ್ ಗಿಲ್ (ನಾಯಕ), ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ಕೆ.ಎಲ್.ರಾಹುಲ್, ರಿಷಭ್ ಪಂತ್ (ಇಬ್ಬರೂ ವಿಕೆಟ್ ಕೀಪರ್ಸ್), ರವೀಂದ್ರ ಜಡೇಜ, ನಿತೀಶ್ ಕುಮಾರ್ ರೆಡ್ಡಿ, ಆಯುಷ್ ಬಡೋನಿ, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ಪ್ರಸಿದ್ಧ ಕೃಷ್ಣ, ಮೊಹಮ್ಮದ್ ಸಿರಾಜ್, ಹರ್ಷಿತ್ ರಾಣಾ.

**ನ್ಯೂಜಿಲೆಂಡ್:** ಮೈಕೆಲ್ ಬ್ರೇಸ್‌ವೆಲ್ (ನಾಯಕ), ಡೆವಾನ್ ಕಾನ್ವೆ, ಮಿಚೆಲ್ ಹೇ (ಇಬ್ಬರೂ ವಿಕೆಟ್ ಕೀಪರ್ಸ್), ನಿಕ್ ಕೆಲ್ಲಿ, ಹೆನ್ರಿ ನಿಕೋಲ್ಸ್, ವಿಲ್ ಯಂಗ್, ಜೋಶ್ ಕ್ಲಾರ್ಕ್‌ಸನ್, ಝಾಕ್ ಫೌಲ್ಕ್ಸ್, ಡೆರಿಲ್ ಮಿಚೆಲ್, ಗ್ಲೆನ್ ಫಿಲಿಪ್ಸ್, ಆದಿತ್ಯ ಅಶೋಕ್, ಕ್ರಿಸ್ಟಿಯಾನ್ ಕ್ಲಾರ್ಕ್, ಕೈಲ್ ಜೇಮಿಸನ್, ಜೇಡನ್ ಲೆನಾಕ್ಸ್ ಮತ್ತು ಮೈಕೆಲ್ ರೇ.

## ಐಸಿಸಿ ಮನವಿ: ಪಟ್ಟು ಸಡಿಲಿಸದ ಬಿಸಿಬಿ

ಢಾಕಾ (ಪಿಟಿಐ): ಭಾರತದಿಂದ ತನ್ನ ಟಿ20 ವಿಶ್ವಕಪ್ ಪಂದ್ಯಗಳನ್ನು ಸ್ಥಳಾಂತರಿಸಬೇಕೆಂಬ ಬೇಡಿಕೆಯನ್ನು ಮರು ಪರಿಶೀಲಿಸುವಂತೆ ಐಸಿಸಿ ಮಂಗಳವಾರ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಗೆ (ಬಿಸಿಬಿ) 'ಮನವಿ' ಮಾಡಿತು. ಆದರೆ ಇದಕ್ಕೆ ಬಗ್ಗದ ಮಂಡಳಿಯು 'ಭದ್ರತೆಯ ಬಗ್ಗೆ ಕಳವಳ'ವನ್ನು ಪುನರುಚ್ಚರಿಸಿದೆ.

ಬೇಡಿಕೆಯನ್ನು ಪರಿಗಣಿಸಲು ಐಸಿಸಿ ಹಿಂದೇಟು ಹಾಕಿದರೂ, ಪಂದ್ಯ ಸ್ಥಳಾಂತರಿಸಬೇಕೆಂಬ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆಯಿಲ್ಲ ಎಂದು ಬಿಸಿಬಿ ಹೇಳಿಕೆಯಲ್ಲಿ ತಿಳಿಸಿದೆ. ಸಂಭಾವ್ಯ ಪರಿಹಾರ ಕಂಡುಕೊಳ್ಳಲು ಎರಡೂ ಕಡೆಯಿಂದ (ಬಿಸಿಬಿ–ಐಸಿಸಿ) ಪ್ರಯತ್ನ ಮುಂದುವರಿಯಲಿದೆ ಎಂದೂ ಹೇಳಿದೆ.

ಫೆ. 7ರಂದು ಆರಂಭವಾಗುವ ಟಿ20 ವಿಶ್ವಕಪ್‌ಗೆ ಈಗಾಗಲೇ ವೇಳಾಪಟ್ಟಿ ಅಂತಿಮಗೊಂಡಿರುವ ಕಾರಣ ಐಸಿಸಿ ಪಟ್ಟುಸಡಿಲಿಸುವ ಸಾಧ್ಯತೆಯಿಲ್ಲ.

ಎಲ್ಲರಿಗೂ ಮಕರ ಸಂಕ್ರಾಂತಿಯ ಶುಭಾಶಯಗಳು!

86 ರನ್ ಬಾರಿಸಿದ ಯಶ್ • 4 ವಿಕೆಟ್ ಪಡೆದ ನಚಿಕೇತ್ • ದೆಹಲಿಗೆ ನಿರಾಸೆ

# ವಿಜಯ್ ಹಜಾರೆ ಟ್ರೋಫಿ: ಸೆಮಿಗೆ ವಿದರ್ಭ

ಬೆಂಗಳೂರು (ಪಿಟಿಐ): ಶಿಸ್ತುಬದ್ಧ ಆಲ್‌ರೌಂಡ್ ಆಟವಾಡಿದ ಕಳೆದ ಬಾರಿಯ ರನ್ನರ್ ಅಪ್ ವಿದರ್ಭ ತಂಡ ಮಂಗಳವಾರ 76 ರನ್‌ಗಳಿಂದ ದೆಹಲಿ ತಂಡವನ್ನು ಮಣಿಸಿ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತು.

ವಿದರ್ಭ ತಂಡ ಗುರುವಾರ ನಡೆಯುವ ಸೆಮಿಫೈನಲ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕರ್ನಾಟಕ ತಂಡವನ್ನು ಎದುರಿಸಲಿದೆ. ಕಳೆದ ಬಾರಿ ಇವೆರಡು ತಂಡಗಳು ಫೈನಲ್‌ನಲ್ಲಿ ಎದುರಾಗಿದ್ದವು.

ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ವಿದರ್ಭ ತಂಡ 9 ವಿಕೆಟ್‌ಗೆ 300 ರನ್‌ಗಳ ಸ್ಪರ್ಧಾತ್ಮಕ ಮೊತ್ತ ದಾಖಲಿಸಿತು. ಮಧ್ಯಮ ಕ್ರಮಾಂಕದ ಆಟಗಾರ ಯಶ್ ರಾಥೋಡ್ 86 ರನ್ ಗಳಿಸಿದರೆ, ಆರಂಭ ಆಟಗಾರ ಅಥರ್ವ ತೈಡೆ 62 ರನ್ (72ಎ, 4x8) ಬಾರಿಸಿ ಸತತ ಎರಡನೇ ಅರ್ಧ ಶತಕ ದಾಖಲಿಸಿದರು.

'ರಾಷ್ಟ್ರೀಯ ಕರ್ತವ್ಯ'ಕ್ಕೆ ತೆರಳಿರುವ ಆಯುಷ್ ಬಡೋನಿ ಮತ್ತು ಗಾಯಾಳು ರಿಷಭ್ ಪಂತ್ ಅವರಿಲ್ಲದೇ ಆಡಿದ ದೆಹಲಿ ತಂಡ 45.1 ಓವರುಗಳಲ್ಲಿ 224 ರನ್‌ಗಳಿಗೆ ಆಲೌಟ್ ಆಯಿತು. ಗಾಯಾಳು ವಾಷಿಂಗ್ಟನ್ ಸುಂದರ್ ಬದಲು ಬಡೋನಿ ನ್ಯೂಜಿಲೆಂಡ್ ವಿರುದ್ಧ ಏಕದಿನ ಸರಣಿ ಆಡುವ ತಂಡಕ್ಕೆ ಸೇರ್ಪಡೆಯಾಗಿದ್ದಾರೆ.

ವೇಗದ ಬೌಲರ್ ನಚಿಕೇತ್ ಭೂತೆ (51ಕ್ಕೆ4) ಮತ್ತು ಎಡಗೈ ಸ್ಪಿನ್ನರ್ ಹರ್ಷ್ ದುಬೆ (36ಕ್ಕೆ3) ಅವರು ದೆಹಲಿ ಕುಸಿತಕ್ಕೆ ಕಾರಣರಾದರು.

ಆರನೇ ಕ್ರಮಾಂಕದಲ್ಲಿ ಆಡಿದ ವಿಕೆಟ್ ಕೀಪರ್–ಬ್ಯಾಟರ್ ಅನುಜ್ ರಾವತ್ ಅವರು ದೆಹಲಿ ಪರ ಏಕಾಂಗಿಯಾಗಿ ಹೋರಾಡಿ ತಾಳ್ಮೆಯ 66 ರನ್ (98 ಎಸೆತ, 4x7) ಹೊಡೆದರು.

ಇದಕ್ಕೆ ಮೊದಲು ವೈಭವ ಕಂದಪಾಲ್ (28, 42ಎ) ಮತ್ತು ಪ್ರಿಯಾಂಶ್ ಆರ್ಯ (28, 17ಎ 4x4, 6x1) ಅವರು 7.5 ಓವರುಗಳಲ್ಲಿ 58 ರನ್ ಸೇರಿಸುವ ಮೂಲಕ ದೆಹಲಿಗೆ ಉತ್ತಮ ಆರಂಭ ನೀಡಿದ್ದರು. ಆದರೆ ನಾಯಕ ದುಬೆ ದಾಳಿಗೆ ಮಧ್ಯಮ ಕ್ರಮಾಂಕ ಕುಸಿದು ವಿದರ್ಭ ಮೇಲುಗೈ ಸಾಧಿಸಿತು.

ಇದಕ್ಕೆ ಮೊದಲು ವಿದರ್ಭ ತಂಡವು ಅಮನ್ ಮೋಖಡೆ (6) ಅವರನ್ನು ಬೇಗ ಕಳೆದುಕೊಂಡರೂ ತೈಡೆ ಮತ್ತು ಧ್ರುವ್ ಶೋರೆ (49, 71ಎ) ಎರಡನೇ ವಿಕೆಟ್‌ಗೆ 90 ರನ್ ಸೇರಿಸಿ ಚೇತರಿಕೆ ನೀಡಿದರು. ತೈಡೆ, ಅನುಭವಿ ಬೌಲರ್ ಇಶಾಂತ್ ಶರ್ಮಾ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಇದು ಇಶಾಂತ್ ಅವರಿಗೆ ಲಿಸ್ಟ್ ಎ ಪಂದ್ಯಗಳಲ್ಲಿ 200ನೇ ವಿಕೆಟ್. ರಾಥೋಡ್ ನಂತರ ಕೆಳಕ್ರಮಾಂಕದ ಆಟಗಾರರ ನೆರವಿನಿಂದ ತಂಡ 300 ರನ್ ತಲುಪಲು ನೆರವಾದರು.

**ಸಂಕ್ಷಿಪ್ತ ಸ್ಕೋರು:** ವಿದರ್ಭ: 50 ಓವರುಗಳಲ್ಲಿ 9ಕ್ಕೆ 300 (ಯಶ್ ರಾಥೋಡ್ 86, ಅಥರ್ವ ತೈಡೆ 62, ಧ್ರುವ್ ಶೋರೆ 49; ಇಶಾಂತ್ ಶರ್ಮಾ 47ಕ್ಕೆ2, ಪ್ರಿನ್ಸ್ ಯಾದವ್ 59ಕ್ಕೆ2, ನವದೀಪ್ ಸೈನಿ 68ಕ್ಕೆ2, ನಿತೀಶ್ ರಾಣಾ 19ಕ್ಕೆ2); ದೆಹಲಿ: 45.1 ಓವರುಗಳಲ್ಲಿ 224 (ಅನುಜ್ ರಾವತ್ 66, ನಚಿಕೇತ್ ಭೂತೆ 51ಕ್ಕೆ4, ಹರ್ಷ್ ದುಬೆ 36ಕ್ಕೆ3, ಪ್ರಫುಲ್ ಹಿಂಜೆ 54ಕ್ಕೆ2). ಪಂದ್ಯದ ಆಟಗಾರ: ಯಶ್ ರಾಥೋಡ್

ವಿದರ್ಭ ತಂಡದ ಯಶ್ ರಾಥೋಡ್ (ಎಡ). ಅರ್ಧಶತಕ ದಾಖಲಿಸಿದ ಪ್ರಭಸಿಮ್ರನ್ ಸಿಂಗ್ ಪಿಟಿಐ ಚಿತ್ರಗಳು

## ಪ್ರಭಸಿಮ್ರನ್ ಮಿಂಚು: ಪಂಜಾಬ್‌ಗೆ ಭಾರಿ ಗೆಲುವು

| ಸೆಮಿಫೈನಲ್ ಮುಖಾಮುಖಿ | |
|---|---|
| ಜ. 15 | ಕರ್ನಾಟಕ– ವಿದರ್ಭ |
| ಜ. 16 | ಪಂಜಾಬ್– ಸೌರಾಷ್ಟ್ರ |
| ಸಮಯ: ಮಧ್ಯಾಹ್ನ 1.30ಕ್ಕೆ ಆರಂಭ | |
| ಎರಡೂ ಪಂದ್ಯಗಳು ಬಿಸಿಸಿಐ ಶ್ರೇಷ್ಠತಾ ಕೇಂದ್ರ, ಬೆಂಗಳೂರು | |

ಬೆಂಗಳೂರು: ಬ್ಯಾಟರ್‌ಗಳ ಉತ್ತಮ ಪ್ರದರ್ಶನದ ನೆರವಿನಿಂದ ಪಂಜಾಬ್ ತಂಡ ವಿಜಯ್ ಹಜಾರೆ ಟ್ರೋಫಿ ಟೂರ್ನಿಯ ಇನ್ನೊಂದು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮಂಗಳವಾರ ಮಧ್ಯಪ್ರದೇಶ ತಂಡದ ಮೇಲೆ 183 ರನ್‌ಗಳ ಭಾರಿ ಜಯ ಪಡೆಯಿತು.

ಟಾಸ್ ಗೆದ್ದು ಬೌಲಿಂಗ್ ಮಾಡುವ ಮಧ್ಯಪ್ರದೇಶ ನಾಯಕ ವೆಂಕಟೇಶ್ ಅಯ್ಯರ್ ನಿರ್ಧಾರ ಕೈಕೊಟ್ಟಿತು. ಆರಂಭ ಆಟಗಾರರಾದ ಪ್ರಭಸಿಮ್ರನ್ ಸಿಂಗ್ (88, 86ಎ) ಮತ್ತು ಹರ್ನೂರ್ ಸಿಂಗ್ (51, 71ಎ) ಜೊತೆಗೆ ಅನ್ಮೋಲ್ ಪ್ರೀತ್ ಸಿಂಗ್ (70, 62ಎ), ನೇಹಲ್ ವಧೇರಾ (56, 38ಎ, 4x8, 6x1) ಅವರು ಅರ್ಧಶತಕಗಳನ್ನು ಬಾರಿಸಿದರು. ತಂಡ 6 ವಿಕೆಟ್‌ಗೆ 345 ರನ್‌ಗಳ ದೊಡ್ಡ ಮೊತ್ತ ಗಳಿಸಿತು.

ಇದಕ್ಕೆ ಉತ್ತರವಾಗಿ ಮಧ್ಯಪ್ರದೇಶ ಆರಂಭದಿಂದಲೇ ಒತ್ತಡಕ್ಕೆ ಸಿಲುಕಿ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. 31.2 ಓವರುಗಳಲ್ಲಿ 162 ರನ್‌ಗಳಿಗೆ ಕುಸಿಯಿತು.

**ಸಂಕ್ಷಿಪ್ತ ಸ್ಕೋರು:** ಪಂಜಾಬ್: 50 ಓವರುಗಳಲ್ಲಿ 6ಕ್ಕೆ 345 (ಪ್ರಭಸಿಮ್ರನ್ ಸಿಂಗ್ 88, ಅನ್ಮೋಲ್ ಪ್ರೀತ್ ಸಿಂಗ್ 70, ನೇಹಲ್ ವಧೇರಾ 56, ಹರ್ನೂರ್ ಬ್ರಾರ್ 51); ಮಧ್ಯಪ್ರದೇಶ: 31.2 ಓವರುಗಳಲ್ಲಿ 162 (ರಜತ್ ಪಾಟೀದಾರ್ 38, ತ್ರಿಪುರೇಶ್ ಸಿಂಗ್ 31; ಸನ್ವೀರ್ ಸಿಂಗ್ 31ಕ್ಕೆ3, ಗುರ್ನೂರ್ ಬ್ರಾರ್ 27ಕ್ಕೆ2, ಕ್ರಿಶ್ ಭಗತ್ 28ಕ್ಕೆ2, ರಮಣದೀಪ್ ಸಿಂಗ್ 23ಕ್ಕೆ2). ಪಂದ್ಯಶ್ರೇಷ್ಠ: ಪ್ರಭಸಿಮ್ರನ್ ಸಿಂಗ್.

ಅಂತರ ವಿವಿ ಅಥ್ಲೆಟಿಕ್ಸ್: ಹೈಜಂಪ್‌ನಲ್ಲಿ ಕುವೆಂಪು ವಿ.ವಿಯ ಸುದೀಪ್‌ಗೆ ಚಿನ್ನ

# ಸ್ಯಾಮ್ ದಾಖಲೆ; ಪ್ರತಿಭಾ ಮಿಂಚಿನ ಓಟ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಅಮೋಘ ಓಟ ಪ್ರದರ್ಶಿಸಿದ ತಮಿಳುನಾಡಿನ ಭಾರತಿಯಾರ್ ವಿಶ್ವವಿದ್ಯಾಲಯದ ಸ್ಯಾಮ್ ವಸಂತ್, ಅಖಿಲ ಭಾರತ ಅಂತರ ವಿವಿ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಪುರುಷರ 100 ಮೀಟರ್ಸ್ ಓಟದಲ್ಲಿ ದಾಖಲೆ ಬರೆದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾಲಯಗಳ ವಿವಿ ಇಲ್ಲಿನ ಸ್ವರಾಜ್ಯ ಮೈದಾನದಲ್ಲಿ ಆಯೋಜಿಸಿರುವ ಕೂಟದ ಸೆಮಿಫೈನಲ್‌ನಲ್ಲಿ 10.39 ಸೆಕೆಂಡುಗಳಲ್ಲಿ ಸ್ಯಾಮ್ ಮೊದಲಿಗರಾದರು. ಮಂಗಳೂರು ವಿವಿಯ ಎಲಕ್ಯದಾಸನ್ 2018ರಲ್ಲಿ 10.41 ಸೆಕೆಂಡುಗಳ ಸಾಧನೆ ಮಾಡಿದ್ದರು. ಫೈನಲ್‌ನಲ್ಲಿ ಸ್ಯಾಮ್ ವಸಂತ್ 10.44 ಸೆಕೆಂಡು ಸಾಧನೆಯೊಂದಿಗೆ ಚಿನ್ನಕ್ಕೆ ಮುತ್ತನ್ನಿತ್ತರು. ಮಂಗಳೂರು ವಿವಿಯ ವಿಭಾಸ್ಕರ್ ಬೆಳ್ಳಿ ಪದಕ ಗೆದ್ದುಕೊಂಡರು.

ಕೂಟದ ವೇಗದ ಓಟಗಾರ್ತಿಯಾಗಿ ಮದ್ರಾಸ್ ವಿವಿಯ ಪ್ರತಿಭಾ ಸೆಲ್ವರಾಜ್ ಮೂಡಿಬಂದರು. ಎಸ್‌ಆರ್‌ಎಂ ತಾಂತ್ರಿಕ ಸಂಸ್ಥೆಯ ಸುದರ್ಶಿನಿ ಅವರ ಪೈಪೋಟಿ ಮೀರಿದ ಪ್ರತಿಭಾ 11.74 ಸೆಕೆಂಡುಗಳಲ್ಲಿ ಗುರಿಮುಟ್ಟಿ ಚಿನ್ನಗೆದ್ದರು.

**ಸುದೀಪ್ 'ಎತ್ತರ'ದ ಸಾಧನೆ:** ಕುವೆಂಪು ವಿವಿ ವಿದ್ಯಾರ್ಥಿ ಸುದೀಪ್ ದಿನದ ಕೊನೆಯ ಫೈನಲ್, ಪುರುಷರ ಹೈಜಂಪ್‌ನಲ್ಲಿ ಚಿನ್ನ ಗೆದ್ದರು. ಪುರುಷ ಮತ್ತು ಮಹಿಳೆಯರ 400 ಮೀ ಹರ್ಡಲ್ಸ್‌ನ ಬೆಳ್ಳಿ ಮಂಗಳೂರು ವಿವಿ ಪಾಲಾಯಿತು. ಮಹಿಳೆಯರ ವಿಭಾಗದಲ್ಲಿ ದೀಕ್ಷಿತಾ ಗೌಡ ಬೆಳ್ಳಿ ಹಾಗೂ ಪುರುಷರ ವಿಭಾಗದಲ್ಲಿ ಆರ್ಯನ್ ಪ್ರಜ್ವಲ್ ಕಶ್ಯಪ್ ಮಿಂಚಿದರು.

ಸ್ಯಾಮ್ ವಸಂತ್

ಪ್ರತಿಭಾ ಸೆಲ್ವರಾಜ್

> **ವಿಶ್ವವಿದ್ಯಾಲಯದಲ್ಲಿ ನನ್ನ ಓಟ ಗಮನಿಸಿದ ಕೋಚ್ ಮುರುಗನ್, 'ನಿನಗೆ ದಾಖಲೆ ಮಾಡಲು ಸಾಧ್ಯ' ಎಂದಿದ್ದರು. ಅದು ಆತ್ಮವಿಶ್ವಾಸ ತುಂಬಿತು.**
>
> **ಸ್ಯಾಮ್ ವಸಂತ್,** 100 ಮೀ ಓಟದಲ್ಲಿ ದಾಖಲೆ ಬರೆದ ಅಥ್ಲೀಟ್

**2ನೇ ದಿನದ ಫಲಿತಾಂಶಗಳು:**

**ಪುರುಷರು:** 100 ಮೀ: ಸ್ಯಾಮ್ ವಸಂತ್ (ಭಾರತಿಯಾರ್)-1. ಕಾಲ:10.44ಸೆ, ವಿಭಾಸ್ಕರ್ (ಮಂಗಳೂರು)-2, ಗಿಟ್ಸನ್ ಧರ್ಮರಾಜ್ (ಮದ್ರಾಸ್)-3; 400 ಮೀ ಹರ್ಡಲ್ಸ್: ಮಹೇಂದ್ರನ್ (ಮದ್ರಾಸ್)-1. ಕಾಲ: 51.35ಸೆ, ಆರ್ಯನ್ ಪ್ರಜ್ವಲ್ ಕಶ್ಯಪ್ (ಮಂಗಳೂರು)-2, ಕಾರ್ತಿಕ್ ರಾಜ (ಮನೋನ್ಮಣಿಯನ್)-3; 800 ಮೀ: ಸಂಕೇತ್ (ಎಂ.ಡಿ ರೋಹ್ಟಕ್)-1. ಕಾಲ: 1ನಿ 48.95ಸೆ, ದೂರೆ ಪ್ರಥಮೇಶ್ ಅಮರೀಶ್ (ಮಂಗಳೂರು)-2, ಅಮಿತ್ ಕುಮಾರ್ (ಛತ್ರಪತಿ ಸಾಹು)-3; 20 ಕಿಮೀ ವೇಗ ನಡಿಗೆ: ವಿವೇಂದ್ರ ಸಿಂಗ್ (ಆರ್‌ಐಎಂಟಿ)-1. ಕಾಲ: 1ತಾಸು 25ನಿ 50.07 ಸೆ, ಸರ್ವಜೀತ್ ಪಟೇಲ್ (ರಾಮ್‌ಮನೋಹರ್ ಲೋಹಿಯಾ)-2, ದಶರತ್ ನಿಂಗ ತಲವಾರ್ (ಬೆಂಗಳೂರು)-3; ಹೈಜಂಪ್: ಸುದೀಪ್ (ಕುವೆಂಪು)-1. ಎತ್ತರ: 2.11 ಮೀ, ಮಹಮ್ಮದ್ ಫಾಜಿಲ್ (ಮದ್ರಾಸ್)-2, ಆದಿತ್ಯ ರಘುವಂಶಿ (ಚಂಡೀಗಢ)-3; ಶಾಟ್‌ಪಟ್: ವರಿಂದರ್ ಸಿಂಗ್ (ಚಂಡೀಗಢ)-1. ದೂರ: 18.22ಮೀ, ಸಾವನ್ (ಚಂಡೀಗಢ)-2, ಅನಿಕೇತ್ (ಮಂಗಳೂರು)-2,

**ಮಹಿಳೆಯರು:** 100 ಮೀ: ಪ್ರತಿಭಾ ಸೆಲ್ವರಾಜ್ (ಮದ್ರಾಸ್)-1. ಕಾಲ: 11.74, ಶುಭದರ್ಶಿನಿ (ಎಸ್‌ಆರ್‌ಎಂ)-2, ತನಿಷಾ ರಾಘವ್ (ಡೆಲ್ಲಿ)-3; 800ಮೀ: ಅಂಜು (ಲವ್ಲಿ)-1. ಕಾಲ: 2ನಿ 8.43ಸೆ, ಅಂಜಲಿ (ಗುರುನಾನಕ್)-2, ಲಕ್ಷ್ಮಿಪ್ರಿಯಾ (ಕಳಿಂಗ)-3; 400 ಮೀ ಹರ್ಡಲ್ಸ್: ಡೆಲ್ನಾ ಫಿಲಿಪ್ (ಕ್ಯಾಲಿಕಟ್)-1. ಕಾಲ: 1ನಿ 0.12ಸೆ, ದೀಕ್ಷಿತಾ ರಾಮಗೌಡ (ಮಂಗಳೂರು)-2, ಮೇಘಾ ಮುನವಳ್ಳಿಮಠ (ಧಾರವಾಡ)-3; 20ಕಿಮೀ ವೇಗನಡಿಗೆ: ಚೌಧರಿ ಗಾಯತ್ ಗಣೇಶ್ (ಸಾವಿತ್ರಿಬಾಯಿ ಫುಲೆ)-1. ಕಾಲ: 1ತಾಸು 40ನಿ 15.41ಸೆ, ಬಲ್ಜೀತ್ ಕೌರ್ (ತಾಲವಾಡಿ)-2, ನಿಕಿತಾ ಲಾಂಬ (ಚಂಡೀಗಢ)-3; ಟ್ರಿಪಲ್ ಜಂಪ್: ಅಲೀನಾ ಸಜಿ (ಎಂ.ಜಿ ಕೋಟಯಂ)-1. ಅಂತರ: 12.79 ಮೀ, ಸಾಧನಾ ರವಿ (ಎಸ್‌ಆರ್‌ಎಂ)-2, ಪ್ರೀತಿ (ಮಹಾರಾಜ ಗಂಗಾಸಿಂಗ್)-3; ಡಿಸ್ಕಸ್ ಥ್ರೋ: ಸಾನಿಯಾ ಯಾದವ್ (ತಾಲವಾಡಿ)-1. ದೂರ: 53.45ಮೀ, ಪ್ರಿಯಾ (ಚಂಡೀಗಢ)-2, ಉಜ್ವಲಾ ಕೆ (ಗುರುನಾನಕ್)-3.

### ಗಾಯದ ನಂತರ ಮೊದಲ ಪದಕ

100 ಮೀಟರ್ಸ್ ಓಟದಲ್ಲಿ ದಾಖಲೆವೀರನಿಗೆ ಸವಾಲೊಡ್ಡಿ ಮಂಗಳೂರು ವಿವಿಯ ವಿ. ಭಾಸ್ಕರ್ ಬೆಳ್ಳಿ ಪದಕ ಗೆದ್ದರು. ಗಾಯದ ಸಮಸ್ಯೆ ಕಾಡಿದ ನಂತರ ಗೆದ್ದ ಮೊದಲ ಪದಕ ಇದಾಗಿದೆ.

ಬಿಹಾರದ ಸರನ್ ಜಿಲ್ಲೆಯವರಾದ ವಿ. ಭಾಸ್ಕರ್ ಆಳ್ವಾಸ್ ಕಾಲೇಜಿನ ಮೊದಲ ವರ್ಷದ ಬಿಎ ವಿದ್ಯಾರ್ಥಿ. '2019ರಲ್ಲಿ ರಾಷ್ಟ್ರೀಯ ಶಾಲಾ ಕ್ರೀಡಾಕೂಟದ 100 ಮೀ ಓಟದಲ್ಲಿ ಕಂಚಿನ ಪದಕ ಗೆದ್ದಿದ್ದೆ. ನಂತರ ಗಾಯಗೊಂಡೆ. 6 ವರ್ಷಗಳ ನಂತರ ಪದಕ ಗೆಲ್ಲಲು ಸಾಧ್ಯವಾಗಿರುವುದು ಖುಷಿ ತಂದಿದೆ' ಎಂದು ಅವರು ತಿಳಿಸಿದರು.

# ಹರ್ಮನ್‌ಪ್ರೀತ್ ಕೌರ್ ಆಟಕ್ಕೆ ಒಲಿದ ಗೆಲುವು

- ಡಬ್ಲ್ಯುಪಿಎಲ್‌ನಲ್ಲಿ ಹರ್ಮನ್‌ಪ್ರೀತ್ 10ನೇ ಅರ್ಧಶತಕ
- ಲೀಗ್‌ನಲ್ಲಿ ಸಾವಿರ ರನ್ ಮೈಲಿಗಲ್ಲು ದಾಟಿದ ಭಾರತದ ಮೊದಲ ಆಟಗಾರ್ತಿ. ಒಟ್ಟಾರೆ 2ನೇ ಬ್ಯಾಟರ್

**ಹರ್ಮನ್‌ಪ್ರೀತ್ ಕೌರ್**
ರನ್ 71*
ಎಸೆತ 43
ಬೌಂಡರಿ 7
ಸಿಕ್ಸರ್ 2

ನವಿ ಮುಂಬೈ (ಪಿಟಿಐ): ನಾಯಕಿ ಹರ್ಮನ್‌ಪ್ರೀತ್ ಕೌರ್ (ಔಟಾಗದೇ 71; 43ಎ, 4x7, 6x2) ಅವರ ಅಜೇಯ ಅರ್ಧ ಶತಕದ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡವು ಮಂಗಳವಾರ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿತು.

193 ರನ್‌ಗಳ ಸವಾಲಿನ ಗುರಿಯನ್ನು ಬೆನ್ನಟ್ಟಿದ ಹಾಲಿ ಚಾಂಪಿಯನ್ ಮುಂಬೈ ತಂಡವು ನಾಲ್ಕು ಎಸೆತಗಳು ಬಾಕಿ ಇರುವಂತೆ ಜಯ ಸಾಧಿಸಿತು. ಉದ್ಘಾಟನಾ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಸೋತಿದ್ದ ಮುಂಬೈ ತಂಡಕ್ಕೆ ಇದು ಸತತ ಎರಡನೇ ಜಯ. ಇದರೊಂದಿಗೆ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಬಡ್ತಿ ಪಡೆಯಿತು. ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದ್ದ ಜೈಂಟ್ಸ್‌ಗೆ ನಿರಾಸೆಯಾಯಿತು.

ಮುಂಬೈ ತಂಡವು 37 ರನ್ ಗಳಿಸುವಷ್ಟರಲ್ಲಿ ಆರಂಭಿಕ ಆಟಗಾರ್ತಿಯರಾದ ಗುನಾಲನ್ ಕಮಲಿನಿ (13) ಮತ್ತು ಹೇಲಿ ಮ್ಯಾಥ್ಯೂಸ್ (22) ಪೆವಿಲಿಯನ್ ಸೇರಿದ್ದರು. ಈ ಹಂತದಲ್ಲಿ ಅಮನ್‌ಜ್ಯೋತ್ ಕೌರ್ (40;26ಎ) ಮತ್ತು ಹರ್ಮನ್‌ಪ್ರೀತ್ ಅವರು ಮೂರನೇ ವಿಕೆಟ್‌ಗೆ 72 (44ಎ) ರನ್ ಗಳಿಸಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ಅಮನ್‌ಜ್ಯೋತ್ ನಿರ್ಗಮನದ ಬಳಿಕ ಕ್ರೀಸ್‌ಗೆ ಬಂದ ನಿಕೋಲಾ ಕ್ಯಾರಿ (ಔಟಾಗದೇ 38;23ಎ) ಅವರು ನಾಯಕಿಗೆ ಉತ್ತಮ ಸಾಥ್ ನೀಡಿದರು. ಅವರಿಬ್ಬರೂ ಮುರಿಯದ ನಾಲ್ಕನೇ ವಿಕೆಟ್‌ಗೆ ಬಿರುಸಿನ 84 (43ಎ) ರನ್ ಗಳಿಸಿ ತಂಡವನ್ನು ದಡ ಸೇರಿಸಿದರು.

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಜೈಂಟ್ಸ್ ತಂಡವು 5 ವಿಕೆಟ್‌ಗೆ 192 ರನ್‌ಗಳ ಸವಾಲಿನ ಮೊತ್ತ ಗಳಿಸಿತು. ಬೆತ್ ಮೂನಿ (33;26ಎ) ತಂಡಕ್ಕೆ ಉತ್ತಮ ಆರಂಭ ನೀಡಿದರು. ಸೋಫಿ ಡಿವೈನ್ (8) ನಿರ್ಗಮನದ ಬಳಿಕ ಮೂನಿ ಜೊತೆಗೂಡಿದ ಕನಿಕಾ ಅಹುಜಾ (35, 18ಎ) ರನ್ ವೇಗ ಹೆಚ್ಚಿಸಿದರು. ಪವರ್‌ಪ್ಲೇ ಮುಗಿದಾಗ 1 ವಿಕೆಟ್‌ಗೆ 62 ರನ್ ಗಳಿಸಿ ಜೈಂಟ್ಸ್ ಉತ್ತಮ ಸ್ಥಿತಿಯಲ್ಲಿತ್ತು. ಗಾರ್ಡನರ್ ಮತ್ತು ಅಹುಜಾ ನಿರ್ಗಮನದ ನಂತರ (4 ವಿಕೆಟ್‌ಗೆ 99) ಮುಂಬೈ ಇಂಡಿಯನ್ಸ್ ರನ್ ವೇಗಕ್ಕೆ ಲಗಾಮು ಹಾಕಿತು. ಆದರೆ ಕೊನೆಯ ಕೆಲವು ಓವರುಗಳಲ್ಲಿ ಜಾರ್ಜಿಯಾ ವೆರ್ಹ್ಯಾಮ್ (43;33ಎ) ಮತ್ತು ಭಾರತಿ ಫೂಲ್ಮಾಲಿ (36;15ಎ) ಪ್ರದರ್ಶಿಸಿ, ತಂಡದ ಮೊತ್ತವನ್ನು ಇನ್ನೂರರ ಸಮೀಪ ಕೊಂಡೊಯ್ದರು.

**ಸಂಕ್ಷಿಪ್ತ ಸ್ಕೋರು:** ಗುಜರಾತ್ ಜೈಂಟ್ಸ್: 20 ಓವರುಗಳಲ್ಲಿ 5 ವಿಕೆಟ್‌ಗೆ 192 (ಬೆತ್ ಮೂನಿ 33, ಕನಿಕಾ ಅಹುಜಾ 35, ಜಾರ್ಜಿಯಾ ವೆರ್ಹ್ಯಾಮ್ ಔಟಾಗದೇ 43, ಭಾರತಿ ಫೂಲ್ಮಾಲಿ ಔಟಾಗದೇ 36; ಶಬ್ನಿಮ್ ಇಸ್ಮಾಯಿಲ್ 25ಕ್ಕೆ1). ಮುಂಬೈ ಇಂಡಿಯನ್ಸ್: 19.2 ಓವರ್‌ಗಳಲ್ಲಿ 3 ವಿಕೆಟ್‌ಗೆ 193 (ಅಮನ್‌ಜ್ಯೋತ್ ಕೌರ್ 40, ಹರ್ಮನ್‌ಪ್ರೀತ್ ಕೌರ್ ಔಟಾಗದೇ 71, ನಿಕೋಲಾ ಕ್ಯಾರಿ ಔಟಾಗದೇ 38; ಸೋಫಿ ಡಿವೈನ್ 29ಕ್ಕೆ 1). ಪಂದ್ಯದ ಆಟಗಾರ್ತಿ: ಹರ್ಮನ್‌ಪ್ರೀತ್ ಕೌರ್

ಇಂದಿನ ಪಂದ್ಯ: **ಡೆಲ್ಲಿ ಕ್ಯಾಪಿಟಲ್ಸ್–ಯುಪಿ ವಾರಿಯರ್ಸ್**
ಪಂದ್ಯ ಆರಂಭ: **ರಾತ್ರಿ 7.30,** ನೇರಪ್ರಸಾರ: **ಸ್ಟಾರ್ ಸ್ಪೋರ್ಟ್ಸ್**

ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಕನ್ನಡಿಗನ ಅಪರೂಪದ ಸಾಧನೆ

# ಗಾರ್ನರ್ ದಾಖಲೆ ಮೀರಿದ ಕೌಶಿಕ್

• ಗಿರೀಶ ದೊಡ್ಡಮನಿ

ಬೆಂಗಳೂರು: ಗೋವಾ ಕ್ರಿಕೆಟ್ ತಂಡದಲ್ಲಿ ಆಡುತ್ತಿರುವ ಕರ್ನಾಟಕದ ವಾಸುಕಿ ಕೌಶಿಕ್ ಅವರು ಲಿಸ್ಟ್ ಎ ಮಾದರಿಯ ಕ್ರಿಕೆಟ್‌ನಲ್ಲಿ ಅಪರೂಪದ ದಾಖಲೆಯೊಂದನ್ನು ನಿರ್ಮಿಸಿದ್ದಾರೆ.

ದೈತ್ಯ ವೇಗಿಗಳಲ್ಲಿ ಒಬ್ಬರಾದ, ವೆಸ್ಟ್ ಇಂಡೀಸ್‌ನ ಜೋಯಲ್ ಗಾರ್ನರ್ ಅವರ ಸರಾಸರಿಯ ದಾಖಲೆಯನ್ನು ಬೆಂಗಳೂರಿನ ಬಲಗೈ ಮಧ್ಯಮವೇಗಿ ಕೌಶಿಕ್ ಮೀರಿದ್ದಾರೆ. 33 ವರ್ಷದ ಕೌಶಿಕ್ 16.33ರ ಸರಾಸರಿ ಯನ್ನು (ಗಳಿಸಿದ ಪ್ರತಿ ವಿಕೆಟ್‌ಗೂ ಕೊಟ್ಟ ರನ್‌ಗಳು) ನಿರ್ವಹಿಸಿದ್ದಾರೆ. ಈ ಮಾದರಿಯಲ್ಲಿ ಅವರು 51 ಪಂದ್ಯಗಳಿಂದ 1617 ರನ್ ನೀಡಿ 99 ವಿಕೆಟ್ ಗಳಿಸಿದ್ದಾರೆ. ಗಾರ್ನರ್ 16.61ರ ಸರಾಸರಿ ಮಾಡಿದ್ದರು.

ವಿಶೇಷವೆಂದರೆ ಈ ದಾಖಲೆಯ ಪಟ್ಟಿಯಲ್ಲಿ ಇರುವ ಭಾರತದ ಏಕೈಕ ಬೌಲರ್ ಕೌಶಿಕ್. ಪ್ರತಿ ಗಂಟೆಗೆ 125 ರಿಂದ 130 ಕಿ.ಮೀ ವೇಗದ ಎಸೆತಗಳನ್ನು ಹಾಕುತ್ತಾರೆ. ಆದರೆ ಶಿಸ್ತು ಮತ್ತು ಸ್ಥಿರತೆ ಅವರ ಯಶಸ್ಸಿಗೆ ಕಾರಣ. 2019ರಲ್ಲಿ ಅವರು ಕರ್ನಾಟಕ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಈ ವರ್ಷ ಅವರು ಗೋವಾ ತಂಡಕ್ಕೆ ಸೇರ್ಪಡೆಯಾಗಿದ್ದಾರೆ. ವಿಜಯ್ ಹಜಾರೆ ಟ್ರೋಫಿಯ ಲೀಗ್ ಹಂತದಲ್ಲಿ ಒಟ್ಟು 17 ವಿಕೆಟ್ ಗಳಿಸಿದ್ದಾರೆ.

'ಇದೊಂದು ಅಪರೂಪದ ದಾಖಲೆ. ನನಗೂ ಗೊತ್ತಿರಲಿಲ್ಲ. ದೇಶಿ ಕ್ರಿಕೆಟ್ ಅನ್ನು ಬಹಳ ನಿಕಟವಾಗಿ ಗಮನಿಸುವ ರಾಮಚಂದ್ರ (ಸಾಫ್ಟ್‌ವೇರ್ ಎಂಜಿನಿಯರ್) ಅವರು ತಿಳಿಸಿದಾಗಲೇ ನನಗೆ ಗೊತ್ತಾಯಿತು. ಅಚ್ಚರಿ ಮತ್ತು ಖುಷಿಯಾಯಿತು. ಕೊನೆಯ ಪಂದ್ಯದಲ್ಲಿ ಒಂದು ಕ್ಯಾಚ್ ಡ್ರಾಪ್ ಆಗದೇ ಹೋಗಿದ್ದರೆ ನನ್ನ 100 ವಿಕೆಟ್ ಪೂರ್ಣವಾಗುತ್ತಿತ್ತು. ಪ್ರಥಮ ದರ್ಜೆ ಮತ್ತು ಲಿಸ್ಟ್ ಎ ಕ್ರಿಕೆಟ್ ಮಾದರಿಯಲ್ಲಿ ನೂರಕ್ಕೂ ಹೆಚ್ಚು ವಿಕೆಟ್ ಪಡೆದ ದಾಖಲೆಯಾಗುತ್ತಿತ್ತು' ಎಂದು ಕೌಶಿಕ್ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 2.13 ಮತ್ತು ಲಿಸ್ಟ್ ಎ ಮಾದರಿಯಲ್ಲಿ 3.75 ಎಕಾನಮಿ ಕೌಶಿಕ್ ಹೊಂದಿದ್ದಾರೆ. ಟಿ20 ಕಾಲಘಟ್ಟದಲ್ಲಿ ಬ್ಯಾಟರ್‌ಗಳು ಎಲ್ಲ ಮಾದರಿಯಲ್ಲಿಯೂ ಬೀಸಾಟ ಆಡುತ್ತಿದ್ದಾರೆ. ಇಂತಹ ಸಮಯದಲ್ಲಿಯೂ ಇಷ್ಟು ಬಿಗಿಹಿಡಿತದ ಬೌಲಿಂಗ್ ಮಾಡುತ್ತಿರು ವುದು ಕೂಡ ದಾಖಲೆ. ಆದರೆ ಪ್ರತಿ ಗಂಟೆಗೆ 140–150 ಕಿ.ಮೀ ವೇಗದ ಬೌಲರ್‌ಗಳಿಗೆ ರಾಷ್ಟ್ರೀಯ ತಂಡ ಮತ್ತು ಐಪಿಎಲ್‌ನಲ್ಲಿ ಆಡುವ ಅವಕಾಶ ಗಳು ಹೆಚ್ಚು ಸಿಗುತ್ತಿವೆ. ಕೌಶಿಕ್ ಅವರ ವೇಗ ಕಡಿಮೆ ಎಂಬ ಕಾರಣಕ್ಕೆ ಅವಕಾಶ ಸಿಕ್ಕಿಲ್ಲ.

ಕೌಶಿಕ್ ಎಂಜಿನಿಯರಿಂಗ್ ಪದವೀಧರ. ಅಮೇಜಾನ್ ಸಂಸ್ಥೆಯಲ್ಲಿ ಕೆಲಕಾಲ ಕಾರ್ಯನಿರ್ವಹಿಸಿದರು. ಆದರೆ ಕ್ರಿಕೆಟ್‌ಗಾಗಿ ಉತ್ತಮ ವೇತನದ ಉದ್ಯೋಗ ಬಿಟ್ಟರು. ಎಂಟು ವರ್ಷ ಕರ್ನಾಟಕ ತಂಡದಲ್ಲಿ ಆಡಿದರು. ಇದೀಗ ಗೋವಾ ತಂಡದಲ್ಲಿದ್ದಾರೆ.

| ಆಟಗಾರ | ಪಂದ್ಯ | ಎಸೆತ | ರನ್ | ವಿಕೆಟ್ | ಸರಾಸರಿ | ಎಕಾನಮಿ |
|---|---|---|---|---|---|---|
| ಕೀತ್ ಬಾಯ್ಸ್ | 164 | 7833 | 4304 | 268 | 16.05 | 3.29 |
| ವಿ. ಕೌಶಿಕ್ | 51 | 2586 | 1617 | 99 | 16.33 | 3.79 |
| ಜೋಯಲ್ ಗಾರ್ನರ್ | 256 | 13359 | 6598 | 397 | 16.61 | 2.96 |
| ದುಲಂಜನ ಮೆಂಡಿಸ್ | 82 | 3715 | 2283 | 137 | 16.66 | 3.68 |

ಮೂಲ: ಕ್ರಿಕ್‌ಇನ್ಫೋ ಡಾಟ್ ಕಾಮ್

## ನಿವೃತ್ತಿ ಪ್ರಕಟಿಸಿದ ಅಲಿಸಾ ಹೀಲಿ

ಸಿಡ್ನಿ (ಪಿಟಿಐ): ಆಸ್ಟ್ರೇಲಿಯಾ ಕಂಡ ಶ್ರೇಷ್ಠ ಮಹಿಳಾ ಕ್ರಿಕೆಟಿಗರಲ್ಲಿ ಒಬ್ಬರಾದ ಅಲಿಸಾ ಹೀಲಿ ಅವರು ತವರಿನಲ್ಲಿ ಭಾರತ ವಿರುದ್ಧ ಮಾರ್ಚ್‌ನಲ್ಲಿ ನಡೆಯಲಿರುವ ಸರಣಿಯ ನಂತರ ಕ್ರಿಕೆಟ್‌ಗೆ ವಿದಾಯ ಹೇಳಲಿದ್ದಾರೆ.

35 ವರ್ಷ ವಯಸ್ಸಿನ ಹೀಲಿ ಅವರು ಆ ಸರಣಿಯಲ್ಲಿ ಮೂರು ಏಕದಿನ ಪಂದ್ಯಗಳನ್ನು ಮತ್ತು ಏಕೈಕ ಟೆಸ್ಟ್ ಪಂದ್ಯವನ್ನು ಆಡಲಿದ್ದಾರೆ. ಆದರೆ ಅವರು ಟಿ20 ಸರಣಿ ಆಡುವುದಿಲ್ಲ.

'ಮುಂಬರುವ ಭಾರತ ವಿರುದ್ಧ ಸರಣಿ ನನ್ನ ಪಾಲಿಗೆ ಕೊನೆಯದಾಗಲಿದೆ ಎಂದು ಮಿಶ್ರಭಾವನೆಗಳೊಂದಿಗೆ ಹೇಳುತ್ತಿದ್ದೇನೆ' ಎಂದು ಅಲಿಸಾ ಮಂಗಳವಾರ ತಿಳಿಸಿದ್ದಾರೆ.

'ಈ ವರ್ಷ ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಟಿ20 ವಿಶ್ವಕಪ್‌ನಲ್ಲಿ ನಾನು ಆಡಲಾರೆ ಎಂಬ ಅರಿವಿದೆ. ಹೀಗಾಗಿ ಭಾರತ ವಿರುದ್ಧ ಟಿ20 ಸರಣಿಯಲ್ಲೂ ಆಡುತ್ತಿಲ್ಲ' ಎಂದಿದ್ದಾರೆ.

ಹೋದ ದಶಕದಲ್ಲಿ ಆಸ್ಟ್ರೇಲಿಯಾ ತಂಡವು ಮಹಿಳಾ ಕ್ರಿಕೆಟ್‌ನಲ್ಲಿ ಪ್ರಾಬಲ್ಯ ಸಾಧಿಸುವಲ್ಲಿ ಅಲಿಸಾ ಅವರ ಪಾಲು ಮಹತ್ವದ್ದು. ಅವರು ಎಂಟು ವಿಶ್ವ ಪ್ರಶಸ್ತಿ ಗೆದ್ದ ತಂಡದ ಭಾಗವಾಗಿದ್ದರು. ಇದರಲ್ಲಿ ಆರು ಟಿ20 ಮಾದರಿಯಲ್ಲಿ ಬಂದಿವೆ.

ವಿಕೆಟ್ ಕೀಪರ್– ಬ್ಯಾಟರ್ ಆಗಿರುವ ಅಲಿಸಾ ಆಸ್ಟ್ರೇಲಿಯಾ ಪರ 10 ಟೆಸ್ಟ್, 123 ಏಕದಿನ ಮತ್ತು 162 ಟಿ20 ಪಂದ್ಯಗಳನ್ನು ಆಡಿದ್ದಾರೆ. ಟೆಸ್ಟ್‌ನಲ್ಲಿ 30.56 ಸರಾಸರಿಯಲ್ಲಿ 489 ರನ್ ಕಲೆಹಾಕಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ 35.98 ಸರಾಸರಿಯಲ್ಲಿ 3653 ರನ್ ಗಳಿಸಿದ್ದಾರೆ. ಇದರಲ್ಲಿ ಏಳು ಶತಕಗಳಿವೆ. ಟಿ20 ಕ್ರಿಕೆಟ್‌ನಲ್ಲಿ 25.45 ಸರಾಸರಿಯಲ್ಲಿ 3054 ರನ್ ಗಳಿಸಿದ್ದಾರೆ. ಇದರಲ್ಲಿ ಒಂದು ಶತಕ ಒಳಗೊಂಡಿದೆ.

## ಬಾಕ್ಸಿಂಗ್ ತಂಡಕ್ಕೆ ಕುಟ್ಟಪ್ಪ ಕೋಚ್

ನವದೆಹಲಿ (ಪಿಟಿಐ): ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಕೋಚ್ ಸಿ.ಎ. ಕುಟ್ಟಪ್ಪ ಅವರು ಭಾರತ ಪುರುಷರ ಬಾಕ್ಸಿಂಗ್ ತಂಡಕ್ಕೆ ಮೂರನೇ ಬಾರಿ ಕೋಚ್ ಆಗಿ ನೇಮಕಗೊಂಡಿದ್ದಾರೆ. ಅವರ ನೇಮಕ ವನ್ನು ಭಾರತ ಬಾಕ್ಸಿಂಗ್ ಫೆಡರೇಷನ್ ಮಂಗಳವಾರ ಖಚಿತಪಡಿಸಿದೆ.

ರೋಹ್ತಕ್‌ನ ಭಾರತ ಕ್ರೀಡಾ ಪ್ರಾಧಿಕಾರದ ಕೋಚ್ ಧರ್ಮೇಂದರ್ ಯಾದವ್ ಸ್ಥಾನಕ್ಕೆ ಸರ್ವಿಸಸ್‌ನ ಕುಟ್ಟಪ್ಪ ಅವರು ನೇಮಕಗೊಂಡಿದ್ದಾರೆ. ಆದರೆ ಯಾದವ್ ಅವರು ಕೋಚಿಂಗ್ ತಂಡದ ಭಾಗವಾಗಿ ಮುಂದುವರಿಯಲಿದ್ದಾರೆ ಎಂದು ಭಾರತ ಬಾಕ್ಸಿಂಗ್ ಫೆಡರೇಷನ್‌ನ ಕಾರ್ಯನಿರ್ವಾಹಕ ನಿರ್ದೇಶಕ ಕರ್ನಲ್ ಅರುಣ್ ಮಲಿಕ್ ಪಿಟಿಐಗೆ ತಿಳಿಸಿದ್ದಾರೆ.

ಭಾರತ ಪುರುಷರ ತಂಡ ಕೆಲ ವರ್ಷ ಗಳಿಂದ ಅಂತರ ರಾಷ್ಟ್ರೀಯ ಮಟ್ಟದಲ್ಲಿ ನಿರೀಕ್ಷಿತ ಮಟ್ಟದಲ್ಲಿ ನಿರ್ವಹಣೆ ತೋರದ ಕಾರಣ ಈ ಬದಲಾವಣೆ ಮಾಡಲಾಗಿದೆ. 2024ರ ಒಲಿಂಪಿಕ್ಸ್‌ಗೆ ಭಾರತದ ಇಬ್ಬರು ಬಾಕ್ಸರ್‌ಗಳಷ್ಟೇ ಅರ್ಹತೆ ಪಡೆದಿದ್ದರು. ಲಿವರ್‌ಪೂಲ್‌ನಲ್ಲಿ ನಡೆದ 2025ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ತಂಡ ಒಂದೂ ಪದಕ ಗೆಲ್ಲಲು ಸಾಧ್ಯವಾಗಿರಲಿಲ್ಲ.

ಮೈಸೂರಿನವರಾದ ಕುಟ್ಟಪ್ಪ ಅವರು ಈ ಹಿಂದೆ ಎರಡು ಬಾರಿ ಕೋಚಿಂಗ್ ಹೊಣೆ ಹೊತ್ತಿದ್ದರು. ಟೋಕಿಯೊ ಮತ್ತು ಪ್ಯಾರಿಸ್ ಒಲಿಂಪಿಕ್ಸ್ ವೇಳೆ ತಂಡದ ಹೆಡ್ ಕೋಚ್ ಆಗಿದ್ದರು.

ಇಂಡಿಯಾ ಓಪನ್: ಟಿಯೆನ್, ಲ್ಯಾನಿಯರ್‌ಗೆ ಆಘಾತ

# ಲಕ್ಷ್ಯ, ಟ್ರೀಸಾ–ಗಾಯತ್ರಿ ಶುಭಾರಂಭ

ನವದೆಹಲಿ (ಪಿಟಿಐ): ಮಾಜಿ ಚಾಂಪಿಯನ್ ಲಕ್ಷ್ಯ ಸೇನ್ ಅವರು ಇಲ್ಲಿ ಮಂಗಳವಾರ ಆರಂಭಗೊಂಡ ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯೂ ಗೆಲುವಿನೊಡನೆ ಅಭಿಯಾನ ಆರಂಭಿಸಿತು.

ಭಾರತ ಬ್ಯಾಡ್ಮಿಂಟನ್ ಸಂಸ್ಥೆಯ ಆಶ್ರಯದಲ್ಲಿ ಇಲ್ಲಿನ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಭಾರತದ ಸೇನ್ ಅವರು 21-12, 21-15ರಿಂದ ಸ್ವದೇಶದ ಆಯುಷ್ ಶೆಟ್ಟಿ ಅವರನ್ನು ಮಣಿಸಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

24 ವರ್ಷದ ಸೇನ್ ಅವರು ಮೊದಲ ಗೇಮ್‌ನಲ್ಲಿ 7-1 ಅಂತರದ ಮುನ್ನಡೆಯೊಂದಿಗೆ ಆರಂಭದಲ್ಲೇ ಹಿಡಿತ ಸಾಧಿಸಿದರು. ಯಾವುದೇ ಹಂತದಲ್ಲಿ 20 ವರ್ಷದ ಆಯುಷ್ ಶೆಟ್ಟಿ ಅವರಿಗೆ ಚೇತರಿಸಿಕೊಳ್ಳಲು ಅವಕಾಶ ನೀಡದೆ ಮೊದಲ ಗೇಮ್ ಗೆದ್ದರು.

ಎರಡನೇ ಗೇಮ್‌ನ ಆರಂಭದಲ್ಲಿ 5–1 ಮುನ್ನಡೆಯೊಂದಿಗೆ ಕನ್ನಡಿಗ ಆಯುಷ್ ಪ್ರತಿರೋಧ ತೋರಿಸಿದರು. ಆದರೆ, ನಂತರದಲ್ಲಿ ಲಯ ಕಂಡುಕೊಂಡ ಸೇನ್ ಮತ್ತೆ ಚುರುಕಿನ ಆಟದ ಮೂಲಕ ನೇರ ಗೇಮ್‌ಗಳ ಗೆಲುವು ಸಾಧಿಸಿದರು. ಕೇವಲ 36 ನಿಮಿಷದಲ್ಲಿ ಜಯ ಗಳಿಸಿದ ಅಲ್ಮೋರಾದ ಆಟಗಾರ ಎರಡನೇ ಸುತ್ತಿನಲ್ಲಿ ಜಪಾನ್‌ನ ಕೆಂಟಾ ನಿಶಿಮೊಟೊ ಅವರನ್ನು ಎದುರಿಸಲಿದ್ದಾರೆ.

ಮಹಿಳಾ ಸಿಂಗಲ್ಸ್‌ನಲ್ಲಿ ಟ್ರೀಸಾ ಮತ್ತು ಗಾಯತ್ರಿ ಜೋಡಿಯು 21-15, 21-11 ರಿಂದ ಥಾಯ್ಲೆಂಡ್‌ನ ಓರ್ನಿಚಾ ಜೋಂಗ್ಸಾತಪೋರ್ನ್‌ಪರ್ನ್ ಮತ್ತು ಸುಕಿರ್ತ ಸುವಾಚೈ ಅವರನ್ನು ಸೋಲಿಸಿದರು. ವಿಶ್ವ ಕ್ರಮಾಂಕದಲ್ಲಿ 21ನೇ ಸ್ಥಾನದಲ್ಲಿರುವ ಭಾರತದ ಜೋಡಿಯು 42 ನಿಮಿಷದ ಹೋರಾಟದಲ್ಲಿ ಒತ್ತಡಕ್ಕೆ ಒಳಗಾಗದೆ ಗೆಲುವು ಸಾಧಿಸಿತು.

ಟ್ರೀಸಾ ಮತ್ತು ಗಾಯತ್ರಿ ಜೋಡಿ ಮುಂದಿನ ಸುತ್ತಿನಲ್ಲಿ ಏಳನೇ ಶ್ರೇಯಾಂಕದ ಲಿ ಯಿ ಜಿಂಗ್ ಮತ್ತು ಲುವೊ ಕ್ಸು ಮಿನ್ ಅವರನ್ನು ಎದುರಿಸಲಿದೆ. ಚೀನಾದ ಈ ಆಟಗಾರ್ತಿಯರು 21-12, 21-8 ರಿಂದ ಅಮೆರಿಕದ ಫ್ರಾನ್ಸೆಸ್ಕಾ ಕಾರ್ಬೆಟ್ ಮತ್ತು ಜೆನ್ನೀಗೈ ಅವರನ್ನು ಸೋಲಿಸಿದರು.

**ಟಿಯೆನ್, ಲ್ಯಾನಿಯರ್‌ಗೆ ಆಘಾತ:** ಪುರುಷರ ಸಿಂಗಲ್ಸ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಚೌ ಟಿಯೆನ್ ಚೆನ್, ಆರನೇ ಶ್ರೇಯಾಂಕದ ಅಲೆಕ್ಸ್ ಲ್ಯಾನಿಯರ್ ಮತ್ತು ಏಳನೇ ಶ್ರೇಯಾಂಕದ ಕೊಡೈ ನರೋಕಾ ಅವರು ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಕೆನಡಾದ ಬ್ರಿಯಾನ್ ಯಂಗ್ 21-19, 21-11ರಿಂದ ತೈವಾನ್‌ನ ಚೌ ಅವರಿಗೆ ಆಘಾತ ನೀಡಿದರು. ತೈವಾನ್‌ನ ಚಿ ಯು ಜೆನ್ 21-17, 21-19ರಿಂದ ಫ್ರಾನ್ಸ್‌ನ ಲ್ಯಾನಿಯರ್ ಅವರನ್ನು ಮಣಿಸಿದರು. ಜಪಾನ್‌ನ ನರೋಕಾ 6-21, 5-7ರಿಂದ ಸ್ವದೇಶದ ನಿಶಿಮೊಟೊ ವಿರುದ್ಧ ಹಿನ್ನಡೆಯಲ್ಲಿದ್ದಾಗ ಸ್ಪರ್ಧೆಯಿಂದ ಹಿಂದೆ ಸರಿದರು.

ಭಾರತದ ಲಕ್ಷ್ಯ ಸೇನ್ –ಪಿಟಿಐ ಚಿತ್ರ




ಎಕ್ಸ್ ಶೋ ರೂಂ ಬೆಲೆ
₹84,809#

ಭವಿಷ್ಯವನ್ನು ಅನುಭವಿಸಿ

ಎಕ್ಸ್‌ಚೇಂಜ್ ಬೋನಸ್ ₹2500/-*

ಕಾರ್ಪೊರೇಟ್ ಕೊಡುಗೆ ₹2200/-*

Hero GoodLife Stand a chance to win Gold and Silver Coins and many more assured benefits*

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or visit us on www.HeroMotoCorp.com. World's no 1 disclaimer - Highest sales for any 2 Wheeler Corporate Entity in the world for Calendar Year 2025 Data source: DNA Consult & Advisory's report Assessment of Global Two Wheelers Market(CY25). Accessories and features shown may not be a part of standard fitment. Always wear a helmet while riding a two-wheeler. Available at select dealerships. *Limited period offer, T&C Apply. #Ex-showroom price of Glamour X Drum variant in Bangalore.

TOLL FREE NO. 1800 266 0018

Authorised Dealers: BENGALURU - LALBAGH ROAD: PRAKASH HERO - PH: 9289922117. PEENYA: SAI HERO - PH: 9289922830. BYATARAYANAPURA: BIMAL HERO - PH: 9289922863.HOSUR ROAD: RT KRISHNA HERO - PH: 9289923177. BANASHANKARI: SAI HERO - PH: 9289922476. RAJAJI NAGAR: MAX HERO - PH: 9289923023. BANASWADI: BHAGATH HERO - PH: 9289922738. MAGADI ROAD: POORNA HERO - PH: 9289923212. MARATHALLI: VAAYURATHA HERO - PH: 9289923811. KAMAKSHIPALYA: POORNA MOTORS – PH: 9606922534. JP NAGAR: SAI HERO, PH: 99002 36280. KANAKPURA ROAD: SAI HERO - 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. JIGANI: RT KRISHNA HERO – PH: 9482788355. RT NAGAR: BIMAL HERO 9535327710.TUMKUR: SAI HERO - PH: 9289922986. B.H.ROAD – SAI HERO, PH. 7022752841.KUNIGAL: SAI HERO - PH: 7022752858. TIPTUR: SAI HERO PH. 9164840456. CHIKKABALLAPUR: MANJUNATH HERO - PH: 9821751332. KOLAR: SAI BALAJI HERO PH. 9821745024. DODDABALLAPURA: BIMAL HERO 9742202125. Associate Dealer: BELATHUR - 9902649569. MADIWALA - 9731660639. BANASHANKARI 3RD STAGE - 9513353864. BANNERGHATTA ROAD - 9845397222 . KENGERI - 9739275523. YELAHANKA - 9341025589. MYSORE ROAD: 9611997733. DEVANAHALLI - 9964560599. KANAKAPURA - 9880212346. WHITEFIELD - 9741646466 . BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. MADHUGIRI - 9972278989. VIJAYAPURA: 9449619920. SIRA: 9448417393. CHANDAPURA: 9481329064. VIDYARANYAPURA: 9606934533. MAGADI: 9482090890. GOTTIGERE: 81976 78979 Also Available at: DUNNASANDRA: 8310166369. HSR LAYOUT: 7428893265. MATHIKERE: 9035027951. DOMLUR: 7353919910- J.P.NAGAR: 9035024274. RT NAGAR: 9535327710. . ATTIBELE: 8050609104. B NARAYANAPURA: 9945472149. VARTHUR: 9900877227. PAPAREDDYPALYA: 9916678309. ANEKAL: 9739519252. KONANKUNTE: 9886122251. SARJAPUR MAIN ROAD: 8762860999. BIDADI: 9844767719. RAMANAGARA: 9663399909. CHIKKANAYAKANAHALLI: 9880807399. TURUVEKERE: 9448403205. KORATAGERE: 9731713711. PERESANDRA: 9901502049.

FCB INTERFACE /0429/JANUARY26/KANNADA